"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

2ನೇ ಫೆಬ್ರವರಿ 2021
ಮಂಗಳವಾರ

## ವಿಷಯಾನುಕ್ರಮಣಿಕೆ

1. ನೂತರ ಸಚಿವರ ಪರಿಚಯ
2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

194 – ಕಡಿಮೆ ದರದಲ್ಲಿ ರೈತರಿಗೆ ಸಾಲ
- ಆರ್.ಧರ್ಮಸೇನ
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

94 – ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ಕುರಿತು
- ಆರ್.ಪ್ರಸನ್ನ ಕುಮಾರ್
- ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

34 – ಪ್ರಸಕ್ತ ಸಾಲಿನಲ್ಲಿ ಬೃಹತ್ ಕೈಗಾರಿಕೆಗಳ ಬಂಡವಾಳ ಕುರಿತು
- ಶ್ರೀ ಹೆಚ್.ಎಂ.ರಮೇಶ್ ಗೌಡ
- ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

216– DMFTಯ ಅನುದಾನದ ಬಗ್ಗೆ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶ್ರೀ ಕಾಂತರಾಜ್(ಬಿಎಂಎಲ್) ಪರವಾಗಿ)
- ಶ್ರೀ ಮುರುಗೇಶ್ ಆರ್.ನಿರಾಣಿ(ಗಣಿ ಮತ್ತು ಭೂವಿಜ್ಞಾನ ಸಚಿವರು)

93 – ಯಲ್ಲಾಪುರದ ಲ್ಯಾಂಪ್ಸ್ ಸೊಸೈಟಿಯಲ್ಲಿ ಅವ್ಯವಹಾರ ಕುರಿತು
- ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

245 – ಮಡಿಕೇರಿ ನಗರದಲ್ಲಿ ಉತ್ಪತ್ತಿಯಾಗುವ ಒಳಚರಂಡಿ ನೀರನ್ನು ಸಂಸ್ಕರಿಸುವ ಬಗ್ಗೆ
- ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.
- ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

206 – ಹಾರೋಹಳ್ಳಿ ಕೈಗಾರಿಕಾ ವಲಯದಲ್ಲಿ ಅಗ್ನಿ ಶಾಮಕ ಕೇಂದ್ರವಿಲ್ಲದಿರುವ ಕುರಿತು
– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

82 – ಹಾಲು ಉತ್ಪಾದಕರ ಸಹಕಾರ ಸಂಘಗಳು ನೀಡುತ್ತಿರುವ ಸಾಲಗಳ ಬಗ್ಗೆ
– ಶ್ರೀ ಎಂ.ಎ.ಗೋಪಾಲ ಸ್ವಾಮಿ
– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

244 – ಕೊಳವೆ ಬಾವಿಗಳ ಬಗ್ಗೆ
– ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
– ಎನ್.ನಾಗರಾಜ್ (ಎಂಟಿಬಿ)

243– ಕೊಡಗು ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದಾಗಿ ಕಾಫಿ ಕೊಯ್ಲು ಹಾಳಾಗಿರುವ ಕುರಿತು
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ
– ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

235 – ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

212 – ಬೀದರ್ ಜಿಲ್ಲೆಯ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಕುರಿತು
– ಶ್ರೀ ಅರವಿಂದ ಕುಮಾರ್ ಅರಳಿ
– ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

254 – ಕೋಲಾರ ನಗರಸಭೆ ವ್ಯಾಪ್ತಿಯ ರಸ್ತೆಗಳನ್ನು ದುರಸ್ತಿಪಡಿಸಿ ಅಭಿವೃದ್ಧಿಪಡಿಸುವ ಬಗ್ಗೆ
– ಶ್ರೀ ಕೆ.ಗೋವಿಂದ ರಾಜ್
– ಶ್ರೀ ಎನ್.ನಾಗರಾಜ್(ಎಂಟಿಬಿ)(ಪೌರಾಡಳಿತ ಹಾಗೂ ಸಕ್ಕರೆ ಸಚಿವರು)

229– ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಕುರಿತು
– ಶ್ರೀ ಕೆ.ಹರೀಶ್ ಕುಮಾರ್
– ಶ್ರೀ ಎನ್.ನಾಗರಾಜ್(ಎಂಟಿಬಿ)(ಪೌರಾಡಳಿತ ಹಾಗೂ ಸಕ್ಕರೆ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಅ) ಕೆ.ಪಿ.ಎಸ್.ಸಿ.ಯ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ಲಿಖಿತ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ.

– ಶ್ರೀ ಅ. ದೇವೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ) ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿ ಕೆರೆಗಳನ್ನು ಅಕ್ಕಪಕ್ಕದ ಭೂ ಮಾಲೀಕರು ಒತ್ತುವರಿ ಮಾಡಿಕೊಂಡಿರುವ ಬಗ್ಗೆ.

– ಆರ್.ಬಿ.ತಿಮ್ಮಾಪೂರ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಇ) ಬೆಂಗಳೂರು ಕರಗ ಉತ್ಸವದ ಆಚರಣೆಗೆ ಸೂಕ್ತ ನಿರ್ದೇಶನ ಹಾಗೂ ಮಾರ್ಗಸೂಚಿ ಹೊರಡಿಸುವ ಬಗ್ಗೆ.

– ಶ್ರೀ ಪಿ.ಆರ್.ರಮೇಶ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

4. ನಿರ್ಣಯ

“ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರನ್ನು ಸಭಾಪತಿ ಸ್ಥಾನದಿಂದ ತೆಗೆದುಹಾಕಬೇಕೆನ್ನುವ ಬಗ್ಗೆ.”

– ಶ್ರೀ ಆಯನೂರು ಮಂಜುನಾಥ್

(ನಿರ್ಣಯ ಮಂಡಿಸಲ್ಪಟ್ಟಿತು)

5. ನಿಯಮ 68ರ ಮೇರೆಗೆ ಪ್ರಸ್ತಾಪಿಸಲಾದ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ

“ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿನ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ ಸಂಗ್ರಹಿಸಿದ್ದ ಸ್ಫೋಟಕಗಳಿಂದ ಸಂಭವಿಸಿರುವ ದುರಂತದ ಬಗ್ಗೆ.”

– ಶ್ರೀ ಮುರುಗೇಶ್ ಆರ್.ನಿರಾಣಿ(ಗಣಿ ಮತ್ತು ಭೂವಿಜ್ಞಾನ ಸಚಿವರು)
– ಶ್ರೀ ಬಿ.ಕೆ.ಹರಿಪ್ರಸಾದ್
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು)
– ಶ್ರೀ ಆರ್.ಬಿ.ತಿಮ್ಮಾಪೂರ
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಮರಿತಿಬ್ಬೇಗೌಡ
– ಶ್ರೀ ಎಸ್.ರವಿ
– ಶ್ರೀ ಆಯನೂರು ಮಂಜುನಾಥ್
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

6. ಪ್ರಕಟಣೆ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

7. ಗಮನ ಸೆಳೆಯುವ ಸೂಚನೆಗಳು

ಅ) ಮಂಡ್ಯ ಜಿಲ್ಲಾ ಪಂಚಾಯಿತಿಯಲ್ಲಿ 2019 ರಿಂದ ಸಾಮಾನ್ಯ ಸಭೆ ನಡೆಯದೇ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತವಾಗಿರುವುದರಿಂದ ಸರ್ಕಾರದ ಅನುದಾನ ಬಳಕೆಯಾಗಿಲ್ಲದಿರುವ ಬಗ್ಗೆ.

– ಶ್ರೀ ಮರಿತಿಬ್ಬೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
– ಶ್ರೀ ಕೆ.ಸಿ.ನಾರಾಯಣಗೌಡ(ಯುವಜನ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

8. ಪ್ರಕಟಣೆ

9. ಮಾನ್ಯ ಸಭಾಪತಿಯವರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರನ್ನು ಸಭಾಪತಿ ಸ್ಥಾನದಿಂದ ತೆಗೆದುಹಾಕುವ ಬಗ್ಗೆ ಮಂಡಿಸಲಾದ ನಿರ್ಣಯದ ಮೇಲಿನ ಚರ್ಚೆಗೆ ದಿನಾಂಕ ನಿಗದಿ ಕೋರಿ ಒತ್ತಾಯ.

– ಶ್ರೀ ಆಯನೂರು ಮಂಜುನಾಥ್
– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು)
– ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

10. ಗಮನ ಸೆಳೆಯುವ ಸೂಚನೆಗಳು

ಆ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ವಿಧಾನ ಪರಿಷತ್ತಿನ ಶಾಸಕರುಗಳನ್ನು ನಾಮ ನಿರ್ದೇಶನ ಮಾಡದಿರುವ ಕುರಿತು.

– ಶ್ರೀ ಕೆ.ಹರೀಶ್ ಕುಮಾರ್
– ಶ್ರೀ ಕೆ.ಸಿ.ನಾರಾಯಣಗೌಡ(ಯುವಜನ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು)
– ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್

ಇ) ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರಂ ವಾರ್ಡ್ ಸಂಖ್ಯೆ 53ನೇ ವ್ಯಾಪ್ತಿಯ ಬಸವನಪುರ ಗ್ರಾಮದ ಸರ್ವೆ ನಂಬರ್ 26/01ರಲ್ಲಿ 4 ಎಕರೆ ವಿಸ್ತೀರ್ಣ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಇದ್ದರೂ ಜಿಲ್ಲಾಧಿಕಾರಿಗಳು ಕಾನೂನುಬಾಹಿರವಾಗಿ ಭೂ ಪರಿವರ್ತನೆ ಆದೇಶ ಹೊರಡಿಸಿರುವ ಬಗ್ಗೆ.

– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)(ಕಂದಾಯ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**11. ಹಕ್ಕುಚ್ಯುತಿ ಪ್ರಸ್ತಾವ**

**ವಿಷಯ: 'ವಿಧಾನಸೌಧದ ಮುಂಭಾಗದಲ್ಲಿ ಶ್ರೀ ಪಂಡಿತ್ ಜವಾಹರಲಾಲ್ ನೆಹರೂರವರ ಪ್ರತಿಮೆಯನ್ನು ಪುನರ್ ಸ್ಥಾಪಿಸುವ ಬಗ್ಗೆ.'**

**– ಶ್ರೀ ಕೆ.ಗೋವಿಂದರಾಜ್**

**(ಪ್ರಸ್ತಾವ ಅನುಮತಿಸಲಾಯಿತು ಹಾಗೂ ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಯಿತು)**

~ * ~ * ~

**(65)/02.02.2021/11.20/ಹೆಚ್‌ವಿಃಜಿಆರ್**

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 2ನೇ ಫೆಬ್ರವರಿ 2021**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 26 ನಿಮಿಷಗಳಿಗೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 1. ನೂತನ ಸಚಿವರ ಪರಿಚಯ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ನೂತನವಾಗಿ ಸಚಿವರಾಗಿರುವ ಮಾನ್ಯ ಉಮೇಶ್ ವಿ.ಕತ್ತಿಯವರು ಈ ಸದನಕ್ಕೆ ಆಗಮಿಸಿದ್ದಾರೆ. ಅವರನ್ನು ಸಭೆಗೆ ಪರಿಚಯಿಸುತ್ತಿದ್ದೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 2. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 194
### (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಆರ್.ಧರ್ಮಸೇನ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ನೀಡುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳು ಕಾವೇರಿ ನದಿ ಪಾತ್ರದಲ್ಲಿರುವ ಜಿಲ್ಲೆಗಳಾಗಿವೆ. 2018–19ನೇ ಸಾಲಿನಲ್ಲಿ ಮೈಸೂರು ಜಿಲ್ಲೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲದ ಮೊತ್ತವಾಗಿ ಒಟ್ಟು 41 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 2019–20ನೇ ಸಾಲಿನಲ್ಲಿ 36 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದೇ ರೀತಿ ಚಾಮರಾಜನಗರ ಜಿಲ್ಲೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲದ ಮೊತ್ತವಾಗಿ 2018–19ನೇ ಸಾಲಿನಲ್ಲಿ ಒಟ್ಟು 11 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 2019–20ನೇ ಸಾಲಿನಲ್ಲಿ 9 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಈ ಮೊತ್ತ ಬಹಳ ಕಡಿಮೆಯಾಗಿದೆ ಎನ್ನುವುದು ನನ್ನ ಅನಿಸಿಕೆಯಾಗಿದೆ. ಈ ಎರಡು ಜಿಲ್ಲೆಗಳು ಮಿಶ್ರ ಬೆಳೆ ಬೆಳೆಯುವಂತಹ ಜಿಲ್ಲೆಗಳಾಗಿವೆ. ಈ ಜಿಲ್ಲೆಗಳಲ್ಲಿ ಒಂದೇ ಬೆಳೆ ಬೆಳೆಯುವುದಿಲ್ಲ. ಇಲ್ಲಿನ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಾನ್ಯ ಸಹಕಾರ ಸಚಿವರು ಇನ್ನೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆನ್ನುವುದು ನನ್ನ ವಿನಂತಿಯಾಗಿದೆ. 'ಈ ಯೋಜನೆಯಡಿಯಲ್ಲಿ ನೀಡುವ ಸಾಲದ ಗರಿಷ್ಠ ಮತ್ತು ಕನಿಷ್ಠ ಮೊತ್ತವೆಷ್ಟು' ಎನ್ನುವ ನನ್ನ ಪ್ರಶ್ನೆಗೆ 'ಶೂನ್ಯ ಬಡ್ಡಿದರದಲ್ಲಿ ಅಲ್ಪಾವಧಿ ಬೆಳೆ ಸಾಲ ವಿತರಿಸುವ ಯೋಜನೆಯಡಿ ಕುಟುಂಬಕ್ಕೆ ಗರಿಷ್ಠ 3 ಲಕ್ಷ ರೂಪಾಯಿಗಳ ಮಿತಿಯನ್ನು ನಿಗದಿಪಡಿಸಲಾಗಿದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಬಹಳ ವರ್ಷಗಳಿಂದ ಈ ಮೊತ್ತ 3 ಲಕ್ಷ ರೂಪಾಯಿಗಳಾಗಿಯೇ ಉಳಿದಿದೆ. ನಮ್ಮ ಭಾಗಕ್ಕೆ ಕಟಾವು ಮಾಡುವಂತಹ ಮಿಷಿನ್‌ಗಳು ತಮಿಳುನಾಡಿನಿಂದ ಬರುತ್ತವೆ. ಇವುಗಳ ಬಾಡಿಗೆ ಅಧಿಕವಾಗಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಗರಿಷ್ಠ ಸಾಲದ ಮೊತ್ತವನ್ನು 3 ಲಕ್ಷ ರೂಪಾಯಿಗಳಿಂದ 10 ಲಕ್ಷ ರೂಪಾಯಿಗಳಿಗೆ ಏರಿಸಬೇಕೆಂದು ಒತ್ತಾಯಿಸುತ್ತಿದ್ದೇನೆ. ಒಂದು ವೇಳೆ ಇದು ಸಾಧ್ಯವಾಗದಿದ್ದರೆ, ಕಡೆಯ ಪಕ್ಷ 5 ಲಕ್ಷ ರೂಪಾಯಿಗಳಿಗಾದರೂ ಹೆಚ್ಚು ಮಾಡಬೇಕೆನ್ನುವುದು ನನ್ನ ಮನವಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ.ಸೋಮಶೇಖರ್:–** ಸನ್ಮಾನ್ಯ ಸಭಾಪತಿಯವರೇ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸುಮಾರು 73,800 ಜನ ರೈತರು ಈ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರು. ಇದರಲ್ಲಿ ಸುಮಾರು 3,113 ಅರ್ಜಿಗಳು ಮಾತ್ರ ಬಾಕಿ ಉಳಿದಿವೆ. ಅದಕ್ಕೆ ಸಂಬಂಧಪಟ್ಟ ಕಡತ ಆರ್ಥಿಕ ಇಲಾಖೆಗೆ ಹೋಗಿದೆ. ಅಲ್ಲಿಂದ ಅನುಮೋದನೆ ಪಡೆದುಕೊಂಡು ಬಂದ ಕೂಡಲೇ ಬಾಕಿ ಉಳಿದಿರುವ ಅರ್ಜಿಗಳನ್ನು ಕ್ಲಿಯರ್ ಮಾಡಲಾಗುತ್ತದೆ. ಆಗ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ನೂರಕ್ಕೆ ನೂರರಷ್ಟು ಅರ್ಜಿಗಳು ಕ್ಲಿಯರ್ ಆಗುತ್ತವೆ. ಒಂದು ಲಕ್ಷ ರೂಪಾಯಿಗಳ ಸಾಲ ಮನ್ನಾ ಯೋಜನೆಯಡಿಯಲ್ಲಿ ರೈತರ ಸಾಲ ಮನ್ನಾ ಮಾಡುವುದಕ್ಕೆ ಎ.ಪಿ.ಎಲ್. ಬಿ.ಪಿ.ಎಲ್. ಕಾರ್ಡು ಮತ್ತು ಆರ್.ಟಿ.ಸಿ. ಒದಗಿಸಬೇಕು ಮತ್ತು 20 ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ಪಿಂಚಣಿ ಅಥವಾ ವೇತನವನ್ನು ಪಡೆದುಕೊಳ್ಳಬಾರದು ಹೀಗೆ ಕೆಲವೊಂದು ಷರತ್ತುಗಳನ್ನು ವಿಧಿಸಲಾಗಿದೆ. ಈ ಎರಡು ಜಿಲ್ಲೆಗಳಲ್ಲಿ ಅಂತಹ ಷರತ್ತುಗಳನ್ನು ಯಾರು ಪೂರೈಸಿಲ್ಲ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

(ಮುಂದುವರಿದಿದೆ)

(66) 2.2.2021 11.30 ಪಿಕೆ:ಜಿಆರ್

**ಶ್ರೀ ಎಸ್.ಟಿ.ಸೋಮಶೇಖರ್(ಮುಂದು):**

ಮಾನ್ಯ ಸಭಾಪತಿಯವರೇ, ಇನ್ನು 3113 ಪ್ರಕರಣಗಳನ್ನು ಕ್ಲಿಯರ್ ಮಾಡುವುದು ಬಾಕಿ ಇದೆ. ಇದು ಈಗ ಆರ್ಥಿಕ ಇಲಾಖೆಗೆ ಹೋಗಿದ್ದು, ಅಲ್ಲಿಂದ ಕ್ಲಿಯರ್ ಆಗಿ ಬಂದ ತಕ್ಷಣ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರೈತರೇನು ಸಾಲ ಮನ್ನಾ ಮಾಡುವುದಕ್ಕೆ ಅರ್ಜಿ ಹಾಕಿದ್ದಾರೋ ಅವೆಲ್ಲವೂ ಕ್ಲಿಯರ್ ಆಗುತ್ತವೆ. ಮಿಕ್ಕ ಪ್ರಕರಣಗಳಿಗೆ ಸಂಬಂಧಪಟ್ಟಂತೆ, ರೂ. 1 ಲಕ್ಷಗಳ ಸಾಲ ಮನ್ನಾ ಮಾಡಲು ಏನು ಷರತ್ತುಗಳನ್ನು ಹಾಕಿದ್ದರೋ ಅಂದರೆ, ಎಪಿಎಲ್–ಬಿಪಿಎಲ್ ಕಾರ್ಡ್‌ಗಳನ್ನು ಕೊಡಬೇಕು, RTC clear ಇರಬೇಕು, ರೂ. 20 ಸಾವಿರ ಕ್ಕಿಂತ ಹೆಚ್ಚಿನ ವೇತನ/ಪಿಂಚಣಿ ಇರಬಾರದು, ಮೂರು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಆದಾಯ ತೆರಿಗೆ ಪಾವತಿಸಿರಬಾರದು ಎಂಬಿತ್ಯಾದಿ ಅನ್ವಯಿಸುವ ಅಂಶಗಳು ಯಾವುದಿದೆಯೋ ಅಂಥದ್ದನ್ನು ರಿಜೆಕ್ಟ್ ಮಾಡಲಾಗಿದೆ. ಮಿಕ್ಕ 3113 ಪ್ರಕರಣಗಳನ್ನು ಕ್ಲಿಯರ್ ಮಾಡಿದರೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಸಾಲ ಮನ್ನಾ ಪ್ರಕರಣಗಳು ಕ್ಲಿಯರ್ ಆಗುತ್ತವೆ.

ಮಾನ್ಯ ಸಭಾಪತಿಯವರೇ, ಶೂನ್ಯ ಬಡ್ಡಿದರಲ್ಲಿ ಅಲ್ಪಾವಧಿ ಬೆಳೆ ಸಾಲ ವಿತರಿಸುವ ಯೋಜನೆಯಡಿ ಕುಟುಂಬಕ್ಕೆ ಗರಿಷ್ಠ ರೂ. 3 ಲಕ್ಷ ಇರುವುದನ್ನು ಹೆಚ್ಚು ಮಾಡಬೇಕು ಎಂದು ಕೇಳುತ್ತಿದ್ದಾರೆ. ಈ ಕುರಿತು ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್. ಧರ್ಮಸೇನ:–** ನಿಮ್ಮ ಉತ್ತರದ ಕೊನೆಯ ಭಾಗದಲ್ಲಿ, “ಎರಡು ಸಹಕಾರ ಸಂಘಗಳಲ್ಲಿ ಸಾಲ ಪಡೆದಿದ್ದಲ್ಲಿ ಒಂದು ಸಹಕಾರ ಸಂಘದಲ್ಲಿ ಮಾತ್ರ ಸಾಲ ಮನ್ನಾ ದೊರೆಯುವುದು” ಎಂದು ಹೇಳಿದ್ದೀರಿ. ದಯವಿಟ್ಟು ಎರಡೂ ಕಡೆಯ ಸಾಲವನ್ನು ಮನ್ನಾ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಒಟ್ಟು 73308 ಪ್ರಕರಣಗಳಲ್ಲಿ 3113 ಪ್ರಕರಣಗಳು ಮಾತ್ರ ಬಾಕಿ ಇವೆ. ಈ ಕುರಿತು ಕೂಡ ಆರ್ಥಿಕ ಇಲಾಖೆಗೆ ಕಳುಹಿಸಲಾಗಿದ್ದು ಅಲ್ಲಿಂದ ಕ್ಲಿಯರ್ ಆಗ ಬಂದ ತಕ್ಷಣ ಬಾಕಿ ಇರುವ ಪ್ರಕರಣಗಳನ್ನೂ ಕ್ಲಿಯರ್ ಮಾಡುತ್ತೇವೆ. ಕಳೆದ ವಾರ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಭೇಟಿ ಮಾಡಿ ಇನ್ಸ್‌ಪೆಕ್ಷನ್ ಮಾಡಿದ್ದೇನೆ. ವ್ಯವಸ್ಥಿತವಾಗಿ ನೂರಕ್ಕೆ ನೂರು ಸಾಲ ಕೊಡುವ ಕೆಲಸ ಮಾಡಿದ್ದಾರೆ. ಸಾಲ ಮನ್ನಾದ ಬಾಕಿ ಎಷ್ಟು ಬರಬೇಕು ಎನ್ನುವುದನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಅದನ್ನು ನೋಡಿ ಸರಿಪಡಿಸುವ ಕೆಲಸ ಮಾಡುತ್ತೇವೆ.

**ಶ್ರೀ ಆರ್.ಧರ್ಮಸೇನ:–** ತಾವು ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದೀರಿ. ಮುಂದೆಯೂ ತಾವು ಉಸ್ತುವಾರಿಗಳಾಗಿ ಮುಂದುವರೆಯಬೇಕು ಎನ್ನುವುದು ನಮ್ಮ ಆಸೆಯಾಗಿದೆ. ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಧರ್ಮಸೇನರವರು ಮಹತ್ವದ ಪ್ರಶ್ನೆ ಕೇಳಿದ್ದಾರೆ. ನಾವು ರಾಜ್ಯದಲ್ಲಿ ಪ್ರವಾಸ ಮಾಡುತ್ತಿರುವ ಕಡೆಗಳಲ್ಲಿ, ನಮಗೆ ಸಾಲ ಮನ್ನಾದ ಸೌಲಭ್ಯ ಸಿಕ್ಕಿಲ್ಲ ಎಂದು ಸುಮಾರು 300–400 ಜನ ಪಟ್ಟಿ ತೆಗೆದುಕೊಂಡು ಬಂದು ಕೊಡುತ್ತಾರೆ. ಸಾಲ ಮನ್ನಾ ಆಗಿ ಇನ್ನೂ ಆ ಸೌಲಭ್ಯ ಸಿಗದೇ ಇರುವಂತಹ ಪ್ರಕರಣಗಳು ಬಾಕಿ ಇದ್ದು, ಆ ಜನ ಅಲೆದಾಡುವಂತಹ ಪರಿಸ್ಥಿತಿಯನ್ನೇನು ಎದುರಿಸುತ್ತಿದ್ದಾರೋ ಅದನ್ನು ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು. ತ್ವರಿತ ಗತಿಯಲ್ಲಿ ಸಾಲ ಮನ್ನಾ ಸೌಲಭ್ಯ ರೈತರಿಗೆ ಮುಟ್ಟಿದರೆ ಒಳಿತಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ ಎಲ್ಲೆಲ್ಲಿ ಸಾಲ ಮನ್ನಾ ಮಾಡುವ ಪ್ರಕರಣಗಳು ಬಾಕಿ ಇವೆಯೋ ಅವೆಲ್ಲವನ್ನೂ ಕ್ಲಿಯರ್ ಮಾಡಬೇಕು ಎಂದು ಹೇಳಬಯಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:–**ಮಾನ್ಯ ಸಭಾಪತಿಯವರೇ, 57 ಸಾವಿರ ಜನ ರೈತರ ಸಾಲ ಮನ್ನಾ ಮಾಡಬೇಕು ಎನ್ನುವ ನಿಟ್ಟಿನಲ್ಲೇನು ಷರತ್ತುಗಳಿತ್ತೋ ಈಗ ಅವು ಕ್ಲಿಯರ್ ಆಗಿವೆ. ರೂ. 295 ಕೋಟಿ ಮೊತ್ತ ಏನಿದೆ ಅದು ಆರ್ಥಿಕ ಇಲಾಖೆಯಿಂದ ಕ್ಲಿಯರ್ ಆದ ತಕ್ಷಣ ಇದು ಕ್ಲಿಯರ್ ಆಗುತ್ತವೆ. ಮಿಕ್ಕ ಸುಮಾರು 40 ಸಾವಿರ ಪ್ರಕರಣಗಳೇನಿವೆ, ಅವುಗಳಲ್ಲಿ ಕೆಲವಾರು ಕಂಡೀಷನ್ ಫುಲ್‌ಫಿಲ್ ಮಾಡುವುದೂ ಬಾಕಿ ಇದ್ದು, ಅವುಗಳು ಪೂರ್ತಿಯಾದ ತಕ್ಷಣ ಎಲ್ಲಾವನ್ನೂ ಕ್ಲಿಯರ್ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ : 94**
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಟ್ಟು 57,44,861 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ ಎಂದು ಹೇಳಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಈಗಾಗಲೇ 2,98,491 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಇದೆ, ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲ್ಲೂಕಿನಲ್ಲಿ 95,272 ಎಕರೆ ತೋಟಗಾರಿಕೆ ಬೆಳೆ ಮತ್ತು ಹೊನ್ನಾಳಿ ತಾಲ್ಲೂಕಿನಲ್ಲಿ 43,537 ಎಕರೆ ತೋಟಗಾರಿಕೆ ಬೆಳೆ ಇದೆ ಎಂದು ಹೇಳಿದ್ದಾರೆ. ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆ ಎಂದರೆ ಶೇಕಡ ನೂರರಷ್ಟು ಅದು ಅಡಿಕೆ ಬೆಳೆಯಾಗಿದೆ. ಒಂದು ಕಡೆ ಮಲೆನಾಡಿನಲ್ಲಿ ಅಡಿಕೆ ಮರಗಳಿಗೆ ರೋಗಗಳು ಬಂದು ರೈತರು ಆತಂಕದಲ್ಲಿದ್ದಾರೆ. ಚೆನ್ನಗಿರಿಯಲ್ಲಿ ಸುಮಾರು 1 ಲಕ್ಷಕ್ಕಿಂತ ಹೆಚ್ಚು ಎಕರೆ ಪ್ರದೇಶದಲ್ಲಿ ಅಡಿಕೆ ಬೆಳೆ ಬೆಳೆಯುತ್ತಿದ್ದಾರೆ. ನಾಳೆ ಏನಾದರೂ, ಅಡಿಕೆ ಬೆಳೆ ವಿಷಕಾರಿ ವಸ್ತುವಾಗಿದೆ ಎಂದು ಹೇಳಿಬಿಟ್ಟರೆ ಆ ಬೆಳೆಯ ಪರಿಸ್ಥಿತಿ ಏನಾಗುತ್ತದೆ ಎನ್ನುವ ಆತಂಕದಲ್ಲಿ ಆ ರೈತರಿದ್ದಾರೆ. ನಮ್ಮ ಭಾಗದ ಅಡಿಕೆ ಬೆಳೆಯುವ ರೈತರಿಗೆ ಸರ್ಕಾರ ಯಾವರೀತಿ ರಕ್ಷಣೆ ಕೊಡುತ್ತದೆ ಎನ್ನುವುದನ್ನು ಹೇಳಬೇಕು. ಅಡಿಕೆ ಬೆಳೆಗೆ ಏನೂ ತೊಂದರೆ ಆಗದ ಹಾಗೆ ಸರ್ಕಾರ ಏನು ಕ್ರಮ ವಹಿಸುತ್ತದೆ ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

**ಶ್ರೀ ಆರ್.ಶಂಕರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಡಿಕೆ ಬೆಳೆಯನ್ನು ರಕ್ಷಣೆ ಮಾಡಬೇಕು ಎಂದು ಕೆಲವು ಅಂಶಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಇದನ್ನು ಪರಿಶೀಲನೆ ಮಾಡಿ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆ. ಈ ಕುರಿತು ಚರ್ಚೆ ಮಾಡುವಾಗ ಮಾನ್ಯ ಸದಸ್ಯರನ್ನು ಕರೆಸಿ, ಅವರ ಅಭಿಪ್ರಾಯವನ್ನು ಪಡೆದುಕೊಂಡು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಮ್ಮನ್ನು ಕರೆಸಿ ಇದರ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅವರು ಹೊಸದಾಗಿ ತೋಟಗಾರಿಕೆ ಸಚಿವರಾಗಿದ್ದಾರೆ. ಅವರ ಕಾಲದಲ್ಲಿ, ಅಡಿಕೆ ಬೆಳೆಯುವ ರೈತರ ಸಂಕಷ್ಟವನ್ನು ಅರ್ಥ ಮಾಡಿಕೊಂಡು ಅದರ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ, ಅವರಿಗೂ ಅಭಿನಂದನೆ ಸಲ್ಲಿಸುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಸಂಖ್ಯೆ: 216, ಮಾನ್ಯ ಕಾಂತರಾಜ್ ಅವರದ್ದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರ ಪರವಾಗಿ ನಾನು ಪ್ರಶ್ನೆ ಕೇಳಲು ತಮಗೆ ಪತ್ರ ಕೊಟ್ಟಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಅವರ ಪತ್ರ ಎಲ್ಲಿದೆ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸದರಿ ಪ್ರಶ್ನೆಯಲ್ಲಿ ವಿಧಾನ ಪರಿಷತ್ತಿನ ಸದಸ್ಯರ ಗೌರವದ ಪ್ರಶ್ನೆ ಅಡಕವಾಗಿರುವುದರಿಂದ ಆ ಕುರಿತು ಮಾನ್ಯ ಸಚಿವರ ಸಮ್ಮುಖದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಗಣಿ ಇಲಾಖೆಯಿಂದ ಬರುವಂತಹ ಅನುದಾನದ ಹಂಚಿಕೆಗೆ ಸಂಬಂಧಪಟ್ಟಂತೆ ನಮ್ಮ ಜಿಲ್ಲೆಯಲ್ಲಿ ತೊಂದರೆಯಿಲ್ಲ; ಎಂ.ಎಲ್.ಎ., ಎಂ.ಎಲ್.ಸಿ ಗಳಿಗೆ ಉಸ್ತುವಾರಿ ಸಚಿವರು ಹಂಚಿಕೆ ಮಾಡಿದ್ದಾರೆ. ಅದೇರೀತಿ ಬೇರೆ ಜಿಲ್ಲೆಗಳಲ್ಲಿ ಎಂ.ಎಲ್.ಎ., ಗಳಿಗೆ ಸಮಾನವಾಗಿ ಎಂ.ಎಲ್.ಸಿ., ಗಳನ್ನೂ ಕಾಣಬೇಕು. ಮಾನ್ಯ ಸಭಾಪತಿಯವರೇ, ಈ ಕುರಿತು ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:–** ನಂತರ ನೋಡೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 34**
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಕೋವಿಡ್–19 ಹೊರತುಪಡಿಸಿ ಬಂಡವಾಳ ಹೂಡಿಕೆ ಆಕರ್ಷಣೆ ಕುಸಿತ ಕಾಣಲು ಬೇರೆ ಕಾರಣಗಳೇನು ಎಂದು ನಾನು ಕೇಳಿದ ಪ್ರಶ್ನೆಗೆ, ಮಾನ್ಯ ಸಚಿವರು, ‘ಕೇಂದ್ರ ಸರ್ಕಾರದ ಡಿ.ಪಿ.ಐ.ಐ.ಟಿ., ಇಲಾಖೆಯು ಹೊರಡಿಸಿರುವ ಅಧಿಕೃತ ಮಾಹಿತಿ ಪ್ರಕಾರ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಆಕರ್ಷಣೆಗೆ ಸಂಬಂಧಿಸಿದಂತೆ ಕುಸಿತವಾಗಿರುವುದಿಲ್ಲ’ ಎಂದು ಹೇಳಿದ್ದಾರೆ.

ನನ್ನ ಇನ್ನೊಂದು ಪ್ರಶ್ನೆಗೆ ಸಂಬಂಧಪಟ್ಟಂತೆ “ಈ ನೀತಿಯಲ್ಲಿ ಹಲವಾರು ಸುಧಾರಣೆಗಳನ್ನು ತಂದಿದ್ದು, ಮುಖ್ಯವಾಗಿ ಭೂಮಿ ಸಂಗ್ರಹಣೆ, ಕಾರ್ಮಿಕ ಕಾನೂನುಗಳ ಸುಧಾರಣೆ ಹಾಗೂ ಆಕರ್ಷಕ ರಿಯಾಯಿತಿ ಹಾಗೂ ಉತ್ತೇಜನಗಳನ್ನು ನೀಡಲಾಗಿದ್ದು, ಇದರಿಂದ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಆಕರ್ಷಣೆ ವೃದ್ಧಿಸಿದೆ” ಎಂದು ಹೇಳಿದ್ದಾರೆ. ಎಲ್ಲಿ ವೃದ್ಧಿಸಿದೆ ಎಂದು ಹೇಳಬೇಕು.

**ಶ್ರೀ ಜಗದೀಶ್ ಶೆಟರ್**:–ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು, ರಾಜ್ಯದಲ್ಲಿ ಇನ್‌ವೆಸ್ಟ್‌ಮೆಂಟ್ ಪ್ರಪೋಸಲ್‌ಗಳ ಬಗ್ಗೆ ಕೇಳಿದ್ದಾರೆ. ಕೋವಿಡ್–19ರ ಹಿನ್ನೆಲೆಯಲ್ಲಿ ತೀವ್ರ ಕುಸಿತಗೊಂಡಿದೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಕುಸಿತವಾಗಿದೆ ಎಂದು ತಿಳಿದುಕೊಂಡಿದ್ದಾರೆ. ನಿಜವಾಗಲೂ ಹೇಳಬೇಕಾದರೆ ಕುಸಿತ ಆಗಿಲ್ಲ. ಕುಸಿತವಾಗಿದೆ ಎನ್ನುವುದರಿಂದಲೇ ಮಾನ್ಯ ಸದಸ್ಯರ ಮೂಲ ಪ್ರಶ್ನೆ ಪ್ರಾರಂಭವಾಗುತ್ತದೆ. ನಾನು ಈ ಕುರಿತು ಎಲ್ಲಾ ಮಾಹಿತಿಗಳನ್ನು ಕೊಟ್ಟಿದ್ದೇನೆ. ನಾನು ಒಬ್ಬ ಕೈಗಾರಿಕಾ ಮಂತ್ರಿಯಾಗಿ, ಬಹುಶಃ ಕೋವಿಡ್–19ರ ಪರಿಣಾಮದಿಂದ ಬಹಳಷ್ಟು ಜನ ಬಂಡವಾಳ ಹೂಡುವುದಕ್ಕೆ ಬರುವುದಿಲ್ಲ, ಅದಕ್ಕೆ ಇನ್ನೂ ಒಂದೆರಡು ವರ್ಷ ಬೇಕಾಗುತ್ತದೆ ಎಂದು ತಿಳಿದುಕೊಂಡಿದ್ದೆ. ಆದರೆ ನಾವು ನಮ್ಮ ರಾಜ್ಯದಲ್ಲೇನು Land Reforms Act, the Karnataka Industries (Facilitation) Act ಇರಬಹುದು ಮತ್ತು ‘Ease of doing business’ ನ ಸರಳೀಕರಣದ ಕಾರಣ ಬಹಳ ದೊಡ್ಡ ಪ್ರಮಾಣದಲ್ಲಿ ಇವತ್ತು ಪ್ರಪೋಸಲ್ಸ್ ಬರುತ್ತಿವೆ. ನಾವು ಇನ್‌ವೆಸ್ಟ್‌ಮೆಂಟ್‌ಗೆ ಅಪ್ರೂವಲ್ ಕೂಡ ಕೊಡುತ್ತಿದ್ದೇವೆ. ಒಂದು ಉದಾಹರಣೆ ಕೊಡುವುದಾದರೆ, ಕೇಂದ್ರ ಸರ್ಕಾರದ ಡಿ.ಪಿ.ಐ.ಐ.ಟಿ., ಇಲಾಖೆ ಏನಿದೆ, ಅವರು 2020 ಜನವರಿಯಿಂದ ನವೆಂಬರ್ 2020ರವರೆಗೆ ಒಂದು ಅಂಕಿ–ಅಂಶವನ್ನು ಪ್ರಕಟ ಮಾಡಿದ್ದಾರೆ.

(ಮುಂದು..)

(67) 02–02–2021/11.40/ಡಿಎಸ್–ಎಂಡಿ
**ಶ್ರೀ ಜಗದೀಶ್ ಶೆಟ್ಟರ್(ಮುಂದು):–**

ಅದರಲ್ಲಿ ಇಡೀ ರಾಷ್ಟ್ರದಲ್ಲಿ ವಿವಿಧ ಕೈಗಾರಿಕೆಗಳನ್ನು ಸ್ಥಾಪಿಸಲು ಒಟ್ಟು 1308 ಬಂಡವಾಳ ಹೂಡಿಕೆ ಪ್ರಸ್ತಾವನೆಗಳು ಬಂದಿವೆ. ಅಂದರೆ, ಇಡೀ ರಾಷ್ಟ್ರದಲ್ಲಿ ಒಟ್ಟು 3,95,092 ಕೋಟಿ ಬಂಡವಾಳ ಹೂಡಿಕೆ ಪ್ರಸ್ತಾವನೆಗಳು ಬಂದಿವೆ. ಈ ಪೈಕಿ ರಾಜ್ಯದ ಪಾಲು 103 ಹೂಡಿಕೆ ಪ್ರಸ್ತಾವನೆಗಳು ಹಾಗೂ ರೂ.1,59,255 ಕೋಟಿ ಬಂಡವಾಳ ಹೂಡಿಕೆಯಾಗಲಿದೆ. ಅಂದರೆ, ದೇಶದ ಒಟ್ಟು ಹೂಡಿಕೆ ಪ್ರಸ್ತಾವನೆಗಳಲ್ಲಿ ರಾಜ್ಯದ ಪಾಲು ಶೇಕಡ 41 ಆಗಿದೆ. ಇದು ನಾವೆಲ್ಲರೂ ಹೆಮ್ಮೆಪಡುವಂತಹ ವಿಷಯವಾಗಿದೆ. ಬಂಡವಾಳ ಆಕರ್ಷಣೆ ಮಾಡುವುದರಲ್ಲಿ, ಪ್ರಪೋಸಲ್ ತೆಗೆದುಕೊಳ್ಳುವುದರಲ್ಲಿ ಇಡೀ ರಾಷ್ಟ್ರದಲ್ಲಿ ನಾವು ನಂಬರ್–1 ಸ್ಥಾನದಲ್ಲಿದ್ದೇವೆ. ಇದರಲ್ಲಿ ಮತ್ತೊಂದು ಬಹಳ ಮುಖ್ಯವಾಗಿರುವುದೇನೆಂದರೆ, Foreign Direct Investment (FDI) ಅದು ಕೂಡ ಏಪ್ರಿಲ್–2020 ರಿಂದ ಸೆಪ್ಟಂಬರ್–2020 ರವರೆಗೆ ಕೊರೋನಾ ಸಂದರ್ಭದಲ್ಲಿ ರೂ.27,458 ಕೋಟಿ ವಿದೇಶಿ ನೇರ ಬಂಡವಾಳ ಹೂಡಿಕೆ ಪ್ರಸ್ತಾವಗಳು ಇವತ್ತು ನಮ್ಮ ರಾಜ್ಯಕ್ಕೆ ಬಂದಿದ್ದು ಇಡೀ ದೇಶದಲ್ಲಿ ರಾಜ್ಯವು 2ನೇ ಸ್ಥಾನದಲ್ಲಿದೆ.

ರಾಜ್ಯ ಮಟ್ಟದ ಸಮಿತಿಯವರು ಎಷ್ಟು ಸಭೆಗಳನ್ನು ಮಾಡಿದ್ದೀರಿ, ಎಷ್ಟು ಪ್ರಪೋಸಲ್‌ಗಳಿಗೆ ಅನುಮೋದನೆ ಕೊಟ್ಟಿದ್ದೀರಿ ಎಂದು ಕೇಳುವುದಾದರೆ, ಮಾರ್ಚ್ 2020 ರಿಂದ ಡಿಸೆಂಬರ್ 2020 ರವರೆಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನೆ ಸಮಿತಿಗಳಿಂದ ಒಟ್ಟು 326 ಯೋಜನೆಗಳು ಅನುಮೋದನೆಗೊಂಡಿದ್ದು, ರೂ.76,480 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು 1,42,070 ಜನರಿಗೆ ಉದ್ಯೋಗ ಒದಗಲಿದೆ. ಇವೆಲ್ಲಾ ಅಂಕಿ ಸಂಖ್ಯೆಗಳನ್ನು ನೋಡಿದಾಗ ತೀವ್ರ ಕುಸಿತ ಎನ್ನುವಂಥದ್ದು ಇಲ್ಲ. ಮಾನ್ಯ ಸದಸ್ಯರ ಪ್ರಶ್ನೆಗೆ ಈ ರೀತಿಯ ಉತ್ತರಗಳನ್ನು ಕೊಟ್ಟಿದ್ದೇವೆ. ಈ ಹಿಂದೆ ‘Global Investors Meet’ ಅದಾದ ನಂತರವೂ ಸಹ ಯಾರು ಬಂದಿದ್ದಾರೆ ಅದನ್ನೆಲ್ಲಾ follow-up ಮಾಡುವಂಥದ್ದೆಲ್ಲಾ ನಡೆಯುತ್ತಿದೆ. ಅದಕ್ಕೊಂದು Special Wing and Task Force Committee ರಚನೆ ಮಾಡಿದ್ದೇವೆ. ಇವತ್ತು ಚೈನಾದಿಂದ ಹೊರಗಡೆ ಬರುವಂತಹ ಕಂಪನಿಗಳಿಗೆ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ Task Force Committee ಯನ್ನು ಮಾಡಿದ್ದೇವೆ ಮತ್ತು ಪ್ರತಿ ಹಂತದಲ್ಲಿ follow-up ಮಾಡುವುದನ್ನು ಸಹ ನಮ್ಮ ಇಲಾಖೆಯಲ್ಲಿ ಮಾಡುತ್ತಿದ್ದೇವೆ. ಇತ್ತೀಚಿನ ಸುಧಾರಣೆಗಳು ಬಹಳ impact ಆಗಿದೆ. ಆ ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಯಾವುದೇ ಹಿನ್ನೆಡೆಯಾಗಿಲ್ಲ. ಅದು ಬಹಳ progressive ಆಗಿ ನಡೆಯುತ್ತಿದೆ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರಮೇಶಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾಗಿ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದ ಕೊನೆಯಲ್ಲಿ ಏನು ಹೇಳಿದ್ದಾರೆಂದರೆ, FDI ಗೆ ಸಂಬಂಧಿಸಿದಂತೆ ಹೇಳುವುದಾದರೆ, ಜರ್ಮನಿ, ಜಪಾನ್, ಜೆಕ್ ರಿಪಬ್ಲಿಕ್, ನ್ಯೂಯಾರ್ಕ್, ಫ್ರಾನ್ಸ್ ಹಾಗೂ ಇತರೆ ರಾಯಭಾರಿಗಳೊಂದಿಗೆ ಸಭೆಗಳನ್ನು ಏರ್ಪಡಿಸಿ ರಾಜ್ಯಕ್ಕೆ ಬಂಡವಾಳ ಆಕರ್ಷಿಸಲು ಪ್ರೋತ್ಸಾಹಿಸಲಾಗಿದೆ ಎಂದು ಹೇಳಿದ್ದಾರೆ. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಏನು ನಮ್ಮ CDP (Comprehensive Development Plan) ಇತ್ತು, ಅದನ್ನು withdraw ಮಾಡಿದ್ದಾರೆ. ಆ CDP plan withdraw ಮಾಡುವುದಕ್ಕಿಂತ ಮುಂಚೆ ವಿದೇಶಿ ಬಂಡವಾಳ ಏನು ಬಂದಿತ್ತು, ಆ ವಿದೇಶಿ ಬಂಡವಾಳ ಬಂದಂತಹ ಸಂದರ್ಭದಲ್ಲಿ ಅವರು ಕೈಗಾರಿಕಾ ಪ್ರದೇಶದಲ್ಲಿ ಜಾಗವನ್ನು ತೆಗೆದುಕೊಂಡಿರುತ್ತಾರೆ. ಅವರು ಈಗಾಗಲೇ ಪ್ಲಾನ್ ಸಹ ತೆಗೆದುಕೊಂಡಿರುತ್ತಾರೆ. ಆದರೆ ಅವತ್ತಿನ ಪ್ಲಾನ್ ಪ್ರಕಾರ ಅವರಿಗೆ airport clearance, environmental clearance ಇರಬಹುದು, ಎಲ್ಲವನ್ನು ತೆಗೆದುಕೊಂಡಿರುತ್ತಾರೆ. ಆದರೆ ಆ CDP plan ನ್ನು withdraw ಮಾಡಿದ ಮೇಲೆ ಈಗ ಅವರೇನು ತೆಗೆದುಕೊಂಡಿದ್ದಾರೆ, ನಾನು FDI investment ಬಗ್ಗೆ ಹೇಳುತ್ತಿದ್ದೇನೆ. ಅವರು FAR (Floor Area Ratio) ಸುಮಾರು ನಾಲ್ಕೈದು floor ಗೆ ತೆಗೆದುಕೊಂಡಿರುತ್ತಾರೆ. ರಸ್ತೆ ಇದ್ದೆಯಲ್ಲಾ ಅದನ್ನು ಸರ್ಕಾರ withdraw ಮಾಡಿದ ಮೇಲೆ ಅವರಿಗೆ ತೊಂದರೆಯಾಗಿದೆ. ಇದಕ್ಕೆ ಮಾನ್ಯ ಸಚಿವರೇನು ಪರಿಹಾರ ಕೊಡುತ್ತಾರೆ?

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಯಾವುದೋ ಕಂಪನಿಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಅವೆಲ್ಲಾ ವಿವರಗಳನ್ನು ಅವರು ನನಗೆ ಕೊಡಲಿ. ಈಗೇನು FDI ಬಂದಿರುತ್ತದೆ, ಅವರು ವಾಪಸ್ ಹೋಗದ ರೀತಿಯಲ್ಲಿ ಅವರಿಗೇನು ಅನುಕೂಲತೆ ಮಾಡಬೇಕು ಆ ಎಲ್ಲಾ ಅನುಕೂಲತೆಗಳನ್ನು ಮಾಡುವುದಕ್ಕೆ ತಯಾರಿದ್ದೇವೆ. ಯಾವುದಾದರೂ ರಸ್ತೆ ಸಮಸ್ಯೆ ಇದ್ದರೆ, ಮತ್ತೊಂದು ಇದ್ದರೆ, definitely we will attend it. ಅದನ್ನು ಬಗೆಹರಿಸುವುದಕ್ಕೆ ಎಲ್ಲಾ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ. ನಮ್ಮಲ್ಲಿ ಬಂದಂತಹ ಬಂಡವಾಳ ಹೂಡಿಕೆದಾರರು ಹೊರಗೆ ಹೋಗಬಾರದು. ಆ ಎಲ್ಲಾ ರೀತಿಯ ಪ್ರಯತ್ನವನ್ನು ನಾವು ಮಾಡುತ್ತೇವೆ. ಮಾನ್ಯ ಸದಸ್ಯರು ಅದರ ವಿವರಗಳನ್ನು ನಮಗೆ ಕಳುಹಿಸಿ ಕೊಡಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ:216**
**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ) (ಕಾಂತರಾಜ್ (ಬಿಎಂಎಲ್)ರವರ ಪರವಾಗಿ):–** ಮಾನ್ಯ ಸಚಿವರು ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ್ನು ಸ್ಥಾಪಿಸಲಾಗಿರುತ್ತದೆ. ಪ್ರತಿ ಜಿಲ್ಲೆಯಲ್ಲೂ ಆ ಟ್ರಸ್ಟ್‌ಗೆ ಗಣಿಗಾರಿಕೆಯಿಂದ ನೂರಾರು ಕೋಟಿ ರೂಪಾಯಿಗಳ ಅನುದಾನ ಬರುತ್ತದೆ. ಆ ಟ್ರಸ್ಟ್‌ಗೆ ಉಸ್ತುವಾರಿ ಸಚಿವರು ಅಧ್ಯಕ್ಷರಿರುತ್ತಾರೆ. ಅಲ್ಲಿಗೆ ಒಬ್ಬ ಶಾಸಕರು ಇರುತ್ತಾರೆ. ಅಲ್ಲಿ ಯಾವುದಾದರೊಂದು ನೋಡಲ್ ತಾಲ್ಲೂಕು ತೆಗೆದುಕೊಂಡಿರುವಂತಹ ಎಂ.ಎಲ್.ಸಿ. ಇರುತ್ತಾರೆ. ಇಲ್ಲಿ ಏನು ಪ್ರಶ್ನೆ ಬರುತ್ತದೆಂದರೆ, ಎಂಎಲ್‌ಎ ಗಳಿಗೆ ಮಾತ್ರ ಹಣವನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಕೊಡುತ್ತಾರೆ. ಎಂಎಲ್‌ಸಿ ಗಳಿಗೆ ಕೊಡುವುದಿಲ್ಲ. ಶಾಸಕರ ನಿಧಿ ಇರಬಹುದು, ಮತ್ತೊಂದು ಇರಬಹುದು, ಇವೆಲ್ಲದರಲ್ಲೂ ತಾರತಮ್ಯವಾಗುತ್ತಿದೆ. ನಾನು ಒಬ್ಬ ಎಂಎಲ್‌ಸಿ ಎಂದರೆ, ನಾನು ನಾಲ್ಕು ಜಿಲ್ಲೆಗಳಿಗೆ ಇರುತ್ತೇನೆ. ನಾಲ್ಕು ಜಿಲ್ಲೆಗಳಲ್ಲಿ ಯಾವುದಾದರು ಒಂದು ಎಂಎಲ್‌ಎ ಕ್ಷೇತ್ರಕ್ಕೆ ಕೊಡುತ್ತೇನೆ. ನಾನೇನು ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ನಾಲ್ಕು ಜಿಲ್ಲೆಗಳಿಗೆ ನಾನು ಇರುತ್ತೇನೆ, ಇನ್ನೊಬ್ಬರು ಮೂರು ಜಿಲ್ಲೆಗೆ ಇರುತ್ತಾರೆ. ನಾಲ್ಕು ಜಿಲ್ಲೆಗಳಿಗಿದ್ದರೂ ಎಂಎಲ್‌ಎ ಗೆ ಕೊಡುತ್ತಾರೆ. ಈ ರೀತಿಯ ತಾರತಮ್ಯ ಸರಿಯಿಲ್ಲ. ಎಲ್ಲದರಲ್ಲೂ ಸರಿಸಮಾನವಾಗಿ ನಡೆದುಕೊಂಡು ಬಂದಿದೆ. ಕೆಳಮನೆಗೂ ಮೇಲ್ಮನೆಗೂ ತಾರತಮ್ಯ ಇರಬಾರದು. ನಾವು ಶಾಸಕರು ಎಂದು ಈ ಸದನದಲ್ಲಿ ಚರ್ಚೆ ಮಾಡಿ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ಇಲ್ಲಿ ಬಹಳ ಸಲ ಚರ್ಚೆಯಾಗಿದೆ. ಯಾವ ರೀತಿ ಎಂಎಲ್‌ಎ ಗೆ ಕೊಡುತ್ತೀರೋ ಅದೇ ರೀತಿ ಎಂಎಲ್‌ಸಿ ಗೂ ಕೊಡಬೇಕೆಂದು ನಾನು ಇಡೀ ಸದನದ ಪರವಾಗಿ ಒತ್ತಾಯ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ರೀತಿಯ ತಾರತಮ್ಯವನ್ನು ಇದಕ್ಕೆ ಸೀಮಿತವಾಗಿ ಕೇಳುತ್ತಿಲ್ಲ. ಎಲ್ಲಾ ಕಡೆ ಸರ್ವೇಸಾಮಾನ್ಯವಾಗಿ ಮೇಲ್ಮನೆಯ ಸದಸ್ಯರು ಎಂದರೆ, Second Class Legislators ಎನ್ನುವ ರೀತಿಯಲ್ಲಿ ವರ್ತನೆ ಇದೆ. ಬಹಳಷ್ಟು ಸಂದರ್ಭಗಳಲ್ಲಿ ನಾವು ಹಿಂಸೆ ಕೂಡ ಅನುಭವಿಸುತ್ತಿದ್ದೇವೆ. ವಿಧಾನಸಭಾ ಕ್ಷೇತ್ರಕ್ಕೆ ಕೆಳಮನೆ ಸದಸ್ಯರಿಗೆ ಹೇಗೆ ಗಣಿಗಾರಿಕೆಯಿಂದ ಅನುದಾನ ಕೊಡುತ್ತಾರೆಯೋ ಹಾಗೆ ಆ ಕ್ಷೇತ್ರವನ್ನು ಪ್ರತಿನಿಧಿಸುವ ಮೇಲ್ಮನೆ ಸದಸ್ಯರಿಗೂ ಕೊಡಬೇಕಲ್ಲವೇ? ತಮಗೆ ಗೊತ್ತಿದೆ, ಶ್ರೀ ಮಂಜುನಾಥ್ ಎನ್ನುವವರು ಇವತ್ತಿಗೂ ಕೂಡ ನೆನಪಿಗೆ ಬರುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲಾಧಿಕಾರಿಯವರು 'ಮೇಲ್ಮನೆಯ ಸದಸ್ಯರು ಶಾಸಕರಲ್ಲ' ಎನ್ನುವ ಮಾತನ್ನು ಹೇಳಿದ್ದರು. ಆ ಕಾರಣಕ್ಕಾಗಿ ಅವರನ್ನು ಈ ಸದನಕ್ಕೆ ಕರೆಯಿಸಿ ವಾಗ್ದಂಡನೆ ಮಾಡಿರುವುದು ತಮಗೆ ನೆನಪಿರಬಹುದು. ನಾವು, ನೀವು ಮೊದಲ ಸಲ ಈ ಮನೆಗೆ ಪ್ರವೇಶ ಮಾಡಿದಾಗ ಈ ಘಟನೆ ನಡೆದಿತ್ತು. ಅವರು ಬೇಷರತ್ ಕ್ಷಮೆ ಕೇಳಿ, 'ನಾನು ಮೇಲ್ಮನೆ ಸದಸ್ಯರಿಗೆ ಶಾಸಕರಲ್ಲ ಎಂದು ಹೇಳಿದ್ದು ತಪ್ಪು' ಎಂದು ಒಪ್ಪಿಕೊಂಡು ಹೋದರು. There should not be any disparity, there should

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

not be any discrimination. MLA and MLC's are to be treated equally. ಇದು ಚಿಂತಕರ ಛಾವಡಿ ಎಂದು ಬಹಳಷ್ಟು ಸಂದರ್ಭಗಳಲ್ಲಿ ಮಾತನಾಡುತ್ತಿರುತ್ತೇವೆ. ಆಮೇಲೆ 'ಆಟಕ್ಕೆ ಉಂಟು, ಲೆಕ್ಕಕ್ಕೆ ಇಲ್ಲ' ಎನ್ನುವ ಹಾಗೆ ಆಗಬಾರದು. ತಮ್ಮ ಮುಖಾಂತರ ಈ ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುತ್ತೇನೆ, ವಿಧಾನ ಪರಿಷತ್ತಿನ ಸದಸ್ಯರಿಗೂ ಕೂಡ ಕೆಳಮನೆ ಸದಸ್ಯರಿಗೆ ಯಾವ ರೀತಿ ಅನುದಾನ ಕೊಡುತ್ತಾರೆಯೋ ಅದೇ ರೀತಿ ಕೊಡಬೇಕು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಜಿಲ್ಲೆಯ ನೊಂದಾಯಿತ ಮತದಾನದ ಹಕ್ಕನ್ನು ಹೊಂದಿರುವ ವಿಧಾನ ಪರಿಷತ್ತಿನ ಸದಸ್ಯರುಗಳು ಟ್ರಸ್ಟಿಗಳಾಗಿರುತ್ತಾರೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದೆ. It is very clear. ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಇರುತ್ತದೆ. ಆ ಟ್ರಸ್ಟ್‌ಗೆ ಗಣಿಗಾರಿಕೆಯಿಂದ ನೂರಾರು ಕೋಟಿ ಅನುದಾನ ಲಭ್ಯವಿರುತ್ತದೆ. ಆಯಾ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು ಇದರ ಅಧ್ಯಕ್ಷರಾಗಿರುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ನಮ್ಮ ಜಿಲ್ಲೆಯಲ್ಲಿ ಜಗದೀಶ್ ಶೆಟ್ಟರ್‌ರವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಅವರು ಸರ್ಕಾರದಿಂದ ನಿಯಮವಿಲ್ಲ ಎಂದು ಹೇಳುತ್ತಾರೆ. ನಾನು ಒಂದು ಉದಾಹರಣೆ ಹೇಳುತ್ತಿದ್ದೇನೆ. ಯಾವುದೇ ಸಭೆ ನಡೆದಾಗ ಸದಸ್ಯರು ಕೂಡ ಸರ್ಕಾರದ ಮಾರ್ಗಸೂಚಿ ಇಲ್ಲದೆ ನಾನೇನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಮಾನ್ಯ ಸಚಿವರು ಎಲ್ಲಾ ಉಸ್ತುವಾರಿ ಮಂತ್ರಿಗಳನ್ನು ಕೇಳಲಿ. ಸರ್ಕಾರದ ಏನು ನಿಯಮವಿರುತ್ತದೆಯೋ ಆ ನಿಯಮದ ಪ್ರಕಾರ ನಾವು ಪಾಲಿಸಬೇಕಾಗುತ್ತದೆಂದು ಅವರು ಹೇಳುತ್ತಾರೆ. ಇದು ಇರುವಂತಹ ತಾರತಮ್ಯ. ಯಾವುದಾದರೂ ತಾಲ್ಲೂಕಿಗೆ ನಾವು ಸದಸ್ಯರಾಗಿರುತ್ತೇವೆ. ಆದರೆ ಇವತ್ತಿನವರೆಗೂ ಯಾವುದೇ ಒಂದು ಜಿಲ್ಲೆಯಲ್ಲಿ ಈ ತರಹ ಆಗಿಲ್ಲ. ಸರ್ಕಾರದಿಂದ ನಿಯಮ ಬದಲಾವಣೆಯಾಗಬೇಕು. ಮಾನ್ಯ ಜಗದೀಶ್ ಶೆಟ್ಟರ್‌ರವರು ಸಭೆಯಲ್ಲಿ ಹೇಳಿದರು, ಕಾನೂನನ್ನು ತೋರಿಸಿದರು; ಸರ್ಕಾರದಿಂದ ಈ ರೀತಿ ಬಂದಿದೆ, ನಾನು ಏನು ಮಾಡುವುದಕ್ಕಾಗುತ್ತದೆ ನೀವೇ ಹೇಳಿ ಎಂದರು. ಸರ್ಕಾರದ ನಿಯಮವನ್ನು ಬದಲಾವಣೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ತಪ್ಪು ತಿಳಿದುಕೊಳ್ಳಬೇಡಿ. ಈಗ ಕೆಳಮನೆಯ ಶಾಸಕರಿಗೆ 'ಶಾಸಕರು' ಎಂದು ಹೇಳುತ್ತಾರೆ, ಆದರೆ ಮೇಲ್ಮನೆಯ ಸದಸ್ಯರಿಗೆ ಇವರು 'ವಿಧಾನ ಪರಿಷತ್ತಿನ ಸದಸ್ಯರು' ಎಂದು ಹೇಳುತ್ತಾರೆಯೇ ಹೊರತು ನಮಗೆ 'ಶಾಸಕರು' ಎಂದು ಹೇಳುವುದಿಲ್ಲ. ನಾನು ಒಂದು ಸಲ ಹುನಗುಂದ ತಾಲ್ಲೂಕಿಗೆ ಹೋಗಿದ್ದೆ.

**ಸಭಾಪತಿಯವರು:-** ಮಾನ್ಯ ಬಸವರಾಜ ಹೊರಟ್ಟಿಯವರೇ, ತಾವು ಐದನೇ ಪ್ರಶ್ನೆಯನ್ನು ಓದಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ಓದಿದ್ದೇನೆ. ನಾನು ಇಲ್ಲಿ ನಿಮಗೆ practical ಆಗಿ ಹೇಳುತ್ತಿದ್ದೇನೆ. ಈಗ ನಾವು ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿಬಿಡಲಿ, ನಾನು ಮಾತನಾಡುವುದಿಲ್ಲ. ನಾನು ಒಂದು ಜಿಲ್ಲೆಯಲ್ಲಿ ಅಲ್ಲ, ಮೂರ್‍ನಾಲ್ಕು ಜಿಲ್ಲೆಗೆ ಹೋದಾಗ ನೋಡಿ ಬಂದಿದ್ದೇನೆ. ಅದಕ್ಕೆ ನಾನು ಹೇಳುತ್ತಿದ್ದೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ದಾಖಲೆಯಲ್ಲಿ ಮಾತ್ರ ಇರುತ್ತದೆ. ಕಾರ್ಯ ರೂಪದಲ್ಲಿ ಇರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಆದೇಶವಾಗುವುದು ಒಳ್ಳೆಯದು.

**ಸಭಾಪತಿಯವರು:–** ಇದುವರೆಗೂ ಆದೇಶ ಕೂಡ ಸಿಕ್ಕಿಲ್ಲ. ಈಗ ಆದೇಶ ಸಿಕ್ಕಿರುವುದನ್ನು ಪ್ರಥಮವಾಗಿ ನೋಡುತ್ತಿದ್ದೇವೆ.

(ಮುಂದು)

(68) 2–2–2021 11.40 ಬಿಕೆಪಿ–ಎಂಡಿ

**ಡಾ|| ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆಯಾಗಿತ್ತು. ನಾನು ಚಿತ್ರದುರ್ಗದಲ್ಲಿ ನಡೆದ District Mineral Foundation meeting ಗೆ ಹೋಗಿದ್ದೆ. 132 ಕೋಟಿ ದುಡ್ಡು ಇತ್ತು. ಅಲ್ಲಿ ನಮಗೆ ಅಷ್ಟು, ಇಷ್ಟು ದುಡ್ಡು ಕೊಡಿ ಎಂದು ಶಾಸಕರುಗಳ ನಡುವೆ ಜಗಳ ಆಗುತ್ತಿತ್ತು. ಒಬ್ಬರಿಗೆ 50 ಕೋಟಿ, 40 ಕೋಟಿ ಮತ್ತೊಬ್ಬರಿಗೆ 10 ಕೋಟಿ, 30 ಕೋಟಿ ರೂಪಾಯಿಗಳು ಎಂದು ಹಂಚಿಕೆ ಮಾಡಿಕೊಳ್ಳುತ್ತಾರೆ. ಈ ಎಂಎಲ್‌ಸಿಗಳನ್ನು ಕೇಳುವವರೇ ಇಲ್ಲ. ಆಗ ನಾವಿದ್ದೇವೆ ಎಂದರೆ ನಿಮಗೆ ಏತಕ್ಕೆ ದುಡ್ಡು ಬೇಕು ಎಂದು ಕೇಳಿ, ದುಡ್ಡನ್ನು ಕೊಡುವುದಿಲ್ಲ. ನಮ್ಮ ಕ್ಷೇತ್ರಕ್ಕೆ ದುಡ್ಡು ಬೇಕೆಂದು ಕೇಳುತ್ತಾರೆ. ಹೀಗಾಗಿ ನನಗೆ ಅನುಭವ ಆಗಿದೆ. ನಾನು ಮೀಟಿಂಗ್‌ಗೆ ಹೋಗಿದ್ದು, signatory ಆಗಿದ್ದೇನೆ. ಅಲ್ಲಿ ದುಡ್ಡನ್ನು ಹಂಚಿಕೊಳ್ಳುವ ಪ್ರಕ್ರಿಯೆಯಾಗುತ್ತದೆ. ಆದ್ದರಿಂದ, ದಯವಿಟ್ಟು ಈ ವಿಚಾರದಲ್ಲಿ guidelines frame ಮಾಡಬೇಕೆಂದು ಎಂದು ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ. ಇದರಲ್ಲಿ ನಿಯಮವೊಂದನ್ನು ರೂಪಿಸಿದರೆ ನಮಗೂ ಹಕ್ಕು ಇರುತ್ತದೆ ಹಾಗೂ ನಾವೂ ಸಹ ಆ ಹಣವನ್ನು ಸದ್ಬಳಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳಬಹುದು. ನಾವು ಸಹ ನಿಮ್ಮಂತೆ ಚುನಾಯಿತ ಪ್ರತಿನಿಧಿಗಳಾಗಿದ್ದೇವೆ. ಹೀಗಾಗಿ, ಇದನ್ನು ಸರಿಪಡಿಸಬೇಕೆಂದು ಕೋರಿಕೊಳ್ಳುತ್ತೇನೆ.

**ಶ್ರೀ ಮುರುಗೇಶ್ ಆರ್ ನಿರಾಣಿ:–** ಮಾನ್ಯ ಸಭಾಪತಿಯವರೆ, ಈ District Mineral Foundation Trust (DMFT) ಇದರಲ್ಲಿ 18 ಜನ ಸದಸ್ಯರು ಇರುತ್ತಾರೆ. ಅದರಲ್ಲಿ ಒಬ್ಬ ಎಂಎಲ್‌ಸಿ ಸಹ ಸದಸ್ಯರು ಇರುತ್ತಾರೆ, ಅವರು ಯಾವ ತಾಲ್ಲೂಕಿನ, ಆ ಜಿಲ್ಲೆಗೆ ಸಂಬಂಧಪಟ್ಟಂತೆ ಸದಸ್ಯರಾಗಿರುತ್ತಾರೆ, ಅಲ್ಲಿ ಅವರ voting ಇರುತ್ತದೆ. ಇದರಲ್ಲಿ ಒಂದು ಅಂಶ ಏನಿದೆ ಎಂದರೆ ಟ್ರಸ್ಟ್‌ಗೆ ಕೊಡುವಂತಹ DMFT fund ಬಾಧಿತ ಪ್ರದೇಶಗಳಿಗೆ mining ಮಾಡಿದ ಮೇಲೆ rehabilitation ಮಾಡುವುದಕ್ಕಾಗಿ ಇದನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಇದರಲ್ಲಿ ಎಲ್ಲರಿಗೂ ಸಮನಾಗಿ ಬರುವುದಿಲ್ಲ. ಯಾವ ತಾಲ್ಲೂಕಿನಲ್ಲಿ ಹೆಚ್ಚು mining ಮಾಡಿರುತ್ತಾರೆ, ಅವರಿಗೆ ಹೆಚ್ಚು ದೊರೆಯುತ್ತದೆ. ಕೆಲವೊಂದು mining ಮಾಡದೇ ಇರುವಂತಹ ತಾಲ್ಲೂಕುಗಳಿವೆ. ಅಲ್ಲಿ ಕೇವಲ ವಾಹನಗಳು ರಸ್ತೆಯಲ್ಲಿ ಸಂಚರಿಸುವುದರಿಂದ nominal ಆಗಿ ಹಣವನ್ನು ಹಂಚಿಕೆ ಮಾಡಲಾಗುವುದು. ಇಲ್ಲಿ ಸಮನಾಗಿ ಹಂಚಿಕೆ ಮಾಡುವುದಿಲ್ಲ. ಒಬ್ಬ ಎಂ.ಎಲ್.ಸಿ.ಯವರಿಗೆ ಒಂದು ಜಿಲ್ಲೆಯಲ್ಲಿ ಒಂದು ಕಡೆ ಅವರು ಸದಸ್ಯರಾಗಿದ್ದು, ಅವರಿಗೆ ಹಣವನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ.

**ಸಭಾಪತಿಯವರು:–** ಎಂ.ಎಲ್.ಸಿ.ಗಳು ಒಂದು ತಾಲ್ಲೂಕಿಗೆ ..

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಅವರುಗಳು ನಾಲ್ಕೈದು ಜಿಲ್ಲೆಗಳಿಗೆ ಸದಸ್ಯರಾಗಿರುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಎಂ.ಎಲ್.ಸಿ.ಗಳು ಇಡೀ ಜಿಲ್ಲೆಯ ವ್ಯಾಪ್ತಿಗೆ ಬರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಅವರ ಮತದಾನದ ಹಕ್ಕು ಯಾವ ಜಿಲ್ಲೆಯಲ್ಲಿರುತ್ತದೆ ಆ ಜಿಲ್ಲೆಯಲ್ಲಿ ಅವರು ಟ್ರಸ್ಟ್‌ನ ಸದಸ್ಯರಾಗಿರುತ್ತಾರೆ. ಆಗ ಅವರಿಗೆ ಹಣವನ್ನು ಕೊಡುವ ಪ್ರಾವಿಷನ್ ಇರುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಆಗಲೀ ಸಚಿವರೇ, ...

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಸಚಿವರು ಹಾಕಿರುವ yardstick ತಪ್ಪು ಇದೆ. ಎಂ.ಎಲ್.ಸಿ.ಯು ಒಂದು ಬಾರಿ ಆಯ್ಕೆಗೊಂಡರೆ, ಇಡೀ ರಾಜ್ಯದಲ್ಲಿ ಅವರ ವ್ಯಾಪ್ತಿಯು ಇರುತ್ತದೆ. ಅದರಲ್ಲಿ ನಿರ್ದಿಷ್ಟವಾಗಿ ಇಂತಹುದೇ ಎಂದು ಇರುವುದಿಲ್ಲ. Vote ಹಾಕುವ ಜಾಗಕ್ಕೆ ಮಾತ್ರವೇ ನಿರ್ಬಂಧ ವಿಧಿಸಿ, ಬೇರೆ ಕಡೆಗೆ ಕೊಡುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಏಕೆ ಮಾಡಲಾಗಿದೆ?

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಇಂತಹ ಸಂವಿಧಾನವನ್ನು ನಿಮ್ಮಂತಹ ಹಿರಿಯರು ಮಾಡಿದ್ದಾರೆ.

**ಶ್ರೀ ಹೆಚ್.ಎಂ.ರಮೇಶಗೌಡ:–** ಮಾನ್ಯ ಸಭಾಪತಿಯವರೇ, ನೋಡಲ್ ಕ್ಷೇತ್ರ ಎಂಬುದಾಗಿ ತೆಗೆದುಕೊಳ್ಳುತ್ತಾರೆ. ಮಾನ್ಯ ಸಿ.ಎಂ.ಇಬ್ರಾಹಿಂ ರವರು ಹೇಳುವುದು ಸರಿಯಿದೆ. ನಾವುಗಳು ಇಡೀ ರಾಜ್ಯದ ವ್ಯಾಪ್ತಿಗೊಳಪಡುತ್ತೇವೆ. ಆದರೆ, ನೋಡಲ್ ಕ್ಷೇತ್ರ ಎಂಬುದಾಗಿ ನಾವು ಆಯ್ಕೆ ಮಾಡಿಕೊಳ್ಳುತ್ತೇವೆ. ಆ ಭಾಗದಲ್ಲಿ ಆಯ್ಕೆಗೊಂಡ ಎಂ.ಎಲ್.ಎ.ಗಳು ಅವರೇ ಕೆಲವು ಕಡೆ ಅಧಿಕಾರಿಗಳಿಗೆ ಹೇಳಿ, ಆಕ್ಷೇಪವನ್ನು ವ್ಯಕ್ತಪಡಿಸುತ್ತಾರೆ. ಇದು ಸರಿಯಾದ ಕ್ರಮವಲ್ಲ. ಹೀಗಿದ್ದಲ್ಲಿ ನೋಡಲ್ ಕ್ಷೇತ್ರ ಎಂದು ಮಾಡಿರುವುದನ್ನು ತೆಗೆದು ಹಾಕಿ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಯು ನನಗೆ ಅರ್ಥವಾಗಿದೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಗೊಂಡ ಕೆಲವು ಸದಸ್ಯರು ಇಡೀ ಜಿಲ್ಲೆಯನ್ನು ಪ್ರತಿನಿಧಿಸುತ್ತಾರೆ. ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಗೊಂಡವರು ನಾಲ್ಕು ಜಿಲ್ಲೆಗಳನ್ನು ಪ್ರತಿನಿಧಿಸುತ್ತಾರೆ. ನಮಗೆ ಇಡೀ ಜಿಲ್ಲೆಯು ವ್ಯಾಪ್ತಿಯಾಗಿರುವುದರಿಂದ ನಾವು ಯಾವ ತಾಲ್ಲೂಕಿಗೆ ಬೇಕಾದರೂ ಕೊಡಬಹುದು. ನಮ್ಮ ಮಂಡ್ಯ ಜಿಲ್ಲೆಯಲ್ಲಿ ತೊಂದರೆ ಇಲ್ಲ. ಏಕೆಂದರೆ, ಇಲ್ಲಿನ ಉಸ್ತುವಾರಿ ಸಚಿವರು ಸಭೆ ಕರೆಯುತ್ತಾರೆ, ಹಾಗೂ ಎಲ್ಲವನ್ನೂ ಕೇಳಿ ಹಣ ಹಂಚಿಕೆ ಮಾಡುತ್ತಾರೆ. ಇದೇ ರೀತಿಯಾಗಿ ಮೈಸೂರು, ಚಾಮರಾಜನಗರ, ಹಾಸನ ಮತ್ತು ಸಚಿವರ ಜಿಲ್ಲೆಗಳಲ್ಲಾಗಬೇಕು. ಎಂ.ಎಲ್.ಎ.ಗೆ ಸಿಗುವ ಗೌರವದಷ್ಟೇ ಎಂ.ಎಲ್.ಸಿ.ಗೂ ಸಹ ಗೌರವ ದೊರೆಯಬೇಕು.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಒಬ್ಬ ಎಂ.ಎಲ್.ಸಿ.ಗೆ 10, 20, 30 ತಾಲ್ಲೂಕುಗಳು ಅವರ ವ್ಯಾಪ್ತಿಗೊಳಪಡುತ್ತವೆ ಎಂದರೆ ಅವರಿಗೆ ಎಲ್ಲಾ ಕಡೆಗಳಲ್ಲೂ ಮತದಾನದ ಹಕ್ಕು ಇರುವುದಿಲ್ಲ. ಕೇವಲ ಒಂದು ತಾಲ್ಲೂಕಿಗೆ ಮಾತ್ರವೇ ಇರುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಒಬ್ಬ ಎಂ.ಎಲ್.ಗೆ ಕೊಡುವಷ್ಟೇ ಕೊಡಲಿ, ಅದನ್ನು ನಾವುಗಳು ಹಂಚಿಕೆ ಮಾಡಿಕೊಳ್ಳುತ್ತೇವೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಒಬ್ಬ ಎಂ.ಎಲ್.ಸಿ. ಎಂದರೆ ಆರು ವರ್ಷಗಳ ಕಾಲ 'ನಿತ್ಯಸುಮಂಗಲಿ' ಇದ್ದಂತೆ. ಅವರು ವಿಧವೆಯಾಗುವುದೇ ಇಲ್ಲ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಒಂದು ಜಿಲ್ಲೆಯಲ್ಲಿ ಎಂ.ಎಲ್.ಸಿ.ಗೆ ಅನುಕೂಲ ಮಾಡಿಕೊಟ್ಟು DMFT fund ನ್ನು ನೀಡುತ್ತೇವೆ.

**ಶ್ರೀ ಅಲ್ಲಂ ವೀರಭದ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಸತ್ಯವಿದೆ. ಒಂದು ಜಿಲ್ಲೆಯಲ್ಲಿ 7–8 ತಾಲ್ಲೂಕುಗಳಿರುತ್ತವೆ. Mining operations ಎಲ್ಲಿರುತ್ತವೆಯೋ ಆ ಭಾಗಕ್ಕೆ ಜಾಸ್ತಿ ಹಣ ಹೋಗುತ್ತದೆ ಎನ್ನುವುದು ಮಾನ್ಯ ಸಚಿವರ ಸ್ಪಷ್ಟೀಕರಣ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

We fully agree with him. ಆದರೆ ನಮ್ಮ ಶಾಸಕರು ಏನು ಹೇಳುತ್ತಾರೆಂದರೆ ನಾವುಗಳು ಜಿಲ್ಲೆಯನ್ನು ಪ್ರತಿನಿಧಿಸುತ್ತೇವೆ ನೀವು ಯಾರಿಗೆ ಎಷ್ಟನ್ನು ಕೊಡಬೇಕೋ ಅಷ್ಟನ್ನು ಅಲ್ಲಿಯೇ ಕೊಟ್ಟುಬಿಡುವಂತೆ ಕೇಳುತ್ತಾರೆ. Or else ಕೆಲವು ಮೂಲೆ ಭಾಗದ ತಾಲ್ಲೂಕಿನಲ್ಲಿ mining operation ನಡೆಯುವುದಿಲ್ಲ. ಆದರೆ ಅಲ್ಪ ಪ್ರಮಾಣದಲ್ಲಿ ಮಾಡಲಾಗುತ್ತದೆ. ಆದರೆ ಸಚಿವರು ಸ್ವಲ್ಪ ಅಥವಾ ಜಾಸ್ತಿ ಪ್ರಮಾಣದಲ್ಲಿ ಹಣ ಹಂಚಿಕೆ ಮಾಡುತ್ತಾರೆಂದರೆ ಹೇಗೆ? ಹೀಗಾಗಿ, ಸಚಿವರು average ಹಣ ಹಂಚಿಕೆ ಮಾಡಿ ಕೊಡಬೇಕು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಮಂತ್ರಿಗಳಲ್ಲಿ ಸ್ಪಷ್ಟೀಕರಣವನ್ನು ಕೇಳುತ್ತೇನೆ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ, ಪರಿಸರ ಸಂರಕ್ಷಣೆಯ ಸಲುವಾಗಿ ಚಿತ್ರದುರ್ಗ, ಬಳ್ಳಾರಿ, ತುಮಕೂರು ಜಿಲ್ಲೆಗಳಲ್ಲಿ ಮೇಜರ್ ಮಿನರಲ್ಸ್‌ಗಳನ್ನು ಸಂಗ್ರಹಿಸುವ ಸಂಬಂಧ ನಿಧಿಯೊಂದನ್ನು ಕೂಡ ಮಾಡಲಾಗಿತ್ತು. ಇದು ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಇರಬೇಕು ಅಥವಾ 40–80 ಕೋಟಿ ರೂಪಾಯಿಗಳಷ್ಟಿರಬೇಕೆಂದು ಕಾಣುತ್ತದೆ. ಇದರ ಮೇಲುಸ್ತುವಾರಿಯನ್ನು ಸರ್ವೋಚ್ಚ ನ್ಯಾಯಾಲಯವು ಮಾಡುತ್ತಿದೆ. ಈಗ ಓರಿಸ್ಸಾ ರಾಜ್ಯದಲ್ಲಿರುವ major minerals ಗೆ ಸಂಬಂಧಪಟ್ಟಂತೆ ನಿಧಿಯನ್ನು clear ಮಾಡಿದೆ. ಆದರೆ, ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಕೊಡುವ ಪರಿಸರ ಸಂರಕ್ಷಣೆಯ ಸಂಬಂಧಿತ ಪ್ರಸ್ತಾವನೆಯು ಏನು ಬಂದಿದೆ, ಅದು ಸರ್ವೋಚ್ಚ ನ್ಯಾಯಾಲಯದಲ್ಲಿ ಕಳೆದ ಸುಮಾರು 2–3 ವರ್ಷಗಳಿಂದ ನಿಂತುಕೊಂಡಿದೆ. ಇದನ್ನು ಪರಿಹಾರ ಮಾಡುವುದಕ್ಕಾಗಿ ಹಾಗೂ ಅದರಿಂದ clearance ತೆಗೆದುಕೊಳ್ಳುವುದಕ್ಕೆ ‘ಸರ್ಕಾರವು ಯಾವುದಾದರೂ ಪ್ರಯತ್ನವನ್ನು ಮಾಡಿದೆಯೇ? ಕಳೆದ ಬಾರಿ ನಾನು ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಆ ಸಂದರ್ಭದಲ್ಲಿ ಶ್ರೀ ಸಿ.ಸಿ.ಪಾಟೀಲ್‌ರವರು ಸಚಿವರಾಗಿದ್ದರು ಎಂದು ಅನಿಸುತ್ತದೆ. ಆಗ ಅವರು ‘ಸರ್ಕಾರವು ಪ್ರಯತ್ನಗಳನ್ನು ಮಾಡುತ್ತಿದೆ’ ಎಂಬುದಾಗಿ ಹೇಳಿದ್ದರು. ಆದರೆ ಪ್ರಸ್ತುತ ಇದು ಏನಾಗಿದೆ ಎಂಬುದರ ಬಗ್ಗೆ ಸಚಿವರು ಸದನಕ್ಕೆ ಸ್ಪಷ್ಟಪಡಿಸುವುದು ಒಳ್ಳೆಯದು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಚರ್ಚೆ ಮಾಡಲಾಗಿದೆ. ನಾನು ಒಂದಂಶದ ಬಗ್ಗೆ ಹೇಳುತ್ತೇನೆ. ನಾನು ಗದಗ, ಧಾರವಾಡ, ಹಾವೇರಿ ಮತ್ತು ಕಾರವಾರ ಈ ನಾಲ್ಕು ಜಿಲ್ಲೆಗಳನ್ನು ಪ್ರತಿನಿಧಿಸುತ್ತೇನೆ. ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನಲ್ಲಿ ನನ್ನ ಮತದಾನದ ಹಕ್ಕು ಇದೆ. ಅಲ್ಲಿ ಇಲ್ಲವೆಂದು ನಾನು ಹೇಳಿಲ್ಲ. ಆದರೆ ನಾನು ಗದಗ ಜಿಲ್ಲೆಯನ್ನು ಕೊಡುತ್ತೇನೆ. ಶ್ರೀ ಅಲ್ಲಂ ವೀರಭದ್ರಪ್ಪರವರು ಪ್ರಸ್ತಾಪಿಸಿದಂತೆ, ಎಲ್ಲಿ affected taluk ಇದೆ, ಅಲ್ಲಿಯೇ ನಾನು ಕೊಡುತ್ತೇನೆ. ಇದರಲ್ಲಿ ಏನು ತಪ್ಪಿದೆ? ಹೀಗಾಗಿ ಈ ವಿಚಾರದಲ್ಲಿ ತಾರತಮ್ಯ ಮಾಡುವುದು ಬೇಡ. ಹೊರಗಡೆ ಪ್ರದೇಶದಲ್ಲಿ ಇದು ಸರಿ ಎಂದೆನಿಸುವುದಿಲ್ಲ. ಹಾಲಿ ಸಚಿವರು ಈ ಹಿಂದೆ ಸಚಿವರಾಗಿದ್ದ ಶ್ರೀ ಸಿ.ಸಿ.ಪಾಟೀಲ್ ರವರ ಮಾತುಗಳನ್ನು ಕೇಳುವುದು ಬೇಡ. ಅವರೇ ಇದೆಲ್ಲವನ್ನೂ ಮಾಡಿದ್ದು. ಹೀಗಾಗಿ ಎಂ.ಎಲ್.ಸಿ.ಗಳು ಯಾವುದಾದರೂ ತಾಲ್ಲೂಕನ್ನು ಆಯ್ಕೆ ಮಾಡಲು ಬಿಡಿ. ಈ ಬಗ್ಗೆ ಸರ್ಕಾರವು ಆದೇಶವೊಂದನ್ನು ಹೊರಡಿಸಲಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಹೇಳಿದ್ದನ್ನು ಕೇಳಿಸಿಕೊಂಡಿಲ್ಲವೆಂದೆನಿಸುತ್ತದೆ. ಸರ್ವೋಚ್ಚ ನ್ಯಾಯಾಲಯದ ಉಸ್ತುವಾರಿಯ ಮೇಲೆ ಒಂದು major minerals ಗೆ ಸಂಬಂಧಪಟ್ಟ ನಿಧಿಯನ್ನು ಕೊಡುವ ವಿಚಾರವಾಗಿದೆ. ರಾಜ್ಯದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಪರಿಸರ ಸಂರಕ್ಷಣೆಯ ಸಲುವಾಗಿ ನೀಡಿರುವ ಪ್ರಸ್ತಾವನೆಯು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಹಾಗೂ ಅದು ಮೇಲುಸ್ತುವಾರಿಯಲ್ಲಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಈಗಾಗಲೇ ಓರಿಸ್ಸಾ ರಾಜ್ಯಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿರುವ ಪ್ರಸ್ತಾವನೆಯನ್ನೂ ಸಹ clear ಮಾಡಲಾಗಿದೆ. ಆದರೆ, ಕಳೆದ 2–3 ವರ್ಷಗಳಿಂದ ಕೂಡ ನಮ್ಮ ಪ್ರಸ್ತಾವನೆಯನ್ನು ಕ್ಲಿಯರ್ ಮಾಡಿಲ್ಲ. ಸರ್ಕಾರವು ಈ ಬಗ್ಗೆ ಪ್ರಯತ್ನಗಳನ್ನು ಮಾಡಿದೆಯೇ? ಒಂದು ವೇಳೆ ಮಾಡಿದ್ದರೆ, ನಮ್ಮ ಪ್ರಸ್ತಾವನೆಯು ಕ್ಲಿಯರ್ ಆಗಿದೆಯೇ? ಇಲ್ಲವೆಂದಾದರೆ, ಇದು ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ನಾನು ಕೇಳಿದ್ದೇನೆ. ದಯಮಾಡಿ ಈ ಬಗ್ಗೆ ಸಚಿವರು ತಿಳಿಸಬೇಕೆಂದು ನಾನು ಕೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯದಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಅದರಲ್ಲಿ 18 ಸಾವಿರ ಕೋಟಿ ರೂಪಾಯಿಗಳಷ್ಟು ಖನಿಜ ಸಂಪತ್ತಿನಿಂದ ಬಂದ royalty amount ಸೇರಿಕೊಂಡಿದೆ. ಇಲ್ಲಿಯವರೆಗೆ ಅದಕ್ಕೆ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಬಡ್ಡಿಯು ಬಂದಿದೆ. ಕಳೆದ ವರ್ಷದ ಕರೋನಾ ಕಾರಣದಿಂದಾಗಿ ನ್ಯಾಯಾಲಯದಲ್ಲಿ ಈ ಬಗ್ಗೆ ಹೆಚ್ಚಿನ ಕೇಸ್ ದಿನಾಂಕಗಳು ಬಂದಿರಲಿಲ್ಲ. ಈ ಹಿಂದಿನ ಸಚಿವರು ಕಳೆದ ಡಿಸೆಂಬರ್ ತಿಂಗಳಿನಲ್ಲಿ ಈ ಸಂಬಂಧ ಸಭೆಯೊಂದನ್ನು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ನಿನ್ನೆಯೂ ಸಹ ನಾನು ಈ ಬಗ್ಗೆ ಚರ್ಚೆಯನ್ನು ಮಾಡಿ AG (Advocate General) ರವರ ಮುಖಾಂತರ ಕೇಂದ್ರದ CJ (Chief Justice) ರವರ ಜೊತೆ ಮಾತನಾಡಿ, ಒಬ್ಬ ಹಿರಿಯ Counsel ನೇಮಿಸಿ, ಪ್ರಸ್ತಾವನೆಯನ್ನು ಶೀಘ್ರದಲ್ಲಿ ಅಂದರೆ 2–3 ತಿಂಗಳಿನಲ್ಲಿ ಇತ್ಯರ್ಥ ಮಾಡಿದರೆ ಒಳ್ಳೆಯದಾಗುತ್ತದೆ. ಅದು ಸುಮಾರು 18 ಸಾವಿರ ಕೋಟಿ ರೂಪಾಯಿಗಳಷ್ಟು ಇದೆ. ಇದರಿಂದಾಗಿ ರಾಜ್ಯದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಇಂತಹ ಮೂರ್ನಾಲ್ಕು ಜಿಲ್ಲೆಗಳಿಗೆ ಬಹಳ ಒಳ್ಳೆಯದಾಗುತ್ತದೆ. ಯಾವ ಜಿಲ್ಲೆಯಲ್ಲಿ ಹೆಚ್ಚು mining ನ್ನು ಮಾಡುತ್ತಾರೆ ಅಲ್ಲಿ ಮಾಡಲಿಕ್ಕಾಗುತ್ತದೆ. ಈ ಬಗ್ಗೆ ಹೆಚ್ಚಿನ ಒತ್ತನ್ನು ನೀಡಿ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ದೇಶದ ಬೇರೆ ರಾಜ್ಯದ್ದಾಗಿದೆ; ಆದರೆ, ನಮ್ಮ ರಾಜ್ಯದ್ದು ಮಾತ್ರವೇ ಉಳಿದುಕೊಂಡಿದೆ.

**ಶ್ರೀ ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಇದೇ ವಾರದಲ್ಲಿ ದೆಹಲಿಗೆ ಹೋಗಿ ನಮ್ಮ ಎ.ಜಿ.ರವರನ್ನು ಕರೆದುಕೊಂಡು ಕೇಂದ್ರದಲ್ಲಿ ಸಚಿವರಾಗಿರುವ ನಮ್ಮ ಶ್ರೀ ಪ್ರಹ್ಲಾದ ಜೋಷಿರವರೊಂದಿಗೆ ನಾನು ನಿನ್ನೆಯ ದಿನ ಮಾತನಾಡಿದ್ದೇನೆ. ಅವರೂ ಸಹ Senior Counsel ಜೊತೆಗೆ ಮತ್ತು ಅಲ್ಲಿನ ಕಾನೂನು ಮಂತ್ರಿಗಳ ಜೊತೆಗೆ ಮಾತನಾಡಿ, ಅದಕ್ಕೆ ನಾವು pursue ಮಾಡಿ, ಮುಂದಿನ ಮೂರು ತಿಂಗಳೊಳಗಾಗಿ ಅದನ್ನು ತರಿಸುವ ವ್ಯವಸ್ಥೆಯನ್ನು ಮಾಡುತ್ತೇವೆ. ಅದು 18 ಸಾವಿರ ಕೋಟಿ ರೂಪಾಯಿಗಳಷ್ಟು ಬಹಳ ದೊಡ್ಡ ಮೊತ್ತವಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳ ಗಮನ ಸೆಳೆಯುವುದೇನೆಂದರೆ, ಅದು ಬಹಳ ದೊಡ್ಡ ಮೊತ್ತವಾಗಿದೆ. ಡ್ಯಾಂನಲ್ಲಿ mines ನ್ನು ತೆಗೆದು ಉಸುಕು ತುಂಬಿದೆಯೋ ಅದನ್ನೇ ತೆಗೆಯುವಂತಹ ದೊಡ್ಡ ಕಾರ್ಯಕ್ರಮ ಸದರಿ ಮೊತ್ತದಿಂದ ಮಾಡುವುದಕ್ಕಾಗುತ್ತದೆಯೇ ಎನ್ನುವುದನ್ನು ನೋಡಿ. ಸುಮ್ಮನೆ ಸರ್ಕಾರವು ಯಾವುದೋ ಒಂದು ರಸ್ತೆ ಅಥವಾ ಇನ್ನಾವುದನ್ನೇ ನಿರ್ಮಾಣ ಮಾಡಿ ಹಣವನ್ನು ಹಾಳು ಮಾಡುವುದಕ್ಕಿಂತ, ಡ್ಯಾಂನಲ್ಲಿರುವ ಉಸುಕನ್ನು ತೆಗೆದರೆ, ಅಲ್ಲಿನ ನೀರಿನ ಸಂಗ್ರಹ ಸಾಮರ್ಥ್ಯ ಜಾಸ್ತಿಯಾಗುತ್ತದೆ ಮತ್ತು ರಾಜ್ಯದ 10–12 ಜಿಲ್ಲೆಗಳ ರೈತರಿಗೆ ಅನುಕೂಲವಾಗುತ್ತದೆ. ಈ ರೀತಿಯಾದ ಪರಿಹಾರಗಳನ್ನು ಸರ್ಕಾರ ಮಾಡುವುದಕ್ಕೆ ಸಾಧ್ಯವಿದೆಯೇ? ಹೀಗೆ ಮಾಡಿದಲ್ಲಿ ಅದು ಬಹಳ ದೊಡ್ಡ ಯೋಜನೆಯಾಗುತ್ತದೆ. ಸರ್ಕಾರದ ಬಳಿ ಹೇಗೂ ಹಣವಿದೆ. ಮೂಲತಃ 18 ಸಾವಿರ ಕೋಟಿ ರೂಪಾಯಿಗಳು ಮತ್ತು ಅದಕ್ಕೆ ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಬಡ್ಡಿ ಮೊತ್ತವಿದೆ. ಬಹುತೇಕವಾಗಿ ರಾಜ್ಯ ಸರ್ಕಾರವು ಬಡ್ಡಿ ಮೊತ್ತದಲ್ಲಿಯೇ latest technology ಗಳನ್ನು ಜಪಾನ್ ಮುಂತಾದ ಬೇರೆ ದೇಶಗಳಿಂದ ಬಳಸಿಕೊಂಡು, ಏಕೆಂದರೆ technology ಗೊತ್ತಿದೆ. ಸತ್ತು ಹೋಗಿದ್ದನ್ನು ಉದ್ಧಾರ ಮಾಡುವುದು ಸರ್ಕಾರಕ್ಕೆ ಗೊತ್ತಿದೆ. ಏಕೆಂದರೆ ಮುಗಿದು ಹೋದ ಸಕ್ಕರೆ ಕಾರ್ಖಾನೆಯಲ್ಲಿನ ಕಸದಲ್ಲಿ ರಸವನ್ನು ಹಿಂಡುವವರಾಗಿದ್ದಾರೆ. ಸರ್ಕಾರಕ್ಕೆ ಅನುಭವವಿರುವುದರಿಂದ ಇದನ್ನು ದಯಮಾಡಿ ಮಾಡಿ. ಸರ್ಕಾರವು ಇದನ್ನು war footing ನಲ್ಲಿ ಮಾಡಿದರೆ, ಮುಂದಿನ 20 ವರ್ಷಕ್ಕೆ ತುಂಗಭದ್ರಾ ಅಣೆಕಟ್ಟೆಗೆ ಯಾವುದೇ ಅನಾನುಕೂಲವಾಗದೇ, ಆ ಭಾಗದ ರೈತರಿಗೆ ನೀರು ದೊರೆಯುತ್ತದೆ. ಹೀಗಾಗಿ, ಸರ್ಕಾರವು ಇದರ ಬಗ್ಗೆ ಯೋಚನೆಯನ್ನು ಮಾಡುವ ಬಗ್ಗೆ ದಯಮಾಡಿ ತಿಳಿಸಬೇಕು.

**ಶ್ರೀ ಅಲ್ಲಂ ವೀರಭದ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ.ಇಬ್ರಾಹಿಂರವರು ಹೇಳಿರುವ ವಿಚಾರವು ಬಹಳ ಮಹತ್ವದ್ದಾಗಿದೆ. ಎಲ್ಲರಿಗೂ ತಿಳಿದಂತೆ, ಇವತ್ತಿನ ದಿವಸ ತುಂಗಭದ್ರಾ ನದಿಯಲ್ಲಿ ಬಹಳಷ್ಟು ಹೂಳು ಇದೆ. ಅಲ್ಲಿ ಸುಮಾರು 30–40 ಟಿ.ಎಂ.ಸಿ. ಹೂಳು ಇದೆ.

(ಮುಂದು)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(69) 02.02.2021 12.00 ಎಸ್‌ವಿ–ಎಕೆ**
**ಶ್ರೀ ಅಲ್ಲಂ ವೀರಭದ್ರಪ್ಪ (ಮುಂದು):–**

ಅದಕ್ಕೆ ಪರ್ಯಾಯವಾಗಿ ಈಗಾಗಲೇ Irrigation Department ನವರು ನವಿಲು ಎನ್ನುವ ಹಳ್ಳಿಯಲ್ಲಿ ಒಂದು reservoir ಅನ್ನು ಮಾಡುವುದಕ್ಕೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿದ್ದಾರೆ. ಇಷ್ಟು ಸಾವಿರಗಳ ಮೊತ್ತ ಇರುವಾಗ ಬಳ್ಳಾರಿ ಕುಡಿಯುವ ನೀರಿನ ಯೋಜನೆಯು ಕೇವಲ ರೂ.5,000 ಕೋಟಿಗಳ ಮೊತ್ತವಾಗಿದೆ. ಸರ್ಕಾರಕ್ಕೆ ಬರುವ ಬಡ್ಡಿ ಮೊತ್ತದಿಂದ ಇದನ್ನು ಮಾಡಬಹುದು. ಆ ಜಿಲ್ಲೆಯ ಮೊತ್ತವನ್ನು ಆಯಾ ಜಿಲ್ಲೆಗಳಿಗೆ ಬಳಸಬೇಕು; ‘it should be used only for mining areas’ ಎನ್ನುವ ಒಂದು clarification ಇದ್ದು, ಇದು ಒಂದು ತಾಂತ್ರಿಕ ಅಂಶವಾಗಿರುತ್ತದೆ. ಆ clarification ಅನ್ನು ಸ್ವಲ್ಪ ಅಳವಡಿಸಿದರೆ ಈ ಭಾಗಕ್ಕೆ ಕುಡಿಯುವ ನೀರು ಸೌಲಭ್ಯವನ್ನು ಒದಗಿಸಬಹುದಾಗಿದೆ. ಇದರಿಂದ ನಾಲ್ಕು ಜಿಲ್ಲೆಗಳಿಗೆ irrigation facility ಆಗುತ್ತದೆ. ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಿಗೆ ಹಾಗೂ ಕಲಬುರಗಿಯ ಕೆಲವು ಪ್ರದೇಶಗಳಿಗೆ irrigation ಮಾಡಬಹುದು. ಇದು ಬಹಳ ಮಹತ್ವದ್ದಾಗಿದೆ. ಕೇಂದ್ರ ಸರ್ಕಾರದಲ್ಲಾಗಲೀ, ರಾಜ್ಯ ಸರ್ಕಾರದಲ್ಲಾಗಲೀ ಹಣ ಇಲ್ಲ. ನಾವು ನಿಮ್ಮ ತಲೆಯ ಮೇಲೆ ಗೂಬೆ ಕೂರಿಸುವುದರಿಂದ there is no point in it. We all know that there is no money but if the government can utilize this amount, it will help those four districts.

**ಶ್ರೀ ಮುರುಗೇಶ್ ಆರ್. ನಿರಾಣಿ:–** ಮಾನ್ಯ ಸಭಾಪತಿಯವರೇ, ಈ ರೀತಿಯಲ್ಲಿ ಬರುವ ವಿವಿಧ ಸಲಹೆಗಳನ್ನು ಕ್ರೋಢೀಕರಿಸಿಕೊಂಡು ಜಿಲ್ಲಾ ಸಮಿತಿಯ ಮುಂದಿಟ್ಟು, ಅವರ ಸಲಹೆಯ ಮೇರೆಗೆ ಈ ಹಣವನ್ನು ವಿತರಣೆ ಮಾಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಚಿವರೇ, ವಿಧಾನ ಪರಿಷತ್ತಿನ ಸದಸ್ಯರಿಗೂ ವಿಧಾನ ಸಭಾ ಸದಸ್ಯರ ರೀತಿಯಲ್ಲಿ ಅನುದಾನ ಹಂಚಿಕೆಯನ್ನು ಸಮಾನವಾಗಿ ಮಾಡಬೇಕೆಂದು ಕೋರುತ್ತೇವೆ.

**ಶ್ರೀ ಮುರುಗೇಶ್ ಆರ್. ನಿರಾಣಿ:–** ಮಾನ್ಯ ಶ್ರೀಕಂಠೇಗೌಡರೇ, ನೀವು ನಮ್ಮ ಸ್ನೇಹಿತರಿದ್ದೀರಿ. ನೀವು ಈ ರಾಜ್ಯದಲ್ಲಿಯೇ ಕೆಲಸ ಮಾಡುತ್ತಿದ್ದೀರಿ. ಅದನ್ನು ಖಂಡಿತ ಮಾಡಿಸಲಾಗುವುದು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 93**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನಲ್ಲಿ ಬುಡಕಟ್ಟು ಜನಾಂಗದವರ ಏಳಿಗೆಗಾಗಿ ಪ್ರಾರಂಭವಾಗಿರುವ ಸಹ್ಯಾದ್ರಿ ಗಿರಿಜನ ಲ್ಯಾಂಪ್ಸ್ ಸೊಸೈಟಿಯಲ್ಲಿ ನಡೆದಿರುವ ದೊಡ್ಡ ಪ್ರಮಾಣದ ಅವ್ಯವಹಾರವು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಅಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ ಎಂದು ಹೇಳಿದ್ದಾರೆ. ದಿನಾಂಕ 12.08.2020ರಂದು ಸರ್ಕಾರದಿಂದ ಬಂದಂತಹ ರೂ.12.50 ಲಕ್ಷಗಳ ಪೈಕಿ ರೂ.2.00 ಲಕ್ಷಗಳನ್ನು ಜೇನು ಖರೀದಿಗಾಗಿ ಅವ್ಯವಹಾರವಾಗಿದೆ. ಆ ಹಣ ಕಟ್ಟಡ ಕಟ್ಟಲಿಕ್ಕಾಗಿ ಬಂದದ್ದು. ಅದನ್ನು ದುರುಪಯೋಗ ಪಡಿಸಿಕೊಂಡು ಬೇರೆ ಕಡೆಯಲ್ಲಿ ಜೇನು ಖರೀದಿ ಮಾಡಿದ್ದಾರೆ. ಈ ಬುಡಕಟ್ಟು ಸಿದ್ದಿ ಸಮುದಾಯದ ಸಂಸ್ಥೆಯ ಕಟ್ಟಡ ಕಾಮಗಾರಿಯು ಸರಿಯಾಗಿ ನಡೆಯುತ್ತಿಲ್ಲ. ಕರಾವಳಿ ಮುಂಜಾನೆ ಎನ್ನುವ ದಿನಪತ್ರಿಕೆಯಲ್ಲಿ ಪಿಲ್ಲರ್‌ಗಳೆಲ್ಲಾ ಅಂಕುಡೊಂಕಾಗಿದ್ದು, ಕಳಪೆ ಕಾಮಗಾರಿಯಿಂದ ಕೂಡಿದೆ ಎಂದು ಪ್ರಕಟವಾಗಿದೆ. ಆ ಕಟ್ಟಡದಲ್ಲಿ ಯಾವುದೂ ಸರಿಯಿರುವುದಿಲ್ಲ ಎನ್ನುವಂತಿದೆ. ಗಿಡಗಂಟಿಗಳು ಬೆಳೆದಿದೆ. ಅಲ್ಲಿ ಸಾಮಾನ್ಯ ಸರ್ವಸದಸ್ಯರ ಸಭೆಯು ನಡೆದಿಲ್ಲ. ಕೇವಲ ಅಡ್ಜಸ್ಟ್‌ಮೆಂಟ್ ನಡೆಯುತ್ತಿದೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ.

ಬುಡಕಟ್ಟು ಸಿದ್ದಿ ಸಮುದಾಯವನ್ನು ಸುಧಾರಿಸಬೇಕೆನ್ನುವ ಸರ್ಕಾರದ ಉದ್ದೇಶ ಬಹಳ ಚೆನ್ನಾಗಿದೆ. ಆದರೆ ಅಲ್ಲಿ ಬಹಳಷ್ಟು ಅವ್ಯವಹಾರ ನಡೆದಿದೆ ಎಂದು ಈಗಾಗಲೇ ದಿನಪತ್ರಿಕೆಗಳಲ್ಲಿ ಬಂದಿದೆ. ಹೊಸದಾಗಿ ವಿಧಾನ ಪರಿಷತ್ ಸದಸ್ಯರಾಗಿರುವಂತಹ ಶ್ರೀ ಶಾಂತಾರಾಮ ಸಿದ್ದಿಯವರಿಗೂ ಸಹ ಇದರ ಬಗ್ಗೆ ಸವಿಸ್ತಾರವಾಗಿ ತಿಳಿದಿದೆ. ಅದರ ಬಗ್ಗೆ ಸೂಕ್ತವಾದ ತನಿಖೆಯನ್ನು ಮಾಡಿದರೆ ಎಲ್ಲಾ ಹೊರಬೀಳುತ್ತವೆ ಎಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಆಗ್ರಹಿಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಕಟ್ಟಡಕ್ಕಾಗಿ ಸುಮಾರು ರೂ.12.50 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ರೂ.2.00 ಲಕ್ಷಗಳನ್ನು ಜೇನು ಖರೀದಿಗಾಗಿ ಅವರು ಉಪಯೋಗ ಮಾಡಿದ್ದರು. ಅದು ತಿಳಿದ ತಕ್ಷಣ ಉಪ ನಿಬಂಧಕರು ಆ ಎರಡು ಲಕ್ಷಗಳನ್ನು ಜೇನು ಖರೀದಿಗಾಗಿ ಬಳಕೆ ಮಾಡಬಾರದು ಎಂದು ನೋಟಿಸ್ ಅನ್ನು ಕೊಟ್ಟಿದ್ದಾರೆ. ಆ ಎರಡು ಲಕ್ಷಗಳನ್ನು ಅವರು ಪುನಃ ಕಟ್ಟಿದ್ದಾರೆ. ಅಲ್ಲದೆ ಎಚ್ಚರಿಕೆ ನೋಟಿಸ್ ಅನ್ನು ಸಹ ನೀಡಲಾಗಿದ್ದು, ಇನ್ನು ಮುಂದೆ ಸರ್ಕಾರದಿಂದ ಬಿಡುಗಡೆಯಾದಂತಹ ಮಾರುಕಟ್ಟೆ ಮೂಲಭೂತ ಸೌಕರ್ಯಕ್ಕಾಗಿ ಬಿಡುಗಡೆಯಾದ ಹಣವನ್ನು ಅದಕ್ಕಾಗಿಯೇ ಬಳಕೆ ಮಾಡಬೇಕು, ಬೇರೆಯ ಕಾರಣಕ್ಕೆ ಬಳಸಿಕೊಳ್ಳಬಾರದು ಎಂದು ಅದರಲ್ಲಿ ತಿಳಿಸಲಾಗಿದೆ. ಸರ್ವ ಸದಸ್ಯರ ಸಭೆಯನ್ನು ಮಾಡುತ್ತಿಲ್ಲ, ಕಟ್ಟಡ ಸರಿಯಿಲ್ಲ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದಕ್ಕೆ ಪ್ರತ್ಯೇಕವಾಗಿ ಒಂದು ಮನವಿಯನ್ನು ನೀಡಿದರೆ ಉಪನಿಬಂಧಕರು ಅಥವಾ ಬೇರೆ ಅಧಿಕಾರಿಗಳನ್ನು ನಿಯೋಜಿಸಿ ಅದನ್ನು ಕೂಲಂಕಷವಾಗಿ ತನಿಖೆ ಮಾಡಿಸಿ ವರದಿಯನ್ನು ಸಲ್ಲಿಸುತ್ತೇವೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಚಿವರೇ, ಅವರು ಇಲ್ಲಿ ಸಭೆಯನ್ನು ನಡೆಸುವುದೇ ಇಲ್ಲ. ಮೂರು ವರ್ಷಗಳಿಂದ ಒಂದು ಬಾರಿಯೂ ಸಾಮಾನ್ಯ ಸರ್ವಸದಸ್ಯರ ಸಭೆಯನ್ನು ನಡೆಸಿರುವುದಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಘೋಟ್ನೇಕರ್ ಅವರೇ, ಇದರಲ್ಲಿ ತಾವು ಕೇಳಿರುವುದು ಇಷ್ಟೇ. ಅದನ್ನು ಪ್ರತ್ಯೇಕವಾಗಿ ಕೊಡಿ. ಸರ್ವಸದಸ್ಯರ ಸಭೆಯನ್ನು ಮಾಡಲೇ ಬೇಕಾಗುತ್ತದೆ. ಕಟ್ಟಡದ ಕಳಪೆ ಕಾಮಗಾರಿಯ ಬಗ್ಗೆ ಪ್ರತ್ಯೇಕವಾಗಿ ಕ್ರಮವನ್ನು ಕೈಗೊಳ್ಳುತ್ತೇನೆ. ರೂ.2.00 ಲಕ್ಷಗಳನ್ನು ಬಳಕೆ ಮಾಡಿರುವುದಕ್ಕೆ ಉಪನಿಬಂಧಕರು ಎಚ್ಚರಿಕೆ ನೋಟಿಸ್ ಅನ್ನು ನೀಡಿದ್ದು, ಅದು set right ಆಗಿದೆ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 2003ರಲ್ಲಿ ಸಿದ್ದಿ ಬುಡಕಟ್ಟು ಜನಾಂಗಕ್ಕೆ ಸಂಬಂಧಪಟ್ಟಂತೆ ಕಿರು ಕಾಡು ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುವುದಕ್ಕಾಗಿ ಸಹಕಾರ ಸಂಘವೊಂದನ್ನು ಸರ್ಕಾರ ಮಾಡಿಕೊಟ್ಟಿತು. 2003ರಲ್ಲಿ ಮಾಡಿದಂತಹ ಈ ಸಂಘಕ್ಕೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಅಂಕೋಲ, ಮುಂಡಗೋಡ, ಶಿರಸಿ ಈ ನಾಲ್ಕು ತಾಲ್ಲೂಕುಗಳ ವ್ಯಾಪ್ತಿ ಇದೆ. 2003ರಲ್ಲಿ ಪ್ರಾರಂಭವಾದಾಗ ಸುಮಾರು 2000 ಸದಸ್ಯರು ಈ ಸಹಕಾರ ಸಂಘದಲ್ಲಿದ್ದರು. ಪ್ರಾರಂಭದಲ್ಲಿ ಜೇನು ಮತ್ತಿತರ ಸಾಮಗ್ರಿಗಳನ್ನು ಸಂಗ್ರಹಣೆ ಮಾಡಿ ಕಾಡಿನ ಕಿರು ಕಾಡು ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿತ್ತು. ಆದರೆ ಅನುಭವದ ಕೊರತೆಯಿಂದ ಪ್ರಾರಂಭದ ಮೂರ್ನಾಲ್ಕು ವರ್ಷಗಳಲ್ಲಿ ಸಂಘಕ್ಕೆ ಹಾನಿಯಾಯಿತು. ಎರಡನೆಯ ಅವಧಿಗೆ ಬಂದಂತಹ ಆಡಳಿತ ಸಮಿತಿಯ ಅವಧಿಯಲ್ಲಿ ಸ್ವಲ್ಪ ಸುಧಾರಣೆಯಾಯಿತು. 2009-10ರಲ್ಲಿ ನಾನು LAMPS ಸಹಕಾರ ಸಂಘಗಳ ಒಕ್ಕೂಟ, ಮೈಸೂರು ಇದರ ನಿರ್ದೇಶಕನಾಗಿ ನಾಮನಿರ್ದೇಶನಗೊಂಡೆನು. ಆಗ ಇದ್ದಂತಹ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದಾಗ ಆಡಳಿತ ಮಂಡಳಿಯಿಂದ ಸರಿಯಾದಂತಹ ಉತ್ತರ ಸಿಗುತ್ತಿರಲಿಲ್ಲ. ಅಲ್ಲಿ ಒಗ್ಗಟ್ಟು ಇರಲಿಲ್ಲ. 2014-15ರಲ್ಲಿ ಇದರ ಬಗ್ಗೆ ನಾನು ಸ್ವಲ್ಪ ಗಟ್ಟಿಯಾಗಿ ಪ್ರಶ್ನಿಸಿದಾಗ ಸಮಿತಿಯಿಂದ ನನ್ನನ್ನು ಉಚ್ಚಾಟಿಸಲಾಯಿತು. ನಂತರ ನನಗೆ ಹೆಚ್ಚಿನ ಮಾಹಿತಿಯಿರಲಿಲ್ಲ. ಕಳೆದ ವರ್ಷ ಸರ್ಕಾರವು ಆಡಳಿತ ಮಂಡಳಿಯನ್ನು ಬರ್ಖಾಸ್ತು ಮಾಡಿ, ಸರ್ಕಾರಿ ಅಧಿಕಾರಿಗಳನ್ನು ಅಲ್ಲಿಗೆ ನೇಮಿಸಿತು. ಮೊದಲ ಆರು ತಿಂಗಳು ಸ್ವಲ್ಪ ಚೆನ್ನಾಗಿ ನಡೆದ ಮೇಲೆ ಪುನಃ ಕಳೆದ ಎಂಟು ತಿಂಗಳ ಹಿಂದೆ ಅಲ್ಲಿಗೆ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯನ್ನು ಚುನಾಯಿಸಲಾಗಿದೆ. ಮಿತ್ರರಾದ ಮಾನ್ಯ ಘೋಟ್ನೇಕರ್ ಅವರು ಹೇಳಿದಂತೆ ಅಲ್ಲಿ ಕಳೆದ ಮೂರು ವರ್ಷಗಳಿಂದ ಆಂತರಿಕ ಲೆಕ್ಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಶೋಧನೆಯಷ್ಟೇ ನಡೆಯುತ್ತಿದೆ. Audit ಸರಿಯಾಗಿ ನಡೆದಿಲ್ಲ. ಆಡಳಿತ ಮಂಡಳಿಯ ಸಭೆಯು ಕೂಡ ಸರಿಯಾಗಿ ನಡೆಯುತ್ತಿಲ್ಲ.

ವಿಶೇಷವಾಗಿ ಹೇಳಬೇಕೆಂದರೆ ಕಳೆದ ಮೂರು ವರ್ಷಗಳಿಂದ ಸರಿಯಾಗಿ ಸರ್ವಸದಸ್ಯರ ಸಭೆಯು ನಡೆಯುತ್ತಿಲ್ಲ. ನಾನು ವಿಧಾನ ಪರಿಷತ್ ಸದಸ್ಯನಾದ ನಂತರ ಅಲ್ಲಿನ ಅಧ್ಯಕ್ಷರು ಹಾಗೂ ಸದಸ್ಯರನ್ನು ಕರೆದು ಡಿಸೆಂಬರ್ 25ರೊಳಗೆ ಸಭೆ ಮಾಡಬೇಕಿತ್ತು ಎಂದು ಕೇಳಿದಾಗ ಹಾಗೇನು ಸಮಯ ನಿಗದಿಯಿಲ್ಲ ಎಂದು ಹೇಳಿದರು. ಜಿಲ್ಲಾ ಉಪ ನಿಬಂಧಕರನ್ನು ಕೇಳಿದಾಗ ಅವರು ಅದೇ ಉತ್ತರವನ್ನು ನೀಡಿದರು. ಡಿಸೆಂಬರ್ 25ರೊಳಗೆ ಎಲ್ಲಾ ಸಹಕಾರಿ ಸಂಘಗಳ ಸರ್ವಸದಸ್ಯರ ಸಭೆಯಾಗಬೇಕು ಎನ್ನುವ ಒಂದು ಆದೇಶವು ನನ್ನ ಕೈ ಸೇರಿದ ನಂತರ ಅವರನ್ನು ಪುನಃ ಕೇಳಿದೆ. ಆಗ ಅವರು ಬುಡಕಟ್ಟು ಸದಸ್ಯರು ಸಹಕಾರವನ್ನು ಕೊಡುತ್ತಿಲ್ಲ ಎನ್ನುವ ಹಾರಿಕೆಯ ಉತ್ತರವನ್ನು ನೀಡಿದರು. ಇಂದಿಗೂ ಕೂಡ ಆ ಸ್ಥಿತಿ ಹಾಗೆಯೇ ಇದೆ. ಆಡಳಿತ ಮಂಡಳಿಯ 13 ಜನ ನಿರ್ದೇಶಕರ ಒಳಗೆ ಈ ರೀತಿಯ ಗೊಂದಲ ನಡೆಯುತ್ತಿದೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಸೆಪ್ಟೆಂಬರ್ 25ರೊಳಗೆ ಮಹಾಸಭೆಯನ್ನು ಮಾಡಬೇಕೆಂದು ಇದ್ದು, ಕೋವಿಡ್ ಕಾರಣದಿಂದಾಗಿ ಅದನ್ನು ಡಿಸೆಂಬರ್ ತಿಂಗಳಿಗೆ extend ಮಾಡಲಾಗಿದೆ. ಆ ರೀತಿಯೇನಾದರೂ ಸರಿಯಾದ ಸಮಯಕ್ಕೆ ಮಹಾಸಭೆಯನ್ನು ಮಾಡಲಿಲ್ಲ ಎಂದರೆ ಸಂಸ್ಥೆಯನ್ನು supersede ಮಾಡುವ ಅಧಿಕಾರ ಸರ್ಕಾರಕ್ಕಿದೆ. ಕಟ್ಟಡ ಸರಿಯಿಲ್ಲ ಎನ್ನುವುದಕ್ಕೆ enquiry ಮಾಡಿಸಿ ಕ್ರಮ ಕೈಗೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 245**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ವಿವರವಾಗಿ ಒದಗಿಸಿದ್ದಾರೆ. ನಾನು ತಮ್ಮ ಮೂಲಕ ಸಚಿವರಿಗೆ ಮನವಿ ಮಾಡುವುದೇನೆಂದರೆ ಅವರ ಇಲಾಖೆಯ ಕೆಲಸ ಕೊಡಗು ಜಿಲ್ಲೆಯಲ್ಲಿ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನೋಡುವುದಕ್ಕೆ ಅವರು ಒಮ್ಮೆ ಕೊಡಗು ಜಿಲ್ಲೆಗೆ ಭೇಟಿಯನ್ನು ನೀಡಬೇಕು. ಕಳೆದ ಮಾರ್ಚ್‌ನಲ್ಲಿ ನಾನು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಯನ್ನು ಕೇಳಿದ್ದೆನು. ಕುಡಿಯುವ ನೀರಿನ ಕುರಿತಾದ ಪ್ರಶ್ನೆಗೆ ಮಾನ್ಯ ಸಚಿವರು ಆರು ತಿಂಗಳುಗಳಲ್ಲಿ ಮುಗಿಸಿಕೊಡುವುದಾಗಿ ಸದನದಲ್ಲಿ ಉತ್ತರವನ್ನು ನೀಡಿದ್ದರು. ಆದರೆ ಇದುವರೆವಿಗೂ ಮುಗಿದಿಲ್ಲ. ಮಾನ್ಯ ಸಚಿವರು ಬಂದು ನಮ್ಮ ಜಿಲ್ಲೆಯಲ್ಲಿ Review Meeting ಅನ್ನು ನಡೆಸಿದರೆ ಅವರಿಗೆ ವಿಚಾರ ತಿಳಿಯುತ್ತದೆ.

**(ಮುಂದು)**

(70) 02.02.2021, 12.10. KG.AK

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಡಿಕೇರಿ ನಗರದಲ್ಲಿ ಉತ್ಪತ್ತಿಯಾಗುವ ಮಲೀನ ನೀರನ್ನು ಶುದ್ಧೀಕರಣಗೊಳಿಸಬೇಕು ಎನ್ನುವಂತಹ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಜಾಗದ ಕೊರತೆ ಇದೆ. ಅಲ್ಲಿ ನಮಗೆ ಸುಮಾರು 4 ಎಕರೆ 78 cent ಜಾಗದ ಅವಶ್ಯಕತೆ ಇದೆ. ಅಲ್ಲಿ ಜಾಗವನ್ನು ಒದಗಿಸಿಕೊಟ್ಟರೆ, ನಾವು ಕೆಲಸವನ್ನು ಮಾಡುವುದಕ್ಕೆ ತಯಾರಿದ್ದೇವೆ. ಅದಕ್ಕೆ ಸುಮಾರು ರೂ.44.56 ಕೋಟಿಗಳ ಅನುದಾನವನ್ನು ಸಹ ಅದಕ್ಕೆ ಮೀಸಲಿಟ್ಟಿದ್ದೇವೆ. ಅದರಲ್ಲಿ ಈಗಾಗಲೇ ರೂ.27.34 ಕೋಟಿಗಳನ್ನು ವೆಚ್ಚ ಮಾಡಿದ್ದೇವೆ. ಉಳಿದ ಹಣವನ್ನು ಇಟ್ಟುಕೊಂಡಿದ್ದೇವೆ. ಈಗ ಅಲ್ಲಿ STP ಗಳನ್ನು ಮಾಡಿ ಅಲ್ಲಿರುವಂತಹ ಮಲೀನ ನೀರನ್ನು ಶುದ್ಧೀಕರಣ ಮಾಡಿ ಅದನ್ನು ಬೇರೆ ಬೇರೆ ಜಾಗಗಳಿಗೆ ಕೊಡುವಂತಹ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ. ನಾವೀಗ ಜಿಲ್ಲಾಧಿಕಾರಿಯವರಿಗೂ ಪತ್ರವನ್ನು ಬರೆದಿದ್ದೇವೆ. ಅಲ್ಲಿ ನಮಗೆ ಜಾಗದ ಕೊರತೆ ಇರುವುದರಿಂದ ಹಾಗೂ ಅದು ಗುಡ್ಡಗಾಡು ಪ್ರದೇಶವಾಗಿರುವುದರಿಂದ ಅಲ್ಲಿ STP ಗಳನ್ನು ನಿರ್ಮಾಣ ಮಾಡಬೇಕಾಗಿದೆ. ಹಾಗಾಗಿ, ನಾನು ಅಧಿವೇಶನ ಮುಗಿದ ತಕ್ಷಣ ಮಡಿಕೇರಿಗೆ ಭೇಟಿ ಕೊಟ್ಟು ಸೂಕ್ತವಾದಂತಹ ಕ್ರಮವನ್ನು ಜರುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ನೀವು ಸರ್ಕಾರದ ಪರವಾಗಿ ಉತ್ತರವನ್ನು ಕೊಡಬೇಕು. ನಿಮ್ಮ ಸಮಸ್ಯೆಗಳನ್ನು ಇಲ್ಲಿ ಹೇಳುವುದಲ್ಲ. ಮಾನ್ಯ ಸದಸ್ಯರು ಸಮಸ್ಯೆಯನ್ನು ಕೇಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಎ.ಬಸವರಾಜು:–** ಮಾನ್ಯ ಸಭಾಪತಿಯವರೇ, ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ಮಡಿಕೇರಿಗೆ ಭೇಟಿ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ, ನಾನು ಅಧಿವೇಶನ ಮುಗಿದ ತಕ್ಷಣ ಅಲ್ಲಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡುತ್ತೇನೆ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಜಿಲ್ಲಾಧಿಕಾರಿಯವರು ಇದಕ್ಕೆ ಸ್ಪಂದನೆ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಅಧಿಕಾರಿಗಳು ತಹಶೀಲ್ದಾರ್‌ರವರ ಕಛೇರಿಗೆ ಹೋಗುತ್ತಿಲ್ಲ. Engineer ರವರಿಗೆ ಸಾವಿರ ಬಾರಿ ಹೇಳಿದರೂ ಸಹ ಹೋಗುವುದಿಲ್ಲ. ಎಲ್ಲವನ್ನು ನಾವು ಮಾಡಿಕೊಡಬೇಕೇ? ಹಾಗಾದರೆ, ಇಲಾಖೆಯವರು ಇರುವುದು ಏಕೆ?

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಅಧಿಕಾರಿಗಳ ಬಗ್ಗೆ ಚರ್ಚೆ ಮಾಡಿದ್ದೇನೆ. ಅವರು ಪತ್ರವನ್ನು ಬರೆದಿದ್ದಾರೆ. ಆದರೂ ಸಹ ಜಿಲ್ಲಾಡಳಿತ ಎಲ್ಲೋ ಒಂದು ಕಡೆ ಸರಿಯಾಗಿ ಸ್ಪಂದನೆ ಮಾಡಿಲ್ಲ. ನಾನು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ ಅದರ ಬಗ್ಗೆ ಕ್ರಮ ಜರುಗಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ 206**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹಾರೋಹಳ್ಳಿ ಕೈಗಾರಿಕಾ ವಲಯದಲ್ಲಿ ಒಂದು ಆಗ್ನಿಶಾಮಕ ಕೇಂದ್ರ ಬೇಕೆಂದು ಪ್ರಶ್ನೆಯನ್ನು ಕೇಳಿದ್ದೆ. ಕಳೆದ ತಿಂಗಳ 5ನೇ ತಾರೀಖಿನಂದು ಅಲ್ಲಿ ಒಂದು ಆಕಸ್ಮಿಕ ಬೆಂಕಿ ಪ್ರಕರಣವಾಗಿ ಸುಮಾರು ರೂ.35 ಕೋಟಿಗಳಷ್ಟು ಕೈಗಾರಿಕೆ ಸುಟ್ಟು ಹೋಗಿದೆ. ಆದರೆ, ದೇವರ ಆರ್ಶೀವಾದದಿಂದ ಕೂಲಿ ಕಾರ್ಮಿಕರಿಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಈ ಕೈಗಾರಿಕಾ ವಲಯವನ್ನು 2005 ರಿಂದ 2008 ರೊಳಗಡೆ KIADB ಯವರು 1169 ಎಕರೆಯನ್ನು ಪ್ರದೇಶವನ್ನು develop ಮಾಡಿರುತ್ತಾರೆ. ಆದರೆ, ಇಲ್ಲಿಯವರೆಗೆ ಆ ವಲಯದಲ್ಲಿ ಆಗ್ನಿಶಾಮಕ ಕೇಂದ್ರವನ್ನು start ಮಾಡಲಿಲ್ಲ ಎನ್ನುವುದು ನನ್ನ ಮುಖ್ಯ ಪ್ರಶ್ನೆ. ಮೊನ್ನೆ ದಿವಸ Complainants ಕೈಗಾರಿಕೆಗೆ ಬೆಂಕಿ ಬಿದ್ದು ಅನಾಹುತವಾಗಿದೆ ಎಂದು phone ಮಾಡುತ್ತಾರೆ. ಒಂದು distance 18 ಕೀಲೋಮೀಟರ್‌ನಿಂದ 53 ಕೀಲೋಮೀಟರ್ ಒಳಗಡೆ 18 ಗಾಡಿಗಳು ಬರುತ್ತವೆ. ಎಲ್ಲಿಂದ ಎಲ್ಲಿಗೂ ಬರವುದಕ್ಕೂ ಸುಮಾರು ಒಂದೂವರೆ ಗಂಟೆ ತೆಗೆದುಕೊಳ್ಳುತ್ತದೆ. ಒಂದು ಗಾಡಿ ಬರುವಾಗ ಕೆಟ್ಟು ಹೋಗುತ್ತದೆ. 24 ಜನ ಸಿಬ್ಬಂದಿ ಮತ್ತು 85 ಜನ local ನವರು ಸೇರಿ ಇದನ್ನೆಲ್ಲಾ ಸುಟ್ಟು ಹೋಗದಂತೆ ಮಾಡುತ್ತಾರೆ. ಈ ವಲಯದಲ್ಲಿ ಲಕ್ಷಾಂತರ ಜನ ಕೆಲಸ ಮಾಡುತ್ತಾರೆ. 453 ಕೈಗಾರಿಕೆಗಳಿವೆ. ಇಂತಹ ಪ್ರದೇಶಗಳಲ್ಲಿ ಒಂದು ಆಗ್ನಿ ಶ್ಯಾಮಕ ಠಾಣೆ ಇಲ್ಲವೆಂದರೆ ಹೇಗೆ? ಇಂತಹ ದೊಡ್ಡ ದೊಡ್ಡ Industrial Layout ಅನ್ನು ಮಾಡಿದಂತಹ ಸಂದರ್ಭದಲ್ಲಿ ಅದಕ್ಕೆ ಬೇಕಾದಂತಹ ಮೂಲ ಸೌಲಭ್ಯಗಳನ್ನು ಒದಗಿಸದಿದ್ದರೆ ಹೇಗೆ? ಇದು ನನ್ನ ಪ್ರಶ್ನೆ. ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕು. ಈಗ ಅವರು question ಕೊಟ್ಟಿದ್ದಾರೆ. ನಾನು ಅಲ್ಲಿಗೆ ಹೋಗಿ ಮಾತನಾಡಿದ ಮೇಲೆ, ಅವರನ್ನು ಕರೆದುಕೊಂಡು ಬಂದು ಒಂದು request ಕೊಡಿಸಿದ್ದೇನೆ. ಕಳೆದ ತಿಂಗಳ 25ನೇ ತಾರೀಖಿನಂದು ಒಂದು ಆಗ್ನಿಶಾಮಕ ಠಾಣೆ ಕೊಡಿಸಿ ಎಂದು Union ನವರು ಮನವಿ ಕೊಟ್ಟಿದ್ದಾರೆ. ಇಷ್ಟು ವರ್ಷಗಳಾದರೂ ಸಹ ಇನ್ನೂ ಆಗಿಲ್ಲವಲ್ಲ. ಮುಂದಿನ ದಿವಸಗಳಲ್ಲಿ ಇನ್ನೂ ದೊಡ್ಡ ಅನಾಹುತವಾದರೆ ಯಾರು ಜವಾಬ್ದಾರರು? ಈಗ ಅವರಿಗೆ ರೂ.35 ಕೋಟಿಗಳು ನಷ್ಟವಾಗಿದೆ. ಇಲ್ಲಿ ಅವರ ದುರದೃವ ಏನೆಂದರೆ, insurance lapse ಆಗುವುದಕ್ಕೆ 24 ಗಂಟೆ ಮುಂಚೆ ಆಗಿದೆ. ಈ pandemic ನಲ್ಲಿ ಅವರು ನಾಳೆ ಮಾಡಿಸೋಣ ಎನ್ನುವಂತೆ ಇದ್ದರೆ, ಇವತ್ತು ಅದೆಲ್ಲಾ ಸುಟ್ಟು ಹೋಗಿದೆ. ಅವರಿಗೆ ಸುಮಾರು ರೂ.35.24 ಕೋಟಿಗಳು ನಷ್ಟವಾಗಿದೆ. ಅವರಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದನ್ನು ಯಾರು ಭರಿಸಿ ಕೊಡುತ್ತಾರೆ? ಅಲ್ಲಿ ಇನ್ನು ಬೇಕಾದಷ್ಟು industries ಇವೆ. ಅದೇ ಯಾವುದಾದರೂ Chemical, Oil ಇರುವಂತಹ ಕಡೆಗಳಲ್ಲಿ ಈ ಘಟನೆ ನಡೆದಿದ್ದರೆ ನೂರಾರು ಜನರು ಸತ್ತು ಹೋಗುತ್ತಿದ್ದರು. ಇಂತಹ ದೊಡ್ಡ areas ವನ್ನು develop ಮಾಡಿದಾಗ infrastructure ಸರಿಯಾಗಿ ಕೊಡದಿದ್ದರೆ ಹೇಗೆ? ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಟ್ಟ ಮೇಲೆ ಮತ್ತೆ ಉಪ ಪ್ರಶ್ನೆಗಳನ್ನು ಕೇಳುತ್ತೇನೆ.

**ಶ್ರೀ ಜಗದೀಶ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಯು.ಬಿ.ವೆಂಕಟೇಶ್‌ರವರು ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪನೆ ಮಾಡಿಕೊಡುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದೇರೀತಿ ಮಾನ್ಯ ಸದಸ್ಯರು ಇತ್ತೀಚೆಗೆ ಅಲ್ಲಿ ಒಂದು ಕೈಗಾರಿಕೆ ಬೆಂಕಿಗೆ ಅನಾಹುತಿ ಆಗಿ ಬಹಳ ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದ್ದನ್ನು ಸಹ ಹೇಳಿದ್ದಾರೆ. ನಾವು ಸಹ ಅದನ್ನು ಗಮನಿಸಿದ್ದೇವೆ. ನಾನು ಕೈಗಾರಿಕಾ ಸಚಿವನಾದ ಮೇಲೆ ಆ area ಗೆ visit ಕೊಟ್ಟ ಮೇಲೆ ಅಲ್ಲಿನ association ನವರು ಒಂದು ಮನವಿಯನ್ನು ಕೊಟ್ಟಿದ್ದಾರೆ. ತದನಂತರ ನಾನು ಇತ್ತೀಚೆಗೆ ಮತ್ತೊಂದು ಕಾರ್ಯಕ್ರಮಕ್ಕೆ ಅಲ್ಲಿಗೆ ಹೋದಾಗಲೂ ಸಹ, ಅವರು insist ಮಾಡಿದ್ದರು. ನಮ್ಮ KIADB ಇಲಾಖೆ ಮುಖಾಂತರ ಹಾರೋಹಳ್ಳಿ 2ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಸಂಖ್ಯೆ 214 ರಲ್ಲಿ 4.00 ಎಕರೆ CA site ಇದೆ. ಅದನ್ನು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾಗಿತ್ತು. ಈ ಪೈಕಿ 2.00 ಎಕರೆ ಪ್ರದೇಶವನ್ನು ನಾವು ಅಗ್ನಿಶಾಮಕ ಇಲಾಖೆಗೆ ಅಗ್ನಿ ಶಾಮಕ ಠಾಣೆ ಸ್ಥಾಪಿಸುವ ಉದ್ದೇಶಕ್ಕಾಗಿ ಉಚಿತವಾಗಿ ಹಂಚಿಕೆ ಮಾಡಲು ದಿನಾಂಕ 30.01.2021ರಂದು ನಡೆದ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಏಕೆಂದರೆ, ಅವರಿಗೆ ಜಾಗ ಬೇಕು ಎನ್ನುವ ಬೇಡಿಕೆ ಇತ್ತು. ಹಾಗಾಗಿ, ಅವರಿಗೆ ಜಾಗ ಕೊಡಿಸುತ್ತಿದ್ದೇವೆ. ನನ್ನ ಪ್ರಕಾರ, ಅಗ್ನಿ ಶಾಮಕ ಇಲಾಖೆಯವರು ಸಹ ಆದಷ್ಟು ಬೇಗ ಆ ಪ್ರದೇಶದಲ್ಲಿ ಅಗ್ನಿ ಶಾಮಕ ಠಾಣೆಯನ್ನು ಪ್ರಾರಂಭ ಮಾಡುವುದಕ್ಕೆ ಬೇಕಾದಂತಹ ಎಲ್ಲಾ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. Association ರವರು ನಮ್ಮ ಜೊತೆಗೆ ಸಂಪರ್ಕದಲ್ಲಿದ್ದಾರೆ. ಅದಕ್ಕೆ ಆ ಒಂದು facility ಅನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ, ಈ ರೀತಿಯಾದಂತಹ ಅವಘಡಗಳು ಸಂಭವಿಸಿದಾಗ ಅಗ್ನಿ ಶಾಮಕ ಠಾಣೆಯನ್ನು ಪ್ರಾರಂಭ ಮಾಡುವುದು ಅವಶ್ಯಕವೆಂದು ಏನು ಹೇಳಿದ್ದಾರೆ, ಅದು Definitely ಬೇಕಾಗುತ್ತದೆ. ಮುಂದಿನ ದಿವಸಗಳಲ್ಲಿ ಈ ರೀತಿಯ ಮೂಲಭೂತ ಸೌಕರ್ಯಗಳು ಏನೇನೂ ಬೇಕೋ ಅದನ್ನು ಸಹ ಮೊದಲೇ ಅಂದಾಜು ಮಾಡಿಕೊಂಡು ಒಂದು vision ಇಟ್ಟುಕೊಂಡು area development ಮಾಡುವುದರ ಬಗ್ಗೆಯೂ ಗಂಭೀರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಅದು ಇಷ್ಟು ವರ್ಷಗಳು ಏಕೆ ಆಗಿಲ್ಲ, ಬಿಟ್ಟಿಲ್ಲ, ಎನ್ನುವಂಥದ್ದು ಬೇಡ. ಬಹಳಷ್ಟು ಸರ್ಕಾರಗಳು ಬಂದು ಹೋಗಿವೆ. ಹೀಗಾಗಿ ಅವರು ಏಕೆ ಮಾಡಿಲ್ಲ? ಇವರು ಏಕೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಿಲ್ಲ ಎನ್ನುವುದು ಪ್ರಶ್ನೆ ಅಲ್ಲ. ಇವತ್ತು ನಮ್ಮ ಜವಾಬ್ದಾರಿ ಅಲ್ಲಿ ಬೇಕಾದಂತಹ ಮೂಲ ಭೂತ ಸೌಕರ್ಯಗಳನ್ನು ಕೊಡುವಂತಹದ್ದು. ಅದಕ್ಕೆ definitely ಮಾನ್ಯ ಸದಸ್ಯರು ಏನು ಅವರ ಭಾವನೆಗಳನ್ನು ವ್ಯಕ್ತ ಪಡಿಸಿದ್ದಾರೆ ಅದಕ್ಕೆ response ಮಾಡುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಹಿರಿಯರು ಇದ್ದಾರೆ. ಹಾಗಾಗಿ, ನಾವು ಅವರಿಗೆ ಏನು ಹೇಳುವುದಕ್ಕೆ ಆಗುವುದಿಲ್ಲ. ಯಾವುದೇ ಸರ್ಕಾರ ಇರಲಿ, ಸಾವಿರಾರು ಎಕರೆ ಪ್ರದೇಶವನ್ನು ಅಭಿವೃದ್ಧಿ ಪಡಿಸಿದಾಗ ಪಾಲಿಸಿಯಲ್ಲಿ ತರಬೇಕಾಗುತ್ತದೆ. A, B, C, D ಮೊದಲು ಇದ್ದರೆ, ನೀವು ನಿವೇಶನ ತೆಗೆದುಕೊಳ್ಳಿ ಎಂದು ಹೇಳಬೇಕು. ಎಲ್ಲರ ಬಳಿ ಕೋಟ್ಯಾಂತರ ರೂಪಾಯಿಗಳ ಹಣ ತೆಗೆದುಕೊಂಡು industry ಗಳನ್ನು ಹಾಕುವುದಕ್ಕೆ ಬಿಟ್ಟು ಇವತ್ತು ಅಲ್ಲಿ ಯಾವುದೇ ರೀತಿಯ infrastructure ಇಲ್ಲವೆಂದರೆ ಹೇಗೆ? ಅವರಿಗೆ ಪ್ರೀತಿ ಇದೆ, ಆದರೆ, ಇವತ್ತು ಪುರಸೊತ್ತು ಇಲ್ಲ. ಜಾಗವನ್ನು free ಆಗಿ ಕೊಡುತ್ತೇವೆ ಎಂದು ಹೇಳುತ್ತಾರೆ. 2.15 ಎಕರೆಯನ್ನು dedicated Fire Force Station ಗೆ ಎಂದು ಇಟ್ಟಿದ್ದಾರೆ. ಹೊಸದಾಗಿ ಏನೂ ಕೊಡಬೇಕಾಗಿಲ್ಲ, ಇವತ್ತಿನ ವಿಚಾರ ನನಗೆ ಗೊತ್ತಿಲ್ಲ. ನಾನು ಹಳೆಯ plan ಪ್ರಕಾರ ಹೇಳುತ್ತಿದ್ದೇನೆ. ಆದರೆ ಗೃಹ ಇಲಾಖೆಯ ಜೊತೆ ಮಾತನಾಡಿ ಎಷ್ಟು ದಿವಸಗಳಲ್ಲಿ Fire Station ಮಾಡಿಕೊಡುತ್ತಾರೆ ಎಂದು ತಿಳಿಸಬೇಕು. ನಾನು association ನವರಿಗೂ request ಮಾಡಿದ್ದೇನೆ. ಅವರು ಒಂದೆರಡು vehicle ಗಳನ್ನು donate ಮಾಡುವುದಕ್ಕೆ ready ಇದ್ದಾರೆ. ಇವರು building ಕಟ್ಟಿಸಿಕೊಟ್ಟು, ಅಗತ್ಯವಿರುವ infrastructure ready ಮಾಡಿಕೊಟ್ಟರೆ ಅದಕ್ಕೂ ದುಡ್ಡು ಕೊಡಲು ready ಇದ್ದಾರೆ. ದಯವಿಟ್ಟು ಅವರ ಕಡೆಯಿಂದ ಒಂದು ಆಶ್ವಾಸನೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಿ.ಎಂ.ಇಬ್ರಾಹಿಂರವರೇ, ಈಗ ಕೆ.ಎ.ತಿಪ್ಪೇಸ್ವಾಮಿಯವರು ಒಂದರೆಡು ನಿಮಿಷ ಮಾತನಾಡುತ್ತಾರೆ. ತಾವು ಅವರು ಮಾತನಾಡಿದ ನಂತರ ಮಾತನಾಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅದು industrial area development ಆಗಬಹುದು ಅಥವಾ residential layout ಮಾಡಬಹುದು. ಮೊಟ್ಟ ಮೊದಲನೆಯದಾಗಿ, civic amenities ಗೆ reserve ಮಾಡಿ ಇಡಬೇಕು. ಬಹುಶಃ ಮಾಡಿ ಇಟ್ಟಿದ್ದಾರೆಂದು ಕಾಣಿಸುತ್ತದೆ. ಏಕೆ allotment ಮಾಡಲಿಲ್ಲ. ಯಾವುದೇ ಒಂದು industry establish ಆಗಬೇಕಾದರೆ, ಅಲ್ಲಿ ಮೂಲತಃವಾಗಿ ಇರತಕ್ಕಂತಹ Fire Force Station ಮತ್ತೆ, Police Station ಮತ್ತೆ, workers colony ಗಳಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಬಂಧಪಟ್ಟಂತೆ allotment ಆಗಬೇಕಾಗಿತ್ತು. ಆದಷ್ಟು ಬೇಗ ಆಗಬೇಕಾಗಿತ್ತು. ಇದು ಬಹುಶಃ KIADB ನಲ್ಲಿ ಕೇವಲ industrial area development ಮಾಡಿ ಹಂಚಿಕೆ ಮಾಡಿದರೆ ಸಾಕಾಗುವುದಿಲ್ಲ. ದಯಮಾಡಿ ಏನು civic amenities ಗೆ ಕೊಟ್ಟಿದ್ದೀರಿ, ಅದನ್ನು ಸಂಬಂಧಪಟ್ಟ ಇಲಾಖೆಗೆ ಕೊಟ್ಟು meeting ಮಾಡಿದ್ದರೆ ತುಂಬ ಅನುಕುಲವಾಗುತ್ತಿತ್ತು. ಒಬ್ಬ ಕೈಗಾರಿಕೋದ್ಯಮಿಗೆ 35 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಆದ್ದರಿಂದ, ಮುಂದೆ ರಾಜ್ಯದಲ್ಲಿರುವಂತಹ industrial area ಗಳಲ್ಲಿಯೂ ಸಹ Fire Force Station establish ಮಾಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯಿಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರಲ್ಲಿ officers brief ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು 1979 ರಲ್ಲಿ ಕೈಗಾರಿಕಾ ಸಚಿವನಾಗಿದ್ದೆ. ಇದು must. Industrial Area ದಲ್ಲಿ ಅಗ್ನಿ ಶಾಮಕ ದಳ, Police Station ಇವೆಲ್ಲವನ್ನು ಮಾಡುವುದಕ್ಕೆ KIADB ರವರು ಜಾಗವನ್ನು ಬಿಟ್ಟಿರುತ್ತಾರೆ. ಆ ರೀತಿ ಬಿಟ್ಟಿದ್ದನ್ನು ಏನು ಮಾಡಿದರು? ಒಂದನೇ ಹಂತದಲ್ಲಿ ಮಾಡುವುದಕ್ಕೆ ಆಗಲಿಲ್ಲ. ಎರಡನೇ ಹಂತದಲ್ಲಿ ಮಾಡುತ್ತೇವೆಂದು ಸಚಿವರು ಹೇಳಿದ್ದಾರೆ. ಮೊದಲನೆ ಹಂತದಲ್ಲಿ ಇಟ್ಟಂತಹ ಜಾಗವನ್ನು ಯಾರಿಗೆ allot ಮಾಡಿದ್ದಾರೆ? ಏಕೆಂದರೆ, ಒಂದು ಎಕರೆ ಜಾಗ ಎಂದರೆ, ಸ್ವರ್ಗದಲ್ಲಿ ಮನೆ ಮಾಡಿದಂತೆ, KIADB ನಲ್ಲಿ ಅರ್ಧ ಎಕರೆ ಜಾಗ ತೆಗೆದುಕೊಳ್ಳುವುದು. ಒಂದು ಬಾರಿ develop ಆಯಿತು ಎಂದರೆ, ಅಗ್ನಿ ಶಾಮಕ ದಳ, Police Station ಗೆ ಹಿಂದೆ ಅದಕ್ಕೆಲ್ಲಾ ವ್ಯವಸ್ಥೆ ಪಾಲಿಸಿಯಲ್ಲಿದೆ. ಅದಕ್ಕೆ ದಯವಿಟ್ಟು ಅದನ್ನು ತೆಗೆದು ನೋಡಿ ಅದರಲ್ಲಿ ಏನಿದೆ ಎಂದು ಹೇಳಿದರೆ, ಇದು ಎಲ್ಲಾದರೂ chemical factory ಆಗಿದ್ದರೆ ನೂರಾರು ಜನರು ಸತ್ತಿರುತ್ತಿದ್ದರು. ನಾವು ಯುದ್ಧ ಕಾಲೇ ಶಾಸ್ತ್ರಭ್ಯಾಸ ಮಾಡುವುದಕ್ಕಿಂತ ಮೊದಲೇ ಇದನ್ನು ಮುನ್ನಚ್ಚರಿಕೆಯಾಗಿ ರಾಜ್ಯದಲ್ಲಿ ಯಾವ ಯಾವ ಕೈಗಾರಿಕಾ ಪ್ರದೇಶಗಳು ಇಲ್ಲ, ಅಂತಹ ಕಡೆಗಳಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಿ.

(ಮುಂದು.,)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(71)02–02–2021(12–20)ಎಂವಿ–ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**(ಪ್ರಶ್ನೆ ಸಂಖ್ಯೆ: 82)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ. ನನ್ನ ಪ್ರಶ್ನೆಗೆ, ರಾಜ್ಯ ಸರ್ಕಾರವು ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಸಂಘದ ಸದಸ್ಯರಿಗೆ ಸಾಲ ನೀಡುವ ಬಗ್ಗೆ ಮಾರ್ಗಸೂಚಿಗಳನ್ನು ನೀಡಿದ್ದಾರೆ. ಅದು ಸರಿ ಇದೆ. ಅದರ ಜೊತೆಗೆ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯರಿಗೆ ಸಾಲ ವಿತರಣೆ ಮಾಡುವಾಗ ಸರ್ಕಾರದ ಮಾರ್ಗಸೂಚಿಗಳನ್ನು ಪಾಲನೆ ಮಾಡದೆ ತಾರತಮ್ಯ ನೀತಿಯನ್ನು ಅನುಸರಿಸುತ್ತಿರುವುದರಿಂದ ಸದಸ್ಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಇಲ್ಲವೆಂದು ಅಧಿಕಾರಿಗಳು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ನಮ್ಮ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕುಮಡಳ್ಳಿ ಕೃಷಿ ಪತ್ತಿನ ಸಹಕಾರ ಸಂಘ. ಎಂ.ಶಿವರಾಂ ಕೃಷಿ ಪತ್ತಿನ ಸಹಕಾರ ಸಂಘ, ಕೆಂಬಾಳ ಡಿ.ಸಿ.ಸಿ. ಬ್ಯಾಂಕ್ ಇನ್ನು ಇತರ ಹಲವು ಕಡೆಗಳಲ್ಲಿ ಸಾಲವನ್ನು ಕೊಡುವುದರಲ್ಲಿ ತಾರತಮ್ಯವಿದೆ. ಅಲ್ಲಿನ ರೈತರು ಅರ್ಜಿಗಳನ್ನು ಕೊಟ್ಟಿದ್ದು, ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ಕೇಂದ್ರ ಸರ್ಕಾರ ಒಂದು ಆದೇಶವನ್ನು ನೀಡಿದ್ದು, ಆ ಮುಖಾಂತರ ಸಾಲ ಕೊಡುವುದರಲ್ಲಿ ತುಂಬಾ ತಾರತಮ್ಯವಾಗಿದೆ. ಮಾನ್ಯ ಸಚಿವರು ಡಿ.ಸಿ.ಸಿ. ಬ್ಯಾಂಕ್‌ನ ಎಂ.ಡಿ.ಯವರಿಗೆ ಆದೇಶ ಮಾಡಿ, ನನಗೆ ಒಂದು ಪತ್ರ ಒದಗಿಸಿದರೆ, ನಾನು ದಾಖಲೆಗಳನ್ನು ಒದಗಿಸುತ್ತೇನೆ. ಏಕೆಂದರೆ, ಅಲ್ಲಿ ತುಂಬಾ ತಾರತಮ್ಯವಿದೆ. ಆದರೆ, ತಾರತಮ್ಯವಿಲ್ಲವೆಂದು ಉತ್ತರವನ್ನು ಸರಳವಾಗಿ ನೀಡಿದ್ದಾರೆ. ನಾನು ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ಕೊಡುವುದಕ್ಕೆ ಸಿದ್ದನಿದ್ದೇನೆ. ಆದರೆ, ಅದನ್ನು ಕೊಟ್ಟು ಚರ್ಚೆ ಮಾಡುವುದಕ್ಕಿಂತ ಮಾನ್ಯ ಸಚಿವರು ಬ್ಯಾಂಕ್‌ನ ಎಂ.ಡಿ.ಯವರಿಗೆ ಒಂದು ಸ್ಪಷ್ಟವಾದ ಆದೇಶ ನೀಡಿ, ನನಗೂ ಅದರ ಒಂದು ಪ್ರತಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದರು, ಅದಕ್ಕೆ ಸರಿಯಾದ ಮಾಹಿತಿಯನ್ನು ದಾಖಲಾತಿ ಸಮೇತ ಒದಗಿಸುವಂತಹ ಕೆಲಸವನ್ನು ಮಾಡಿದ್ದೇವೆ. ಅವರ ಆರೋಪವೇನೆಂದರೆ, ಅಲ್ಲಿ ಸರಿಯಾಗಿ ಆಗಿಲ್ಲವೆಂದು ಹೇಳುತ್ತಿದ್ದಾರೆ. ಅವರು ಲಿಖಿತವಾಗಿ ದೂರನ್ನು ನೀಡಿದರೆ, ಅದನ್ನು ನಿಯಮ 64ರ ಅಡಿಯಲ್ಲಿ ವಿಚಾರಣೆ ಮಾಡುವುದಕ್ಕೆ ಸಹಕಾರ ಇಲಾಖೆಯಿಂದ ಆದೇಶ ಮಾಡಿ, ಇನ್ನು ಮುಂದೆ ಈ ರೀತಿ ಆಗದಂತೆ ಇರುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ. ಆದರೆ, ಮಾನ್ಯ ಸದಸ್ಯರು ಹೇಳಿರುವುದು 22393 ಫಲಾನುಭವಿಗಳಿಗೆ ಏನು 22.39 ಕೋಟಿ ರೂಪಾಯಿಗಳ ಸಾಲವನ್ನು ಕೇಳಿದ್ದಾರೆ, ಅದನ್ನು ನೀಡಿದ್ದೇವೆ. ಅವರು 22393 ಜನರ ಹೆಸರನ್ನು ಸಹ ಕೇಳಿದ್ದಾರೆ. ಆದರೆ, ಅಷ್ಟೂ ಹೆಸರನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು

ಮಾನ್ಯ ಸದಸ್ಯರಿಗೆ ಸಿ.ಡಿ.ಯನ್ನು ಒದಗಿಸಿದ್ದೇವೆ. ಈಗ ಯಾವ ಸೊಸೈಟಿಯ ಮೇಲೆ ಆರೋಪವಿದೆ, ಆ ಸೊಸೈಟಿಯ ಮಾಹಿತಿಯನ್ನು ಒದಗಿಸಿದರೆ, ತಕ್ಷಣ ವಿಚಾರಣೆ ಮಾಡುವುದಕ್ಕೆ ಆದೇಶ ಮಾಡುತ್ತೇವೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಆದೇಶಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಎಂ.ಡಿ.ಯವರಿಗೆ ಒಂದು ಪತ್ರ ಬರೆಯಬೇಕು. ನಾನು ಅದಕ್ಕೆ ಸಂಬಂಧಪಟ್ಟಂತಹ ದಾಖಲೆಗಳನ್ನು ಒದಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಅದನ್ನು ನಿಯಮ 64ರ ಅಡಿಯಲ್ಲಿ ವಿಚಾರಣೆ ಮಾಡಿಸುತ್ತೇನೆ. ಆ ರೀತಿ ಏನಾದರೂ ಅವ್ಯವಹಾರವಾಗಿದ್ದು ಅದರ ಬಗ್ಗೆ ದೂರು ನೀಡಿದರೆ, ನಾವು ತಕ್ಷಣ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ದೂರು ನೀಡಿ, ವಿಚಾರಣೆ ನಡೆಯುತ್ತಿರುವುದನ್ನು ನಿಲ್ಲಿಸಿ ಬಿಟ್ಟಿದ್ದಾರೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಆ ರೀತಿ ಯಾವುದೂ ಇಲ್ಲ. ಮಾನ್ಯ ಸದಸ್ಯರು ಅದು ಯಾವ ಬ್ಯಾಂಕ್ ಎಂದು ಹೇಳಲಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅದು ಅಮಾನತ್ ಕೋ–ಆಪರೇಟಿವ್ ಬ್ಯಾಂಕ್.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಬೇರೆ ಈಗ ಹೇಳುತ್ತಿರುವುದೇ ಬೇರೆ ಬ್ಯಾಂಕ್ ಬಗ್ಗೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅದರ ವಿಚಾರಣೆ ನಡೆಯುತ್ತಿರುವುದು ನಿಯಮ 64ರ ಅಡಿಯಲ್ಲಿ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಏನಾದರೂ ಮಾಹಿತಿ ಇದ್ದರೆ ನೀಡಲಿ. ಈಗ ಹಾಲು ಉತ್ಪಾದಕರ ಸಹಕಾರ ಸಂಘಗಳ ಬಗ್ಗೆ ಪ್ರಶ್ನೆ ಕೇಳುತ್ತಿದ್ದಾರೆ. ಅದರ ಬಗ್ಗೆ ಮಾಹಿತಿ ನೀಡುತ್ತಿದ್ದೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾತನಾಡುತ್ತೇನೆ. ಮಾನ್ಯ ಸಚಿವರು ನಿಯಮ 64ರ ಅಡಿಯಲ್ಲಿ ವಿಚಾರಣೆಗೆ ಹಾಕಿದ್ದಾರೆ. ಆದರೆ, ವೆಂಕಟೇಶ್ ಎನ್ನುವವರು ಇನ್ನು ಕೂಡ ಬಂದಿಲ್ಲ. ದಯವಿಟ್ಟು ಆ ಅಧಿಕಾರಿಯನ್ನು ಬದಲಾವಣೆ ಮಾಡಿ ಅಥವಾ ಮುಂದುವರೆಸಿ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಆಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 244**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಸಮಸ್ಯೆ ಏನೆಂದರೆ, ಬೀದರ್ ನಗರದಲ್ಲಿ ಸುಮಾರು ಐದು ಲಕ್ಷ ಜನಸಂಖ್ಯೆ ಇರುವಂತಹ ಒಂದು ಪಟ್ಟಣ. ಅಲ್ಲಿ 35 ವಾರ್ಡ್‌ಗಳಿವೆ. ಆ 35 ವಾರ್ಡ್‌ಗಳಿಗೆ ಸರ್ಕಾರದಿಂದ 673 ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆಯವರು ಏನು ಮಾಡುತ್ತಿದ್ದಾರೆಂದು ಮಾನ್ಯ ಸಚಿವರು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಶುದ್ಧಕುಡಿಯುವ ನೀರಿಗೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಜನರಿಗೆ ಕುಡಿಯುವ ನೀರನ್ನು ಪೂರೈಕೆ ಮಾಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.

ಎರಡನೆಯದಾಗಿ, 'ಅಮೃತ್' ಯೋಜನೆಯಡಿಯಲ್ಲಿ ನೂರಾರು ಕೋಟಿ ರೂಪಾಯಿ ಹಣ ಬಂದು ಒಳಚರಂಡಿ ಕಾಮಗಾರಿ ನಡೆದಿದೆ. ಆದರೆ, ಒಳಚರಂಡಿ ಕಾಮಗಾರಿ ಸರಿಯಾಗಿ ನಡೆಯುತ್ತಿಲ್ಲ. ಇದಕ್ಕೆ ಉದಾಹರಣೆ ಎಂದರೆ, ಇಲಾಖೆಯವರು ಕೊಟ್ಟಿರುವಂತಹ ಉತ್ತರ. ಒಳಚರಂಡಿ ಕಾಮಗಾರಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅನುಷ್ಠಾನಗೊಳಿಸುತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಯಡಿ ನಿರ್ಮಿಸಿರುವ 17 ಎಂ.ಎಲ್.ಡಿ. ಸಾಮರ್ಥ್ಯದ ಎಸ್.ಟಿ.ಪಿ.ಯನ್ನು ಚಾಲನೆಗೊಳಿಸಲಾಗಿದೆ. ಸುಮಾರು 24,594 ಗೃಹ ಸಂಪರ್ಕಗಳನ್ನು ನೀಡಲು ಗುರಿ ಹೊಂದಿದ್ದು, ಸುಮಾರು 18,111 ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕ ನೀಡಲಾಗಿದೆ. ಆದರೆ, ಇನ್ನು 6,483 ಮನೆಗಳಿಗೆ ಸಂಪರ್ಕವನ್ನೇ ಕೊಟ್ಟಿಲ್ಲ. ಆದುದರಿಂದ ಆ ತ್ಯಾಜ್ಯ ಎಲ್ಲಿಗೆ ಹೋಗುತ್ತಿದೆ? ಸಮರ್ಪಕವಾಗಿ ಕುಡಿಯುವ ನೀರನ್ನು ನೀಡುತ್ತಿಲ್ಲ ಮತ್ತು ಒಳಚರಂಡಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ 35 ವಾರ್ಡ್‌ಗಳಲ್ಲಿ 673 ಬೋರ್‌ವೆಲ್‌ಗಳಿವೆ. ಕಳೆದ ಮೂರ್ನಾಲ್ಕು ವರ್ಷದಲ್ಲಿ ಕುಡಿಯುವ ನೀರಿಗೋಸ್ಕರ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಆದರೆ, ಕುಡಿಯುವ ನೀರಿನ ಯೋಜನೆ ಸಂಪೂರ್ಣವಾಗಿ ವಿಫಲವಾಗಿರುವುದು ಮೇಲ್ನೋಟಕ್ಕೆ ಎದ್ದು ಕಾಣುತ್ತಿದೆಯೋ ಇಲ್ಲವೋ ಎಂದು ತಾವೇ ಹೇಳಿ. ಇದೇ ರೀತಿ ಕೆಲವು ದಿನಗಳ ಹಿಂದೆ ನಗರಾಭಿವೃದ್ಧಿ ಸಚಿವರಿಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಆಗ ನಗರಾಭಿವೃದ್ಧಿ ಸಚಿವರಾದ ಶ್ರೀ ಭೈರತಿ ಬಸವರಾಜುರವರು ಬೀದರ್ ಜಿಲ್ಲೆಗೆ ಬಂದು ಇಡೀ ದಿವಸ ಅಲ್ಲಿದ್ದರು. ಅವರು ಬಂದು ಅದನ್ನು ಪುನರುಜ್ಜೀವನ ಮಾಡುವಂತೆ ಆದೇಶ ಮಾಡಿ ಬಂದಿದ್ದಾರೆ. ಒಳಚರಂಡಿಯ ಶುದ್ಧೀಕರಣ ಘಟಕಕ್ಕೆ ಎರಡು ಎಸ್.ಟಿ.ಪಿ. ನಿರ್ಮಾಣವಾಗಿದೆ. ಆದರೆ, ಒಂದು ಯೋಜನೆ ಸಂಪೂರ್ಣ ವಿಫಲವಾಗಿದೆ. ಈಗ ಪ್ರಶ್ನೋತ್ತರ ಅವಧಿ ಎಂದು ನನಗೆ ಸಮಯದ ಇತಿಮಿತಿಯ ಅರಿವು ಇರುವುದರಿಂದ, ನಾನು ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ನಾನು ಹೇಳುತ್ತಿರುವುದು, ಒಳಚರಂಡಿ ಮತ್ತು ಕುಡಿಯುವ ನೀರಿನ ಯೋಜನೆ ಸಂಪೂರ್ಣವಾಗಿ ವಿಫಲವಾಗಿದೆ. ಅಲ್ಲಿನ ಜನರು ಕುಡಿಯುವ ನೀರಿಗಾಗಿ ಬಡಿದಾಡುತ್ತಿದ್ದಾರೆ. ಹಾಗಾಗಿ, ಪೌರಾಡಳಿತ ಮತ್ತು ನಗರಾಭಿವೃದ್ಧಿ ಸಚಿವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಬ್ಬರು ಜಂಟಿಯಾಗಿ ಬೀದರ್ ಜಿಲ್ಲೆಗೆ ಬಂದು ಅಥವಾ ಇಲ್ಲಿಯೇ ಇದಕ್ಕೆ ಸಂಬಂಧಪಟ್ಟಂತಹ ಎಲ್ಲಾ ಅಧಿಕಾರಿಗಳನ್ನು ಕರೆದು, ಒಂದು ಸಭೆ ಮಾಡಿ, ಈ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ಕೊಡಬೇಕು. ನನ್ನ ಈ ಪ್ರಶ್ನೆಯನ್ನು ನೋಡಿ ಸದಸ್ಯರಾದ ಮಾನ್ಯ ಅರುಣ ಶಹಾಪುರ ರವರು ಹೇಳುತ್ತಿದ್ದರು, ಬೀದರ್ ನಗರ ಎಂದರೆ, ಬಿದರಿ ನಗರ ಎಂದು ಬಹಳ ಗೌರವ ಇಟ್ಟುಕೊಂಡಿದ್ದೆವು. ಆದರೆ, ಅಲ್ಲಿ 673 ಬೋರ್‌ವೆಲ್‌ಗಳಿವೆ, ಆದುದರಿಂದ ಅದು ಬೋರ್‌ವೆಲ್ ನಗರಿಯಾಗಿದೆ ಎನ್ನುತ್ತಾರೆ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಇದನ್ನು ಸಮರ್ಪಕವಾಗಿ ಹ್ಯಾಂಡಲ್ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎನ್.ನಾಗರಾಜ್ (ಎಂಟಿಬಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಬೀದರ್ ನಗರದಲ್ಲಿ ಒಟ್ಟು 673 ಕೊಳವೆ ಬಾವಿಗಳಿವೆ. ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೊಳವೆ ಬಾವಿಗಳ ಸಂಖ್ಯೆ 639 ಮತ್ತು ಅವುಗಳಲ್ಲಿ ರಿಪೇರಿ ಆಗಿರುವಂತಹವು 34 ಕೊಳವೆ ಬಾವಿಗಳು. ಆದರೆ, ಬೀದರ್ ನಗರಸಭೆ ವ್ಯಾಪ್ತಿಗೆ ಕಾರಂಜಿ ಜಲಾಶಯದಿಂದ ಮತ್ತು ಕೊಳವೆ ಬಾವಿಗಳಿಂದ ಪ್ರತಿನಿತ್ಯ 100 ಎಲ್.ಪಿ.ಸಿ.ಡಿ.ಯಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿದೆ. ಅದರಲ್ಲಿ ಬಹಳ ಮುಖ್ಯವಾಗಿ ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಎಂದರೆ, ಚರಂಡಿ ನೀರು ಬಾವಿಗಳಿಗೆ ಹೋಗದ್ದಂತೆ, ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಉಪ ಪ್ರಶ್ನೆಯನ್ನು ಸಹ ಕೇಳಿದ್ದಾರೆ. ನೀರನ್ನು ಶುದ್ಧೀಕರಿಸಿ ಅದನ್ನು ಹೊರಬಿಡಲಾಗುತ್ತಿದೆ ಎಂದು ಪೌರಾಯುಕ್ತರು, ಬೀದರ್ ನಗರ ಸಭೆ ಇವರು ವರದಿ ಮಾಡಿರುತ್ತಾರೆ. ಯಾವುದೇ ಕೊಳಚೆ ನೀರು ಬಾವಿಗಳಿಗೆ ಸೇರುತ್ತಿಲ್ಲ. ಉತ್ಪತ್ತಿಯಾಗುತ್ತಿರುವ ಕೊಳಚೆ ನೀರನ್ನು, ಶುದ್ಧೀಕರಣ ಮಾಡಿ, ಅದನ್ನು ಹೊರಬಿಡಲಾಗುತ್ತಿದೆ. ನಾನು ಮತ್ತು ನಗರಾಭಿವೃದ್ಧಿ ಸಚಿವರಾದ ಶ್ರೀ ಭೈರತಿ ಬಸವರಾಜುರವರು ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಒಂದು ಸಭೆ ಮಾಡಿ, ಅಲ್ಲಿರುವಂತಹ ಹಲವಾರು ಸಮಸ್ಯೆಗಳ ಬಗ್ಗೆ, ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ ಉಲ್ಲೇಖವಾಗಿದೆ. ಅದನ್ನು ಸಭೆಯ ಮೂಲಕ ಚರ್ಚೆ ಮಾಡಿ, ಅಲ್ಲಿರುವಂತಹ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 243**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, 'ಕೊಡಗು ಜಿಲ್ಲೆಯಲ್ಲಿ ಬಿದ್ದಂತಹ ಅಕಾಲಿಕ ಮಳೆಯಿಂದ ಕಾಫಿ ಕೊಯ್ಲು ಸಾಕಷ್ಟು ಹಾಳಾಗಿರುವುದರಿಂದ, ಕಾಫಿ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ' ಎಂದು ಕೇಳಿದ್ದೇನೆ. ಅದಕ್ಕೆ ಅವರು ತಮ್ಮ ಗಮನಕ್ಕೆ ಬಂದಿದೆ ಎಂದು ತಿಳಿಸಿದ್ದಾರೆ. ನಷ್ಟದ ಅಂದಾಜಿನ ಸಂಪೂರ್ಣ ವಿವರವನ್ನು ಸಹ ನೀಡಿದ್ದಾರೆ. ಅಂದರೆ, 33631 ಹೆಕ್ಟೇರ್ ವಿಸ್ತೀರ್ಣದಲ್ಲಿ 391.70 ಕೋಟಿ ರೂಪಾಯಿಗಳನ್ನು ಅಂದಾಜಿಸಲಾಗಿದೆ ಎಂದು ಉತ್ತರ ನೀಡಿದ್ದಾರೆ. ಅದರ ಕೆಳಗಡೆ ಅದಕ್ಕೆ ಪರಿಹಾರವನ್ನು ಸಹ ಕೊಟ್ಟಿದ್ದಾರೆ. ಎನ್.ಡಿ.ಆರ್.ಎಫ್. ನಾರ್ಮ್ಸ್ ಪ್ರಕಾರ ಶೇಕಡಾ 33ರಂತೆ ಹಾನಿಗೆ ಪ್ರತಿ ಹೆಕ್ಟೇರ್‌ಗೆ ಹದಿನೆಂಟು ಸಾವಿರ ಪರಿಹಾರ ಧನ ನಿಗದಿಪಡಿಸಲಾಗಿರುತ್ತದೆ.

**(ಮುಂದು...)**

(72) 02.02.2021 12.30 LL-RN

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ಮುಂದುವರೆದಿದ್ದು...):–**

ಅಂದರೆ, ಪ್ರತಿ ಎಕರೆಗೆ 6 ಸಾವಿರ ರೂಪಾಯಿ ಬರುತ್ತದೆ. ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆ ತಮ್ಮ ಜಿಲ್ಲೆಗೆ ಸೇರಿದಂತೆ ಹೊಂದಿಕೊಂಡಿರುತ್ತದೆ. ಹಾಗಾಗಿ, ಈ ಬಗ್ಗೆ ತಮಗೂ ಸಹ ಗೊತ್ತಿರುತ್ತದೆ. ಬಹುಶಃ ಒಂದು ಎಕರೆ ಕಾಫಿ ಪ್ರದೇಶದಲ್ಲಿ ಅಂದಾಜು 30 ಚೀಲ ಕಾಫಿಯನ್ನು ಕೊಯ್ಯಬಹುದಾಗಿರುತ್ತದೆ. ಅದರಂತೆ, ಸದರಿ 30 ಚೀಲ ಕಾಫಿ ಬೆಳೆಯ ಈಗಿನ ಬೆಲೆ ಸುಮಾರು 90 ಸಾವಿರ ರೂಪಾಯಿ ಆಗುತ್ತದೆ. ಆದರೆ, ಸರ್ಕಾರ ಪ್ರತಿ ಎಕರೆಗೆ 6 ಸಾವಿರ ರೂಪಾಯಿ ಬೆಳೆ ನಷ್ಟ ಪರಿಹಾರ ಕೊಟ್ಟರೆ, ಯಾವ ರೈತರಿಗೂ ಸಹ ಇದರಿಂದ ಪ್ರಯೋಜನವಾಗುವುದಿಲ್ಲ. ಇವೊತ್ತಿನ ದಿವಸ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಕಾಫಿ ಬೆಳೆಗಾರರ ಸಮಸ್ಯೆಗೆ ಸರಿಯಾದ ಸ್ಪಂದನೆ ನೀಡುತ್ತಿರುವುದಿಲ್ಲ. ಇದು ನೇರವಾದ ಆರೋಪ ಕೂಡ ಕಾಫಿ ಬೆಳೆಗಾರರಲ್ಲಿ ಇದೆ. ಇವೊತ್ತಿನ ದಿವಸ ಕಾಫಿ ಬೆಳೆಗಾರರ ಪರಿಸ್ಥಿತಿ ಏನಾಗಿದೆಯೆಂದು ಯಾವುದೇ ಸರ್ಕಾರ ನೋಡುತ್ತಿಲ್ಲ. ಅಲ್ಲಿ ಕಾರ್ಮಿಕರ ಕೊರತೆ ಇದೆ ಹಾಗೂ ಗೊಬ್ಬರದ ಸಬ್ಸಿಡಿ ಹಣವನ್ನು ಸಹ ಕಡಿತಗೊಳಿಸಿದ್ದಾರೆ. ಈ ಮೊದಲು ಕೇಂದ್ರ ಸರ್ಕಾರದಿಂದ ಡ್ರೈಯಿಂಗ್ ಯಾರ್ಡ್‌ಗಳಿಗೆ ಮತ್ತು ಗೋದಾಮುಗಳಿಗೆ ಸಬ್ಸಿಡಿ ಕೊಡುತ್ತಿದ್ದರು. ಆ ಎಲ್ಲಾ ಸಬ್ಸಿಡಿಗಳನ್ನು ಇವೊತ್ತಿನ ದಿವಸ ನಿಲ್ಲಿಸಿರುತ್ತಾರೆ. ಆ ನಿಟ್ಟಿನಲ್ಲಿ ಕಾಫಿ ಬೆಳೆಗಾರರು ಏನು ಮಾಡಬೇಕೆಂದು ತಿಳಿಯದೇ ಆತಂಕಕ್ಕೊಳಗಾಗಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಕಳೆದ ತಿಂಗಳು ಬಂದಂತಹ ಮಳೆಯಿಂದಾಗಿ ಅಪಾರ ನಷ್ಟ ಆಗಿರುತ್ತದೆ. ಕಾಫಿ ಬೀಜಗಳು ಡ್ರೈಯಿಂಗ್ ಯಾರ್ಡ್‌ಗಳಿಂದ ಕೊಚ್ಚಿಕೊಂಡು ಹೋಗುವಂತಹ ಪರಿಸ್ಥಿತಿ ಕೂಡ ಬಂದಿರುತ್ತದೆ. ನಾನು ಚಿಕ್ಕಮಗಳೂರು ಜಿಲ್ಲೆಯ ಕೆಲವು ಕಾಫಿ ಡ್ರೈಯಿಂಗ್ ಯಾರ್ಡ್‌ಗಳಿಂದ ಕಾಫಿ ಬೀಜ ಕೊಚ್ಚಿಕೊಂಡು ಹೋಗುವುದನ್ನು ವಾಟ್ಸಾಪ್‌ನಲ್ಲಿ ನೋಡಿರುತ್ತೇನೆ. ಕಾಫಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳೆಗಾರರ ಸಹಾಯಕ್ಕೆ ಸರ್ಕಾರ ಬರುವುದಿಲ್ಲವೆಂದು ಹೇಳಿದರೆ, ಇದು ಯಾವ ನ್ಯಾಯ ಎಂದು ಕೂಡ ನಾವು ಕೇಳಬೇಕಾಗಿದೆ. ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಯ ಪ್ರತಿಯೊಂದು ಕಾಫಿ ಬೆಳೆಗಾರರು ಇವೊತ್ತಿನ ದಿವಸ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಆಗಲೀ ಅಥವಾ ರಾಜ್ಯ ಸರ್ಕಾರವಾಗಲಿ ಏತಕ್ಕೆ ಕಾಫಿ ಬೆಳೆಗಾರರ ಸಮಸ್ಯೆಗೆ ಸ್ಪಂದನೆ ನೀಡುವುದಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಎರಡನೆಯದಾಗಿ, ಕಾಫಿ ಬೆಳೆ ಬಹು ವಾರ್ಷಿಕ ಬೆಳೆಯಾಗಿದೆ. ಹಾಗಾಗಿ, ಕಾಫಿ ಬೆಳೆಗಾರರಿಗೆ ನೀಡುವ 10 ಹೆಚ್.ಪಿ. ವರೆಗಿನ ವಿದ್ಯುತ್ ಶುಲ್ಕವನ್ನು ಮನ್ನಾ ಮಾಡಬೇಕೆಂದು ಅನೇಕ ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಅದನ್ನು ಕೂಡ ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ನಮಗೆ ಕೇವಲ ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಈ ಮೂರು ತಿಂಗಳಿನಲ್ಲಿ ಮಾತ್ರ ಕಾಫಿ ಬೆಳೆಗೆ sprinklers ಅವಕಾಶ ಇದೆ. ಆ 3 ತಿಂಗಳಾದರೂ 10 ಹೆಚ್.ಪಿ.ಯವರೆಗೆ ಉಚಿತ ವಿದ್ಯುತ್ ಅನ್ನು ಕಾಫಿ ಬೆಳೆಗಾರರಿಗೆ ನೀಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಜೊತೆಗೆ, ಕೇಂದ್ರ ಸರ್ಕಾರದಿಂದ ಕಾಫಿ ಬೋರ್ಡ್ ಎಂದು ಇರುವಾಗ ಕಾಫಿ ಬೆಳೆಗಾರರ ವಿದ್ಯಾರ್ಥಿ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಕೂಡ ಕೊಡುತ್ತಿದ್ದರು. ಅದರಂತೆ, ಪ್ರತಿ ವರ್ಷ ನಮ್ಮ ಕೊಡಗು ಜಿಲ್ಲೆಗೆ ವಿದ್ಯಾರ್ಥಿ ವೇತನಕ್ಕಾಗಿ ಸುಮಾರು ಒಂದರಿಂದ ಒಂದೂವರೆ ಕೋಟಿಯಷ್ಟು ರೂಪಾಯಿ ಹಣ ಕಾಫಿ ಬೆಳೆಗಾರರ ಮಕ್ಕಳು ಓದುವುದಕ್ಕಾಗಿ ಬರುತ್ತಿತ್ತು. ಅದನ್ನು ಕೂಡ ಇವೊತ್ತಿನ ದಿವಸ ನಿಲ್ಲಿಸಿಬಿಟ್ಟಿದ್ದಾರೆ. ಅದರಿಂದಾಗಿ, ಕಾಫಿ ಬೆಳೆಗಾರರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅವರಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರ ನೇರವಾದ ಹೊಣೆಯನ್ನು ಹೊರಬೇಕಾಗುತ್ತದೆ. ಹಾಗಾಗಿ, ಮುಂದಿನ ಆಯವ್ಯಯದಲ್ಲಿ ಕಾಫಿ ಬೆಳೆಗಾರರಿಗೆ ಅನುಕೂಲವಾದ ಒಂದು ಉತ್ತಮವಾದ ಬಜೆಟ್ ಅನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ನಾನು ಕೂಡ ಆ ಭಾಗದಿಂದ ಬಂದಿರುವವನಾಗಿರುವುದರಿಂದ, ಇದು ಬಹಳ ಗಂಭೀರವಾದ ವಿಚಾರವಾಗಿದ್ದು, ಅತಿಯಾದ ಮಳೆಯಿಂದಾಗಿ ಕಾಫಿ ಬೆಳೆ ಭಾರೀ ಹಾನಿಗೊಳಗಾಗಿದೆ. ಹಾಗಾಗಿ, ಶ್ರೀಮತಿ ವೀಣಾ ಅಚ್ಚಯ್ಯನವರು ಪ್ರಸ್ತಾಪಿಸಿರುವ ವಿಚಾರವನ್ನು ತಾವು ಗಂಭೀರವಾಗಿ ಪರಿಗಣಿಸಿ, ಅದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ನಾನು ಕೂಡ ಸಲಹೆ ಮಾಡುತ್ತೇನೆ.

**ಶ್ರೀ ಆರ್. ಶಂಕರ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಮತ್ತು ತಾವು ಹೇಳಿರುವ ಹಾಗೆ ರಾಜ್ಯದಲ್ಲಿ ಕೇವಲ ಕಾಫಿ ಬೆಳೆ ಮಾತ್ರವಲ್ಲದೇ, ಎಲ್ಲಾ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ. ಅತಿವೃಷ್ಟಿ ಮತ್ತು ಅನಾವೃಷ್ಟಿಗಳ ಮಧ್ಯೆ ರೈತ ಸುಧಾರಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಈಗಾಗಲೇ ಕಾಫಿ ಬೆಳೆಗಾರರಿಗೆ ಯಾವ ಪರಿಹಾರ ನೀಡಬೇಕೆಂದು ಚರ್ಚಿಸಿ, ನಮ್ಮ ಇಲಾಖೆ ವತಿಯಿಂದ ಸುಮಾರು 10 ಹೆಕ್ಟೇರ್‌ವರೆಗಿನ ಸಣ್ಣ ರೈತರಿಗೆ ಸುಮಾರು ಶೇಕಡ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

40 ರಷ್ಟು ಆರ್ಥಿಕ ನೆರವನ್ನು ತೋಟ ಮರುಸ್ಥಾಪನೆ, ನೀರು ಕೊಯ್ಲು ಘಟಕ ಹಾಗೂ ಪರಿಸರ ಸ್ನೇಹಿ ಕಾಫಿ ಪ್ರಮಾಣ ಪತ್ರವನ್ನು ಶೇಕಡ 50ರಷ್ಟು ಮತ್ತು ಕಾಫಿ ಬೆಳೆಗಾರರ ಗುಂಪು/ಸ್ವಯಂ ಸೇವಕ ಸಂಘಗಳು/ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ. ಕಾಫಿಗೆ 4 ರೂಪಾಯಿಯಂತೆ ಪ್ರೋತ್ಸಾಹಧನ ನೀಡಲಾಗಿರುತ್ತದೆ. ಇದರ ಜೊತೆಗೆ, ತಾವುಗಳು ಹೇಳಿರುವ ನಿಟ್ಟಿನಲ್ಲಿ ಈಗಾಗಲೇ ನಾನು ಇದೇ ತಿಂಗಳು 6ನೇ ತಾರೀಖು, ರಾಜ್ಯದಲ್ಲಿರುವ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯಲ್ಲಿರುವ ಎಲ್ಲಾ ಅಧಿಕಾರಿಗಳನ್ನು ಮತ್ತು ಒಂದು ಕಡೆ ಪ್ರಗತಿಪರ ರೈತರನ್ನು, ಮತ್ತೊಂದು ಕಡೆ ಲುಕ್ಸಾನ ಆಗಿರುವಂತಹ ರೈತರು ಒಳಗೊಂಡಂತೆ ಒಂದು ಸಭೆ ನಡೆಸಿ, ರೈತ ತನ್ನ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರ ಯಾವ ರೀತಿ ಸಹಕಾರ ಮಾಡಬೇಕೆಂಬ ಬಗ್ಗೆ ಸಲಹೆ ಸೂಚನೆಗಳನ್ನು ಪಡೆಯುತ್ತೇವೆ. ಅಧಿವೇಶನ ಮುಗಿದ ಮಾರನೆಯ ದಿವಸ 6ನೇ ತಾರೀಖು ರಾಜ್ಯವ್ಯಾಪಿ ಪ್ರವಾಸ ಮಾಡಿ, ಎಲ್ಲಾ ನೌಕರರು ಮತ್ತು ಬೆಳೆಗಾರರನ್ನು ಕರೆಯಿಸಿ ಸಲಹೆಗಳನ್ನು ತೆಗೆದುಕೊಂಡು ಈ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಯಾವ್ಯಾವ ನಿಟ್ಟಿನಲ್ಲಿ... ನಾವು ನಾಲ್ಕು ಗೋಡೆಗಳ ಮಧ್ಯೆ ಕೆಲಸ ಮಾಡುವುದನ್ನು ಬಿಟ್ಟು... ನಾನು ಕೂಡ ಈಗಾಗಲೇ ಸಿಕ್ಕಂತಹ ಸಮಯದಲ್ಲಿ ಹಲವಾರು ಬೆಳೆಗಳ ತೋಟಕ್ಕೆ ಅಂದರೆ, ತೆಂಗು ಬೆಳೆ ಇರಬಹುದು ಅಥವಾ ರೇಷ್ಮೆ ಬೆಳೆ ಇರಬಹುದು ಹಾನಿಗೊಳಗಾದ ಬೆಳೆಗಳನ್ನು ಮತ್ತು ಸಂಸ್ಕರಣಾ ಕೇಂದ್ರಗಳಿಗೆ ಸಹ ನಾನು ಭೇಟಿ ನೀಡಿ ಸಮಗ್ರವಾಗಿ ತನಿಖೆ ಮಾಡುತ್ತಿದ್ದೇನೆ. ಹಾಗಾಗಿ, ಸದರಿ ದಿನದಂದು ತಾವು ಕೂಡ ಬಂದು ಸಭೆಯಲ್ಲಿ ಭಾಗವಹಿಸಿ, ಸಲಹೆ–ಸೂಚನೆಗಳನ್ನು ಹೆಚ್ಚಾಗಿ ಕೊಟ್ಟರೆ ಅದನ್ನು ಮುಂದಿನ ಬಜೆಟ್‌ನಲ್ಲಿ ಸೇರಿಸಿಕೊಳ್ಳುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 235**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗದೆ. ಕರ್ನಾಟಕ ರಾಜ್ಯದಲ್ಲಿ ಡಾ: ಎಂ.ಹೆಚ್. ಮರೀಗೌಡರವರು ತೋಟಗಾರಿಕೆ ಇಲಾಖೆಯನ್ನು ಹುಟ್ಟಿ ಹಾಕಿದರು. ಈ ರಾಜ್ಯದ ಎಲ್ಲಾ ನಗರ, ಜಿಲ್ಲೆ, ತಾಲ್ಲೂಕು ಕೇಂದ್ರಗಳಲ್ಲಿ ಬಹಳ ಬೆಲೆ ಬಾಳುವಂತಹ ತೋಟಗಾರಿಕೆಗಳನ್ನೇ ಮಾಡುವುದರ ಮುಖೇನ ಒಂದು ತೋಟಗಾರಿಕೆ ಇಲಾಖೆಯನ್ನು ನಿರ್ಮಾಣ ಮಾಡಿದ್ದಾರೆ. ಅವರ ಕಾಲಕ್ಕೆ 6249 ಹುದ್ದೆಗಳು ತೋಟಗಾರಿಕೆ ಇಲಾಖೆಯಲ್ಲಿ ಮಂಜೂರಾಗಿದ್ದವು. ಆದರೆ, ಇವೊತ್ತಿನ ದಿವಸ ಆ ಇಲಾಖೆಯಲ್ಲಿ ಕೇವಲ 4 ಸಾವಿರಕ್ಕೂ ಕಡಿಮೆ ಜನ ನೌಕರರಿದ್ದಾರೆ. ಹೆಚ್ಚು ಕಡಿಮೆ 3500 ನೌಕರರಿದ್ದಾರೆ. ಇನ್ನೂ 2500 ನೌಕರರು ಇರುವುದಿಲ್ಲ. ಈ ಇಲಾಖೆ ಜೊತೆಗೆ 57,44,860 ಎಕರೆ ತೋಟಗಾರಿಕೆ ಬೆಳೆ ರಾಜ್ಯದಲ್ಲಿದೆ. ಕೃಷಿಗೆ ಪರ್ಯಾಯವಾಗಿ ತೋಟಗಾರಿಕೆ ಬೆಳೆಯನ್ನು ಬೆಳೆಯಬೇಕು ಎನ್ನುವ ಸವಾಲನ್ನು ರೈತರಿಗೆ ಕೊಡಲಾಗಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಇದಕ್ಕಾಗಿ ನೂರಾರು ಕೋಟಿ ರೂಪಾಯಿಗಳ ಅನುದಾನ ಕೊಡುತ್ತಿದೆ. ಇದಕ್ಕೆ ಅನುಷ್ಠಾನ ಕೊಡುವವರು ಯಾರು ಮತ್ತು ಇದಕ್ಕೆ ಸಿಬ್ಬಂದಿಗಳನ್ನು ಎಲ್ಲಿಂದ ತರುತ್ತಾರೆ? ನಮ್ಮ ಮೈಸೂರು ಜಿಲ್ಲೆಯಲ್ಲಿ ಒಟ್ಟು 9 ತಾಲ್ಲೂಕುಗಳು ಇವೆ. ಮಂಜೂರಾದ ಹುದ್ದೆಗಳು 192, ಇರುವುದು ಕೇವಲ 83, ಖಾಲಿ ಇರುವುದು 109. ಮಂಡ್ಯ ಜಿಲ್ಲೆಯಲ್ಲಿ 8 ತಾಲ್ಲೂಕುಗಳಿವೆ. ಒಟ್ಟು ಮಂಜೂರಾದ ಹುದ್ದೆಗಳು 166. ಕೆ.ಆರ್.ಎಸ್. ಸೇರಿ ಮಂಡ್ಯ ಜಿಲ್ಲೆಯಲ್ಲಿ 8 ತಾಲ್ಲೂಕುಗಳಿವೆ. ಕೆ.ಆರ್.ಎಸ್.ಗೆ ದೊಡ್ಡ ಜವಾಬ್ದಾರಿ ಇದೆ. ಆ ಜಿಲ್ಲೆಯಲ್ಲಿ 162 ಹುದ್ದೆಗಳು ಖಾಲಿ ಇದ್ದು, 64 ಜನ ಸಿಬ್ಬಂದಿಗಳು ಮಾತ್ರ ಇರುತ್ತಾರೆ. ಒಟ್ಟಾರೆ ಇಡೀ ರಾಜ್ಯದಲ್ಲಿ ಇವೊತ್ತಿನ ದಿವಸ ತೋಟಗಾರಿಕೆ ಇಲಾಖೆಯಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ನೌಕರಿರುವುದಿಲ್ಲ. ಈ ತೋಟಗಾರಿಕೆ ಇಲಾಖೆಯನ್ನು ವಿಸ್ತಾರ ಮಾಡುವುದು ಹೇಗೆ? ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಸುಮಾರು 800 ಎಕರೆ ತೋಟಗಾರಿಕೆ ಪ್ರದೇಶವಿದೆ. ಅದನ್ನು ಸರಿಯಾಗಿ ನೋಡಿಕೊಳ್ಳುವವರು ಇಲ್ಲ. ಆ ಬಗ್ಗೆ ಕೇಳುವವರೇ ಇರುವುದಿಲ್ಲ. ಈ ರೀತಿಯಾದರೆ ಇರುವಂತಹ ಮೂರು ಮತ್ತು ಸಿಬ್ಬಂದಿಯಲ್ಲಿ ಹೇಗೆ ಈ ಇಲಾಖೆಯನ್ನು ನಿರ್ವಹಣೆ ಮಾಡಬೇಕು. ಪ್ರಸ್ತುತ ಇಲಾಖೆಯಲ್ಲಿ ಇರುವಂತಹ ಹುದ್ದೆಗಳನ್ನು ಹೆಚ್ಚು ಮಾಡಬೇಕಾಗಿತ್ತು. ತೋಟಗಾರಿಕೆ ಇಲಾಖೆಯಲ್ಲಿ ಹುದ್ದೆಗಳನ್ನು ಹೆಚ್ಚು ಮಾಡುವುದು ಒಂದು ಕಡೆಯಾದರೆ, ಯಾವುದೋ ಓಬಿರಾಯನ ಕಾಲದ ಹುದ್ದೆಗಳಿದ್ದು, ಅದರಲ್ಲಿಯೇ ಶೇಕಡ 40 ಭಾಗ ಖಾಲಿ ಇವೆ. ಇದರಿಂದಾಗಿ, ತೋಟಗಾರಿಕೆ ಇಲಾಖೆಯನ್ನು ನೋಡಿಕೊಳ್ಳುವವರು ಯಾರು, ರೈತರಿಗೆ ಅಡ್ವೈಸ್ ಕೊಡುವವರು ಯಾರು, ಕೇಂದ್ರ ಸರ್ಕಾರದ ಮಿಷನ್ ಯೋಜನೆಯ ಜಾರಿ ಕೊಡುವವರು ಯಾರು ಹಾಗೂ ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಗೆ ಬರುವುದು ಹೇಗೆ. ಅಲ್ಲದೇ, ಸರ್ಕಾರದಿಂದ ತೋಟಗಾರಿಕೆ ಇಲಾಖೆಗೆ ಪ್ರತಿನಿತ್ಯ ಒಂದಲ್ಲಾ ಒಂದು ಕಾರ್ಯಕ್ರಮ ಬರುತ್ತಿದ್ದು, ಅವುಗಳನ್ನು ನಿರ್ವಹಣೆ ಮಾಡುವವರು ಯಾರು? ಆದುದರಿಂದ, ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತಾರೆ; ಎಷ್ಟು ದಿವಸದಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತುಂಬುತ್ತಾರೆ ಮತ್ತು ಯಾವಾಗ ತೋಟಗಾರಿಕೆ ಇಲಾಖೆಗೆ ಜೀವ ನೀಡುತ್ತಾರೆಂಬ ಬಗ್ಗೆ ಮಾನ್ಯ ಸಚಿವರು ದಯಮಾಡಿ ತಿಳಿಸಬೇಕು.

**ಶ್ರೀ ಆರ್. ಶಂಕರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸರಿಯಾದ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದಾರೆ. ಈ ರಾಜ್ಯದಲ್ಲಿ ಕೋವಿಡ್–19 ಎನ್ನುವಂಥದ್ದು ಇದ್ದುದರಿಂದ 2020–21ನೇ ಸಾಲಿನಲ್ಲಿ ನಾವು ನೇರ ನೇಮಕಾತಿ ಮತ್ತು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುತ್ತದೆ.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ತೋಟದೊಳಗೆ ಹೋದರೆ ಕೋವಿಡ್–19 ರೋಗ ಬರುವುದಿಲ್ಲ.

**ಶ್ರೀ ಆರ್. ಶಂಕರ್:–** ಮಾನ್ಯ ಸಭಾಪತಿಯವರೇ, ಇದ್ದಂತಹ ಪರಿಸ್ಥಿತಿಯ ಬಗ್ಗೆ ನಾನು ಹೇಳುತ್ತಿದ್ದೇನೆ. ಕೋವಿಡ್–19 ರೋಗ ಬರುವುದಿಲ್ಲವೆಂದು ಹೇಳಿದರೂ ಸಹ ಸಾಕಷ್ಟು ಜನ ಆ ರೋಗದಿಂದ ಸತ್ತಿರುತ್ತಾರೆ. ಆ ಬಗ್ಗೆ ತಮಗೆಲ್ಲಾ ಗೊತ್ತಿರುತ್ತದೆ. ಆ ರೋಗದಿಂದ ಅನೇಕ ಗಣ್ಯರನ್ನು ಸಹ ನಾವು ಕಳೆದುಕೊಂಡಿರುತ್ತೇವೆ. ಹಾಗಾಗಿ, ಕೋವಿಡ್–19 ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆ ಸಂದರ್ಭದಲ್ಲಿ ನಾಗರಿಕರು ಮನೆ ಬಿಟ್ಟು ಹೊರಗೆ ಬಾರದಂತಹ ಪರಿಸ್ಥಿತಿಯನ್ನು ನಾವೆಲ್ಲರೂ ಸಹ ನೋಡಿರುತ್ತೇವೆ. ಆದರೆ, ಈಗ ಅದು ತಿಳಿಯಾಗಿದೆ. ಹಾಗಾಗಿ, ಈ ವಿಷಯದಲ್ಲಿ ನಾವು ಹೇಳುತ್ತಿರುವುದು ಸತ್ಯ. ಈ ಬಗ್ಗೆ ಈಗಾಗಲೇ ಆರ್ಥಿಕ ಇಲಾಖೆಗೆ ಸಮಗ್ರವಾದ ವರದಿಯನ್ನು ಕೊಟ್ಟಿರುತ್ತೇವೆ. ಆದಷ್ಟು ಬೇಗ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆಯವರು ಯಾವುದೇ ನೇಮಕಾತಿಗೆ ಹಣ ಕೊಡುವುದೇ ಇಲ್ಲ. ಏಕೆಂದರೆ, ಈಗಿರುವಂತಹ ಹಣಕಾಸು ಪರಿಸ್ಥಿತಿಯಲ್ಲಿ ಹಣ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಮಾನ್ಯ ಶ್ರೀಕಂಠೇಗೌಡರು ಹೇಳಿದ ರೀತಿ, ತೋಟಗಾರಿಕೆ ಇಲಾಖೆಯಲ್ಲಿ ಶೇಕಡ 40 ರಿಂದ 50 ಹುದ್ದೆಗಳು ಕಡಿಮೆ ಇವೆ. ಅದಕ್ಕೆ alternative ಇರುವುದಿಲ್ಲ. ಈಗಾಗಲೇ ಇರುವಂತಹ ಹುದ್ದೆಗಳಲ್ಲಿ ಎಷ್ಟೋ ಜನ ನೌಕರರು ಮರಣ ಹೊಂದಿದ್ದು, ಆ ಹುದ್ದೆಗಳನ್ನು ಸಹ ಭರ್ತಿ ಮಾಡಿರುವುದಿಲ್ಲ.

(...ಮುಂದುವರೆದಿದೆ)

(73) 02.02.2021 12.40 ವೈಎಲ್–ಬಿಎನ್ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಲ್ಲಂ ವೀರಭದ್ರಪ್ಪ (ಮುಂದು):–**

The only solution, if you permit me, I will tell. ಅವರು auction ಮಾಡಲಿ. ಕೆಲವೊಂದನ್ನು ಮಾತ್ರ ಸಂಶೋಧನೆಗೆ ಇಟ್ಟುಕೊಳ್ಳಿ. ಎಲ್ಲಿ ಆಗುವುದಿಲ್ಲವೋ ಅಲ್ಲಿ auction ಮಾಡಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, auction ಎಂದರೆ, ಒಳ್ಳೆಯ ಕಥೆ ಆಯಿತು. ಇಲ್ಲಿ ದೇಶವನ್ನೇ ಮಾರುತ್ತಿದ್ದಾರೆ. ಇದನ್ನು ಏತಕ್ಕೆ ಮಾರುವುದಕ್ಕೆ ಹೋಗುತ್ತಾರೆ? ಆದಾಯ ಬರುತ್ತದೆ ಎಂದು ಆರ್ಥಿಕ ಇಲಾಖೆಯಿಂದ ದುಡ್ಡು ತರಿಸಿಕೊಳ್ಳುತ್ತಾರೆ. ನಾವು 'ಎಸ್' ಎಂದು ಹೇಳಿದರೆ ಸಾಕು.

**ಶ್ರೀ ಆರ್.ಶಂಕರ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಲಿಲ್ಲವೆಂದರೂ ನಾವು ಮಾಡುವ ಕೆಲಸವನ್ನು ಮಾಡುತ್ತೇವೆ. ಏಕೆಂದರೆ ಇದು ರೈತರ ಸಮಸ್ಯೆಯಾಗಿದೆ. ಖಂಡಿತವಾಗಿ ಅವರ ಸಲಹೆಯನ್ನು ಸಹ ಪಡೆದುಕೊಂಡು ಆದಷ್ಟು ಬೇಗ ಮಾಡುತ್ತೇವೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾರುವುದಕ್ಕೆ ಹೋಗುವುದು ಬೇಡ.

**ಶ್ರೀ ಆರ್.ಶಂಕರ್:–** ಮಾನ್ಯ ಸಭಾಪತಿಯವರೇ, ಮಾರುವುದಿಲ್ಲವೆಂದು ನಾನೇ ಹೇಳುತ್ತಿದ್ದೇನೆ ಅಲ್ಲವೇ?

**ಉಪ ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರವರೆ ತಮ್ಮ ಮಾತು ಮುಗಿಯಿತೇ? ತಮ್ಮ ಮಾತು ಮುಗಿದಿಲ್ಲವೆಂದರೆ, ನೀವು ಎದ್ದು ನಿಂತು ಮಾತನಾಡಿ. ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆಗೆ ಅವಕಾಶ ಇರುವುದಿಲ್ಲ. ಈ ಪ್ರಶ್ನೆಯನ್ನು ಕೇಳಿರುವುದು ತಾವು. ಇದರಲ್ಲಿ ನಿಮ್ಮ ವಿಚಾರವೇನಾದರೂ ಇದ್ದರೆ ಕೇಳಿ. ಇಲ್ಲದಿದ್ದರೆ ನಾನು ಮುಂದಿನ ಪ್ರಶ್ನೆಗೆ ಅವಕಾಶ ಕಲ್ಪಿಸಿಕೊಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮೊನ್ನೆ ತಾನೇ ಇಲಾಖೆಯ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

**Sri ALLUM VEERABHADRAPPA:-** It is not sale. ಐದು ವರ್ಷಕ್ಕೆ it is lease-cum-auction. ಆಗ Department's maintenance ಇರುವುದಿಲ್ಲ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮೊನ್ನೆ ತಾನೇ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದು, ನಾವು ಹೆಚ್ಚು ಒತ್ತಡವನ್ನು ಹೇರುವುದಿಲ್ಲ. ಆದರೆ, ಇದರ ಕಡೆ ವೈಯಕ್ತಿಕ ಗಮನಹರಿಸಿ, ಶೇಕಡ 40 ರಷ್ಟು ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿ. ಮಾನ್ಯ ಸಚಿವರು ಹಣಕಾಸು ಇಲಾಖೆಯ ವತಿಯಿಂದಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳಿಂದಾಗಲಿ ಯಾರ ಹತ್ತಿರವಾದರೂ ಸರಿ, ಕೂಡಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ, ತೋಟಗಾರಿಕೆ ಇಲಾಖೆಗೆ ಜೀವ ತುಂಬುವ ಕೆಲಸ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಶಂಕರ್:-** ಈಗಾಗಲೇ ನಾನು ತಿಳಿಸಿರುವ ಹಾಗೆ, 6ನೇ ತಾರೀಖಿನಂದು ಸಭೆ ಹಮ್ಮಿಕೊಂಡಿದ್ದೇನೆ. ಆ ವೇದಿಕೆಗೆ ಅವರು ಸಹ ಆಗಮಿಸಿ, ಅವರ ಸಲಹೆ-ಸೂಚನೆಗಳನ್ನು ನೀಡಬಹುದು. ಬಜೆಟ್‌ನಲ್ಲಿ ಏನೇನು ಕಾರ್ಯಗತ ಮಾಡಬೇಕೆಂಬುದರ ಕಡೆ ಹೆಚ್ಚಿನ ಪ್ರಯತ್ನ ಮಾಡಿ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂಥ ಕೆಲಸ ಮಾಡುತ್ತೇನೆ. ಜೊತೆಗೆ ನಾನು ಸಹ ರೈತರ ಪರವಾಗಿ ಕೆಲಸ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಶ್ರೀಕಂಠೇಗೌಡರು ಕೇಳಿರುವ ಪ್ರಶ್ನೆಗೆ ಹಾಗೂ ಅದಕ್ಕೆ ಸರ್ಕಾರ ನೀಡಿರುವ ಉತ್ತರವನ್ನು ನೋಡಿದ್ದಾಗ, ಬಹುಶಃ ನಮ್ಮ ಸರ್ಕಾರಗಳ ಆಡಳಿತ ಮತ್ತು ಅಭಿವೃದ್ಧಿಯನ್ನು ಬಿಂಬಿಸುವಂಥದ್ದಾಗಿದೆ. ಇದು ತೋಟಗಾರಿಕೆ ಇಲಾಖೆಯ ಪ್ರಶ್ನೆ ಒಂದೇ ಅಲ್ಲ. ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಮಂಜೂರಾದ ಹುದ್ದೆಗಳು 6549, ಖಾಲಿ ಹುದ್ದೆಗಳು 2446, ಚಾಲ್ತಿ ಹುದ್ದೆಗಳು 3803. ಈ 3803 ಚಾಲ್ತಿ ಹುದ್ದೆಗಳಲ್ಲಿ ಸತ್ತವರು ಎಷ್ಟು, ನಿವೃತ್ತಿ ಹೊಂದಿದವರು ಎಷ್ಟು ಎಂಬುವುದರ ಮಾಹಿತಿ ಇಲ್ಲ. ಲೆಕ್ಕವನ್ನು ತೆಗೆದುಕೊಂಡು ನೋಡಿದರೆ ಶೇ. 55 ರಿಂದ 60 ರಷ್ಟು ಅಧಿಕಾರಿ/ನೌಕರರ ಖಾಲಿ ಹುದ್ದೆಗಳಿವೆ. ಇದು ಕೇವಲ ತೋಟಗಾರಿಕೆ ಇಲಾಖೆಯ ಪ್ರಶ್ನೆಯಾಗಿಲ್ಲ. ಈ ಪ್ರಶ್ನೆ ಮತ್ತು ಉತ್ತರವು ಇಡೀ ರಾಜ್ಯದ ಆಡಳಿತ ಮತ್ತು ಅಭಿವೃದ್ಧಿಯನ್ನು ಬಿಂಬಿಸುವುದರ ಜೊತೆಗೆ ಬಹಳ ನೋವಿನ ಸಂಗತಿಯಾಗಿದೆ. ನಮ್ಮ ಉತ್ತರ ಕರ್ನಾಟಕ ಮತ್ತು ವಿಶೇಷವಾಗಿ, ಹೈದ್ರಾಬಾದ್-ಕರ್ನಾಟಕ ಭಾಗದ ವಿಚಾರಕ್ಕೆ ಬಂದು ನೋಡಿದರೆ ಗೊತ್ತಾಗುತ್ತದೆ. ಕಲಬುರ್ಗಿಯಲ್ಲಿ ಮಂಜೂರಾದ ಹುದ್ದೆಗಳು 22, ಖಾಲಿ ಹುದ್ದೆಗಳು 15. ಯಾದಗಿರಿಯಲ್ಲಿ ಮಂಜೂರಾದ ಹುದ್ದೆಗಳು 44, ಖಾಲಿ ಹುದ್ದೆಗಳು 32. ಮಾನ್ಯ ಅಲ್ಲಂ ವೀರಭದ್ರಪ್ಪನವರೆ, ಇದು ಆರ್ಟಿಕಲ್ 371ಜೆ ಅಡಿ ಬರುತ್ತದೆ. ಈ ರಾಜ್ಯದ ಹಲವಾರು ನಾಯಕರು ಆರ್ಟಿಕಲ್ 371ಜೆ ಗಾಗಿ ಹಲವಾರು ವರ್ಷಗಳ ಕಾಲ ಹೋರಾಟ ಮಾಡಿದ, ಆರ್ಟಿಕಲ್ 371ಜೆ ಏನಾಯಿತು? ಇವತ್ತಿನ ದಿವಸ ಏತಕ್ಕಾಗಿ ಹುದ್ದೆಗಳು ಖಾಲಿ ಇವೆ? ಎಲ್ಲಾ ಯೂನಿವರ್ಸಿಟಿಗಳು ಸೇರಿದ ಹಾಗೆ ಬಹಳ elaborate ಆಗಿ ಇರತಕ್ಕಂಥ ಆರ್ಟಿಕಲ್ 371ಜೆ, why is it stopped? ಇಲ್ಲಿಯವರೆಗೂ ಏತಕ್ಕೆ ಫಲಕಾರಿಯಾಗಿಲ್ಲ? ಅದೇ ರೀತಿ ಬೀದರ್ ಜಿಲ್ಲೆಯಲ್ಲಿ ಮಂಜೂರಾತಿ ಹುದ್ದೆಗಳು 56, ಖಾಲಿ ಹುದ್ದೆಗಳು 54. ಕೊಪ್ಪಳ ಜಿಲ್ಲೆಯಲ್ಲಿ ಮಂಜೂರಾತಿ ಹುದ್ದೆಗಳು 22, ಖಾಲಿ ಹುದ್ದೆಗಳು 14. ಬಳ್ಳಾರಿ ಜಿಲ್ಲೆಯಲ್ಲಿ ಮಂಜೂರಾತಿ ಹುದ್ದೆಗಳು 23, ಖಾಲಿ ಹುದ್ದೆಗಳು 17. ಇದು ಉತ್ತರ ಕರ್ನಾಟಕ ಭಾಗದ ಇಲಾಖೆಗಳಲ್ಲಿನ ಸಮಸ್ಯೆಯಾಗಿದೆ. ಇದು ಕೇವಲ ತೋಟಗಾರಿಕೆ ಇಲಾಖೆಯ ಪರಿಸ್ಥಿತಿ ಮಾತ್ರವಲ್ಲ. ಹಾಗಾದರೆ, ನಾವು ಇವತ್ತಿನ ದಿವಸ ಎಲ್ಲಿದ್ದೇವೆ, ಇದರ ಅಭಿವೃದ್ಧಿ ಮಾಡುವವರ್ಯಾರು? ಈ ರಾಜ್ಯದ ಜನತಂತ್ರ ವ್ಯವಸ್ಥೆಯಲ್ಲಿ ಜನಾದೇಶ ಪಡೆದು, ಸರ್ಕಾರ ತೆಗೆದುಕೊಂಡ ತೀರ್ಮಾನಗಳನ್ನು, ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವವರ್ಯಾರು ಎಂದರೆ, ಅಧಿಕಾರಿ ಮತ್ತು ನೌಕರಶಾಹಿಗಳು. ಅವರೇ ಇಲ್ಲವೆಂದರೆ ಯಾರು ತೋರಿಸುತ್ತಾರೆ? ಕೇವಲ ಅಭಿವೃದ್ಧಿ ಮಾಡುತ್ತೇವೆ ಎಂದು ಮಾತನಾಡಿದರೆ ಏನೂ ಪ್ರಯೋಜನವಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಆಗಲಿ, ತಾವು ಹಿರಿಯರು. ಏನು ಮಾಡಬೇಕೆಂದು ಸಲಹೆ ನೀಡಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಬಹಳ ತೀವ್ರಗತಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಲಾಗುತ್ತಿದೆ. ಇದರಲ್ಲಿ ಎಂತಹ ದಗಲ್ಬಾಜಿ ನಡೆಯುತ್ತಿದೆ ಎಂದರೆ, 2 ಲಕ್ಷದ 70 ಸಾವಿರ ನೌಕರರು ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಿಂದಾಗಿ ಕೋಟ್ಯಾಂತರ ರೂಪಾಯಿ, ಲಕ್ಷಾಂತರ ರೂಪಾಯಿ ಪೋಲಾಗುತ್ತಿದೆ. ಒಬ್ಬ ಸಿಬ್ಬಂದಿಗೆ ರೂ.15,000 ಗಳಷ್ಟು ನೀಡುವ ಸಂಬಳಕ್ಕೆ ಬದಲಾಗಿ ಕೇವಲ ರೂ.6,000 ಅಥವಾ ರೂ.7,000 ಮಾತ್ರ ನೀಡುತ್ತಾರೆ. ಮಾನ್ಯ ಸಭಾನಾಯಕರು, ವಿರೋಧ ಪಕ್ಷದ ನಾಯಕರು ನಾವೆಲ್ಲರೂ ಇವತ್ತಿನ ದಿವಸ ಸದನದಲ್ಲಿದ್ದು, ಇದರ ಕಡೆ ಸರ್ಕಾರ ಬಹಳ ಗಂಭೀರವಾಗಿ ಗಮನಹರಿಸಬೇಕು. ಇದು ಸರ್ಕಾರದ machinery. ಇದೇ ಇಲ್ಲದಿದ್ದರೆ ನಾವು ಸುಮ್ಮನೆ ಭಾಷಣ ಮಾಡಿ ಹೋಗಬೇಕಾಗುತ್ತದೆ. ನಾನು ಸಹ ಆಡಳಿತ ಪಕ್ಷದ ಸದಸ್ಯನಾಗಿದ್ದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದ್ದು, ಇದರ ಕಡೆ ಗಂಭೀರವಾಗಿ ಗಮನಹರಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದರ ಮೂಲಕ ರಾಜ್ಯದ ಅಭಿವೃದ್ಧಿ ಮತ್ತು ಆಡಳಿತಕ್ಕೆ ಪೂರಕವಾಗಿ ಹೋಗಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 212**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರ ನೀಡಿಲ್ಲ. ನಾನು ಬೀದರ್ ಜಿಲ್ಲೆಯ ರೇಷ್ಮೆ ಇಲಾಖೆಯಲ್ಲಿ ಒಟ್ಟು 53 ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು ಎಂದು ಪ್ರಶ್ನೆ ಕೇಳಿರುತ್ತೇನೆ. ಆದರೆ, ಮಾನ್ಯ ಸಚಿವರು 57 ಹುದ್ದೆಗಳು ಖಾಲಿ ಇವೆ ಎಂದು ಉತ್ತರದಲ್ಲಿ ತೋರಿಸಿದ್ದಾರೆ, ವಿನಃ ಯಾವಾಗ ಭರ್ತಿ ಮಾಡುತ್ತೇವೆ ಎಂಬುದನ್ನು ಹೇಳಿಲ್ಲ. ಈಗಾಗಲೇ ಹಿರಿಯ ಸದಸ್ಯರಾದ ಶ್ರೀ ಅಡಗೂರ್ ಹೆಚ್.ವಿಶ್ವನಾಥ್‌ರವರು 'ಹೈದ್ರಾಬಾದ್–ಕರ್ನಾಟಕ ಮತ್ತು ಉತ್ತರ–ಕರ್ನಾಟಕ ಭಾಗ ಅಭಿವೃದ್ಧಿ ಹೊಂದಬೇಕೆಂದರೆ ನೌಕರಶಾಹಿಗಳು ಇರಬೇಕು, ನೌಕರಶಾಹಿಗಳು ಇದ್ದರೆ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯ' ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಸಹ ಅದಕ್ಕೆ ಪೂರಕವಾಗಿ ಹೇಳುತ್ತೇನೆ. ಮೊದಲನೆಯದಾಗಿ, ಏತಕ್ಕಾಗಿ ನೇಮಕಾತಿ ಆಗುತ್ತಿಲ್ಲ. ಸುಮಾರು 15, 20, 25 ವರ್ಷಗಳಿಂದ ಈ ಹುದ್ದೆಗಳು ಖಾಲಿ ಇದ್ದು, ಏತಕ್ಕಾಗಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ? ಈ ರೀತಿ ಇರುವಾಗ ಆ ಭಾಗಗಳು ಹೇಗೆ ಅಭಿವೃದ್ಧಿ ಹೊಂದಲು ಸಾಧ್ಯ? ಇದರಿಂದ ರೇಷ್ಮೆ ಬೆಳೆಗಾರರಿಗೆ ಯಾವ ರೀತಿ ಅನುಕೂಲವಾಗುತ್ತದೆ? ಎರಡನೆಯದಾಗಿ, ರೇಷ್ಮೆ ಅಭಿವೃದ್ಧಿಗಾಗಿ ರೇಷ್ಮೆ ಸಂಶೋಧನಾ ಕೇಂದ್ರವನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಸರ್ಕಾರದ ಯೋಜನೆ ಇದೆಯೇ ಎಂದು ಪ್ರಶ್ನೆ ಕೇಳಿದ್ದು, ಮಾನ್ಯ ಸಚಿವರು ರೇಷ್ಮೆ ಅಭಿವೃದ್ಧಿಗಾಗಿ ರೇಷ್ಮೆ ಸಂಶೋಧನಾ ಕೇಂದ್ರ ಪ್ರಾರಂಭಿಸಲು ಸಾಧ್ಯವಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಈಗಾಗಲೇ ಕೇಂದ್ರ ಸರ್ಕಾರದಿಂದ ಸಂಶೋಧನಾ ಕೇಂದ್ರ ತೆರೆಯಲಾಗಿದೆ. ಆದರೆ, ಅಲ್ಲಿ ಇಬ್ಬರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, ಅವರು ಸಹ ರೆಗ್ಯುಲರ್ ಆಗಿ ಕೆಲಸಕ್ಕೆ ಬರುವುದಿಲ್ಲ. ಇದರಿಂದ ಯಾರಿಗೂ ಅವರು ಸಿಗುವುದಿಲ್ಲ. ಬೀದರ್ ಜಿಲ್ಲೆಯಲ್ಲಿ 5 ತಾಲ್ಲೂಕುಗಳಿದ್ದು, ಅದರಲ್ಲಿ ಸಹ ಯಾರು ಇಲ್ಲ. ಈ ರೀತಿಯಾದರೆ, ರೈತರಿಗೆ ಬೆಳೆಯ ಅಭಿವೃದ್ಧಿ ಬಗ್ಗೆ ಮಾಹಿತಿ ನೀಡುವವರ್ಯಾರು? ಎಂಬುವುದರ ಕುರಿತು ಮಾನ್ಯ ಸಚಿವರು ಉತ್ತರ ನೀಡಬೇಕೆಂದು ಕೇಳಲಿಚ್ಚಿಸುತ್ತೇನೆ.

**ಶ್ರೀ ಆರ್.ಶಂಕರ್:–** ಮಾನ್ಯ ಉಪಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಈಗಾಗಲೇ ಎಲ್ಲಾ ಸದಸ್ಯರು ಹೇಳಿರುವ ಹಾಗೆ ಎಲ್ಲಾ ಇಲಾಖೆಗಳಲ್ಲಿ ಸಹ ಈ ಸಮಸ್ಯೆ ಇದೆ. ಈ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ ಶೀಘ್ರದಲ್ಲಿಯೇ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುತ್ತೇನೆ. ಮಾನ್ಯ ಸದಸ್ಯರು ಸಭೆಗೆ ಬರಲಿ. ಇದರ ಬಗ್ಗೆ ಚರ್ಚೆ ಮಾಡಿ, ಆದಷ್ಟು ಶೀಘ್ರವಾಗಿ ಕ್ರಮವಹಿಸುತ್ತೇವೆ. ಇದು ಕೇವಲ ಒಂದು ಇಲಾಖೆಯ ಸಮಸ್ಯೆಯಾಗಿಲ್ಲ. ರಾಜ್ಯದ ಎಲ್ಲಾ ಇಲಾಖೆಗಳಲ್ಲಿನ ಸಮಸ್ಯೆಯಾಗಿದೆ. ಕೃಷಿಯು ಈ ದೇಶದ ಬೆನ್ನೆಲುಬು ಎಂದು ಕರೆಯುವಂಥ ರೈತನ ಬದುಕು. ಈ ಬದುಕನ್ನು ನಿರ್ವಹಣೆ ಮಾಡುವುದಕ್ಕೆ ಸರಿಯಾಗಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳ ಅವಶ್ಯಕತೆ ಇದೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಆರ್ಥಿಕ ಇಲಾಖೆಯವರೊಂದಿಗೆ ಚರ್ಚಿಸಿ ಕ್ರಮವಹಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಸಮಸ್ಯೆ ಮಾತ್ರವಲ್ಲ. ಎಲ್ಲಾ ಇಲಾಖೆಯ ಸಮಸ್ಯೆಯಾಗಿದೆ. ಎಲ್ಲೂ ಹುದ್ದೆಗಳನ್ನು ಭರ್ತಿ ಮಾಡಿಲ್ಲವೆಂದರೆ, is it a valid answer? ಸಮಸ್ಯೆಯಾಗಿದೆ ಎಂದು ಹೇಳಿದರೆ, ಅವರ ಉತ್ತರ ಸರಿಯೇ? ಇದು ಬಹಳ ಮಹತ್ವದಾಗಿದೆ. ಆರ್ಥಿಕ ಇಲಾಖೆಯೊಂದಿಗೆ ಚರ್ಚೆ ಮಾಡುತ್ತೇನೆ ಎಂದರೆ ಹೇಗೆ? 25 ವರ್ಷಗಳಿಂದ ಖಾಲಿ ಇರುವ ಹುದ್ದೆಗಳಿವೆ. ಆರ್ಥಿಕ ಇಲಾಖೆಯನ್ನು ಏನು ಈಗ ಹೊಸದಾಗಿ ತೆರೆಯಲಾಗಿದೆಯೇ?

**ಶ್ರೀ ಆರ್.ಶಂಕರ್:–** ಮಾನ್ಯ ಸಭಾಪತಿಯವರೇ, ಇದು ಈಗಿನ ಸಮಸ್ಯೆಯಲ್ಲ. ಹಿಂದಿನಿಂದ ಇರುವಂಥ ಸಮಸ್ಯೆ. ಕೋವಿಡ್–19 ಹಿನ್ನೆಲೆಯಿಂದ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆಗಲಿ. ನಾವು ಅಧಿಕಾರದಲ್ಲಿದ್ದಾಗಿನಿಂದ ಇರುವ ಸಮಸ್ಯೆ ಎಂದರೆ, ಅವರು ಸಹ ಹಾಗೆಯೇ ಮುಂದುವರೆಸಿಕೊಂಡು ಹೋಗುತ್ತಾರೆಯೇ? ಅವರು ಒಬ್ಬ ಸಚಿವರಾಗಿದ್ದು, ಜವಾಬ್ದಾರಿಯಿಂದ ಉತ್ತರ ನೀಡಬೇಕು. ಅವರು ತೀಕ್ಷ್ಣವಾಗಿ, ಸೂಕ್ತವಾದ ಕ್ರಮ ಕೈಗೊಳ್ಳಬೇಕು. ಇದು ಬಹಳ ಮುಖ್ಯವಾದ ವಿಚಾರವಾಗಿದೆ. Horticulture is very important.

**ಶ್ರೀ ಆರ್.ಶಂಕರ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಖಂಡಿತವಾಗಿ ಕ್ರಮಕೈಗೊಳ್ಳುತ್ತೇವೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಆರ್.ಪಾಟೀಲ್:–** ಎಲ್ಲಾ ಇಲಾಖೆಯ ಸಮಸ್ಯೆಯಾಗಿದೆ, ಹಾಗೆಯೇ ನನ್ನ ಇಲಾಖೆಯಲ್ಲಿಯೂ ಇದೆ. ಆರ್ಥಿಕ ಇಲಾಖೆ ಜೊತೆ ಚರ್ಚೆ ಮಾಡುತ್ತೇವೆ ಎಂದರೆ ಹೇಗೆ?

**ಶ್ರೀ ಆರ್.ಶಂಕರ್:–** ಮಾನ್ಯ ಸಭಾಪತಿಯವರೇ,...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಮೊದಲು ಮುಗಿಸುತ್ತೇನೆ. ಮಾನ್ಯ ಸಚಿವರು ಕುಳಿತುಕೊಳ್ಳಲಿ.

(ಮುಂದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(74)02.02.2021/12.50/ಎಸ್‌ಕೆ-ಬಿಎನ್‌ಎಸ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್. ಆರ್. ಪಾಟೀಲ್ (ಮುಂದು):-**

ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವದ ಇಲಾಖೆಯಾಗಿದೆ. ಈಗ ಎಲ್ಲಾ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇವೆ. ಯಾರು ಇದನ್ನು ಭರ್ತಿ ಮಾಡಿಲ್ಲ. ನಾನು ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡುತ್ತೇನೆ ಎಂದು ಸಚಿವರು ಹೇಳಿದರೆ ಹೇಗೆ? ನಾವು ಈ ಭಾಗದ ಬಗ್ಗೆ ಎಷ್ಟು ಬಾರಿ ಸದನದಲ್ಲಿ ಮಾತನಾಡುತ್ತೇವೆ. ಪ್ರತಿ ಬಾರಿ ತಾವು ಹೇಳುವುದು ಇಷ್ಟೆ, we will consult the Finance Department. ಹಣಕಾಸು ಇಲಾಖೆಗೆ ಆ ಕಡತವು ಹೋದರೆ, ಅದು ವಾಪಸ್ಸು ಬಂದರೆ ನನ್ನಾಣೆ ತೆಗೆದುಕೊಳ್ಳಿರಿ. ತಾವು ಏನಾದರೊಂದು ಕಡತವನ್ನು ವಿಲೇವಾರಿ ಮಾಡಬಾರದಾಗಿತ್ತು, ಕ್ಲೋಸ್ ಮಾಡಬೇಕಾಗಿತ್ತು ಎಂದರೆ, ಅದನ್ನು ಹಣಕಾಸು ಇಲಾಖೆಗೆ ಕಳುಹಿಸಿಬಿಡುವುದು. ಅದಕ್ಕೇನಾದರೂ ಪರಿಹಾರ ಕಂಡುಕೊಳ್ಳಬೇಕಲ್ಲ. 'We will consult the Finance Department and we will come back to you.' Same reply will be given.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ...

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾನಾಯಕರೇ ನಾನು ಮಾತನಾಡುವುದನ್ನು ಸ್ವಲ್ಪ ಕೇಳಿ. ತಮಗೆ ಸ್ವಲ್ಪ ವ್ಯವದಾನ ಇರಲಿ. ಮಾನ್ಯ ಸಭಾಪತಿಯವರೇ, ಈ ರೀತಿಯಾದರೆ ಹೇಗೆ? ಅದು ಹೈದರಬಾದ್-ಕರ್ನಾಟಕದ ಪ್ರದೇಶ. ಆರ್ಟಿಕಲ್ 371 (ಜೆ) ಅಡಿ ವಿಶೇಷ ಆದ್ಯತೆಯನ್ನು ಕೊಟ್ಟಿರುವಂತಹದ್ದು. ಸಂವಿಧಾನದಲ್ಲಿ ಅದು ತಿದ್ದುಪಡಿಯಾಗಿರುವಂತಹದ್ದು. ಅಲ್ಲಿಯೂ ಇದೇ ರೀತಿ. ತಾವು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಇದಕ್ಕೆ ಅನುದಾನ ಪಡೆಯುವಂತಹ ವ್ಯವಸ್ಥೆ ಮಾಡಿ. ಅದಕ್ಕೆ ಅನುದಾನವನ್ನು ಪಡೆದು, ಅಲ್ಲಿರುವ ಹುದ್ದೆಗಳನ್ನು ಭರ್ತಿ ಮಾಡಿ. ತಾವು ಹಣಕಾಸು ಇಲಾಖೆಯವರ ಜೊತೆ ಮಾತನಾಡುತ್ತೇವೆ. ಹಣಕಾಸು ಇಲಾಖೆಯವರು ಅನುಮತಿ ನೀಡಿದರೆ, ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದರೆ ಹೇಗೆ? ಹಣಕಾಸು ಇಲಾಖೆಯವರು ಅನುಮತಿಯನ್ನೇ ನೀಡುವುದಿಲ್ಲ. ಹಾಗಾದರೆ ತಾವು ಆ ಹುದ್ದೆಗಳನ್ನು ಭರ್ತಿ ಮಾಡುವುದಿಲ್ಲವೇ? ರಾಜ್ಯದ ಅಭಿವೃದ್ಧಿ ಹೇಗೆ ಆಗಬೇಕು? ಎಲ್ಲಾ ಇಲಾಖೆಯೊಳಗಿದ್ದ ಹಾಗೇ ನಮ್ಮ ಇಲಾಖೆಯಲ್ಲಿ ಅದೇ ರೀತಿ ಇದೆ ಬಿಡಿ. ನಮ್ಮನ್ನು ಏತಕ್ಕೆ ಕೇಳುತ್ತೀರಿ ಎಂಬಂತೆ ಆಯಿತು. ಹಾಗಾದರೆ ನಾವು ಏನನ್ನೂ ಕೇಳುವುದಿಲ್ಲ. We will never ask any question. ನಮ್ಮ ಏನನ್ನೂ ಕೇಳಬೇಡಿ ಎಂದು ಹೇಳಿಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ. ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಖಾಲಿಯಿರುವ ಹುದ್ದೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಶಂಕರ್‌ರವರು ಹೊಸದಾಗಿ ತೋಟಗಾರಿಕೆ ಮತ್ತು ರೇಷ್ಮೆ ಸಚಿವರಾಗಿ ನೇಮಕವಾಗಿದ್ದಾರೆ. ನಾನು

ಅಧಿಕಾರಿಗಳನ್ನು 6ನೇ ತಾರೀಖಿನಂದು ಸಭೆಗೆ ಕರೆಯುತ್ತೇನೆ. ಆರ್ಥಿಕ ಇಲಾಖೆಗೆ ಸಂಬಂಧಪಟ್ಟಂತಹ ಅಧಿಕಾರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳವರ ಜೊತೆ ಚರ್ಚೆ ಮಾಡಿ, ನಮ್ಮ ಇವತ್ತಿನ ಸ್ಥಿತಿಯಲ್ಲಿ ಯಾವ ರೀತಿ ಸಹಕಾರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ, ಅಷ್ಟನ್ನು ಮಾಡುತ್ತೇನೆಂದು ಹೇಳಿದ್ದಾರೆ. ಅದನ್ನು ಮತ್ತೊಮ್ಮೆ ಅವರಿಗೆ ಹೇಳೋಣ. ತಮ್ಮ ಭಾವನೆಗಳನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳವರ ಜೊತೆ ಮಾತನಾಡಿ, ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆಂದು ನಾನು ಈ ಮೂಲಕ ಹೇಳಲು ಇಷ್ಟಪಡುತ್ತೇನೆ. ದಯವಿಟ್ಟು, ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು ಸಹಕಾರ ಕೊಡಬೇಕಾಗಿ ವಿನಂತಿಸುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ 254**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ ನಾನು ಕೇಳಿರುವ ಮೊದಲನೇ ಪ್ರಶ್ನೆಗೆ ಕೋಲಾರ ನಗರಸಭೆಯಲ್ಲಿ ಒಟ್ಟು 35 ವಾರ್ಡ್‌ಗಳು ಇದೆ ಎಂದು ಮಾನ್ಯ ಸಚಿವರು ಉತ್ತರವನ್ನು ಸರಿಯಾಗಿ ನೀಡಿದ್ದಾರೆ. ಎರಡನೆಯದಾಗಿ, ಕೋಲಾರ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಈ ಅಮೃತ ಯೋಜನೆಯಡಿಯಲ್ಲಿ ಕೋಲಾರದಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಕೆಲಸ ಆಗುತ್ತಿರಬೇಕಾದರೆ, ರಸ್ತೆಗಳು ಹಾಳಾಗಿರುವುದು ನಿಜ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಈ ಅಮೃತ್ ಯೋಜನೆಯಡಿಯಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಪೈಪ್‌ಲೈನ್ ಅಗೆಯ ಬೇಕಾದರೆ, ಅದನ್ನು ರಸ್ತೆಯ ಮಧ್ಯೆದಲ್ಲಿ ಕಟ್ ಮಾಡಿ, ಅದನ್ನು ಪೈಪ್‌ಲೈನ್‌ನ್ನು ಅಳವಡಿಸಿ ಮತ್ತೆ ಅದಕ್ಕೆ ಏನೊಂದು wet mix ನಲ್ಲಿ ಅದನ್ನು ಭರ್ತಿ ಮಾಡಿ, ರಸ್ತೆಗಳನ್ನು ಸರಿಪಡಿಸಬೇಕಾಗಿತ್ತು. ಆದರೆ ಆ ತರಹ ಮಾಡಿಲ್ಲ. ಜೆಸಿಬಿಯಲ್ಲಿ ಎಷ್ಟು ಬೇಕೋ ಅಷ್ಟನ್ನು ಅಗೆದು, ಅದಕ್ಕೆ ಮಣ್ಣನ್ನು ತುಂಬಿ, ಅದರ ಮೇಲೆ tar paint ಆಗೋ ರೀತಿ ಮಾಡಿದ್ದರಿಂದ ರಸ್ತೆಗಳಲ್ಲಿ ಮತ್ತೆ ಹೊಂಡಗಳು ಬಿದ್ದಿದೆ. ಇದು ಮೂರನೇ ಅಧಿವೇಶನವಾಗಿದ್ದು, ನಾನು ಇದನ್ನು ಮೂರು ಅಧಿವೇಶನಗಳಲ್ಲಿಯೂ ಸಹಾ ಪ್ರಸ್ತಾಪ ಮಾಡಿದ್ದೇನೆ. ಇಲ್ಲಿಯವರೆಗೂ ಅಲ್ಲಿ ಏನೊಂದು ರಸ್ತೆಗಳು ಅಭಿವೃದ್ಧಿಯಾಗುವಂತಹ ಕೆಲಸಗಳೇನು ಆಗಿಲ್ಲ. ನಾವು ದಿನ ಬೆಳಗಾದರೆ, ಇದನ್ನೇ ಪತ್ರಿಕೆಯಲ್ಲಿ ಓದುತ್ತೇವೆ. ಇವತ್ತು ಸಹ 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಯಲ್ಲಿ ರಸ್ತೆಗಳ ಬಗ್ಗೆ ಬರೆದಿದ್ದಾರೆ. ನಾನು ಇದರ ಬಗ್ಗೆ ಛಾಯಚಿತ್ರವನ್ನು ತೆಗೆಸಿ, ನಮ್ಮ ಶಾಸಕರ ಪತ್ರದ ಜೊತೆಗೆ ನನ್ನ ಪತ್ರವನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಿದ್ದೆ. ಅದಲ್ಲದೇ ಮಾನ್ಯ ಮುಖ್ಯಮಂತ್ರಿಗಳ ಒಂದು ವಿಶೇಷ ಕೋಟಾದಡಿಯಲ್ಲಿ ರಸ್ತೆಗಳ ಅಭಿವೃದ್ಧಿಗೆ ಇಟ್ಟಿದ್ದ ಐದು ಕೋಟಿ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ ಬೇರೆ ಎಲ್ಲಾ ಪುರಸಭೆಗಳಿಗೆ ಸಹ ವಾಪಸ್ಸು ಪಡೆದಂತಹ ಹಣವನ್ನು ಏನೊಂದು ರಸ್ತೆ ಅಭಿವೃದ್ಧಿಗೆ ಕೊಟ್ಟಿದ್ದಾರೋ, ಕೋಲಾರ ಜಿಲ್ಲೆಗೆ ಇಲ್ಲಿಯವರೆಗೂ ಆ ಹಣವನ್ನು ವಾಪಸ್ಸು ಕೊಟ್ಟಿಲ್ಲ. ಇವತ್ತಿನ ದಿವಸ ಕೋಲಾರ ಜಿಲ್ಲೆಯಲ್ಲಿ ಸುಮಾರು 17.5 ಕೋಟಿ ರೂಪಾಯಿಗಳ ವೆಚ್ಚ ಮಾಡಿ, ರಸ್ತೆಗಳನ್ನು ಅಭಿವೃದ್ಧಿ ಆಗುವುದರ ಬಗ್ಗೆ ನಾನು ಒಂದು ಪತ್ರವನ್ನು ನಮ್ಮ ಶಾಸಕರ ಪತ್ರದ ಜೊತೆಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಿದ್ದೆ. ಇಲ್ಲಿಯವರೆಗೂ ಯಾವುದೇ ರೀತಿಯ ಕೆಲಸ ಕಾರ್ಯಗಳು ಆಗಿಲ್ಲ. ಕೋಲಾರ ಜಿಲ್ಲೆಯ ಸುತ್ತಮುತ್ತಲೂ ನರಸಾಪುರ, ವೇಮಗಲ್ ಭಾಗದಲ್ಲಿ ಹೆಚ್ಚಿನ ಕೈಗಾರಿಗಳು ಬರುತ್ತಿದೆ. ಈ ಒಂದು ಮೂಲ ಸೌಕರ್ಯಗಳ ಅಭಿವೃದ್ಧಿ ಇಲ್ಲದೇ ಇರಬೇಕಾದರೆ, ಅಲ್ಲಿ ಯಾರೂ ಜನರು ಕೋಲಾರದಲ್ಲಿ ಇರುವುದಕ್ಕೆ ಇಷ್ಟ ಪಡುತ್ತಿಲ್ಲ. ಎಲ್ಲರೂ ಬೇರೆ ಬೇರೆ ಕಡೆಯಿಂದ ಓಡಾಡುತ್ತಿದ್ದಾರೆ. ನಾನು ಮತ್ತೊಮ್ಮೆ ತಮ್ಮ ಮೂಲಕ ನಗರಾಭಿವೃದ್ಧಿ ಸಚಿವರು ಹಾಗೂ ವಿಶೇಷವಾಗಿ ಪೌರಾಡಳಿತ ಸಚಿವರಲ್ಲಿ ಮನವಿಯನ್ನು ಮಾಡುತ್ತೇನೆ. ಕೋಲಾರ ಜಿಲ್ಲೆಗೆ ಸಂಬಂಧಪಟ್ಟಂತೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಗರದ ರಸ್ತೆಗಳ ಬಗ್ಗೆ ಮಾತ್ರ ಕೇಳುತ್ತೇನೆ. ಇನ್ನು ಒಳಚರಂಡಿಯ ಬಗ್ಗೆ ಕೆಲಸವಾಗುತ್ತಿದೆ ಎಂದು ಹೇಳಿದರು. ಸುಮಾರು 73 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಹಿಂದೆ ಜಿಲ್ಲಾಧಿಕಾರಿ ಕಛೇರಿಯಲ್ಲಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಹ ಇದನ್ನು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಸುನೀಲ್ ವಲ್ಯಾಪುರ್ ಅವರು ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ಒಳಚರಂಡಿ ವ್ಯವಸ್ಥೆ ಕುರಿತು ಕೇಳಿದರೆಂದು ಕಾಣುತ್ತದೆ. ಅದೇ ರೀತಿ ಎಲ್ಲ ಒಳಚರಂಡಿ ಸಂಪೂರ್ಣ ವಿಫಲವಾಗಿದೆ. ಅದಕ್ಕೆ ಏನು connection ಕೊಟ್ಟಿದ್ದಾರೆ, ಅದು ಎಲ್ಲೆಂದರಲ್ಲಿ ಅದೆಲ್ಲಾ ಬ್ಲಾಕ್ ಆಗಿ, ಅದು ಒಳಚರಂಡಿ ವ್ಯವಸ್ಥೆ ಪೂರ್ತಿಯಾಗಿ ವಿಫಲವಾಗಿದೆ. ಅದಕ್ಕೆ ನಾನು ಕೋಲಾರ ಜಿಲ್ಲೆಗೆ ಸಂಬಂಧಪಟ್ಟಂತೆ ಪೌರಾಡಳಿತ ಮತ್ತು ಸಕ್ಕರೆ ಸಚಿವರು, ವಿಶೇಷವಾಗಿ ಒಂದು ದಿವಸ ಕೋಲಾರ ನಗರವನ್ನು ಒಂದು ಪ್ರದಕ್ಷಿಣೆ ಮಾಡಿ, ರಸ್ತೆಗಳ ಸ್ಥಿತಿ–ಗತಿಗಳನ್ನು ಹಾಗೂ ಅಮೃತ್ ಯೋಜನೆಯಡಿಯಲ್ಲಿ ಏನು ಚರಂಡಿ ವ್ಯವಸ್ಥೆಯನ್ನು ಮಾಡಿದ್ದಾರೆ, ಅದು ಮೂಲ ಚರಂಡಿ ಎಲ್ಲಿ ಪ್ರಾರಂಭವಾಗುತ್ತದೆ, ಅಲ್ಲಿ ಎಷ್ಟು ವಿಶಾಲವಿದೆಯೋ, ಬರುತ್ತಾ ಬರುತ್ತಾ ಚರಂಡಿಯೂ ಅಗಲವಾಗಬೇಕು. ಆದರೆ ಚರಂಡಿ ಪ್ರಾರಂಭವಾಗುತ್ತದೆಯೆಲ್ಲಾ, ಆರು ಅಡಿ ಅಗಲವಾಗಿದ್ದರೆ, ಹೋಗುತ್ತಾ, ಹೋಗುತ್ತಾ ಎರಡು ಅಡಿ, ಮೂರು ಅಡಿಯಲ್ಲಿ ಚರಂಡಿ ಮಾಡಿ, ಅದಕ್ಕೆ ಸಂಪೂರ್ಣವಾಗಿ ಹಣವನ್ನು ವ್ಯರ್ಥ ಮಾಡಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಕೋಲಾರ ಜಿಲ್ಲೆಗೆ ಭೇಟಿ ನೀಡಿ, ರಸ್ತೆಗಳಲ್ಲಿ ಒಮ್ಮೆ ಸಂಚಾರ ಮಾಡಿ, ಅಲ್ಲಿರುವಂತಹ ಮೂಲಭೂತ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದು ನಾನು ತಮ್ಮ ಮೂಲಕ ಅವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ನಸೀರ್ ಅಹಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆಯ ನರಸಾಪುರ ಒಂದು ಕಡೆ ವೇಮಗಲ್ ಅದು ಕೈಗಾರಿಕಾ ಪ್ರದೇಶವಾಗಿದೆ. ತಮಗೆ ಗೊತ್ತಿರುವ ಹಾಗೇ 'Apple' company ಯ ಬಾರಿ ದೊಡ್ಡ ಸಂಸ್ಥೆಗಳು ಅಲ್ಲಿ not only electronics, even defence ಗೆ ಸಂಬಂಧಿಸಿದಂತೆ ಸಾಕಷ್ಟು ಈಗ ಬದಲಾವಣೆಗಳು, I mean to say that industrially very forward ಆಗುತ್ತಿದೆ. ಅಲ್ಲಿಂದ travel to International Airport is only about one hour. ತಾವು ನಗರಕ್ಕೆ ಏನಾದರೂ ಬಂದರೆ, ಸಹ ನಿಜವಾಗಲೂ ಬಹಳ ದುಃಖವಾಗುತ್ತದೆ. ಯಾವುದೇ ರಸ್ತೆಗಳು ಸರಿಯಿಲ್ಲ. ಅದನ್ನು ಯಾರಿಗೋ ಚರಂಡಿಯನ್ನು ಹಾಕುವುದಕ್ಕೆ ಟೆಂಡರ್ ಕೊಟ್ಟಿರುವಂತಹದ್ದು. It is not even. ಅಲ್ಲಿ ಚರಂಡಿಗೂ ಮತ್ತು ಮನೆಗೂ ವ್ಯತ್ಯಾಸವಿರುವುದಿಲ್ಲ. ಅಂದರೆ, ಮನೆಗಳಿಂದ ಚರಂಡಿಗೆ ನೀರು ಹರಿಯದಂತೆ ಚರಂಡಿಗಳನ್ನು ನಿರ್ಮಿಸಿದ್ದಾರೆ. ಮಳೆ ಬಂದರೆ ನೀರು ಹೋಗುವುದಕ್ಕಾಗುವುದಿಲ್ಲ. ಅಂತಹ ಸಮಸ್ಯೆಗಳು ಅಲ್ಲಿರುವುದರಿಂದ ದಯವಿಟ್ಟು, ಮಾನ್ಯ ಸಚಿವರು ಒಂದು ದಿವಸ ಅಲ್ಲಿಗೆ ಬಂದು ತಾವು ಖುದ್ದಾಗಿ ನೋಡಿದರೆ, ತಾವೇ ಒಂದು ತೀರ್ಮಾನಕ್ಕೆ ಬರುತ್ತೀರಾ. ಯಾವ ರೀತಿ ಒಳಚರಂಡಿಗಳ ಕೆಲಸಗಳು ಆಗಿದೆ. ನೀರು ಸ್ವಲ್ಪ ಮಟ್ಟಿಗೆ KC Valley ಬಂದಿರುವುದರಿಂದ underground water ಎಲ್ಲಾ charge ಆಗಿ ಬೋರ್‌ವೆಲ್ಸ್ active ಆಗಿದೆ. ಹಾಗಾಗಿ ನೀರಿನ ಸಮಸ್ಯೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಷ್ಟೊಂದು ಇಲ್ಲ. ಒಳ ಚರಂಡಿ ಮತ್ತು ರಸ್ತೆಗಳ ಸಮಸ್ಯೆಗಳು ಹೆಚ್ಚಾಗಿದೆ ಎಂದು ಹೇಳುತ್ತಾ, ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎನ್. ನಾಗರಾಜ್ (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಗೋವಿಂದ ರಾಜುರವರು ಪ್ರಶ್ನೆಯ ಜೊತೆಗೆ ಹಲವಾರು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಬಹಳ ಮುಖ್ಯವಾಗಿ ಕೋಲಾರ ನಗರಸಭೆಯಲ್ಲಿರುವಂತಹ ವಾರ್ಡ್‌ಗಳು ಎಷ್ಟು? ಅದರ ವಿಸ್ತೀರ್ಣ ಎಷ್ಟು ಎಂದು ಕೇಳಿದ್ದಾರೆ? ಅದಕ್ಕೂ ಕೂಡ ಉತ್ತರವನ್ನು ಕೊಟ್ಟಿದ್ದೇನೆ. ಅಮೃತ್ ಯೋಜನೆಯಡಿಯಲ್ಲಿ ಒಳಚರಂಡಿ ಮಂಡಳಿ ವತಿಯಿಂದ ಕೈಗೊಂಡಿರುವ ಈ ಕೆಳಕಂಡ ಕಾಮಗಾರಿಗಳಿಂದ ರಸ್ತೆಗಳು ಹಾಳಾಗಿರುತ್ತದೆ ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಒಳಚರಂಡಿ ಯೋಜನೆಯ ಮೊತ್ತ 7300 ಲಕ್ಷ ರೂಪಾಯಿಗಳು ಅದರ ಜೊತೆಯಲ್ಲಿ ಕುಡಿಯುವ ನೀರು ಯೋಜನೆಯ ಮೊತ್ತ 1723 ಲಕ್ಷ ರೂಪಾಯಿಗಳನ್ನು ಆ ನಗರಸಭೆಗೆ ಕೊಟ್ಟಿದ್ದೇವೆ. ಈ ಅಮೃತ್ ಯೋಜನೆಯಡಿಯಲ್ಲಿ ಹಾಳಾಗಿರುವಂತಹ ರಸ್ತೆಗಳ ಪುನರ್ ನಿರ್ಮಿಸಿರುವ ಕಾಮಗಾರಿಗಳಿಗೆ ನಿಗದಿಪಡಿಸಿರುವ 780 ಲಕ್ಷ ರೂಪಾಯಿಗಳು ಕೂಡ ಈ ನಗರಸಭೆಗೆ ಕೊಟ್ಟಿದ್ದೇವೆ. ಇದಲ್ಲದೇ ಈ ಕೆಳಕಂಡ ಯೋಜನೆಗಳಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೂಡ ಹೆಚ್ಚುವರಿಯಾಗಿ ಅದನ್ನು ಕೈಗೊಳ್ಳಲಾಗಿದೆ. ನಗರೋತ್ಥಾನ ಮುನ್ಸಿಪಾಲಿಟಿಯ ಹಂತ ಮೂರನೇ ರಸ್ತೆಯ ಅಭಿವೃದ್ಧಿಗೆ ಕೂಡ 1150 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. 16.5 ಕಿಲೋ ಮೀಟರ್‌ವರೆಗಿನ ರಸ್ತೆಯನ್ನು ಅಭಿವೃದ್ಧಿಯನ್ನು ಪಡಿಸಲಾಗಿದೆ. 2017–18 ರಿಂದ 2019–20 ಮತ್ತು 2021 ಸಾಲಿನವರೆಗೆ ಕೂಡ ಇಂತಿಷ್ಟು ಕಿಲೋ ಮೀಟರ್ ರಸ್ತೆಗಳು ಕೂಡ ಅಭಿವೃದ್ಧಿಯಾಗಿರುತ್ತದೆ.

(ಮುಂದು)

(75)02.02.2021, 1.00, ಟಿಸಿಹೆಚ್–ಜಿಆರ್

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ) (ಮುಂದು):–**

ಮತ್ತೊಂದು ಪ್ರಶ್ನೆಗೆ 14ನೇ ಹಣಕಾಸು ಯೋಜನೆಯಡಿಯಲ್ಲಿ ರಸ್ತೆ ಅಭಿವೃದ್ಧಿ 495.81 ಲಕ್ಷಗಳನ್ನು ಒದಗಿಸಲಾಗಿದ್ದು, 48 ಕಾಮಗಾರಿಗಳ ಪೈಕಿ, 41 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಒಟ್ಟಾರೆ 376 ಲಕ್ಷಗಳು. 2015–16 ರಿಂದ 2019ರವರೆಗೆ ಕೂಡ ಇದು ಮುಂದುವರೆಯುವುದು ಎಂದು ಆಗಿದೆ. ಬಹಳ ವಿಶೇಷವಾಗಿ ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಯಲ್ಲಿ ಏನು ಈ ಹಿಂದೆ ದಿನಾಂಕ 09.01.2019ರ ಸರ್ಕಾರದ ಆದೇಶದಲ್ಲಿ ನಗರ ಸಭೆಗೆ ಒಟ್ಟು 5 ಕೋಟಿ ರೂಪಾಯಿಗಳು S.F.C., ಯಲ್ಲಿ ವಿಶೇಷವಾದ ಅನುದಾನವನ್ನು ನಮಗೆ ಸರ್ಕಾರ ಕೊಟ್ಟಿತ್ತು. ಅದನ್ನು ರದ್ದುಪಡಿಸಿದ್ದೀರಿ ಎಂಬ ಬಹಳ ಪ್ರಮುಖವಾದ ಪ್ರಶ್ನೆಯನ್ನು ಇದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈಗಾಗಲೇ ಕೋವಿಡ್–19 ಬಂದಿರುವುದರಿಂದ ಆರ್ಥಿಕ ಇಲಾಖೆ ಕೊಟ್ಟಂತಹ ಆದೇಶವನ್ನು ಹಿಂಪಡೆಯಲಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಎಲ್ಲಾ ಪುರಸಭೆಯವರು ಅವರ ಹಣವನ್ನು ತೆಗೆದುಕೊಂಡು ಕೆಲಸ ಮುಗಿಸಿದ್ದಾರೆ. ಕೋಲಾರಕ್ಕೆ ಒಂದಕ್ಕೆ ಕೋವಿಡ್–19 ಅಡ್ಡ ಬಂದಿದೆಯೇ? ಮಾನ್ಯ ಸಭಾಪತಿಯವರೇ, ಆ ರಸ್ತೆ ಹದಗೆಟ್ಟಿರುವುದನ್ನು ನೀವು ಸಹ ನೋಡಬೇಕು. ಮಾಸ್ಕ್ ಹಾಕಬೇಕೆಂದು ಯಾವ ರೀತಿಯಲ್ಲಿ ಇನ್‌ಸಿಸ್ಟ್ ಮಾಡಿದ್ದಾರೋ, ಅದಕ್ಕೆ ಅಲ್ಲಿನ ಜನ ನಾವು ಮಾಸ್ಕ್ ಹಾಕ ಬೇಕಾಗಿರುವುದು ಕೋವಿಡ್–19ಗೆ ಅಲ್ಲ; ಕೋಲಾರದಲ್ಲಿರತಕ್ಕಂಥ ಧೂಳನ್ನು ತೆಡೆಯಲಾರದೆ ಈ ಮಾಸ್ಕ್‌ನ್ನು ಹಾಕಿಕೊಳ್ಳುತ್ತಿದ್ದೇವೆಂದು ಮಾತನಾಡಿಕೊಳ್ಳುತ್ತಿದ್ದಾರೆ. ಆ 5 ಕೋಟಿ ರೂಪಾಯಿಗಳನ್ನು ಕೋಲಾರಕ್ಕೆ ಏಕೆ ತಡೆಹಿಡಿದಿದ್ದೀರಿ. ದಯವಿಟ್ಟು ಅದನ್ನು ಕೂಡಲೇ ನೀವು ಬಿಡುಗಡೆ ಮಾಡಿಸಿ ಕೊಡಬೇಕು ಎಂಬುದು ನನ್ನ ಒತ್ತಾಯವಾಗಿದೆ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ):–** ಮಾನ್ಯ ಸಭಾಪತಿಯವರೇ, ಈ ನಗರಸಭೆಗೆ ವಿಶೇಷ ಅನುದಾನದ ಅಡಿಯಲ್ಲಿ ಕೊಟ್ಟಂಥ ರೂ.5 ಕೋಟಿ ರೂಪಾಯಿಗಳ ಹಣವನ್ನು ಸರ್ಕಾರ ತಡೆಹಿಡಿದಿದೆ ಎನ್ನುವ ಮಾತನ್ನು ಈಗಾಗಲೇ ನಮ್ಮ ಗಮನಕ್ಕೆ ತಂದಿದ್ದಾರೆ. ವಿಶೇಷ ಅನುದಾನದಡಿಯಲ್ಲಿ ಯಾವ್ಯಾವ ನಗರ ಸಭೆಗಳಿಗೆ ಸರ್ಕಾರ ಕೊಟ್ಟಂತಹ ಮಾಹಿತಿಗಳನ್ನು ಇಲಾಖೆಯಿಂದ ಪಡೆದುಕೊಳ್ಳಲಾಗುವುದು. ಕೋಲಾರ ನಗರಸಭೆಗೆ ಕೊಟ್ಟಂತಹ ರೂ.5 ಕೋಟಿ ರೂಪಾಯಿಗಳನ್ನು ಏಕೆ ರದ್ದುಪಡಿಸಿದ್ದಾರೆ ಎನ್ನುವುದನ್ನೂ ಕೂಡ ಮರುಪರಿಶೀಲನೆ ಮಾಡಿ, ಇದಕ್ಕೆ ಮುಂದಿನ ದಿನಗಳಲ್ಲಿ ದಿನಾಂಕ 13.09.2019ರ ಸರ್ಕಾರದ ಆದೇಶದಲ್ಲಿ ತಡೆಹಿಡಿಯಲಾದಂತಹ ಹಣವನ್ನು ಹಂತ ಹಂತವಾಗಿ ಅನುಷ್ಠಾನದ ಲಭ್ಯತೆಯ ಆಧಾರದ ಮೇಲೆ ವಿವಿಧ ಲೆಕ್ಕಶೀರ್ಷಿಕೆ ಯೋಜನೆಯಡಿಯಲ್ಲಿ ನಗರ ಸಭೆ ಅನುದಾನಗಳನ್ನು ಕೂಡ ಬಿಡುಗಡೆ ಮಾಡಲಾಗುವುದು. ಅದರಲ್ಲಿ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಗೋವಿಂದರಾಜುರವರ ಆತಂಕ ಇರುವುದು ಇಷ್ಟೆ. ಅಲ್ಲಿ ರಸ್ತೆಗಳು ತುಂಬಾ ಹಾಳಾಗಿವೆ. ಅಲ್ಲಿ ನಡೆದಾಡುವುದಕ್ಕೂ ಕೂಡ ಆಗುತ್ತಿಲ್ಲ. ಹೆಚ್ಚು ಧೂಳು ಬರುತ್ತಿದೆ. ಆದ್ಯತೆ ಮೇಲೆ ರಸ್ತೆಗೆ ಹಣವನ್ನು ಬಿಡುಗಡೆ ಮಾಡಿಸಿಕೊಡಿ ಎಂದು ಕೇಳುತ್ತಿದ್ದಾರೆ. ಆ ಕಾಮಗಾರಿಗಳಿಗೆ ಹಣ ಮಂಜೂರಾಗಿ ಎರಡು ವರ್ಷವಾಗಿದೆ, ಆದರೆ ಕಾಮಗಾರಿ ನಡೆದಿಲ್ಲ. ಇಂತಹ ಪರಿಸ್ಥಿತಿ ಎಲ್ಲಾದರೂ ಉಂಟೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಸ್ತೆಗಳನ್ನು ಅಗೆದಿದ್ದಾರೆ, ಜನ ಓಡಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಶೋಚನೀಯ ಸ್ಥಿತಿ ಇದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಕೋಲಾರದ ರಸ್ತೆಗಳಿಗೆ ಕಳೆದ 7 ವರ್ಷಗಳ ಹಿಂದೆ ತಾರನ್ನು ಹಾಕಲಾಗಿತ್ತು, ಇವತ್ತಿನವರೆಗೂ ಕೂಡ ಆ ರಸ್ತೆಗಳಿಗೆ ಪುನಃ ತಾರನ್ನು ಹಾಕಿಲ್ಲ. ಅದರ ಜೊತೆಗೆ ಏನು ಒಳಚರಂಡಿ ವ್ಯವಸ್ಥೆ ಮತ್ತು ಯರಗೋಳ್ ಡ್ಯಾಂಗೆ ನೀರು ಬರುತ್ತದೆಂದು ರಸ್ತೆಗಳನ್ನೆಲ್ಲಾ ಅಗೆದು ಪೈಪ್ ಹಾಕಿಬಿಟ್ಟರು, ಯರಗೋಳ್ ಡ್ಯಾಂಗೆ ಒಂದು ತೊಟ್ಟು ನೀರು ಕೂಡ ಬರಲಿಲ್ಲ. ಒಂದು ಕಡೆ ಕೂಡ ನೀರು ಬರಲಿಲ್ಲ. ಒಂದುಕಡೆ ಓಡಾಡುವುದಕ್ಕೆ ಸರಿಯಾದ ರಸ್ತೆಯೂ ಇಲ್ಲ. ಇವರು ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ ಏನು ನಗರೋತ್ಥಾನ ಕಾಮಗಾರಿಗಳಲ್ಲಿ. . .

**ಸಭಾಪತಿಯವರು:–** ಮಾನ್ಯ ಸಚಿವರೇ, ಉತ್ತರ ಕೊಡಿ.

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯವನ್ನು ಹೇಳಿಬಿಡುತ್ತೇನೆ. ನಗರೋತ್ಥಾನ ಕಾಮಗಾರಿಗಳಲ್ಲಿ ಒಟ್ಟು ಎಸ್ಟಿಮೇಟ್ 1149.76 ಲಕ್ಷ ರೂಪಾಯಿಗಳು, ಆದರೆ ಇಲ್ಲಿಯವರೆಗೂ ಖರ್ಚು ಮಾಡಿರತಕ್ಕಂಥ ಹಣ ಮಾತ್ರ 649.41 ಲಕ್ಷ ರೂಪಾಯಿಗಳು. ಉಳಿಕೆ ಸುಮಾರು 500 ಲಕ್ಷ ರೂಪಾಯಿಗಳು ಅಂದರೆ 5 ಕೋಟಿ 35 ಲಕ್ಷ ರೂಪಾಯಿಗಳನ್ನು ಇಲ್ಲಿಯವರೆಗೂ ಖರ್ಚು ಮಾಡಿಲ್ಲ, ಈಗ ಜನವರಿ ಮುಗಿಯಿತು. ಅದರ ಜೊತೆಗೆ 14ನೇ ಹಣಕಾಸಿನ ಆಯೋಗದ ಅವಧಿ ಈಗಾಗಲೇ ಮುಗಿದಿದೆ. ಇವರ ಮಾಹಿತಿ ಪ್ರಕಾರ 1.74ಲಕ್ಷ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಬೇಕಾಗಿದೆ. ಅದು ಅಲ್ಲದೇ 15ನೇ ಹಣಕಾಸಿನ ಆಯೋಗದಲ್ಲಿ ಕೇವಲ 72 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದೆ. ಇವತ್ತಿನ ದಿವಸ ಬೆಂಗಳೂರು ಹೊರತುಪಡಿಸಿದರೆ, ಕೋಲಾರ ಜಿಲ್ಲಾ ಕೇಂದ್ರದಲ್ಲಿ ಅಭಿವೃದ್ಧಿ ಆಗಬೇಕಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಒಂದು ವಿಚಾರವನ್ನು ಹೇಳಿಬಿಡುತ್ತೇನೆ. ಸರ್ಕಾರದವರು ನಮಗೆ ಇನ್ನೂ ಕೋವಿಡ್–19 ಎಂದು ಹೇಳುತ್ತಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳು ನಾವು ನಿರೀಕ್ಷೆಗೆ ಮೀರಿ ಕೋಟಿಗಟ್ಟಲೆ ಟ್ಯಾಕ್ಸ್ ಸಂಗ್ರಹವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ನೀವು ಜನಗಳಿಗೆ ಅನುಕೂಲ ಮಾಡಿಕೊಡಬೇಕಾಗುತ್ತದೆ. ಈಗ ಕೋವಿಡ್–19 ಮುಗಿದು ಹೋಗಿದೆ. ಸಿನೆಮಾ ಟಾಕೀಸ್‌ಗೆಲ್ಲಾ ಶೇ.100 ಸೀಟ್‌ಗಳು ಭರ್ತಿಯಾಗಬೇಕು, ನೀವು ಜನಗಳೆಲ್ಲಾ ಬನ್ನಿ ಎಂದು ಹೇಳಿದ್ದೀರಿ. ಇಲ್ಲಿ ನೀವು ಬರೀ ಕೋವಿಡ್–19 ಎಂದು ವಿಧಾನಸೌಧಲ್ಲಿ ಹೇಳುತ್ತಿದ್ದಾರೆ. ದಯಮಾಡಿ ಕೋವಿಡ್–19 ವಿಚಾರವನ್ನು ನಿಲ್ಲಿಸಿ, ಜನರ ಕಡೆ ಗಮನಕೊಡಿಸಬೇಕು. ಮತ್ತೆ ರಾಜ್ಯದ ಅಭಿವೃದ್ಧಿ ಕಡೆ ಗಮನಹರಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರದಲ್ಲಿ ಮನವಿ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ):–** ಮಾನ್ಯ ಸಭಾಪತಿಯವರೇ, ವಿಶೇಷ ಅನುದಾನ ಕೊಟ್ಟಂತಹ 5 ಕೋಟಿ ರೂಪಾಯಿಗಳು. ಈ ಹಣವನ್ನು ಬಿಡುಗಡೆ ಮಾಡುವುದಕ್ಕೆ ಆರ್ಥಿಕ ಇಲಾಖೆಯವರು ಈ ಕೋವಿಡ್–19 ಮಹಾಮಾರಿ ಖಾಯಿಲೆಯಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ಸುಧಾರಣೆ ಆಗಬೇಕೆಂದು ಅದನ್ನು ತಡೆಹಿಡಿದಿದ್ದಾರೆ. ಅದಕ್ಕೋಸ್ಕರವಾಗಿ ಆ ಮಾತನ್ನೂ ಕೂಡ ನಾನು ಹೇಳಿದ್ದೇನೆ. ಇದರ ಜೊತೆಯಲ್ಲಿ ಇಲಾಖೆಗೆ. . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಬೇಕಾದಷ್ಟು ಹಣ ಇದೆ, ನೀವೇ 5 ಕೋಟಿ ರೂಪಾಯಿಗಳನ್ನು ಕೊಡಿ. ಆಮೇಲೆ ತೆಗೆದುಕೊಂಡರಾಯಿತು.

**ಶ್ರೀ ಎನ್.ನಾಗರಾಜು ಎಂ.ಟಿ.ಬಿ:–** ಮಾನ್ಯ ಸಭಾಪತಿಯವರೇ, ನಗರಸಭೆಗಳಿಗೆ ಬಹಳ ಮುಖ್ಯವಾಗಿ ಬರತಕ್ಕಂಥದ್ದು. . .

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಸರ್ಕಾರ ಹೊಸದಾಗಿ ಕೊಟ್ಟಿದ್ದಲ್ಲ. ಬಜೆಟ್‌ನಲ್ಲಿ ಇದ್ದುದನ್ನು ಹೇಳುತ್ತಿದ್ದೀರಿ. ನಿಮ್ಮ ಸರ್ಕಾರ ಅದಕ್ಕೆ ಕೊಟ್ಟಿದ್ದಲ್ಲ, ಹಿಂದಿನ ಸರ್ಕಾರ ಕೊಟ್ಟಂತಹ ಹಣ.

**(ಗೊಂದಲ)**

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ನಾವು ಪ್ರಶ್ನೆ ಮಾಡುತ್ತಿರುವುದು 5 ಕೋಟಿ ರೂಪಾಯಿಗಳದ್ದಲ್ಲ.(**ಗೊಂದಲ**) ಇವರು ಕೊಟ್ಟಂತಹ ಉತ್ತರದಲ್ಲಿ ನಗರೋತ್ಥಾನ ಕಾಮಗಾರಿಗಳಲ್ಲಿ ಇನ್ನೂ ನೀವು 500 ಕೋಟಿ ರೂಪಾಯಿಗಳು ಬಿಡುಗಡೆಗೊಳಿಸಬೇಕಾಗಿದೆ. ಮೊದಲು ಅದನ್ನು ಹೇಳಿ. ಅದಲ್ಲದೇ ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕೋಟಾದಡಿ ಬಜೆಟ್‌ನಲ್ಲಿ 5 ಕೋಟಿ ರೂಪಾಯಿಗಳು ಕೊಟ್ಟಿರುವುದು. ಈಗಾಗಲೇ ಎರಡೂವರೆ ವರ್ಷವಾಯಿತು. ನಮ್ಮ ರಸ್ತೆ ಅಭಿವೃದ್ಧಿಯಾಗುವುದು ಯಾವಾಗ?

**ಶ್ರೀ ಎನ್.ನಾಗರಾಜು ಎಂ.ಟಿ.ಬಿ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಬೇರೆ ಬೇರೆ ಕೆಲವು ನಗರ ಸಭೆಗಳಿಗೆ ಮತ್ತು ಪುರಸಭೆಗಳಿಗೆ ಕೆಲವು ಪಟ್ಟಣ ಪಂಚಾಯಿತಿಗಳಿಗೂ ಕೂಡ ವಿಶೇಷ ಅನುದಾನವನ್ನು ಕೊಟ್ಟಿದ್ದಾರೆ. ಎಲ್ಲಾ ನಗರಸಭೆಗಳಿಗೂ ಐದೈದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ.

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ....

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ; ನಾನು ಮಾತನಾಡಿದ ನಂತರ ಮಾನ್ಯ ಸದಸ್ಯರು ಮಾತನಾಡಲಿ. ಈಗಾಗಲೇ ನಮಗೂ ಕೂಡ ಆಹ್ವಾನ ಕೊಟ್ಟಿದ್ದಾರೆ. ಕೋಲಾರ ನಗರ ಸಭೆಗೆ ನಾವು ಭೇಟಿ ಮಾಡಿ ಅಲ್ಲಿ ಇರತಕ್ಕಂಥ ಎಲ್ಲಾ ಅಧಿಕಾರಿಗಳು ಮತ್ತು ಅಲ್ಲಿ ಇರತಕ್ಕಂಥ ಜನಪ್ರತಿನಿಧಿಗಳ ಜೊತೆ ಸಭೆ ಮಾಡುತ್ತೇವೆ. ಅಲ್ಲಿ ಇರತಕ್ಕಂಥ ಎಲ್ಲಾ ಸಾಧಕ–ಬಾಧಕಗಳನ್ನು ಚರ್ಚೆ ಮಾಡಿ ಅಲ್ಲಿಗೆ ಮೂಲಭೂತವಾಗಿ ಆಗಬೇಕಾಗಿರುವುದೇನು, ಈ ಹಿಂದೆ ಆಗಿರತಕ್ಕಂಥದ್ದೇನು; ಯಾವ ಇಲಾಖೆಯಿಂದ ಪ್ರತಿವರ್ಷ ಬಜೆಟ್‌ನಲ್ಲಿ ಎಷ್ಟೆಷ್ಟು ಹಣವನ್ನು ನಿಗದಿಪಡಿಸಲಾಗಿದೆ; 14ನೇ ಹಣಕಾಸಿನ ಆಯೋಗ ಮತ್ತು 15ನೇ ಹಣಕಾಸಿನ ಆಯೋಗದಲ್ಲಿ, S.F.C., ಮತ್ತು ಅಮೃತ ಯೋಜನೆ ಈ ಎಲ್ಲಾ ಯೋಜನೆಗಳಡಿಯಲ್ಲಿ ಬಂದಿರತಕ್ಕಂಥ ಆರ್ಥಿಕ ನೆರವನ್ನು ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಪರಿಶೀಲನೆ ಮಾಡಿ, ವಿಶೇಷ ಅನುದಾನವನ್ನು ಕೊಡುವುದಕ್ಕೆ ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಅದನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.229**
**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ಹರೀಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಯಾವ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಪರಿವರ್ತಿಸಲು ಕ್ರಮ ವಹಿಸಲಾಗಿದೆ; ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ಬಾಕಿ ಇರುವ ಪಂಚಾಯಿತಿಗಳೆಷ್ಟು ಎಂದು ಪ್ರಶ್ನೆ ಕೇಳಿದ್ದೆನು. ದಿನಾಂಕ 19.03.2015 ರಲ್ಲಿ ಸಚಿವ ಸಂಪುಟದ ನಿರ್ಣಯವಾಗಿದೆ. ಅದರಲ್ಲಿ 8 ಜಿಲ್ಲೆಗಳ 8 ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಿದ್ದಾರೆ. 19 ಜಿಲ್ಲೆಗಳ 30 ಪಟ್ಟಣ ಪಂಚಾಯಿತಿಗಳು ಇನ್ನೂ ಮೇಲ್ದರ್ಜೆಗೇರಿಸಲು ಬಾಕಿ ಇದೆ. ಒಂದೇ ದಿವಸ ದಿನಾಂಕ 19.03.2015 ರಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿಗಳಾಗಿ ಮೇಲ್ದರ್ಜೆಗೇರಿಸಬೇಕೆಂದು ಸಚಿವ ಸಂಪುಟದಲ್ಲಿ ನಿರ್ಣಯವಾಗಿದೆ. ಅದರಲ್ಲಿ ಏಕೆ ಬಾಕಿ ಇದೆ ಎನ್ನುವಂಥ ಉತ್ತರವನ್ನು ಮಾನ್ಯ ಸಚಿವರು ಒದಗಿಸಬೇಕು. ಗ್ರಾಮ ಪಂಚಾಯಿತಿಗಳಲ್ಲಿ ರೆವಿನ್ಯೂ ಕಡಿಮೆ ಇರುವುದರಿಂದ ಅದನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿದರೆ ಸರ್ಕಾರದಿಂದ ಅನುದಾನ ಬರುತ್ತದೆ, ಸ್ವಲ್ಪ ಅಭಿವೃದ್ಧಿ ಕಾರ್ಯಕ್ರಮಗಳಾಗುತ್ತವೆ ಎನ್ನುವಂಥ ವಿಚಾರವಾಗಿ ಮೇಲ್ದರ್ಜೆಗೇರಿಸಿದ್ದಾರೆ. ಆದರೆ, ಮೇಲ್ದರ್ಜೆಗೇರಿಸಿದಂಥ ಪಟ್ಟಣ ಪಂಚಾಯಿತಿಗಳಿಗೆ ಅನುದಾನವನ್ನು ಒದಗಿಸುತ್ತಾರೆಯೇ? ಅಥವಾ ಕೋವಿಡ್–19 ನಿಂದಾಗಿ ಗ್ರಾಮ ಪಂಚಾಯಿತಿಗಳು ಅನುದಾನದಿಂದ ವಂಚಿತವಾಗುತ್ತವೆಯೇ ಎಂದು ನಾನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಡು (Padu) ಎಂಬ ಗ್ರಾಮ ಪಂಚಾಯಿತಿ ಇದೆ. ಸುಮಾರು 10 ವರ್ಷಗಳ ಹಿಂದೆ ಅದನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸುವುದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಹೋಗಿದೆ. ಅದು ಕೂಡ ಏನು ಅದರ ಪಟ್ಟಿಯಲ್ಲಿ ಆ ಹೆಸರು ಕಾಣುತ್ತಿಲ್ಲ. ಆದ್ದರಿಂದ ಅದರ ಬಗ್ಗೆಯೂ ಕೂಡ ಮಾನ್ಯ ಸಚಿವರಲ್ಲಿ ಸ್ಪಷ್ಟನೆಯನ್ನು ಕೇಳುವುದಕ್ಕೆ ಬಯಸುತ್ತೇನೆ.

**(ಮುಂದು...)**

(76)02.02.2021/1.10/ಎಂ.ಎಂ–ಜಿ.ಆರ್

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 349ರನ್ವಯ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೇರಿಸಲು ಸರ್ಕಾರ ನಿಯಮಾನುಸಾರ 10,000ಕ್ಕಿಂತ ಕಡಿಮೆ ಇರಬಾರದು. 15,000 ಕ್ಕಿಂತ ಮೇಲ್ಪಟ್ಟು 20,000 ಕ್ಕಿಂತ ಹೆಚ್ಚು ಇಲ್ಲದಂತೆ ಇರುವ ಪಟ್ಟಣ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಿ ಪುರಸಭೆಯಾಗಿ ಮಾರ್ಪಾಡು ಮಾಡಲು ಸರ್ಕಾರದ ಸುತ್ತೋಲೆ ಇದೆ. ಜನಸಾಂದ್ರತೆಯ ಪ್ರತಿ ಚದರ ಕಿಲೋ ಮೀಟರ್‌ಗೆ 400ಕ್ಕಿಂತ ಕಡಿಮೆ ಇಲ್ಲದಿರುವುದು ಕೃಷಿಯೇತರ ಚಟುವಟಿಕೆಗಳು 50ಕ್ಕಿಂತ ಕಡಿಮೆ ಇಲ್ಲದಿರುವುದು ಅನ್ವಯವಾಗುತ್ತದೆ. ಅದರ ಜೊತೆಯಲ್ಲಿ ಇವರು ಕೇಳುತ್ತಿರುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತೊಂದು ಪ್ರಶ್ನೆ 15,000ಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ಗ್ರಾಮಪಂಚಾಯಿತಿಗಳಲ್ಲಿ ದಿನಾಂಕ 19.03.2015ರಲ್ಲಿ ಸರ್ಕಾರದಿಂದ ಒಂದು ಕ್ಯಾಬಿನೆಟ್ ಡಿಸಿಷನ್ ಆಗಿದೆ. 15,000 ಕ್ಕಿಂತ ಮೇಲ್ಪಟ್ಟ 20,000ದೊಳಗೆ ಇರುವ ಜನಸಂಖ್ಯೆ ಅಂತಹ ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗೆ ಮೇಲ್ದರ್ಜೆಗೇರಿಸುವುದಕ್ಕೆ ಕೂಡ ಅವಕಾಶಗಳಿವೆ. ಪ್ರಸಕ್ತ ಸಾಲಿನಲ್ಲಿ 2020–21ರಲ್ಲಿ ಕೆಲವು ಗ್ರಾಮ ಪಂಚಾಯಿತಿಗಳನ್ನು, ಪಟ್ಟಣ ಪಂಚಾಯಿತಿಗಳನ್ನು ಈಗಾಗಲೇ ಮೇಲ್ದರ್ಜೆಗೇರಿಸಲಾಗಿದೆ. ಅದು ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ಇರಬಹುದು, ವಿಜಯಪುರದಲ್ಲಿ ತಿಕೋಟಾ ಇರಬಹುದು, ಗುಲ್ಬರ್ಗಾದಲ್ಲಿ ಕಮಲಾಪುರ ಇರಬಹುದು, ಉಡುಪಿಯಲ್ಲಿ ಬೈಂದೂರು ಇರಬಹುದು, ಕಲಬುರಗಿ ಜಿಲ್ಲೆಯ ಯಡ್ರಾಮಿ, ದಾವಣಗೆರೆ ಜಿಲ್ಲೆಯ ನ್ಯಾಮತಿ, ಬಾಗಲಕೋಟೆ ಜಿಲ್ಲೆಯ ಲೋಕಾಪುರ ಮತ್ತು ಶಿರೂರು ಇರಬಹುದು ಈ 8 ಪಟ್ಟಣ ಪಂಚಾಯಿತಿಗಳನ್ನು ಈಗಾಗಲೇ ಮೇಲ್ದರ್ಜೆಗೇರಿಸಲಾಗಿದೆ. 2021–21ನೇ ಸಾಲಿನಲ್ಲಿ ಕರಡು ಅಧಿಸೂಚನೆಯನ್ನು ಈಗಾಗಲೇ ಹೊರಡಿಸಲಾಗಿದೆ. ಅದರಲ್ಲಿ ಎಂಟು, ಉಳಿಕೆ ಶಿವಮೊಗ್ಗ ಜಿಲ್ಲೆಯ ಆನವಟ್ಟಿ, ಕಬಟೂರು, ಸಮನವಳ್ಳಿ ಮತ್ತು ತಲ್ಲೂರು, ಹೊಳೆಹೊನ್ನೂರು, ಸಿದ್ಲಿಪುರ, ಎಮ್ಮೆಹಟ್ಟಿ ಮತ್ತು ಹನುಮಂತಾಪುರ ಈ 19 ಪಟ್ಟಣ ಪಂಚಾಯಿತಿಗಳನ್ನು ಕೂಡ ಕರಡು ಅಧಿಸೂಚನೆಗೆ ಸಾರ್ವಜನಿಕರಿಂದ ಆಕ್ಷೇಪಣೆ, ಸಲಹೆಗಳನ್ನು ಸಲ್ಲಿಸಲು ಪ್ರಚುರಪಡಿಸಿದ್ದು ಸ್ವೀಕೃತವಾಗಿರುವ ಆಕ್ಷೇಪಣೆಗಳ ಕುರಿತು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಹರೀಶ್‌ಕುಮಾರ್‌ರವರು ಯಾವ್ಯಾವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತನೆ ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದ್ದಾರೆ. ಮಾನ್ಯ ಸಚಿವರು ಪಟ್ಟಣ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಉತ್ತರ ಕೊಡುತ್ತಿದ್ದಾರೆ. ಅವರು ಕೇಳಿರುವುದು ಗ್ರಾಮ ಪಂಚಾಯಿತಿಗಳ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಹರೀಶ್ ಕುಮಾರ್‌ರವರು ಎಷ್ಟು ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಲಾಗಿದೆಯೆಂದು ಕೇಳಿದ್ದಾರೆ ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಕೊಟ್ಟ ವಿವರಗಳನ್ನು ಅವರು ಹೇಳಿದ್ದಾರೆ. ಕೊನೆಯಲ್ಲಿ ಮಾನ್ಯ ಹರೀಶ್‌ಕುಮಾರ್‌ರವರ ಪ್ರಶ್ನೆ ಇರುವುದು 'ಪುದು' ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೇರಿಸಬೇಕೆಂದು ಪ್ರಸ್ತಾಪ ಇದೆ. ಅದನ್ನು ಯಾವಾಗ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. ಅದು ಈ ಪಟ್ಟಿಯ ವ್ಯಾಪ್ತಿಯೊಳಗೆ ಇಲ್ಲ, ಹೊಸದಾಗಿ ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಪುದು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆ ಮಾಡುವುದಕ್ಕೆ ಬೇಕಾದಂತಹ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾವ್ಯಾವ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುತ್ತಾರೆ ಎಂಬಂತಹ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅವರ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಯಾವುದೇ ಗ್ರಾಮ ಪಂಚಾಯಿತಿಯನ್ನು ಮಾಡಬೇಕೆಂದರೆ ಇವರು ಜನಸಂಖ್ಯೆ ಬಗ್ಗೆ ಹೇಳುತ್ತಿದ್ದಾರೆ. ಪಟ್ಟಣ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೊಟ್ಟಿರುವ ಉತ್ತರ ಸುದೀರ್ಘವಾಗಿರಬಹುದು. ಆದರೆ ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಹೆಚ್ಚುವರಿಯಾಗಿ ಉಪ ಪ್ರಶ್ನೆ ಕೇಳಿದ್ದಕ್ಕೂ ಕೂಡ ಅವರು ಉತ್ತರ ಕೊಟ್ಟಿದ್ದಾರೆ.

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಹಿಂದೆ ಇದ್ದ 10,000 ದಿಂದ 15,000 ಜನಸಂಖ್ಯೆಯ ಆಧಾರದ ಮೇಲೆ ಪಟ್ಟಣ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಇದ್ದ ಹಿಂದಿನ ಆದೇಶಕ್ಕೆ ಹೊಸದಾಗಿ 2015ರಲ್ಲಿ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನವಾಗಿದೆ. 15,000ಕ್ಕಿಂತ ಮೇಲ್ಪಟ್ಟು 20,000ದೊಳಗಿರುವ ಪಟ್ಟಣ ಪಂಚಾಯಿತಿಗಳನ್ನು ಪುರಸಭೆ ಮಾಡುವುದಕ್ಕೆ ಕೂಡ ರೆಫರ್ ಆಗಿದೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಅದು ನಮ್ಮ ಸರ್ಕಾರ ಇದ್ದಾಗಲೇ resolution ಆಗಿದೆ.

**ಶ್ರೀ ವಿಜಯಸಿಂಗ್:-** ಮಾನ್ಯ ಸಚಿವರೇ, ಬೀದರ್‌ನಲ್ಲಿ ಕಮಲಾನಗರವು ಪಟ್ಟಣ ಪಂಚಾಯಿತಿಯಾಗಿತ್ತು. ಅಲ್ಲಿ ಪಂಚಾಯತ್ ಚುನಾವಣೆಯಾಗಿದೆ ಅದರ ಬಗ್ಗೆ ಸ್ವಲ್ಪ ಮಾಹಿತಿ ಬೇಕಾಗಿದೆ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ 2015ರ ಜನಸಂಖ್ಯೆಯ ಆಧಾರದ ಮೇಲೆ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುವಂತಹ ಸರ್ಕಾರದ ವಿಚಾರವನ್ನು ಸ್ವಾಗತ ಮಾಡುತ್ತಾ ಬೆಳಗಾವಿ ಜಿಲ್ಲೆಯಲ್ಲಿ ಸಹಿತ ಅನೇಕ ದೊಡ್ಡ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮಾಡಿದ್ದಾರೆ. ಈಗ ಬೆಳಗಾವಿ ಜಿಲ್ಲೆಯಲ್ಲಿರುವಂತಹ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಇಟಗಿಯಲ್ಲಿ 15,000 ಜನಸಂಖ್ಯೆಯಿದೆ. ಹುಕ್ಕೇರಿ ತಾಲ್ಲೂಕಿನ ಹತ್ತರಗಿ, ಚಿಕ್ಕೋಡಿ ತಾಲ್ಲೂಕಿನ ಕೆರೂರು ಇಲ್ಲಿ 16,189 ಜನಸಂಖ್ಯೆ ಇದೆ. ರಾಯಭಾಗ ತಾಲ್ಲೂಕಿನ ಕುಡಚಿ, ಅಥಣಿ ತಾಲ್ಲೂಕಿನ ಸಂಕುನಟ್ಟಿ, ಅಥಣಿ ಗ್ರಾಮೀಣ, ಕಾಗವಾಡ ತಾಲ್ಲೂಕಿನ ಮನ್ನೂಳಿ ಮತ್ತು ಮುಳೆ, ಮನ್ನೂಳಿ 17,500, ಮುಳೆಯಲ್ಲಿ 16,850 ಮತ್ತು ಬೆಳಗಾವಿ ತಾಲ್ಲೂಕಿನ ಸಾಂಬ್ರ 15,575 ಮತ್ತು ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ ಇಲ್ಲಿ ಸುಮಾರು 19,000, ಕಂಗ್ರಾಳಿಯಲ್ಲಿ ಸುಮಾರು 15,700, ಕಾಕತಿಯಲ್ಲಿ 18,000 ಜನಸಂಖ್ಯೆಯನ್ನು ಹೊಂದಿರುವ ದೊಡ್ಡ ಗ್ರಾಮ ಪಂಚಾಯಿತಿಗಳಾಗಿವೆ. ಸುಮಾರು 35 ರಿಂದ 40 ಗ್ರಾಮ ಪಂಚಾಯಿತಿ ಸದಸ್ಯರನ್ನು ಹೊಂದಿ ನಗರದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮೀಪವಿರುವ ಈ ದೊಡ್ಡ ಗ್ರಾಮ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಇವುಗಳನ್ನು ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳನ್ನಾಗಿ ಮಾಡಬೇಕೆನ್ನುವುದು ಇವತ್ತು ತಾವೇನು ಉತ್ತರ ಹೇಳಿದ್ದೀರಿ 15,000 ಕ್ಕಿಂತ ಮೇಲ್ಪಟ್ಟ ಜನಸಂಖ್ಯೆ ಎಂದು ಇದರ ಆಧಾರದ ಮೇಲೆ ಈ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಬೇಕು, ಪಟ್ಟಣ ಪಂಚಾಯಿತಿಗಳನ್ನಾಗಿ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಒತ್ತಾಯ ಮಾಡಬಯಸುತ್ತೇನೆ.

**ಶ್ರೀ ಎನ್. ನಾಗರಾಜು ಎಂ.ಟಿ.ಬಿ.:-** ಮಾನ್ಯ ಸಭಾಪತಿಯವರೇ, ಪುರಸಭೆಗಳ ಅಧಿನಿಯಮದ ಪ್ರಕಾರ ಅರ್ಹತೆ ಹೊಂದಿರುವ ಮತ್ತು 15,000 ಜನಸಂಖ್ಯೆಯಿರುವ ಜಿಲ್ಲಾಧಿಕಾರಿಗಳಿಂದ ಬಂದಿರುವ ಪ್ರಸ್ತಾವನೆಗಳೆಲ್ಲವನ್ನೂ ಪರಿಗಣಿಸಲಾಗಿದೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಮಾನ್ಯ ಮುಖ್ಯ ಸಚೇತಕರು ಅವರ ಜಿಲ್ಲೆ ಸೇರಬೇಕೆಂದು ಹೇಳಿದರು. ನಾನು ಬೆಂಗಳೂರು ನಗರವನ್ನು ಪ್ರತಿನಿಧಿಸುತ್ತಿರುವಂತಹವನು. ಬೆಂಗಳೂರು ನಗರದಲ್ಲಿ ಕಾರ್ಪೋರೇಷನ್‌ಗೆ ಹೊಂದಿಕೊಂಡಿರುವಂತಹ ಉಳಿಮಂಗಲ, ತೋಗೂರು ಎನ್ನುವಂತಹ ಒಂದು ಗ್ರಾಮ ಪಂಚಾಯಿತಿಯಲ್ಲಿ 60 ಜನ ಸದಸ್ಯರಿದ್ದಾರೆ. ಅವರು ನಮ್ಮದು ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೇರಿಸಬೇಡಿ ಎಂದು ಹೇಳುತ್ತಾರೆ. ರೆವಿನ್ಯೂ ಆ ಪಂಚಾಯಿತಿಗೆ ವರ್ಷಕ್ಕೆ 10 ಕೋಟಿ ರೂಪಾಯಿಗಳ ಮೇಲೆ ಬರುತ್ತದೆ. ಇಂತಹ ಪಂಚಾಯಿತಿಗಳು ನಮ್ಮಲ್ಲಿವೆ. ನೀವು ಕಾನೂನು ಮಾಡಿದರೆ 10,000 ಜನಸಂಖ್ಯೆಗಿಂತ ಮೇಲಿರುವಂತಹವರನ್ನು ಪಟ್ಟಣ ಪಂಚಾಯಿತಿ ಮಾಡುತ್ತೇವೆ ಎನ್ನುವುದಾದರೆ ಕಾನೂನು ಎಲ್ಲದಕ್ಕೂ ಸಮಾನವಾಗಿರಬೇಕು. ಇದನ್ನು ಏನಾದರೂ ಮಾಡಿ ಮಾಡುತ್ತೀರಾ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ನನ್ನ ವ್ಯಾಪ್ತಿಗೆ ಎರಡು ಪಂಚಾಯಿತಿಗಳು ಬರುತ್ತವೆ. ಎಲೆಕ್ಟ್ರಾನಿಕ್ ಸಿಟಿಗೆ ಹೊಂದಿಕೊಂಡಿರುವಂತಹ ಎರಡು ಗ್ರಾಮ ಪಂಚಾಯಿತಿಗಳ revenue is more than Rs.8 crore per annum. ಅವರು ಗ್ರಾಮ ಪಂಚಾಯಿತಿಯೇ ಇರಲಿ ಎಂದು ಹೇಳುತ್ತಾರೆ.

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.):-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಹೇಳಿರುವುದು ಸರಿಯಾಗಿದೆ. ಏಕೆಂದರೆ ಮಹಾನಗರಪಾಲಿಕೆಯ ಪಕ್ಕದಲ್ಲಿರುವ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಾಕಷ್ಟು ಗ್ರಾಮ ಪಂಚಾಯಿತಿಗಳಿವೆ. ಉದಾಹರಣೆಗೆ ಮಹದೇವಪುರ ಅಲ್ಲಿ ಕೂಡ 40-45 ಗ್ರಾಮ ಪಂಚಾಯಿತಿ ಸದಸ್ಯರಿರುವಂತಹ ದೊಡ್ಡ ಗ್ರಾಮ ಪಂಚಾಯಿತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, ಮಹದೇವಪುರದಲ್ಲಿ 40 ಸದಸ್ಯರಿರುವಂತಹ ಒಂದು ಗ್ರಾಮ ಪಂಚಾಯಿತಿಯೂ ಇಲ್ಲ. ಮಹದೇವಪುರ ವಿಧಾನಸಭಾಕ್ಷೇತ್ರದಲ್ಲಿ 11 ಗ್ರಾಮ ಪಂಚಾಯಿತಿಗಳು ಬರುತ್ತವೆ. ಇದರಲ್ಲಿ 33 ಜನ ಸದಸ್ಯರು ಬರುತ್ತಾರೆ.

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ).:-** 28, 30 ಮತ್ತು 35ವರೆಗೂ ಇದೆ. ಏಕೆಂದರೆ ಅದು ಮಹದೇವಪುರ ಕ್ಷೇತ್ರ. ಅಲ್ಲಿ ಅಂತರರಾಷ್ಟ್ರೀಯ ಮಟ್ಟದ ಕಾರ್ಖಾನೆಗಳು ಮತ್ತು ವಿದ್ಯಾಸಂಸ್ಥೆಗಳು ಸಾಕಷ್ಟು ಅಭಿವೃದ್ಧಿಯಾಗಿವೆ. ಅಲ್ಲಿ ಬಹಳಷ್ಟು ರೆವಿನ್ಯೂ ಬರುತ್ತದೆ. ಆದ್ದರಿಂದ ಆ ಗ್ರಾಮ ಪಂಚಾಯಿತಿಯಲ್ಲಿ ಅಲ್ಲಿರುವಂತಹ ಅಧ್ಯಕ್ಷರು, ಮತ್ತು ಸದಸ್ಯರು ಮತ್ತು ಆಡಳಿತ ಮಂಡಳಿಯವರು ಅದನ್ನು ಮೇಲ್ದರ್ಜೆಗೇರಿಸುವುದಕ್ಕೆ ಬಹಳಷ್ಟು ಪ್ರತಿಭಟನೆ ಕೂಡ ಮಾಡಿದ್ದಾರೆ. ತಾವು ಹೇಳಿದ ಹಾಗೆ ಅಲ್ಲಿ ಬಹಳಷ್ಟು ರೆವಿನ್ಯೂ ಬರುತ್ತದೆ. ಮಹಾನಗರ ಪಾಲಿಕೆ ವಾರ್ಡ್‌ಗಳಲ್ಲಿ ಬರುವಂತಹ ಆದಾಯ ಏನಿದೆ ಅಷ್ಟೇ ಆದಾಯಕ್ಕಿಂತ ಮಿಗಿಲಾಗಿ ಗ್ರಾಮ ಪಂಚಾಯಿತಿಗೆ ಆದಾಯ ಇದೆ. ಆದ್ದರಿಂದ ಸರ್ಕಾರ ಎಚ್ಚೆತ್ತುಕೊಂಡು ಇದಕ್ಕೊಂದು ತೀರ್ಮಾನ ಮಾಡಬೇಕು. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಚರ್ಚೆ ಮಾಡಿ;

**(ಈ ಹಂತದಲ್ಲಿ ವೈಸ್ ಚೇರ್ಮನ್‌ರವರಾದ ಶ್ರೀ ಮರಿತಿಬ್ಬೇಗೌಡರು ಸಭಾ ಪೀಠವನ್ನಲಂಕರಿಸಿದರು)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, ಸರ್ಕಾರ ಮಾಡಬೇಕು ನಿಜ ಆದರೆ ಸದ್ಯ ನೀವೇ ಅದರ ಜವಾಬ್ದಾರಿ ಹೊಂದಿರುವಂತಹ ಜವಾಬ್ದಾರಿಯುತ ಮಂತ್ರಿಗಳಾಗಿದ್ದೀರಿ. 10,000 ಜನಸಂಖ್ಯೆಗಿಂತ ಮೇಲ್ಪಟ್ಟ ಜನಸಂಖ್ಯೆ ಇರುವುದನ್ನು ಪಟ್ಟಣ ಪಂಚಾಯಿತಿ ಮಾಡಬೇಕೆಂದು ತೀರ್ಮಾನವಾದರೆ ಯಾವುದಾದರೂ ಗ್ರಾಮ ಪಂಚಾಯಿತಿಯಾಗಿರಲಿ ದಯಮಾಡಿ ಅದನ್ನು ಮೇಲ್ದರ್ಜೆಗೇರಿಸಿ.

**ಶ್ರೀ ಎನ್. ನಾಗರಾಜು ಎಂ.ಟಿ.ಬಿ.:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮತ್ತು ನಗರಾಭಿವೃದ್ಧಿ ಸಚಿವರಾದ ಮಾನ್ಯ ಬಸವರಾಜುರವರ ಜೊತೆ ಒಂದು ಸಭೆ ಮಾಡಿ ಇದನ್ನು ಮೇಲ್ದರ್ಜೆಗೇರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

**ಶ್ರೀ ವಿಜಯಸಿಂಗ್:-** ಮಾನ್ಯ ಸಚಿವರೇ, ಇದರಲ್ಲಿ ಬೀದರ್ ಜಿಲ್ಲೆಯ ಮಾಹಿತಿ ಇಲ್ಲ. ಮೂರು ಪಂಚಾಯಿತಿಗಳಿಗೆ ಏನು ತಾವು ಪಟ್ಟಣ ಪಂಚಾಯಿತಿಯನ್ನು ನೇಮಕ ಮಾಡಿದ್ದೀರಿ ಇಲ್ಲಿ ಅದರ ಬಗ್ಗೆ ಮಾಹಿತಿ ಇಲ್ಲ.

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.):-** ಮಾನ್ಯ ಸದಸ್ಯರೇ ಆ ಮಾಹಿತಿಗಳನ್ನು ಒದಗಿಸಿಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(77) 02–02–2021/ 01–20/ ಕೆಹೆಚ್–ಎಂಡಿ **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 02ನೇ ಫೆಬ್ರವರಿ 2021, ಸಮೂಹ–2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 69 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಟ್ಟು 69 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಒಂದು ಬಾರಿ ಮುಗುಳುನಗೆ ಬೀರಿ ಎನ್ನುವುದು ನನ್ನ ವಿನಂತಿ ಅಷ್ಟೇ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾನಾಯಕರೇ, ತಾವು ಉತ್ತರವನ್ನು ಒದಗಿಸಿರುವುದಕ್ಕೆ ಧನ್ಯವಾದಗಳು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಮುಖದಲ್ಲಿ ಸ್ವಲ್ಪ ಮುಗುಳುನಗೆ ಬರಲಿ ಎನ್ನುವುದು ಅಷ್ಟೇ. ತಾವು ಬಹಳ ಕೋಪದಿಂದ ಕುಳಿತುಕೊಂಡಿದ್ದೀರಿ. ತಮಗೆ ಸಮಾಧಾನವಾಗಿದೆ ಎನ್ನುವುದು ನನ್ನ ಭಾವನೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:– ಕೆ.ಪಿ.ಎಸ್.ಸಿ.ಯ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ಲಿಖಿತ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ.**

– – –

**ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ, ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ತುಂಬಲು ನಡೆಸಲಾಗುವ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ದಿನಾಂ:24.01.2021ರ ಭಾನುವಾರದಂದು ನಡೆಯಬೇಕಾಗಿತ್ತು. ಆದರೆ ಸದರಿ ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಸೋರಿಕೆಯಾಗಿರುವ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದುಗೊಳಿಸಿರುತ್ತಾರೆ.

ಮೇಲಿನ ಪರೀಕ್ಷೆಯನ್ನು ರದ್ದುಗೊಳಿಸಿರುವ ಹಿನ್ನೆಲೆಯಲ್ಲಿ ಸುಮಾರು 3 ಲಕ್ಷಕ್ಕೂ ಹೆಚ್ಚು ಮಂದಿ ಪ್ರಥಮ ದರ್ಜೆ ಸಹಾಯಕ ಹುದ್ದೆಯ ಆಕಾಂಕ್ಷಿಗಳಾಗಿ ಪರೀಕ್ಷೆಯನ್ನು ಬರೆಯಬೇಕಾಗಿತ್ತು. ಈ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದಲ್ಲಿ ಲಕ್ಷಾಂತರ ಹುದ್ದೆಯ ಆಕಾಂಕ್ಷಿಗಳಿಗೆ ತೊಂದರೆಯಾಗಿರುವುದು ಮತ್ತು ಆ ಪರೀಕ್ಷೆಯನ್ನು ತೆಗೆದುಕೊಂಡಿರುವಂತಹ ಆ ಅಭ್ಯರ್ಥಿಯನ್ನು Confidential Branch ಗೆ ಹಾಕಿರುವುದು ತಿಳಿದುಬಂದಿದೆ. ಇದು ಒಂದು ಕಳವಳಕಾರಿಯಾದ ಬೆಳವಣಿಗೆಯಾಗಿದೆ. ಈ ವಿಷಯ ಗಂಭೀರವಾಗಿರುವುದರಿಂದ ದಿನಾಂಕ:02–02–2021 ರ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕೆ.ಪಿ.ಎಸ್.ಸಿ ನಡೆಸುತ್ತಿರುವ ಪ್ರಥಮ ದರ್ಜೆ ಸಹಾಯಕ ಹುದ್ದೆಗಳ ಲಿಖಿತ ಪರೀಕ್ಷಾ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ ಮಾನ್ಯ ಸದಸ್ಯರಾದ ಅ.ದೇವೇಗೌಡರವರು ಪ್ರಶ್ನೆಯನ್ನು ಕೇಳಿದ್ದಾರೆ. ಈ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರ ಕಡೆಯಿಂದ ಉತ್ತರವನ್ನು ಒದಗಿಸುತ್ತೇನೆ.

**ಆ) ವಿಷಯ:– ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿ ಕೆರೆಗಳನ್ನು ಅಕ್ಕಪಕ್ಕದ ಭೂಮಾಲೀಕರು ಒತ್ತುವರಿ ಮಾಡಿಕೊಂಡಿರುವ ಬಗ್ಗೆ.**

– – –

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ಐತಿಹಾಸಿಕ 7 ಕೆರೆಗಳಿದ್ದು, ಆ ಪೈಕಿ 5 ಕೆರೆಗಳು ಮಾತ್ರ ಉಳಿದುಕೊಂಡು ಬಂದಿದ್ದವು. ಆದರೆ ಈ 5 ಕೆರೆಗಳಲ್ಲಿ ಪ್ರಸ್ತುತ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದ ಒಂದು ಕೆರೆ ಸಂಪೂರ್ಣ ಅತಿಕ್ರಮಣಗೊಂಡಿರುತ್ತದೆ. ಪ್ರಸ್ತುತ ಮತ್ತೊಂದು ಐತಿಹಾಸಿಕ ಕೆರೆಯಾದ ಮಹಾರಾಣಿ ಕೆರೆ ಸಿಟಿ ಸರ್ವೇ ದಾಖಲೆಗಳ ಪ್ರಕಾರ ಕೆರೆ ಎಂಬುದಾಗಿ ಸ್ಪಷ್ಟವಾಗಿ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಮೂದಿಸಲಾಗಿದೆ. 1964ರಲ್ಲಿ ಭೂಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದಿದ್ದು, ಸದರಿ ಕಾಯ್ದೆಯನ್ವಯ ಯಾವುದೇ ರೀತಿಯ ಆಕಾರ ಇಲ್ಲದಿರುವ ಜಮೀನುಗಳನ್ನು ಪರಭಾರೆ ಮಾಡಲು ಅವಕಾಶ ಇರುವುದಿಲ್ಲ. ಆದಾಗ್ಯೂ ಅಧಿಕಾರಿಗಳ ದುರುಪಯೋಗದಿಂದ ಒಂದೇ ಕುಟುಂಬದ ಮೂವರಿಗೆ ಕೆರೆಯ ಜಾಗವನ್ನು ಖರೀದಿಗೆ ಅವಕಾಶ ಮಾಡಿಕೊಟ್ಟಿರುವುದು ಅತ್ಯಂತ ಖೇದನೀಯ ಸಂಗತಿ.

ಕೆರೆ ಸಂರಕ್ಷಣೆಗಾಗಿ ರಾಜ್ಯದಲ್ಲಿ ಕಾನೂನು ಜಾರಿಯಲ್ಲಿದ್ದರೂ ಬಾಗಲಕೋಟೆಯ ಮುಧೋಳದಲ್ಲಿ ಎಲ್ಲ ಕಾನೂನುಗಳು ಉಲ್ಲಂಘನೆಯಾಗುತ್ತಿರುವುದು. ಉಪಮುಖ್ಯಮಂತ್ರಿಗಳಿಗೆ ಅರಿವಿದ್ದರೂ ಅವರ ಕ್ಷೇತ್ರದಲ್ಲೇ ಖಾಸಗಿಯವರಿಗೆ ಸರ್ಕಾರದ ಕೆರೆಗಳು, ಉದ್ಯಾನವನಗಳು ಪರಭಾರೆಯಾಗುತ್ತಿರುವುದು ಕ್ಷೇತ್ರದ ಜನಾಕ್ರೋಶಕ್ಕೆ ಕಾರಣವಾಗಿದೆ.

ಸರ್ಕಾರದ/ಸಾರ್ವಜನಿಕ ಸ್ವತ್ತುಗಳನ್ನು ರಕ್ಷಿಸಬೇಕಾದ ಸರ್ಕಾರವೇ ಖಾಸಗಿಯವರಿಗೆ ಅತಿಕ್ರಮಿಸಲು ಕುಮ್ಮಕ್ಕು ನೀಡುತ್ತಿರುವುದು ಅತ್ಯಂತ ಶೋಚನೀಯ. ಕೂಡಲೇ ಸದರಿ ಕೆರೆಯನ್ನು ಖಾಸಗಿಯವರಿಂದ ಮುಕ್ತಗೊಳಿಸಿ ಸರ್ಕಾರದ ವಶಕ್ಕೆ ಪಡೆಯುವಲ್ಲಿ ಸರ್ಕಾರ ಕ್ರಮ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿ ಕೆರೆಗಳನ್ನು ಅಕ್ಕಪಕ್ಕದ ಭೂಮಾಲೀಕರು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಮಾನ್ಯ ಸಣ್ಣ ನೀರಾವರಿ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಇ) ವಿಷಯ:– ಬೆಂಗಳೂರು ಕರಗ ಉತ್ಸವದ ಆಚರಣೆಗೆ ಸೂಕ್ತ ನಿರ್ದೇಶನ ಹಾಗೂ ಮಾರ್ಗಸೂಚಿ ಹೊರಡಿಸುವ ಬಗ್ಗೆ.**

– – – –

**ಶ್ರೀ ಪಿ.ಆರ್.ರಮೇಶ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಬೆಂಗಳೂರು ನಗರದಲ್ಲಿ ನೂರಾರು ವರ್ಷಗಳಿಂದ ವಿಶ್ವವಿಖ್ಯಾತ ಐತಿಹಾಸಿಕ ಕರಗ ಉತ್ಸವ ಆಚರಿಸುತ್ತಾ ಬಂದಿದ್ದು, ನಗರದ ಕಲ್ಯಾಣ ಹಾಗೂ ಜನ–ಜೀವನ ಸಮೃದ್ಧಿಯಾಗಿ ಇರಲು ಪ್ರತಿ ವರ್ಷ ಚೈತ್ರ ಮಾಸದ ಹುಣ್ಣಿಮೆ ದಿನದಂದು ಬೆಂಗಳೂರು ಮಧ್ಯ ಭಾಗದಲ್ಲಿರುವ ತಿಗಳರ ಪೇಟೆಯ ಶ್ರೀ ಧರ್ಮರಾಯ ದೇವಸ್ಥಾನದಲ್ಲಿ ಶ್ರೀ ದ್ರೌಪದಿ ಕರಗ ಉತ್ಸವವು ವಿಜೃಂಭಣೆಯಿಂದ ನಡೆಯುತ್ತಾ ಬಂದಿದೆ. ಆದರೆ ಕಳೆದ ವರ್ಷ ಕೋವಿಡ್–19ರ ಬಿಕ್ಕಟ್ಟಿನಿಂದ ಉತ್ಸವ ನಡೆಯದಿದ್ದರೂ, ಸೀಮಿತ ಸಾಂಪ್ರದಾಯಿಕ ಪೂಜಾ ಕೈಂಕರ್ಯಗಳು ಒಳಗೊಂಡಂತೆ ದೇವಸ್ಥಾನಗಳ ಅಂಗಳದಲ್ಲೇ 9

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಿನಗಳ ಕಾರ್ಯಕ್ರಮಗಳೊಂದಿಗೆ ಕರಗದ ಕಾರ್ಯಕ್ರಮ ನೇರವೇರಿತ್ತು. ಪ್ರಸಕ್ತ ವರ್ಷದಲ್ಲಿ ಕರಗವು ಏಪ್ರಿಲ್ 27 ರಂದು ನಡೆಯುವುದರಿಂದ ಇದಕ್ಕೆ ಸಂಬಂಧಿಸಿದ ಪೂಜಾ ಕೈಂಕರ್ಯಗಳು 9 ದಿನಗಳ ಮುಂಚಿತವಾಗಿಯೇ ನಡೆಯಬೇಕಾಗಿರುತ್ತದೆ. ಈ ಕಾರ್ಯಕ್ರಮದ ವಿಷಯವಾಗಿ ಜನರಲ್ಲಿ ಯಾವುದೇ ರೀತಿಯ ಆತಂಕಕ್ಕೆ ಅಸ್ಪದ ಮಾಡಿಕೊಡದೆ, ಕರಗವನ್ನು ಆಚರಿಸಲು ಸರ್ಕಾರ, ಬಿ.ಬಿ.ಎಂ.ಪಿ., ಗೃಹ ಇಲಾಖೆ, ಜಿಲ್ಲಾಡಳಿತ ಮತ್ತು ಮುಜರಾಯಿ ಇಲಾಖೆಯಿಂದ ಅಗತ್ಯ ಕ್ರಮಗಳನ್ನು ಕೈಗೊಂಡು ಸೂಕ್ತ ನಿರ್ದೇಶನ ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಿ, ನಗರ ಸಂಪ್ರದಾಯ ಹಾಗೂ ಆಚರಣೆಗೆ ಯಾವುದೇ ಚ್ಯುತಿ ತರದೇ ಪ್ರಸ್ತುತ ಕೋವಿಡ್-19 ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ನೂರಾರು ವರ್ಷಗಳಿಂದ ಬೆಂಗಳೂರು ನಗರದಲ್ಲಿ ಆಚರಿಸುವ ಐತಿಹಾಸಿಕ ಕರಗ ಉತ್ಸವವನ್ನು ಪ್ರತಿ ವರ್ಷದಂತೆ ಈ ವರ್ಷವೂ ಸಂಭ್ರಮದಿಂದ ಆಚರಿಸಲು ಅವಕಾಶ ಕಲ್ಪಿಸಬೇಕೆಂದು ಬೆಂಗಳೂರು ನಗರ ಜನತೆಯ ಪರವಾಗಿ ಬೆಂಗಳೂರು ನಗರದ ಉಸ್ತವಾರಿಯಾದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ಕರಗ ಉತ್ಸವದ ಆಚರಣೆಯ ಬಗ್ಗೆ ಕೋವಿಡ್-19ರ ಗೈಡ್‌ಲೈನ್ ವ್ಯಾಪ್ತಿಯೊಳಗೆ ನೂರಾರು ವರ್ಷಗಳ ಇತಿಹಾಸ ಇರುವಂತಹ ಈ ಕರಗವನ್ನು ಆಚರಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಹಿರಿಯ ಸದಸ್ಯರಾದ ಪಿ.ಆರ್.ರಮೇಶ್‌ರವರು ಉಲ್ಲೇಖ ಮಾಡಿದ್ದಾರೆ. ಇದರ ಬಗ್ಗೆ ಕೋವಿಡ್-19ರ ವ್ಯಾಪ್ತಿಯೊಳಗೆ ಮಾಡಬೇಕೆಂಬ ಸಲಹೆಯನ್ನು ಗಂಭೀರವಾಗಿ ತೆಗೆದುಕೊಳ್ಳುತ್ತೇವೆ ಮತ್ತು ಇದರ ಮಾಹಿತಿಯನ್ನು ಮತ್ತು ಅಗತ್ಯವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಯವರ ಕಡೆಯಿಂದ ಒದಗಿಸಲಾಗುವುದು. ಅದರ ಜೊತೆಗೆ ಸಾಂಪ್ರದಾಯಿಕವಾಗಿ ಈ ಕರಗವನ್ನು ಹೊರುವವರಲ್ಲಿಯೂ ಸಹ ಕೆಲವು ಸಣ್ಣ ಸಮಸ್ಯೆಗಳು ಇವೆ. ಅದರಲ್ಲಿ ಕೆಲವರು ಬಂದಿದ್ದಾರೆ. ನಾಳೆ ಅಥವಾ ನಾಡಿದ್ದು ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಕರೆದು ಮಾತನಾಡಿ ಈ ಕರಗ ಉತ್ಸವದ ಆಚರಣೆ ಮತ್ತು ಅದರಲ್ಲಿರುವ ಸಣ್ಣ-ಪುಟ್ಟ ಸಮಸ್ಯೆಗಳನ್ನು ಪರಿಹಾರ ಮಾಡುತ್ತೇವೆ. ಇದಕ್ಕೆ ಸಂಬಂಧಪಟ್ಟ ಲಿಖಿತವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಯವರ ಕಡೆಯಿಂದ ಒದಗಿಸಿಕೊಡುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದಕ್ಕೆ ಸಂಬಂಧಪಟ್ಟಂತೆ ನಾನು ಎರಡು ಪತ್ರಗಳನ್ನು ಬರೆದಿದ್ದೇನೆ. ಇದರ ಬಗ್ಗೆ ಸಭೆಯನ್ನು ಕರೆಯುತ್ತೇನೆ ಎಂದು ಹೇಳುತ್ತಾರೆ. ಆದರೆ ಸಭೆಯನ್ನು ಕರೆಯುವುದಿಲ್ಲ. ನನ್ನನ್ನು ಕರೆದು ಅಧಿಕಾರಿಗಳ ಜೊತೆಯಲ್ಲಿ ಕುಳಿತು, ಈ ವಿಷಯವನ್ನು ಪ್ರಸ್ತಾಪ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಆ ಒಂದು ಜನಾಂಗವನ್ನು ನಾನು ಒಬ್ಬನೇ ಪ್ರತಿನಿಧಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರೇ, ಒಂದು ನಿಮಿಷ. ತಾವು ಈ ವಿಚಾರಕ್ಕೆ ಪತ್ರ ಬರೆದಿರುವ ಬಗ್ಗೆ ನಮಗೆ ಗೊತ್ತಿರಲಿಲ್ಲ. ಬೇರೆ ವಿಚಾರಕ್ಕೆ ಸಭೆಯನ್ನು ಕರೆಯಿರಿ ಎಂದು ಹೇಳಿದ್ದೀರಿ. ಈ ಸದನ ಮುಗಿವುದರೊಳಗೆ ಅಥವಾ ಸದನ ಮುಗಿಯುವ ಒಂದೆರಡು ದಿವಸದೊಳಗೆ ತಮ್ಮನ್ನು, ಅಧಿಕಾರಿಗಳನ್ನು ಕರೆದು ಈ ಸಮಸ್ಯೆಯನ್ನು ಮತ್ತು ತಾವು ಮೊದಲು ಹೇಳಿರುವಂತಹ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ.

**ಸಭಾಪತಿಯವರು:–** ಈಗ ಸದನವನ್ನು ಮಧ್ಯಾಹ್ನ 2 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(78)/02.02.2021/3.00/ಹೆಚ್‌ವಿಃಆರ್‌ಎನ್**

**(ಮಧ್ಯಾಹ್ನ 1 ಗಂಟೆ 27 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

## 4. ನಿರ್ಣಯ

**ವಿಷಯಃ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಅವರನ್ನು ಸಭಾಪತಿ ಸ್ಥಾನದಿಂದ ತೆಗೆದು ಹಾಕಬೇಕೆಂದು ನೀಡಿರುವ ನಿರ್ಣಯ.**

---

**ಸಭಾಪತಿಯವರು:–** ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಆಯನೂರು ಮಂಜುನಾಥ್, ಡಾ:ತಳವಾರ ಸಾಬಣ್ಣ, ಶ್ರೀ ಅರುಣ ಶಹಾಪುರ, ಶ್ರೀ ಎಸ್.ವ್ಹಿ.ಸಂಕನೂರ, ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ, ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಹಾಗೂ ಇತರರು ಈ ಕೆಳಕಂಡ ನಿರ್ಣಯವನ್ನು ನೀಡಿರುತ್ತಾರೆ;

**"ದಿನಾಂಕ:18.01.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 165(1) ಹಾಗೂ ಭಾರತದ ಸಂವಿಧಾನದ 183ನೇ ಅನುಚ್ಛೇದದ (ಸಿ) ಖಂಡದಡಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಮಾನ್ಯ ಸಭಾಪತಿಯವರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಅವರನ್ನು ಸಭಾಪತಿ ಸ್ಥಾನದಿಂದ ತೆಗೆದು ಹಾಕಬೇಕೆಂದು ಸಲ್ಲಿಸಿರುವ ನಿರ್ಣಯ"**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 166ರ ರೀತ್ಯಾ ನಿರ್ಣಯದ ಪರವಾಗಿ ಎದ್ದು ನಿಲ್ಲುವ ಸದಸ್ಯರ ಸಂಖ್ಯೆ 10 ಕ್ಕಿಂತ ಕಡಿಮೆ ಇದ್ದರೆ, ಆ ನಿರ್ಣಯ ಬಿದ್ದು ಹೋಗುತ್ತದೆ, ಹತ್ತಕ್ಕಿಂತ ಹೆಚ್ಚಾದರೆ, ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮತ್ತು ಮತದಾನ ಮಾಡುವುದಕ್ಕೆ ಈ ಸಭೆಯು ಒಪ್ಪಿಗೆ ಕೊಟ್ಟಿದೆಯೆಂದು ತೀರ್ಮಾನವಾಗುತ್ತದೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ;

> **"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 165(1) ಹಾಗೂ ಭಾರತದ ಸಂವಿಧಾನದ 183ನೇ ಅನುಚ್ಛೇದದ (ಸಿ) ಖಂಡದಡಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಅವರನ್ನು ಸಭಾಪತಿ ಸ್ಥಾನದಿಂದ ತೆಗೆದು ಹಾಕಬೇಕೆಂದು ಸಲ್ಲಿಸಿರುವ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ."**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> **"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 165(1) ಹಾಗೂ ಭಾರತದ ಸಂವಿಧಾನದ 183ನೇ ಅನುಚ್ಛೇದದ (ಸಿ) ಖಂಡದಡಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಅವರನ್ನು ಸಭಾಪತಿ ಸ್ಥಾನದಿಂದ ತೆಗೆದು ಹಾಕಬೇಕೆಂದು ಸಲ್ಲಿಸಿರುವ ನಿರ್ಣಯವನ್ನು ಮಂಡಿಸಲಾಯಿತು."**

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಈಗ ನಿಯಮಾನುಸಾರ ನಿರ್ಣಯಕ್ಕೆ ಸಮ್ಮತಿ ಕೊಡುವ ಸದಸ್ಯರು ತಮ್ಮತಮ್ಮ ಸ್ಥಾನದಲ್ಲಿ ಎದ್ದು ನಿಲ್ಲಬೇಕೆಂದು ಕೋರುತ್ತೇನೆ.

**(ಸ್ಥಾನದಲ್ಲಿ ಹಾಜರಿದ್ದ ಭಾರತೀಯ ಜನತಾ ಪಕ್ಷದ ಎಲ್ಲ ಮಾನ್ಯ ಸದಸ್ಯರುಗಳು ಮತ್ತು ಜಾತ್ಯಾತೀತ ಜನತಾದಳ ಪಕ್ಷ ಎಲ್ಲ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನದಲ್ಲಿ ಎದ್ದು ನಿಲ್ಲುವ ಮೂಲಕ ನಿರ್ಣಯಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಿದರು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ನಿರ್ಣಯವನ್ನು 10ಕ್ಕಿಂತ ಹೆಚ್ಚು ಸದಸ್ಯರು ಬೆಂಬಲಿಸಿರುವುದರಿಂದ ನಿರ್ಣಯಕ್ಕೆ ಅನುಮತಿ ನೀಡಲಾಗಿದೆ. ಮೇಲ್ಕಂಡ ನಿರ್ಣಯವನ್ನು ಸೂಕ್ತ ದಿನಾಂಕದಂದು ಪರಿಶೀಲನೆಗೆ ತೆಗೆದುಕೊಳ್ಳಲು ನಿಯಮಾನುಸಾರ ದಿನಾಂಕವನ್ನು ನಂತರ ಗೊತ್ತುಪಡಿಸಲಾಗುವುದು.

**ನಿರ್ಣಯಕ್ಕೆ ಒಪ್ಪಿಗೆ ದೊರೆಯಿತು ಮತ್ತು ಪರಿಶೀಲನೆಗೆ ತೆಗೆದುಕೊಳ್ಳಲು ಸದನ ಸಮ್ಮತಿಸಿತು**

(ಮುಂದುವರಿದಿದೆ)

(79) 2.2.2021 3.10 ಪಿಕೆ : ಆರ್‌ಎನ್

**5. ನಿಯಮ 68ರ ಮೇರೆಗೆ ಪ್ರಸ್ತಾಪಿಸಲಾದ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ**

**ವಿಷಯ: ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿನ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ ಸಂಗ್ರಹಿಸಿದ್ದ ಸ್ಫೋಟಕಗಳಿಂದ ಸಂಭವಿಸಿರುವ ದುರಂತದ ಕುರಿತು.**

– – – –

**ಶ್ರೀ ಮುರುಗೇಶ್ ಆರ್.ನಿರಾಣಿ (ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ,

(ಲಿಖಿತ ಉತ್ತರವನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮುರುಗೇಶ್ ಆರ್.ನಿರಾಣಿ (ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಮೊನ್ನೆ ನಡೆದ ಶಿವಮೊಗ್ಗ ಜಿಲ್ಲೆಯ ಹುಣಸೋಡು ಗ್ರಾಮದ ಬಳಿ ಸಂಭವಿಸಿದ ಸ್ಫೋಟಕ್ಕೆ ಸಂಬಂಧಪಟ್ಟಂತೆ ನಿಯಮ 68ರ ಅಡಿ ಗೌರವಾನ್ವಿತ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಹಾಗೂ ಗೌರವಾನ್ವಿತ ಸದಸ್ಯರಾದ ಶ್ರೀ ಆಯನೂರು ಮಂಜುನಾಥ, ಶ್ರೀ ಎಂ.ನಾರಾಯಣಸ್ವಾಮಿ, ಶ್ರೀ ಆರ್.ಪ್ರಸನ್ನ ಕುಮಾರ್, ಶ್ರೀ ಆರ್.ಬಿ.ತಿಮ್ಮಾಪುರ, ಶ್ರೀ ಪಿ.ಆರ್.ರಮೇಶ, ಶ್ರೀ ಬಿ.ಕೆ.ಹರಿಪ್ರಸಾದ್, ಶ್ರೀ ಮರಿತಿಬ್ಬೇಗೌಡ, ಶ್ರೀಮತಿ ತೇಜಸ್ವಿನಿ ಗೌಡ, ಶ್ರೀ ಎಸ್.ರವಿ, ಶ್ರೀ ಹೆಚ್.ಎಂ. ರಮೇಶಗೌಡ ಹಾಗೂ ಶ್ರೀ ಕೆ.ಸಿ.ಕೊಂಡಯ್ಯರವರು ಹೀಗೆ 13 ಜನ, ಅಂದಾಜು 7 ಗಂಟೆಗಳ ಕಾಲ ಮಾತನಾಡಿದ್ದಾರೆ.

ಸರ್ಕಾರ ಕೈಗೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳು, ವೈಜ್ಞಾನಿಕ ಪದ್ಧತಿಯಲ್ಲಿ ಕಲ್ಲು ಗಣಿಗಾರಿಕೆ ಮತ್ತು ಈ ಘಟನೆಗೆ ಕಾರಣರಾದವರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. ಅಷ್ಟೇ ಅಲ್ಲದೇ ಇಂತಹ ಘಟನೆಗಳು ಮುಂದಿನ ದಿನಗಳಲ್ಲಿ ಮರುಕಳಿಸದಂತೆ ಸಂಬಂಧಿಸಿದ ಇಲಾಖೆಗಳು ಮುನ್ನೆಚ್ಚರಿಕೆ ಹಾಗೂ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಲು ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ಈ ಕುರಿತು ಮಾನ್ಯ ಸದಸ್ಯರು ನೀಡಿದ ಸಲಹೆಗಳನ್ನು ಸ್ವಾಗತ ಮಾಡುತ್ತೇನೆ.

ಈ ಕುರಿತು ಈಗಾಗಲೇ ಸರ್ಕಾರದಿಂದ ಕೈಗೊಂಡ ಕ್ರಮಗಳು ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರಗಳು ಮುಂದಿನಂತಿವೆ.

ಕಲ್ಲಗಂಗೂರು ಗ್ರಾಮದ ಜಮೀನು ಮಾಲೀಕರು ಶ್ರೀ ಎಸ್.ಟಿ.ಕುಲಕರ್ಣಿಯವರಾಗಿದ್ದು, ಗುತ್ತಿಗೆದಾರರಾದ ಶ್ರೀ ಬಿ.ವಿ.ಸುಧಾಕರ್‌ರವರು ಮೆ: ಎಸ್.ಎಸ್.ಸ್ಟೋನ್ ಕ್ರಷರ್ ಘಟಕವನ್ನು ಸ್ಥಾಪನೆ ಮಾಡಿದ್ದಾರೆ. ದಿನಾಂಕ 25.3.2019 ರಿಂದ 5 ವರ್ಷಕ್ಕೆ ಕ್ರಷರ್ ಘಟಕಕ್ಕೆ ಲೈಸೆನ್ಸ್ ನೀಡಲಾಗಿದೆ. ದಿನಾಂಕ 22.9.2020 ರಂದು 20 ವರ್ಷಕ್ಕೆ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ.

ದಿನಾಂಕ 23.4.2018, 5.3.2019 ಮತ್ತು 27.10.2020 ರಂದು ಅನಧಿಕೃತ ಕಲ್ಲು ಗಣಿಗಾರಿಕೆ ಮತ್ತು ಸ್ಫೋಟಕ ಬ್ಲಾಸ್ಟಿಂಗ್ ಬಗ್ಗೆ ಮಾನ್ಯ 3ನೇ ಜೆ.ಎಂ.ಎಫ್.ಸಿ ನ್ಯಾಯಾಲಯ, ಶಿವಮೊಗ್ಗ ಇಲ್ಲಿ ಮೊಕದ್ದಮೆ ದಾಖಲಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಾಂಕ 21.1.2021 ರಂದು ರಾತ್ರಿ 10.20 ಗಂಟೆಗೆ ಈ ಸ್ಫೋಟ ಸಂಭವಿಸಿದೆ. ಮಾನ್ಯ ಸಭಾಪತಿಯವರೇ, ಸರ್ಕಾರದ ವತಿಯಿಂದ ಈಗಾಗಲೇ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ ಸಂಬಂಧ ಮೆ: ಎಸ್.ಎಸ್.ಸ್ಟೋನ್ ಕ್ರಷರ್ ಮಾಲೀಕರಾದ ಶ್ರೀ ಬಿ.ವಿ.ಸುಧಾಕರ್ ಬಿನ್ ವೆಂಕಟರಾವ್ ಮತ್ತು ಪಟ್ಟಾದಾರರಾದ ಶ್ರೀ ಎಸ್.ಟಿ.ಕುಲಕರ್ಣಿ ವಿರುದ್ಧ ಪ್ರಕರಣ ದಾಖಲಿಸಿದೆ.

ಜಿಲ್ಲಾಧಿಕಾರಿಗಳು, ಶಿವಮೊಗ್ಗರವರು ಉಪವಿಭಾಗಾಧಿಕಾರಿಗಳು, ಶಿವಮೊಗ್ಗ ರವರ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಾಗಿದೆ. ಸದರಿ ಕ್ರಷರ್ ಘಟಕದ ಲೈಸೆನ್ಸ್ ರದ್ದು ಪಡಿಸಲಾಗಿದೆ.

ಕರ್ನಾಟಕ ಮತ್ತು ಆಂಧ್ರಪ್ರದೇಶ ಪೊಲೀಸ್ ನೆರವಿನೊಂದಿಗೆ ಸ್ಫೋಟಕಗಳ ಮೂಲವನ್ನು ಪತ್ತೆ ಹಚ್ಚಲಾಗಿದ್ದು, ಅನಂತಪುರ ಜಿಲ್ಲೆಯಲ್ಲಿ 65 ಸಾವಿರ ಡಿಟೋನೇಟರ್ಸ್ (Detonator) 1275 ಕೆ.ಜಿ ಜಿಲೇಟಿನ್ ಮತ್ತು 17500 ಮೀಟರ್ ಸೇಫ್ಟಿ ಫ್ಯೂಜ್(Safety Fuse) ಮತ್ತು 7500 mt Detonator Fuse ಗಳನ್ನು ಸೀಜ್ ಮಾಡಲಾಗಿರುತ್ತದೆ.

ದಿನಾಂಕ 14.12.2020ರ ಪ್ರಾಧಿಕಾರ ಸಭೆಯ ನಡವಳಿಯಂತೆ ಹೊಸದಾಗಿ ಕ್ರಷರ್ ಘಟಕಗಳಿಗೆ ಲೈಸೆನ್ಸ್ ಮಂಜೂರು ಮತ್ತು ನವೀಕರಣ ಮಾಡದಂತೆ ತೀರ್ಮಾನಿಸಿದೆ.

ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳಿಗೆ, ಕೆ.ಎಲ್.ಆರ್ ಕಾಯಿದೆ 1964ರ ಕಲಂ 108ರ ಅಡಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ನಡೆಸಿ ಸದರಿ ಪ್ರದೇಶದಲ್ಲಿ ಮಂಜೂರಾಗಿರುವ ಜಮೀನುಗಳ ಗ್ರ್ಯಾಂಟ್‌ಗಳನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಸದರಿ ಸ್ಫೋಟಕದಲ್ಲಿ ಮೃತರಾದ 6 ಜನರ ಪೈಕಿ ಇಬ್ಬರಿಗೆ ತಲಾ ರೂ. 5 ಲಕ್ಷಗಳ ಪರಿಹಾರ ನೀಡಲಾಗಿರುತ್ತದೆ. ಉಳಿದ 4 ಜನರ ಗುರುತು ಪತ್ತೆ ತಡವಾಗಿದ್ದರಿಂದ ಪರಿಹಾರ ನೀಡಲು ವಿಳಂಬವಾಗಿದ್ದು, ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ.

ರಾಜ್ಯದಲ್ಲಿನ ಅಭಿವೃದ್ಧಿ ಮತ್ತು ನಿರ್ಮಾಣ ಕಾಮಗಾರಿಗಳಿಗೆ ಕಟ್ಟಡ ಕಲ್ಲು ಮತ್ತು ಕಟ್ಟಡ ಕಲ್ಲಿನ ಸಂಸ್ಕರಿಸಿದ ಉತ್ಪನ್ನಗಳಾದ ವಿವಿಧ ನಮೂನೆ ಜಲ್ಲಿ, ಎಂ–ಸ್ಯಾಂಡ್ ಮತ್ತು ಮರಳು ಅತಿ ಅವಶ್ಯವಾಗಿರುತ್ತದೆ. ಆದುದರಿಂದ ರಾಜ್ಯ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬೇಡಿಕೆಗೆ ಅನುಗುಣವಾಗಿ ಜಲ್ಲಿ, ಎಂ–ಸ್ಯಾಂಡ್ ಇತ್ಯಾದಿ ಕಟ್ಟಡ ಸಾಮಗ್ರಿಗಳ ನಿಯಮಿತ ಪೂರೈಕೆಗಾಗಿ ಕಟ್ಟಡ ಕಲ್ಲು ಗಣಿಗಾರಿಕೆಗಾಗಿ ಕಲ್ಲು ಗುತ್ತಿಗೆ ಮಂಜೂರಾತಿ ಮತ್ತು ಕ್ರಷರ್ ಲೈಸೆನ್ಸ್ ನೀಡುವುದು ಅವಶ್ಯವಾಗಿರುತ್ತದೆ.

ಈ ರೀತಿ ಗಣಿಗಾರಿಕೆ ಮತ್ತು ಕ್ರಷರ್ ಲೈಸೆನ್ಸ್ ಮಂಜೂರಾತಿಯಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸ್ಥಳೀಯ ಜನರಿಗೆ ಉದ್ಯೋಗಾವಕಾಶ ನೀಡಲು ಸಹಕಾರಿಯಾಗಿದೆ.

ಪ್ರಸ್ತುತ ರಾಜ್ಯದಲ್ಲಿ ಒಟ್ಟು 2493 ಕಲ್ಲುಗಣಿ ಗುತ್ತಿಗೆಗಳನ್ನು ಮತ್ತು 1682 ಕ್ರಷರ್ ಘಟಕಗಳಿಗೆ ಲೈಸೆನ್ಸ್ ಮಂಜೂರು ಮಾಡಲಾಗಿರುತ್ತದೆ ಮತ್ತು ಒಟ್ಟು 289 ಎಂ–ಸ್ಯಾಂಡ್ ಘಟಕಗಳು ಚಾಲ್ತಿಯಲ್ಲಿರುತ್ತವೆ.

ಗಣಿ ಮತ್ತು ಭೂವಿಜ್ಞಾನ ಇಲಾಖೆಯು ರಾಜಸ್ವ ಸಂಗ್ರಹಿಸುವ ಇಲಾಖೆಯಾಗಿರುತ್ತದೆ. 2019–20ನೇ ಸಾಲಿನಲ್ಲಿ ಒಟ್ಟು ರೂ. 3629 ಕೋಟಿ ರಾಜಸ್ವ ಮತ್ತು 2020–21ನೇ ಸಾಲಿನಲ್ಲಿ ರೂ. 2318 ಕೋಟಿ ರಾಜಸ್ವ ಸಂಗ್ರಹಿಸಲಾಗಿರುತ್ತದೆ. ಇನ್ನೂ ಎರಡು ತಿಂಗಳ ಅವಧಿಯಲ್ಲಿ ಈ ವರ್ಷ ಕೊಟ್ಟಿರುವಂತಹ ಗುರಿಯನ್ನು ಮುಟ್ಟಲಾಗುತ್ತದೆ.

ರಾಜ್ಯದಲ್ಲಿ ಸರಾಸರಿ ಒಟ್ಟು 250 ದಶಲಕ್ಷ ಮೆಟ್ರಿಕ್ ಟನ್ ಪ್ರಮಾಣದ ಕಟ್ಟಡ ಕಲ್ಲು ಖನಿಜದ ಬೇಡಿಕೆ ಇರುತ್ತದೆ. 2019–20ನೇ ಸಾಲಿನಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಯಿಂದ ರೂ. 1486 ಕೋಟಿ ಮತ್ತು 2020–21ನೇ ಸಾಲಿನಲ್ಲಿ ರೂ. 735.53 ಕೋಟಿ ರಾಜಧನ ಸಂಗ್ರಹಿಸಲಾಗಿರುತ್ತದೆ.

ದಿನಾಂಕ 30.6.2020ರಂದು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ಕ್ಕೆ ತಿದ್ದುಪಡಿ ತಂದು ಉಪಖನಿಜಗಳ ರಾಜಧನವನ್ನು ಪರಿಷ್ಕರಿಸಲಾಗಿರುತ್ತದೆ.

ನಮ್ಮ ಸ್ನೇಹಿತರು ಇದಕ್ಕೆ ಯಾವ ರೀತಿ ತೆರಿಗೆಗಳನ್ನು ಹಾಕುತ್ತೀರಿ ಎಂದು ಕೇಳಿದರು. ಮಾನ್ಯ ಸಭಾಪತಿಯವರೇ, ಪ್ರತಿ ಮೆಟ್ರಿಕ್ ಟನ್ ಕಟ್ಟಡ ಕಲ್ಲು ಖನಿಜಕ್ಕೆ ರೂ. 70/– ಮತ್ತು ಪ್ರತಿ ಮೆಟ್ರಿಕ್ ಟನ್ ಮರಳಿಗೆ ರೂ. 80/–ಗಳನ್ನು ನಿಗದಿಪಡಿಸಲಾಗಿದೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ)ನಿಯಮ 2016 ಜಾರಿಯಾಗುವ ಪೂರ್ವದಲ್ಲಿ ಮಂಜೂರಾದ ಕಲ್ಲುಗಣಿ ಗುತ್ತಿಗೆದಾರರಿಂದ ಪ್ರತಿ ಮೆಟ್ರಿಕ್ ಟನ್ ಕಟ್ಟಡ ಕಲ್ಲಿಗೆ ರಾಜಧನ ರೂ. 70/– ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಗೆ ರಾಜಧನದ ಶೇಕಡ 30 ರಷ್ಟು ವಂತಿಕೆಯನ್ನು ಪಾವತಿಸಬೇಕಾಗಿರುತ್ತದೆ.

ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮ 2016 ಜಾರಿಯಾದ ನಂತರ ಮಂಜೂರಾದ ಕಲ್ಲುಗಣಿ ಗುತ್ತಿಗೆದಾರರಿಂದ ಪ್ರತಿ ಮೆಟ್ರಿಕ್ ಟನ್ ಕಟ್ಟಡ ಕಲ್ಲಿಗೆ ರಾಜಧನ ರೂ. 70/– ಮತ್ತು ರಾಜಧನದ ಶೇಕಡ 50 ರಷ್ಟು ಮೊತ್ತವನ್ನು ಸರಾಸರಿ ಹೆಚ್ಚುವರಿ ನಿಯತಕಾಲಿಕ ಸಂದಾಯ ಮೊತ್ತವಾಗಿ ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಗೆ ರಾಜಧನದ ಶೇಕಡ 10 ರಷ್ಟು ವಂತಿಕೆಯನ್ನು ಪಾವತಿಸಬೇಕಾಗಿರುತ್ತದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಕಟ್ಟಡ ಕಲ್ಲುಗುತ್ತಿಗೆದಾರರು ಬಹುತೇಕರು ಅನಕ್ಷರಸ್ಥರಾಗಿದ್ದು, ವೈಜ್ಞಾನಿಕವಾಗಿ ಗಣಿಗಾರಿಕೆ ನಡೆಸಲು ಅಗತ್ಯ ಅರಿವಿರುವುದಿಲ್ಲ. ಆದುದರಿಂದ ಜಾರ್ಖಂಡ್ ರಾಜ್ಯದ ಧನಬಾದ್‌ನಲ್ಲಿರುವ ಇಂಡಿಯನ್ ಸ್ಕೂಲ್ ಆಫ್ ಮೈನ್ಸ್ ನಂತೆ ರಾಜ್ಯದಲ್ಲಿಯೂ ಸಹ ಗಣಿ ವಿಶ್ವವಿದ್ಯಾಲಯ ಸ್ಥಾಪನೆಗೆ ಕ್ರಮ ವಹಿಸಲು ಚರ್ಚೆ ಮಾಡಿದ್ದೇವೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅನುಮತಿಯನ್ನು ಪಡೆದು ಮುಂಬರುವ ದಿವಸಗಳಲ್ಲಿ ಎಲ್ಲಾ ಗಣಿಗಾರಿಕೆಗಳು ವೈಜ್ಞಾನಿಕವಾಗಿ, ಯಾರಿಗೂ ಅನಾಹುತವಾಗಲಾರದಂತೆ ಕಾನೂನು ನಿಯಮಗಳ ಅಡಿಯಲ್ಲಿ, ಬೇರೆ ಬೇರೆ ದೇಶಗಳಲ್ಲಿ ಮತ್ತು ರಾಜ್ಯಗಳಲ್ಲಿ ಯಾವರೀತಿ ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ, ಆ ಗಣಿಗಾರಿಕೆಯನ್ನು ಯಾವರೀತಿ ಅಭಿವೃದ್ಧಿ ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ ತಿಳುವಳಿಕೆ ಕೊಡಲು ಒಂದು ವಿಶ್ವವಿದ್ಯಾಲಯ ಬೇಕಾಗುತ್ತದೆ. ಸರ್ಕಾರದ ಹಣವನ್ನು ಯಾವುದೇ ರೀತಿಯಲ್ಲಿ ಉಪಯೋಗ ಮಾಡದೇ ಇರುವಂತಹ, District Mineral Foundation fund ನ ಅಡಿ ಬಂದಿರುವಂತಹ ಹಣವನ್ನು ಮತ್ತು ಅದರಿಂದ ಬಂದಿರುವ ಬಡ್ಡಿಯ ಹಣದಲ್ಲಿ, ಹೆಚ್ಚಾಗಿ ಗಣಿಗಾರಿಕೆ ನಡೆಯುತ್ತಿರುವ ಕಡೆ ವಿಶ್ವವಿದ್ಯಾಲಯ ಮಾಡಬೇಕು ಎನ್ನುವ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ ಪರವಾನಗಿ ಪಡೆದು ಈ ನಿಟ್ಟಿನಲ್ಲಿ ಮುಂದಿನ ಘೋಷಣೆ ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಈ ಕ್ರಮಗಳಿಂದ ರಾಜ್ಯದಲ್ಲಿ ಈಗಾಗಲೇ ಮಂಜೂರಾಗಿರುವ ಕಲ್ಲು ಗಣಿಗುತ್ತಿಗೆಗಳು ಮತ್ತು ಕ್ರಷರ್ ಘಟಕಗಳು ನಿಯಮಾನುಸಾರ ಕಾರ್ಯನಿರ್ವಹಿಸಲು, ಕಲ್ಲುಗಣಿ ಗುತ್ತಿಗೆದಾರರಿಂದ ನಿಯಮಗಳ ಬಗ್ಗೆ ಮತ್ತು ವೈಜ್ಞಾನಿಕ ಹಾಗೂ ವ್ಯವಸ್ಥಿತ ಗಣಿಗಾರಿಕೆ ನಡೆಸಲು ಅರಿವು/ಜಾಗೃತಿ ಮೂಡಿಸುವುದು ಮತ್ತು ಅಗತ್ಯ ತಾಂತ್ರಿಕ ಕೌಶಲ್ಯ ತರಬೇತಿ ನೀಡುವುದು ಈ ಗಣಿ ವಿಶ್ವವಿದ್ಯಾಲಯದ ಉದ್ದೇಶವಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾರ್ವಜನಿಕರಿಂದ ಅನಧಿಕೃತ ಗಣಿಗಾರಿಕೆ/ಸಾಗಾಣಿಕೆ ಮತ್ತು ಪರಿಸರದ ಮೇಲಿನ ಹಾನಿಯ ಬಗ್ಗೆ ಸ್ವೀಕೃತವಾಗುವ ದೂರನ್ನು ಪರಿಶೀಲಿಸಲು ಮತ್ತು ಕಲ್ಲುಗಣಿ/ಕ್ರಷರ್ ಲೈಸೆನ್ಸ್ ಕೋರಿ ಸಲ್ಲಿಸುವ ಅರ್ಜಿಗಳ ವಿಲೇವಾರಿ ಬಗ್ಗೆ ಮುಂದಿನ ದಿನಗಳಲ್ಲಿ ಪ್ರತಿ ತಿಂಗಳ ಮೊದಲನೇ ಮತ್ತು ಮೂರನೇ ಶನಿವಾರದಂದು ಪ್ರತಿ ಕಂದಾಯ ವಿಭಾಗದಲ್ಲಿ ಗಣಿ ಅದಾಲತ್‌ಗಳನ್ನು ನಡೆಸುವ ನಿಟ್ಟಿನಲ್ಲಿ ಆಯೋಜನೆ ಮಾಡುತ್ತಿದ್ದೇನೆ. ಈಗಾಗಲೇ ಬಹಳಷ್ಟು ಲೈಸೆನ್ಸ್‌ಗಳು ಪೆಂಡಿಂಗ್ ಇವೆ. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗಣಿಗಾರಿಕೆ ಮಾಡುವವರ ಮಧ್ಯದಲ್ಲಿ ಡಿಸಿಷನ್ ಆಗಲಾರದೇ, ಜಿಲ್ಲಾಧಿಕಾರಿಗಳ ಕೋಆರ್ಡಿನೇಷನ್ ಇಲ್ಲದೇ ಇರುವುದರಿಂದ ಸಾವಿರಾರು ಅರ್ಜಿಗಳು ಪೆಂಡಿಂಗ್ ಇವೆ. ಆದ್ದರಿಂದ ಅಡ್ವಾನ್ಸ್ ಆಗಿ, ಪ್ರತಿ ಡಿವಿಷನ್‌ಗಳಿಗೆ ನಾವೇ ಸ್ವತಃ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ, ಎಲ್ಲೆಲ್ಲಿ ಸಮಸ್ಯೆ ಬರುತ್ತದೆ ಎಂದು ಮುಂಚಿತವಾಗಿ, ಪೂರ್ವಭಾವಿಯಾಗಿ ತಿಳಿಸಲಾಗುತ್ತದೆ. ಬೆಳಿಗ್ಗೆ 9 ಗಂಟೆಯಿಂದಲೇ, ಪೆಂಡಿಂಗ್ ಇರುವಂತಹ ಅರ್ಜಿಗಳನ್ನು ಕಾನೂನುಬದ್ಧವಾಗಿ, ಕೆಲವು ಕಾನೂನುಗಳನ್ನು ಸರಳೀಕರಣಗೊಳಿಸಿ ಸ್ಥಳದಲ್ಲಿಯೇ ವಿಲೇವಾರಿ ಮಾಡುವಂತಹ ಕ್ರಮವನ್ನು ಮೊಟ್ಟ ಮೊದಲನೆಯದಾಗಿ ತೆಗೆದುಕೊಳ್ಳುತ್ತೇವೆ. ಮುಂದಿನ ದಿನಗಳಲ್ಲಿ, ನಾಲ್ಕು ಡಿವಿಷನ್‌ಗಳಾದ ಗುಲ್ಬರ್ಗಾ, ಬೆಳಗಾವಿ, ಮೈಸೂರು, ಬೆಂಗಳೂರು ಮತ್ತು ಒಂದು ಕೋಸ್ಟಲ್ ಏರಿಯಾದಲ್ಲಿ ಪ್ರತ್ಯೇಕವಾಗಿ ಹೀಗೆ ಒಟ್ಟು 5 ಕಡೆ 15 ದಿವಸಕ್ಕೆ ಒಂದು ಸಲ ಪೆಂಡಿಂಗ್ ಇರುವಂತಹ ಅರ್ಜಿಗಳನ್ನು ಕ್ಲಿಯರ್ ಮಾಡುತ್ತೇವೆ.

(ಮುಂದು . .)

(80) 02–02–2021/3.20/ಡಿಎಸ್–ಬಿಎನ್‌ಎಸ್

**ಶ್ರೀ ಮುರುಗೇಶ್ ಆರ್.ನಿರಾಣಿ(ಮುಂದು):–**

ಇದಕ್ಕೆ ಸಂಬಂಧಟ್ಟಂಥ ಎಲ್ಲಾ ಅಧಿಕಾರಿಗಳು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿಗಳಿರಬಹುದು, ಅರಣ್ಯ ಅಧಿಕಾರಿಗಳು, ಕಂದಾಯ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು, ಪೊಲೀಸ್ ಇಲಾಖೆ, ಪರಿಸರ ಇಲಾಖೆ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳು, ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಒಂದೇ ವೇದಿಕೆಯಲ್ಲಿ ಕರೆದುಕೊಂಡು ಅವುಗಳನ್ನು ವಿಲೇವಾರಿ ಮಾಡುವಂಥದ್ದು. ಅವರಿಗೇನಾದರೂ ನಿಯಮಾನುಸಾರ ಲೈಸೆನ್ಸ್ ಕೊಡುವುದಕ್ಕಾಗುವುದಿಲ್ಲವೆಂದರೆ ಸ್ಥಳೀಯದಲ್ಲೇ ಇಂತಹ ಕಾರಣದಿಂದ ಇದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇವೆ. ಮಾಡುವುದಕ್ಕಾಗುವುದಾದರೆ ಎಷ್ಟು ದಿವಸಗಳಲ್ಲಿ ಮಾಡುತ್ತೇವೆಂದು ಸ್ಥಳದಲ್ಲೇ ಅವರಿಗೆ ತಿಳಿಸುವಂತಹ ವ್ಯವಸ್ಥೆಯನ್ನು ಬರುವ 15ನೇ ತಾರೀಖಿನಿಂದ ನಾವು ಪ್ರಾರಂಭ ಮಾಡುತ್ತಿದ್ದೇವೆ. ಜಿಲ್ಲಾ ವ್ಯಾಪ್ತಿಯಲ್ಲಿ ನಡೆಯುವ ಅನಧಿಕೃತ ಗಣಿಗಾರಿಕೆಗಳ ಬಗ್ಗೆ ಮತ್ತು ಅಧಿಕೃತ ಗಣಿಗಾರಿಕೆ ಪ್ರದೇಶಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಪ್ರಚುರ ಪಡಿಸಲು ಕ್ರಮವಹಿಸಲಾಗುವುದು. ಕಲ್ಲು ಗಣಿ ಗುತ್ತಿಗೆ ಪ್ರದೇಶಗಳಲ್ಲಿ ಪ್ರತಿ ಬಾರಿ ಸ್ಫೋಟಕ ಉಪಯೋಗಿಸುವ ಮೊದಲು ಸಂಬಂಧಿಸಿದ ಪೊಲೀಸ್ ಠಾಣೆಗಳಿಗೆ ಕಡ್ಡಾಯವಾಗಿ ಮಾಹಿತಿ ಒದಗಿಸುವಂತೆ ಕಲ್ಲು ಗಣಿ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ 2019–20ನೇ ಸಾಲಿನಲ್ಲಿ ಅನಧಿಕೃತ ಗಣಿಗಾರಿಕೆ ಮತ್ತು ಸಾಗಾಣಿಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಬಂಧ ಒಟ್ಟು 137 ಮೊಕದ್ದಮೆಗಳನ್ನು ಇಲ್ಲಿಯವರೆಗೆ ದಾಖಲಿಸಲಾಗಿರುತ್ತದೆ ಮತ್ತು ಒಟ್ಟು 66 ಪ್ರಕರಣಗಳಲ್ಲಿ ರೂ.67.95 ಲಕ್ಷಗಳ ದಂಡವನ್ನು ವಸೂಲು ಮಾಡಲಾಗಿರುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ, 2020-21ನೇ ಸಾಲಿನಲ್ಲಿ ಜನವರಿ 21ರ ಅಂತ್ಯದವರೆಗೆ ಅನಧಿಕೃತ ಗಣಿಗಾರಿಕೆ ಮತ್ತು ಸಾಗಾಣಿಕೆ ಸಂಬಂಧ ಒಟ್ಟು 58 ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ. ಒಟ್ಟು 97 ಪ್ರಕರಣಗಳಲ್ಲಿ ರೂ.57.24 ಲಕ್ಷಗಳ ದಂಡವನ್ನು ಈಗಾಗಲೇ ವಸೂಲು ಮಾಡಲಾಗಿರುತ್ತದೆ. ರಾಜ್ಯದಲ್ಲಿ 2019-20ನೇ ಸಾಲಿನಲ್ಲಿ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ಅನಧಿಕೃತ ದಾಸ್ತಾನಿಗೆ ಸಂಬಂಧಿಸಿದಂತೆ ಒಟ್ಟು 3193 ಪ್ರಕರಣಗಳನ್ನು ಗುರುತಿಸಿ, ಒಟ್ಟು 2090 ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ ಮತ್ತು ರೂ.452.57 ಲಕ್ಷಗಳ ದಂಡವನ್ನು ಈಗಾಗಲೇ ವಸೂಲು ಮಾಡಲಾಗಿರುತ್ತದೆ. ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ಅನಧಿಕೃತ ದಾಸ್ತಾನಿಗೆ ಸಂಬಂಧಿಸಿದಂತೆ ಒಟ್ಟು 753 ಪ್ರಕರಣಗಳನ್ನು ಗುರುತಿಸಿ, ಒಟ್ಟು 392 ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ ಮತ್ತು ರೂ.123.48 ಲಕ್ಷಗಳ ದಂಡವನ್ನು ಈಗಾಗಲೇ ವಸೂಲು ಮಾಡಲಾಗಿರುತ್ತದೆ. ರಾಜ್ಯ ವ್ಯಾಪ್ತಿಯಲ್ಲಿನ ಅಣೆಕಟ್ಟುಗಳ ವ್ಯಾಪ್ತಿಯಲ್ಲಿ ಗಣಿಗಾರಿಕೆ ಪ್ರದೇಶಗಳಿಂದ ಸುರಕ್ಷಿತ ಅಂತರ ಕಾಪಾಡುವ ನಿಟ್ಟಿನಲ್ಲಿ ಪರಿಣಿತ ತಜ್ಞರ ಸಮಿತಿಯನ್ನು ರಚಿಸಲು ಕ್ರಮವಹಿಸಲಾಗುತ್ತಿದೆ. ಸಂಬಂಧಿಸಿದ ಜಿಲ್ಲೆಗಳಲ್ಲಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಈಗಾಗಲೇ ಚಲಾವಣೆಯಲ್ಲಿದೆ. ಸದರಿ ಸಮಿತಿಯಲ್ಲಿ ಪೊಲೀಸ್, ಅರಣ್ಯ, ಸಾರಿಗೆ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಕಂದಾಯ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಸದರಿ ಸಮಿತಿಯ ಸದಸ್ಯ ಇಲಾಖೆಯ ಅಧಿಕಾರಿಗಳಿಂದ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ಸಾರ್ವಜನಿಕ ದೂರುಗಳ ನಿಯಮಿತವಾಗಿ ಸಭೆ ನಡೆಸಿ, ಸಂಬಂಧಿಸಿದ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸಲು ಕ್ರಮವಹಿಸಲು ಸೂಕ್ತ ನಿರ್ದೇಶನ ನೀಡಲಾಗಿದೆ. ಒಟ್ಟಾರೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಕೆಲವೊಂದು ಲೈಸೆನ್ಸ್‌ನ್ನು ಈಗಾಗಲೇ ತೆಗೆದುಕೊಂಡಿದ್ದಾರೆ. 5 ವರ್ಷ, 20 ವರ್ಷ, 30 ವರ್ಷ, 50 ವರ್ಷ deemed extension ಕೊಟ್ಟಿರುವ ಹಿನ್ನೆಲೆಯಲ್ಲಿ ಬೇರೆ ಬೇರೆ minor minerals and major minerals ನಲ್ಲಿ ಆ ವರ್ಷಗಳಿಗೆ ಸಂಬಂಧಪಟ್ಟಂತೆ extension ಕೊಟ್ಟಾಗ ನಿಯಮಾನುಸಾರವಾಗಿ ಲೈಸೆನ್ಸ್ ಬಂದಿವೆ. ಆದರೆ, ಅನುಷ್ಠಾನ ಮಾಡುವಂತಹ ಸಂದರ್ಭದಲ್ಲಿ ಅಲ್ಲಿ ಬಹಳ ಗೊಂದಲವಿದೆ. ಅಲ್ಲಿ ಕಾನೂನು ಬಾಹಿರವಾಗಿ ನಡೆಯುತ್ತಿದೆ. ಲೈಸೆನ್ಸ್‌ನಲ್ಲಿ ಲೀಗಲ್ ಆಗಿ ಇದೆ. Illegal ಆಗಿರುವಂಥದ್ದನ್ನು ಸ್ಥಳೀಯವಾಗಿ ಬರುವ 15-20 ದಿವಸಗಳಲ್ಲಿ ನಾವು ಸರಿಮಾಡಿಕೊಳ್ಳುವಂತಹ ಸೂಚನೆಯನ್ನು ಕೊಟ್ಟಿದ್ದೇವೆ. ಮರಳು ಮತ್ತು ಜೆಲ್ಲಿ ನಮ್ಮ ದಿನನಿತ್ಯ ಅಭಿವೃದ್ಧಿ ಕೆಲಸಗಳಲ್ಲಿ ಬೇಕೇಬೇಕು. ಅದರಲ್ಲಿ compromise ಇಲ್ಲ. ಆದರೆ, ಬೇಕು ಎನ್ನುವ ಕಾರಣಕ್ಕಾಗಿ ಕಾನೂನು ಬಾಹಿರವಾಗಿ ಮಾಡುವುದಕ್ಕೆ ಬಿಡುವುದಿಲ್ಲ. ಕಾನೂನಿನಲ್ಲಿ ಸರಳೀಕರಣ ಮಾಡಿಸಿ ನ್ಯಾಯಯುತವಾಗಿ ಗಣಿಗಾರಿಕೆ ನಡೆಸಬೇಕು ಮತ್ತು ನಮ್ಮ ಸರ್ಕಾರಕ್ಕೆ ರಾಜಸ್ವ ಬರಬೇಕು ಮತ್ತು ಎಲ್ಲರಿಗೂ ಸುಲಭವಾಗಿ ಸಿಗಬೇಕು. ನಾವು ಬಹಳ ಕಠಿಣವಾಗಿ ತೀರ್ಮಾನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವುದರಿಂದ demand and supply ಕಡಿಮೆಯಾದರೆ sand and metal ನ ಬೆಲೆ ಜಾಸ್ತಿಯಾಗುತ್ತದೆ. End user ಗೆ ಬಹಳ ಬರ್ಡನ್ ಆಗುತ್ತದೆ. ಅದನ್ನು ಸರಳೀಕರಣ ಮಾಡಿಸುವುದರ ಮುಖಾಂತರ ಸುಲಭವಾಗಿ ಸಿಗುವಂಥದ್ದರ ಕಡೆ ಗಮನ ಹರಿಸುತ್ತೇವೆ. ಚರ್ಚೆಯ ಹಂತದಲ್ಲಿದೆ. ಹಳ್ಳಿಯಲ್ಲಿ ಸಿಗುವಂತಹ ಹಳ್ಳದ ಉಸುಕು. ಹರಾಜು ಆಗದಿರುವಂತಹ sand ಗಳು, ಬೇರೆ ಬೇರೆ ಸಣ್ಣ ಸಣ್ಣ patch ಗಳು ಇರುವಂಥದ್ದು. ಅಂಥವುಗಳನ್ನು ಎತ್ತಿನಬಂಡಿಯಲ್ಲಿ ಮತ್ತು ಟ್ರ್ಯಾಕ್ಟರ್‌ನಲ್ಲಿ ಆ ತಾಲ್ಲೂಕಿಗೆ ಸೀಮಿತವಾಗಿ ಅವರು ಅದನ್ನು ಸೇಲ್ ಮಾಡಿ, very nominal, supervise ಮಾಡುವುದಕ್ಕೆ ಮಂಡಲ ಪಂಚಾಯಿತಿಯಲ್ಲಿ, ಗ್ರಾಮ ಪಂಚಾಯಿತಿಯಲ್ಲಿ ಯಾರು ಇರುತ್ತಾರೆ ಅವರಿಗಷ್ಟೇ ಆಗುವಷ್ಟು ಅದರ ಮೇಲೆ ತೆರಿಗೆಯನ್ನು ಹಾಕಬೇಕು. ಅವರು ಅದನ್ನು ಬೇರೆ ಯಾವುದಾದರು ಕಡೆಯಲ್ಲಿ ಸಂಗ್ರಹ ಮಾಡಿ ಟಿಪ್ಪರ್ ಮುಖಾಂತರ ಹೋದರೆ ಅದಕ್ಕೆ ದಂಡ ಮತ್ತು ರಾಯಲ್ಟಿಯನ್ನು ಕೊಡಬೇಕು ಎನ್ನುವಂಥದ್ದನ್ನು ವಿಚಾರ ಮಾಡುತ್ತಿದ್ದೇವೆ. ಟ್ರ್ಯಾಕ್ಟರ್ ಮತ್ತು ಎತ್ತಿನಗಾಡಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಅಷ್ಟೇ ಉಪಯೋಗ ಮಾಡುವಂಥವರಿಗೆ ಇಡೀ ರಾಜ್ಯದಾದ್ಯಂತ ಅತ್ಯಂತ ಕಡಿಮೆ ಅಂದರೆ ಜೀರೋದಲ್ಲಿ ಕೊಟ್ಟಾಗ ಈ ಸಮಸ್ಯೆ ಅತ್ಯಂತ ಕಡಿಮೆ ದರದಲ್ಲಿ ಉಪಯೋಗ ಮಾಡುವಂತಹ ಆಶ್ರಯ ಮನೆ ಕಟ್ಟುವಂಥವರು ಇರಬಹುದು, 5 ಲಕ್ಷ, 10 ಲಕ್ಷ ಸಿ.ಸಿ. ರಸ್ತೆ ಮಾಡುವಂಥವರು ಇರಬಹುದು, ಇಂಥವರಿಗೆಲ್ಲಾ ಅನುಕೂಲವಾಗುತ್ತದೆ. ಈ ಸೆಕ್ಟರ್‌ನಿಂದ ಏನು ರಾಜಸ್ವ ಕಡಿಮೆಯಾಗುತ್ತದೆ ಅದನ್ನು ಬೇರೆ ಬೇರೆ ಶ್ರೀಮಂತವಿರುವಂತಹ ಸೆಕ್ಟರ್‌ಗಳು, iron ore ಇರಬಹುದು ಅಥವಾ extra ಏನಾದರೂ ಗಣಿಗಾರಿಕೆಯಲ್ಲಿ ಅವರಿಗೆ ನ್ಯಾಯಯುತವಾಗಿ ಕೊಟ್ಟು, ಕೊಟ್ಟಿರುವ ಟಾರ್ಗೆಟ್‌ನ್ನು ಸರಿ ಮಾಡುವುದಕ್ಕೆ ಚಿಂತನೆ ನಡೆದಿದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಬರುವಂತಹ ದಿನಗಳಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ಒಟ್ಟಾರೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಎಲ್ಲರೂ mining ಮಾಡಿಬಿಡುತ್ತಾರೆ. ಗಣಿಗಾರಿಕೆ ಮಾಡಿದ ನಂತರ ಅದನ್ನು ಮುಚ್ಚದೆ ಹಾಗೆ ಬಿಟ್ಟುಬಿಡುತ್ತಾರೆ. ಹಾಗಾಗಿ ಹಳ್ಳಿಯಲ್ಲಿ ಹೋಗುವಂತಹ ದನಕರುಗಳಿರಬಹುದು, ಮನುಷ್ಯರು ಇರಬಹುದು, ಅದರಲ್ಲಿ ಬಿದ್ದು ವಾಸನೆ ಬರುತ್ತದೆ. ಅದರ ಪುನರ್ ನಿರ್ಮಾಣ ಮಾಡುವುದಿಲ್ಲ. ಪುನರ್ ನಿರ್ಮಾಣ ಮಾಡುವಂಥದ್ದರ ಬಗ್ಗೆ ಕೂಡ ಗಮನಹರಿಸುತ್ತಿದ್ದೇವೆ. ಈಗ ಗೌರವಾನ್ವಿತ ಸದಸ್ಯರು ಏನಾದರೂ ಪ್ರಶ್ನೆ ಕೇಳಬಹುದು.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಬಹಳ ವಿಸ್ತಾರವಾಗಿ ನಿನ್ನೆ ಚರ್ಚೆ ಮಾಡಿದ್ದೇವೆ. ನಮ್ಮ ವಿರೋಧ ಪಕ್ಷದ ನಾಯಕರು ನಿಯಮ 68 ರಲ್ಲಿ ಚರ್ಚೆ ಮಾಡಿದ್ದೇವೆ. ಮಂತ್ರಿಗಳು ನಾವು ಯಾವ ವಿಚಾರಕ್ಕೆ ಚರ್ಚೆ ಮಾಡಿದ್ದೇವೆ ಆ ವಿಚಾರಕ್ಕೆ ಉತ್ತರ ಕೊಡಲಿಲ್ಲ. ಅವರು ಗಣಿಗಾರಿಕೆ ಹೇಗೆ ನಡೆಯುತ್ತದೆ, ಅದಕ್ಕೆ ಏನೇನು ಕ್ರಮ ತೆಗೆದುಕೊಳ್ಳುತ್ತೇವೆ, ಅನಾಹುತಗಳನ್ನು ತಡೆಯುವುದಕ್ಕೋಸ್ಕರ ಏನೇನು ಮಾಡಬಹುದು, ಹಿಂದೆ ಏನಾಗಿತ್ತು ಎಂದು ಮಕ್ಕಳಿಗೆ ಪಾಠ ಹೇಳುವ ಹಾಗೆ ಹೇಳಿದರು. ಬಹಳ ಸೂಕ್ಷ್ಮವಾಗಿ ನಾವು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿನ್ನೆ ಹೇಳಿದೆವು. ಆಗಬಾರದ ಘಟನೆ ನಡೆದಿದೆ, 1350 ಕೆ.ಜಿ. ಸ್ಫೋಟಕ ವಸ್ತುಗಳು ಬರುವಂಥದ್ದು ಮಾಮೂಲಿ ವಿಚಾರಗಳಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, we should not start on the wrong note. ಎಷ್ಟು quantity explosives ಬಂದಿದೆ ಎಂದು ತಜ್ಞರು ಹೇಳುವುದಕ್ಕೆ ಮಾತ್ರ ಸಾಧ್ಯ. ಪತ್ರಿಕೆಯಲ್ಲಿ 1350 ಕೆ.ಜಿ. ಎಂದು ಬಂದಿದೆ. ಸಂಪೂರ್ಣವಾಗಿ ಸ್ಫೋಟಗೊಂಡಿದ್ದರಿಂದ what is the exact quantity ಎಂದು explosives ತಜ್ಞರು ಮಾತ್ರ ಅಸೆಸ್ ಮಾಡುವುದಕ್ಕೆ ಸಾಧ್ಯವಿದೆ. ಹೊರತಾಗಿ, we cannot exactly say that 1,350 kgs.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಲ್ಕನೇ ಸ್ಥಂಭ ಅನಿಸಿಕೊಂಡಿರುವಂತಹ ಪತ್ರಿಕೆಗಳು, ಮಾಧ್ಯಮದಲ್ಲಿ ಬಂದಿರುವಂತಹ ವಿಚಾರಗಳನ್ನು ನಾವು ಪ್ರಸ್ತಾಪ ಮಾಡುತ್ತಿದ್ದೇವೆಯೇ ವಿನಹ ಯಾವುದೇ ಕಪೋಲಕಲ್ಪಿತ ವಿಚಾರಗಳನ್ನು ನಾವು ಇಲ್ಲಿ ಹೇಳುತ್ತಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಪತ್ರಿಕೆಯಲ್ಲಿ ಬಂದಿದ್ದು ಕೂಡ ಯಾವುದೇ ನಿಖರವಾಗಿ ತನಿಖೆಯಾಗಿ ವರದಿ ಆಧಾರದ ಮೇಲೆ ಬಂದಿಲ್ಲ. ಪ್ರಾಥಮಿಕವಾಗಿ ಅವರಿಗೇನು ಸುದ್ದಿ ಬಂದಿದೆ ಅದನ್ನು ಅವರು ಮಾಡಿದ್ದಾರೆ. ಆದ್ದರಿಂದ, we cannot exactly say and nobody can say that 1350 kgs. explosives ಎಂದು ಈಗಲೇ ಹೇಳುವುದಕ್ಕಾಗುವುದಿಲ್ಲ.

**Sri B.K. HARIPRASAD**:- At least, you agree that six people have died there.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, six people have died ಎಂಬುದಷ್ಟೇ ಅಲ್ಲ ಅದಕ್ಕಿಂತ ಹೆಚ್ಚಿನ ದಾಸ್ತಾನು ಬೇರೆ ಬೇರೆ ಕಡೆ ಇದೆ ಎನ್ನುವುದನ್ನು ನಾವು ಪತ್ತೆ ಹಚ್ಚುತ್ತಿದ್ದೇವೆ. ಹಿಂದೆ ಹಾಸನ ಜಿಲ್ಲೆಯಲ್ಲಿ 2017 ರಲ್ಲಿ ತಮ್ಮ ಘನತೆವೆತ್ತ ಸರ್ಕಾರ ಇತ್ತು. ಆಗ explosives use ಮಾಡುವಾಗ ಇಬ್ಬರು ಸತ್ತರು. ಬಿಡದಿಯಲ್ಲಿ explosives use ಮಾಡುವಾಗ ಒಬ್ಬರು ಸತ್ತರು. ಇಲ್ಲಿ distribution vehicle ಅಥವಾ ಯಾವ vehicle ಎನ್ನುವುದು ತನಿಖೆಯಿಂದ ಗೊತ್ತಾಗುತ್ತದೆ. ಆ ವಾಹನ ನಿಂತಂಥ ಸಂದರ್ಭದಲ್ಲಿ ಇದು explode ಆಗಿದೆ. This is the difference. Unfortunately, ಆ ಎಲ್ಲಾ ಜನ vehicle

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

transportation or carry ಮಾಡುವುದು ಅಲ್ಲಿ ಇರುವುದರಿಂದ ಅತ್ಯಂತ ದುರದೃಷ್ಟಕರವಾಗಿ ದುರ್ಮರಣವಾಗಿದೆ. ಅಪಘಾತ ಆಗಿದೆ ಎನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದರಲ್ಲಿ ಎರಡನೇ ಮಾತಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಏನು ಹೇಳುತ್ತಾರೆಯೋ ಹೇಳಿಬಿಡಲಿ. ಆಗಾಗ್ಗೆ ಅವರು ಎದ್ದು ಮಾತನಾಡುವುದು ಬೇಡ. ಇಲ್ಲಿ ಎರಡು ಇಲಾಖೆಗಳ ಸಮಸ್ಯೆಯಿದೆ. ಆ ಸ್ಫೋಟಕ ವಸ್ತುವಿನ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಹೇಳಿಬಿಡಿ. ಮಧ್ಯೆ ಮಧ್ಯೆ ಎದ್ದು ನಿಂತು ಹೇಳುವುದು ಬೇಡ. ಏನಾದರೂ ಹೇಳಿಕೆ ಮಾಡುವುದಾದರೆ ಮಾಡಿಬಿಡಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರೇ ಹೇಳಿಕೆಯನ್ನು ಮಾಡಿದ್ದಾರೆ. ಅವರೇ ಉತ್ತರವನ್ನು ಕೊಡುತ್ತಾರೆ. ನಾನು ಕೆಲವು ವಿಷಯಗಳನ್ನು ಅಂದರೆ, we should start from the right note ಎನ್ನುವ ದೃಷ್ಟಿಯಿಂದ ನಾನು ಹೇಳಿದ್ದೇನೆಯೇ ಹೊರತು ನಿಲ್ಲಿಸಬೇಕು ಎನ್ನುವ ಮಾತಿಲ್ಲ. ಎರಡನೆಯದಾಗಿ, ನಿನ್ನೆ ಕೂಡ ಕೆಳಮನೆಯಲ್ಲಿ ಹೇಳಿದ್ದೇನೆ. ಆದರೆ, ಅಷ್ಟು ಸ್ಪಷ್ಟವಾಗಿ ಬಂದಿಲ್ಲ. ಈ ತನಿಖೆಯನ್ನು ಎರಡು ರೀತಿಯಲ್ಲಿ ಮಾಡುತ್ತೇವೆ, explosive, origination of explosive, transportation, usage, storage, ಆ ಏಜೆನ್ಸಿ ಯಾರು ಆ ಎಲ್ಲಾ violations ಏನು ಆಗಿದೆ, the Explosives Act ಪ್ರಕಾರ violations ಏನು ಆಗಿದೆ, ಅದನ್ನು ನಮ್ಮ ADGP (Additional Director General of Police) ಅವರು ಮಾಡುತ್ತಾರೆ. Mining rules violation, crushers, quarry violations ಏನು ಆಗಿದೆ, ಅದನ್ನು Revenue Secretary ಮಾಡುತ್ತಾರೆ. This is all I want to say.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಗೃಹ ಮಂತ್ರಿಗಳಿಂದ ಈ ರೀತಿಯ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ನೀವು ನಿರೀಕ್ಷೆ ಮಾಡಿರುವ ರೀತಿಯಲ್ಲಿ ನಾನು ಹೇಳುವುದಕ್ಕಾಗುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರು ಇಷ್ಟೊಂದು ಅನುಭವ, background ಇಟ್ಟುಕೊಂಡು ಈ ರೀತಿಯ ಹೇಳಿಕೆ ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ನಾವು ಹೇಳಿದ ಪ್ರಕಾರ ಅವರು ಹೇಳಲಿ ಎಂದು ನಾನು ಹೇಳುತ್ತಿಲ್ಲ. ಗೃಹ ಮಂತ್ರಿಗಳ ಪ್ರಕಾರ ಜಸ್ಟಿಫೈ ಮಾಡುತ್ತಿದ್ದಾರೆ. ಹಾಸನದಲ್ಲಿ ಆಗಿತ್ತು, ಅದಕ್ಕೆ ಇಲ್ಲೂ ಆಗಿದೆ ಎಂದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾನು ಜಸ್ಟಿಫೈ ಮಾಡುತ್ತಿಲ್ಲ. ಅವರು ಸರ್ಕಾರ ನಡೆಸಿದ್ದಾರೆ. ಆಗಲೂ ಕೂಡ ಇಂತಹ ಅಪಘಾತಗಳಾಗಿವೆ. ಅದಾದ ಮೇಲೂ ಅವರು ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಈಗೇನು ಸಲಹೆ ಕೊಡುತ್ತಿದ್ದಾರೆ ಆಗ ಅವರದ್ದೇ ಸರ್ಕಾರ ಇತ್ತು. ನಾನು ಪೂರ್ಣವಾಗಿ ಹೇಳುವುದಕ್ಕೆ ಹೋಗಿಲ್ಲ. ಅವರು ಹಿರಿಯರಿದ್ದಾರೆ, ಅವರಿಗೆ ರಾಜ್ಯಸಭೆಯಲ್ಲಿ ಅನುಭವ ಇದ್ದವರು. ನಾನು ಅರ್ಧ ಹೇಳಿದರೆ ಅವರು ಪೂರ್ತಿ ತಿಳಿದುಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನನಗೆ ತಮ್ಮ ರಕ್ಷಣೆ ಬೇಕು. ನಾನು ಮಾತನಾಡಿದ ಮೇಲೆ ಬೇಕಾದರೆ ಅವರು ಮಾತನಾಡಲಿ.

(ಮುಂದು)

(81)2–2–2021/ 3.30ಬಿಕೆಪಿ–ಬಿಎನ್ಎಸ್
**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು)**

ಈಗಿನ ಪ್ರಶ್ನೆ ಏನೆಂದರೆ 6 ಜನರು ಸತ್ತಿದ್ದಾರೆ. ಈ ವಿಚಾರ ಮಾಧ್ಯಮದ ಮೂಲಕ ಬಂದಿದೆ. ಅವರು ಸಹ ಹೇಳಿದ್ದಾರೆ. ಅದಕ್ಕೆ ಏತಕ್ಕೆ ಪ್ರಾಮುಖ್ಯತೆ ಸಿಕ್ಕಿದೆ ಎಂದರೆ ಆ ಜಿಲ್ಲೆ ವಿವಿಐಪಿ ಜಿಲ್ಲೆಯಾಗಿದೆ, ಮುಖ್ಯಮಂತ್ರಿಗಳು ಇರತಕ್ಕಂತಹ ಜಿಲ್ಲೆ. ಮತ್ತೆ ಇನ್ನೊಬ್ಬ ಪ್ರಭಾವಿ ಮಂತ್ರಿಗಳು ಇರತಕ್ಕಂತಹ ಜಿಲ್ಲೆಯಾಗಿದೆ ಆದ್ದರಿಂದ, ಸತ್ಯ ಹೊರಗಡೆ ಬರಬೇಕೆಂದರೆ ಬಹಳ ಕಷ್ಟ ಇದೆ. ನಾವು ಮತ್ತು ನೀವು ಹೇಳುವುದನ್ನು ಬಿಡಿ. ಮುಖ್ಯಮಂತ್ರಿಗಳ ಮೇಲೆ ಯಾರಾದರೂ ನೋಟೀಸ್ ಕೊಡಲಿಕ್ಕೆ ಆಗುತ್ತದೆಯೇ ಎಂಬ ವಿಚಾರವಾಗಿ ಇತ್ತೀಚೆಗಷ್ಟೆ ಸುಪ್ರೀಂ ಕೋರ್ಟ್‌ನವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಒಂದು ತೀರ್ಪನ್ನು ಕೊಟ್ಟರು. ಆ ಹೆಸರಿನಲ್ಲಿ ತಾವು ಇದ್ದೀರಿ ಎಂದು ಕಾಣುತ್ತದೆ.

**ಸಭಾಪತಿಯವರು:–** ಒಂದು ನಿಮಿಷ, ಈ ವಿಚಾರದಲ್ಲಿ ತಾವು ನಿನ್ನೆ ಮಾತನಾಡಿ ಆಗಿದೆ. ಅವರು ಕೇಳಿ ಆಗಿದೆ. ಈಗ ಉತ್ತರ ಕೊಡಬೇಕಾದ ಗೃಹ ಸಚಿವರು ಈಗ ಸದನದಲ್ಲಿ ಇಲ್ಲ. ಆದ್ದರಿಂದ, 10 ನಿಮಿಷಗಳವರೆಗೆ ಸದನವನ್ನು ಮುಂದೂಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(82) 02.02.2021 04.10 LL-MD

**(ಮಧ್ಯಾಹ್ನ 3 ಗಂಟೆ 34 ನಿಮಿಷಕ್ಕೆ 10 ನಿಮಿಷಗಳ ಅವಧಿಗೆ ಮುಂದೂಡಲ್ಪಟ್ಟ ಸದನವು, ಪುನಃ ಸಂಜೆ 4 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರಾದ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರು ಪೀಠವನ್ನು ಅಲಂಕರಿಸಿದರು)**

**ನಿಯಮ 68 ರ ಮೇರೆಗೆ ಪ್ರಸ್ತಾಪಿಸಲಾದ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಮುಂದುವರೆದ ಸರ್ಕಾರದ ಉತ್ತರ**

**ವಿಷಯ: ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿನ ಹುಣಸೋಡು ಗ್ರಾಮದ ಬಳಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗಾಗಿ ಸಂಗ್ರಹಿಸಿದ್ದ ಸ್ಫೋಟಕಗಳಿಂದ ಸಂಭವಿಸಿರುವ ದುರಂತದ ಕುರಿತು.**

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಾರಣ ಇಷ್ಟೇ. ಒಬ್ಬ ಗೃಹ ಸಚಿವರು ಹೇಳಿದರು, "ಅಲ್ಲಿ ಸ್ಫೋಟಕ ವಸ್ತು 1350 ಕೆ.ಜಿ. ಇರಲಿಲ್ಲ. ಏಕೆಂದರೆ, ನ್ಯಾಯಾಂಗ ತನಿಖೆ ನಡೆಯುತ್ತಿದೆ. ಅದರ ವರದಿ ಬಂದ ನಂತರ ಪೂರ್ತಿ ವಿವರ ಸಿಗುತ್ತದೆ" ಎಂದು ಹೇಳಿದರು. ಇತ್ತೀಗಷ್ಟೇ ಮಾನ್ಯ ಸುಪ್ರೀಂ ಕೋರ್ಟ್‌ನ ಒಬ್ಬ ಮುಖ್ಯ ನ್ಯಾಯಾಧೀಶರಿಗೆ, 'ಒಬ್ಬ ಮುಖ್ಯಮಂತ್ರಿ ಪದವಿಯ ಏನು ಮಹತ್ವ ಇರುತ್ತದೆ' ಎಂದು ಕೇಳಿದ ಪ್ರಶ್ನೆಗೆ, ಅವರು ಅಸಹಾಯಕರಾಗಿ ಹೇಳಿದರೋ ಅಥವಾ ವಾಸ್ತವಾಂಶ ಹೇಳಿದರೋ ಅಥವಾ ಪ್ರಾಕ್ಟಿಕಲ್ ಆಗಿ ಏನು ನಡೆಯುತ್ತದೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರಕ್ಕೆ ಸ್ಪಷ್ಟೀಕರಣ ಕೇಳುತ್ತಿರುವುದೋ ಅಥವಾ ಅದಕ್ಕೆ ಸಮಾನಂತರವಾದ ಭಾಷಣವನ್ನು ಮಾಡುತ್ತಿರುವುದೋ ಏನೋ ಎಂಬ ಬಗ್ಗೆ ತಾವು ನನಗೆ ಸ್ಪಷ್ಟೀಕರಣ ನೀಡಬೇಕು. ಏಕೆಂದರೆ, ಈ ವಿಷಯದ ಬಗ್ಗೆ ನಿನ್ನೆಯ ದಿವಸ ಚರ್ಚೆಯಾಗಿದ್ದು, ಅದಕ್ಕೆ ಸರ್ಕಾರ ಉತ್ತರ ಕೊಟ್ಟಿರುತ್ತದೆ. ಅದರಲ್ಲಿ ಏನಾದರೂ ಗೊಂದಲ ಇದ್ದು, ಅದಕ್ಕೆ ಸ್ಪಷ್ಟತೆ ಬೇಕಾಗಿದ್ದರೆ ಅದನ್ನು ಕೇಳಬಹುದು. ಅದನ್ನು ಹೊರತುಪಡಿಸಿ ಭಾಷಣಕ್ಕೆ ಅವಕಾಶ ಕೊಟ್ಟರೆ, ನಾವೆಲ್ಲರೂ ಸಹ ಭಾಷಣ ಮಾಡಬೇಕಾಗುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು yield ಆಗುತ್ತಿಲ್ಲ. ನಾನು yield ಆದ ನಂತರ ಮಾನ್ಯ ಸದಸ್ಯರು ಮಾತನಾಡಲಿ. ಅವರು ಧಾರಾಳವಾಗಿ ಭಾಷಣ ಮಾಡಬಹುದು. ಯಾರು ಬೇಡ ಎಂದು ಹೇಳಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅದಕ್ಕೆ ತಾವು ಅನುಮತಿ ನೀಡಬೇಕಲ್ಲವೇ?

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, I am not yielding. ನನಗೆ ಮಾತನಾಡಲು ಅವಕಾಶ ಕೊಡಿ. ನಾನು subject ಬಿಟ್ಟು ಬೇರೆ ಏನು ಮಾತನಾಡುತ್ತಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡಲಿ. ಆದರೆ, ಅವರ limitation ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನನಗೆ limitation ಗೊತ್ತಿದೆ, unlimitation ಸಹ ಗೊತ್ತಿದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಒಬ್ಬ ಹಿರಿಯ ಸದಸ್ಯರಾದಂತಹವರು...

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಏನು ಮಾತನಾಡಬೇಕೆಂದು ನನಗೆ ಗೊತ್ತಿದೆ. ಆದುದರಿಂದ ನಾನು yield ಆಗುವುದಿಲ್ಲ. ಮಾನ್ಯ ಸದಸ್ಯರು ನನ್ನ ಮಾತುಗಳನ್ನು ಕೇಳುವುದಾದರೆ ಕೇಳಬಹುದು. ನಾನು ಸದನಕ್ಕೆ ಹೇಳುತ್ತಿದ್ದೇನೆಯೇ ಹೊರತು ಅವರಿಗೆ ಹೇಳುತ್ತಿಲ್ಲ. ಆ ರೀತಿ ಹೇಳುವುದಕ್ಕೆ ನನಗೆ ಹಕ್ಕು ಇದೆ. ಹಾಗಾಗಿ, ನಾನು ಸದನಕ್ಕೆ ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರ ಉತ್ತರ ಕೊಡಬೇಕು.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಿನ್ನೆಯ ದಿವಸ ನಾವು ಯಾವ್ಯಾವ ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದೆವೋ ಆ ಎಲ್ಲಾ ಪಾಯಿಂಟ್‌ಗಳನ್ನು ಬಿಟ್ಟು, ಮಾನ್ಯ ಮಂತ್ರಿಗಳು ಬೇರೆ ಉತ್ತರವನ್ನು ಕೊಟ್ಟಿರುತ್ತಾರೆ. ಇದಕ್ಕೆ ಯಾವುದೇ ಉತ್ತರ ನೀಡಿರುವುದಿಲ್ಲ. ಆ ಕಾರಣಕ್ಕಾಗಿ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಮ್ಮ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆಂದು ನಾವು ಕಾಯುತ್ತಿದ್ದೆವು. ಅಷ್ಟೇ ಅಲ್ಲದೇ, legal mining, illegal mining ಸಕ್ರಮ ಮತ್ತು ಅಕ್ರಮಗಳ ಬಗ್ಗೆ ಮಾತ್ರ ಹೇಳುತ್ತಿದ್ದು, ಆ ಸ್ಫೋಟ ಏತಕ್ಕೆ ಆಗಿರುತ್ತದೆಯೆಂದು ಅವರು ಹೇಳಿರುವುದಿಲ್ಲ. ಹಾಗಾಗಿ, ಇದಕ್ಕಿಂತಲೂ ಬೇರೆ ಯಾವ relevance ಬೇಕಾಗಿರುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮುರುಗೇಶ್ ಆರ್. ನಿರಾಣಿ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಇನ್ನೂ ತನಿಖೆಯಾಗುತ್ತಿರುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಮಂತ್ರಿಗಳು ಮಾತನಾಡುವಾಗ ನಾನು ಏನು ಮಾತನಾಡಲಿಲ್ಲ. ಈ ವಿಷಯದಲ್ಲಿ ತನಿಖೆ ಮಾಡುತ್ತಿದ್ದಾರೆ, ನಿಜ. ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ. ಅಂದರೆ, ತನಿಖೆಗೆ ಎಷ್ಟು ಮಹತ್ವ ಇರುತ್ತದೆಯೆಂದು ನಾನು ಹೇಳುತ್ತಿದ್ದೇನೆ. ಆದುದರಿಂದ, ಮಾನ್ಯ ಗೃಹ ಮಂತ್ರಿಗಳ ಬಗ್ಗೆ ನನಗೆ ಒಳ್ಳೆಯ ಗೌರವ ಇದೆ. ಏಕೆಂದರೆ, ಅವರ ತಂದೆಯವರ ಕಾಲದಿಂದ ನಾವು ಬಂದಿರುತ್ತೇವೆ. ಈಗಲೂ ಇತಿಹಾಸ ಸೃಷ್ಟಿ ಮಾಡಿರುವಂತವರು, ಮಾನ್ಯ ಸುಪ್ರೀಂ ಕೋರ್ಟ್‌ನಲ್ಲಿ ರೆಕಾರ್ಡ್ ಇದೆ. ಆ ಸುಪ್ರೀಂ ಕೋರ್ಟ್‌ನ ವಿಚಾರ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅದು ಬೇರೆ ಮುಖ್ಯಮಂತ್ರಿಯವರ ವಿಚಾರ ಅಲ್ಲ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಮತ್ತು ಅದರಲ್ಲಿ ಮಾನ್ಯ ಮಂತ್ರಿಗಳ ಹೆಸರು ಸಹ ಇದೆ. Practical ಆಗಿ ಏನಿದೆಯೆಂದರೆ, ಯಾರಾದರೂ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಮಾನ್ಯ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಹೇಳುತ್ತಾರೆ. ಈ ವಿಷಯಕ್ಕೆ ಸಂಬಂಧಪಟ್ಟ ಘಟನೆ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿರುವಂಥದ್ದು. ಮಾನ್ಯ ಮುಖ್ಯಮಂತ್ರಿಯವರು ಅದೇ ಜಿಲ್ಲೆಯವರು ಮತ್ತು ಮತ್ತೊಬ್ಬ ಮಂತ್ರಿಗಳು ಸಹ ಅದೇ ಜಿಲ್ಲೆಯವರಾಗಿರುತ್ತಾರೆ. ಈ ನ್ಯಾಯಾಂಗ ತನಿಖೆಯನ್ನು ಅಧಿಕಾರಿಗಳಿಂದ ಮಾಡಿಸಿದರೆ, ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ಮಂತ್ರಿಗಳು ತಪ್ಪು ಮಾಡಿದ್ದಾರೆಂದು ಹೇಳುವುದಕ್ಕೆ ಯಾರಿಗಾದರೂ ಧೈರ್ಯ ಇರುತ್ತದೆಯೇ? ಅದಕ್ಕಾಗಿ ನಾನು ಹೇಳುತ್ತಿರುವುದೇನೆಂದರೆ, ಬಹಳಷ್ಟು ನೈತಿಕತೆ, party with difference ಎಂದು ಹೇಳತಕ್ಕಂತಹ ಜನ ಸ್ಫೋಟದಿಂದ 6 ಜನ ಸತ್ತಿರುತ್ತಾರೆ. ಆ ಗಣಿಗಾರಿಕೆಯಲ್ಲಿ ಅವರು ಸತ್ತಿರುವುದಿಲ್ಲ. ಅವರು truck ನಲ್ಲಿ transport ಆಗುವಾಗ ಸತ್ತಿರುತ್ತಾರೆ. ಆ truck ಗಣಿಗಾರಿಕೆಗೆ ಹೋಗುತ್ತಿತ್ತೇ ಅಥವಾ ಬೇರೆ ಎಲ್ಲಿಗಾದರೂ ಹೋಗುತ್ತಿತ್ತೇ ಎನ್ನುವುದು ಸದನಕ್ಕೆ ಮತ್ತು ಕರ್ನಾಟಕ ರಾಜ್ಯದ ಜನತೆಗೆ ಗೊತ್ತಾಗಬೇಕು. ಅದಕ್ಕೋಸ್ಕರ ಈ ವಿಚಾರ ಏನಾದರೂ ಹೊರಗಡೆ ಬರಬೇಕಾದರೆ ಅದು ನ್ಯಾಯಾಂಗ ತನಿಖೆಯಿಂದ ಆಗುವುದಿಲ್ಲ.

(...ಮುಂದುವರೆದಿದೆ)

(83) 02.02.2021 4.20 ವೈಎಲ್–ಎಕೆ
**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):–**
ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಇದನ್ನು ‘ಉಚ್ಛ ನ್ಯಾಯಾಲಯದ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕೆಂದು’ ಹೇಳಿದ್ದಾರೆ. ನಾನು ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ N.I.A. (National Investigation Agency) ಯಿಂದ ತನಿಖೆ ಆಗಬೇಕೆಂದು ಹೇಳಿದ್ದೆ. ಮಾನ್ಯ ಗೃಹ ಸಚಿವರು ಸಹ ಮಂಗಳೂರಿನಲ್ಲಿ ನನಗೆ ಸಿಕ್ಕಿದಾಗ ‘ಸರ್, ಒಂದು ಪಟಾಕಿ ಹೊಡೆದರೆ ಎನ್‌ಐಎ ಎಂದು ಹೇಳುತ್ತೀರಿ, ಲವ್ ಜಿಹಾದ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದರೆ, ಎನ್‌ಐಎ ಎಂದು ಹೇಳುತ್ತೀರಿ' ಎಂದು ಹೇಳಿದ್ದೆ. ಅದೇ ರೀತಿ 6 ರಿಂದ 8 ಜನ ಮೃತಪಟ್ಟಿದ್ದಾರೆ, ನೂರಾರು ಜನ ಗಾಯಗೊಂಡಿದ್ದಾರೆ, truck ನಲ್ಲಿ explode ಆಗಿದೆ. ಆದರೆ, ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ಅಧಿಕಾರಿಗಳಿಗೆ ವಹಿಸಲಾಗಿದೆ. ಸತ್ಯ ಹೊರಗೆ ಬರಬೇಕೆಂದರೆ, ನ್ಯಾಯಾಂಗ ತನಿಖೆಯಿಂದ ಆಗುವುದಿಲ್ಲ. ಆದ್ದರಿಂದ ಸತ್ಯ ಹೊರಗೆ ಬರಬೇಕೆಂದರೆ, ನೈತಿಕ ಹೊಣೆ ಹೊತ್ತು ಮಾನ್ಯ ಮುಖ್ಯಮಂತ್ರಿಗಳು, ಆ ಜಿಲ್ಲೆಯ ಸಚಿವರು ರಾಜೀನಾಮೆ ನೀಡಿದರೆ ಮಾತ್ರ ಸಾಧ್ಯ. ಅದಕ್ಕಾಗಿ ನಾನು ಅವರಿಂದ ರಾಜೀನಾಮೆಯನ್ನು ಕೇಳುವುದಕ್ಕೆ ಬಯಸುತ್ತೇನೆ ಎಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ಬಹಳ ಹಿರಿಯ ಸದಸ್ಯರು ಮತ್ತು ರಾಜಕೀಯದಲ್ಲಿ ಅನುಭವಸ್ಥರಾಗಿದ್ದಾರೆ. ಎಲ್ಲವನ್ನೂ ಸಹ political prism ನಲ್ಲಿಯೇ ನೋಡುವಂಥ ಪರಿಣಿತರು. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಸಚಿವರನ್ನು ಬಿಟ್ಟು ನೋಡಿದಾಗ, ಈ ಪ್ರಕರಣದಲ್ಲಿ ಪರೋಕ್ಷವಾಗಿ, ಅಪರೋಕ್ಷವಾಗಿ Accused List ನೋಡಿದರೆ, remotely ಯಾರೂ ಸಹ ಭಾಗಿಯಾಗಿಲ್ಲ. ಇಲ್ಲದನ್ನು ಕಲ್ಪನೆ ಮಾಡಿ, ಅದಕ್ಕೆ ಜೋಡಿಸಿ, ಅದಕ್ಕಾಗಿ ರಾಜೀನಾಮೆ ನೀಡಿ ಎಂಬ conclusion ಮಾಡುತ್ತಾರೆ ಎಂದರೆ ಹೇಗೆ? ಈ ಹಿಂದೆ ಸ್ಫೋಟಗೊಂಡಾಗ ಯಾರಾದರೂ ರಾಜೀನಾಮೆ ನೀಡಿದ್ದಾರೆಯೇ? ನೈತಿಕ ಹೊಣೆ ಹೊತ್ತಿದ್ದಾರೆಯೇ? ಅಥವಾ ಸ್ಫೋಟ ಸಂಭವಿಸಿಲ್ಲವೇ? ಇವತ್ತಿನ ದಿವಸ ಅಕ್ರಮ ಗಣಿಗಾರಿಕೆ ನಡೆಯುತ್ತಿದೆಯೇ? ಉದಾಹರಣೆಗೆ ಇವತ್ತು ಸರ್ವೆ ನಂಬರ್ 2 ಕಲ್ಲಗಂಗೂರು ಕ್ರಷರ್‌ನಲ್ಲಿ ಸ್ಫೋಟವಾಗಿದ್ದು, ಅದೇ ಸರ್ವೆ ನಂಬರ್‌ನಲ್ಲಿ ಸುಮಾರು 60, 70 ಮೀಟರ್ ದೂರದಲ್ಲಿ ಇವತ್ತು ಏನು ಕ್ವಾರಿ ನಡೆಯುತ್ತಿದೆ, ಆ ಕ್ವಾರಿಯು ಸುಮಾರು 30 ಅಡಿ, 50 ಅಡಿ ಕೆಳಗೆ ಇದೆ. ಒಂದು ವರ್ಷದಲ್ಲಿಯೇ ಸುಮಾರು 30 ಅಡಿ, 50 ಅಡಿ ಕೆಳಗೆ ಕ್ವಾರಿ ನಡೆಯುತ್ತದೆಯೇ? ಎಷ್ಟು ವರ್ಷಗಳಿಂದ ನಡೆಯುತ್ತಿದೆ? ಇದಕ್ಕೆ ಪರವಾನಗಿ ನೀಡುವ ಮೊದಲು ಅಂದರೆ, 2018, 2019ನೇ ಸಾಲಿನಲ್ಲಿ 3 ಪ್ರಕರಣಗಳನ್ನು ದಾಖಲಿಸಲಾಗಿದೆ. ಆದಾದ ನಂತರ ಸಹ sensitive zone ಎಂಬುದು ಗೊತ್ತಿದ್ದರೂ ಸಹ ಮಾರ್ಚ್ 2019 ರಂದು ಸ್ಟೋನ್ ಕ್ರಷರ್‌ಗೆ ಪರವಾನಗಿ ನೀಡಲಾಗಿದೆ. ಅಂದಿನ ದಿವಸ ಯಾವ ರಾಜಕಾರಣಿ ಅಧಿಕಾರದಲ್ಲಿದ್ದರು? ಹಾಗಾದರೆ, ನೇರವಾಗಿ ಆ ರಾಜಕಾರಣಿಯನ್ನು ಅಪರಾಧಿ ಸ್ಥಾನದಲ್ಲಿ ಕೂರಿಸಬೇಕಾಗುತ್ತದೆಯೇ? ಸ್ಟೋನ್ ಕ್ರಷರ್ ಆಗಲಿ, ಕ್ವಾರಿ ಆಗಲಿ, sand ಆಗಲಿ, ನಮ್ಮ ಪಾಲಿಸಿಗಳಿಂದ scarcity ಆಗುತ್ತಿದೆ. Scarcity ಆದಕಾರಣ ನಂಬರ್-2 ನಲ್ಲಿ ಹೋಗುತ್ತಿದ್ದು, ಕಾನೂನು ಬಾಹಿರವಾಗಿ ಕ್ವಾರಿ ಆಗುತ್ತಿದೆ. ಇವತ್ತಿನಿಂದ ನಡೆಯುತ್ತಿಲ್ಲ, ಸುಮಾರು 3, 4 ದಶಕಗಳಿಂದ ನಡೆಯುತ್ತಿದೆ.

1972ನೇ ಸಾಲಿನಲ್ಲಿ ಅಲ್ಲಿ ನೆಲೆಸಿದ್ದಂತಹ ಭೋವಿ ಸಮಾಜದವರಿಗೆ ನೀಡಿದ್ದರಿಂದ ಪ್ರಾರಂಭಗೊಂಡು, ಇವತ್ತು explosives use ಮಾಡುವ ಮಟ್ಟಕ್ಕೆ ಬಂದಿದೆ. 97 huge ಕ್ರಷರ್‌ಗಳು ಇದೆ. ಆದ್ದರಿಂದ ಇದು ಇವತ್ತಿನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಮಾತ್ರವಲ್ಲ, ನಾಳಿನ ಪ್ರಶ್ನೆ ಸಹ ಆಗಿದೆ. ಇವತ್ತು ಕ್ರಷರ್‌ಗಳ ಹಿಂದೆ ಇರುವಂಥ ಒನರ್‌ಗಳು ಯಾರಿದ್ದಾರೆ ಎಂಬುದನ್ನು ಲೆಕ್ಕ ಮಾಡಿ ನೋಡಿದಾಗ, ನಾನು ವಿರೋಧ ಪಕ್ಷದ ಕಡೆ ಬೆರಳು ಮಾಡಿ ತೋರಿಸಿದರೆ, ನನಗೂ ಬೆರಳು ಮಾಡಿ ತೋರಿಸಿದಂತಾಗುತ್ತದೆ. ನಾವೆಲ್ಲರೂ ಇಲ್ಲಿ ಕುಳಿತುಕೊಂಡು ಮಾತನಾಡುವಾಗ ಈ ವ್ಯವಸ್ಥೆಯಲ್ಲಿ ಏನಾದರೂ ನೈತಿಕತೆ ಇದ್ದರೆ, ಎಲ್ಲರ ಕಾಲದಲ್ಲಿ ಆಗಿರುವುದೇ, ಮುಂದೆ ಆಗಬಾರದು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಈ ಹಿಂದೆ ಸ್ಫೋಟಗೊಂಡಂತಹ ಸಂದರ್ಭದಲ್ಲಿ ಯಾವ ತನಿಖೆ ಮಾಡಲಾಗಿದೆ? ಯಾವ ವರದಿ ಬಂದಿದೆ? ಅದ್ಯಾವುದು ಆಗಿಲ್ಲ. ಅದರ ಬೆನ್ನೆತ್ತಿ ಎಲ್ಲಿ ಹೋಗಿದ್ದಾರೆ? ಅದಕ್ಕೆ ಸಂಬಂಧಿಸಿದಂತೆ ಎಲ್ಲಿಯಾದರೂ conclusive evidence ತೆಗೆದುಕೊಂಡಿದ್ದಾರೆಯೇ? ಯಾವುದು ಸಹ ಆಗಿಲ್ಲ. ಅಂದಿನ ದಿವಸ ಸಹ ಸ್ಫೋಟಕದಿಂದಲೇ ಮರಣ ಹೊಂದಿರುವುದು, ಇವತ್ತು ಸಹ ಸ್ಫೋಟಕದಿಂದಲೇ ಮೃತಪಟ್ಟಿರುವುದು. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ, ಅವರ ಅಡಿಯಲ್ಲಿಯೇ ನಮ್ಮ ಸರ್ಕಾರ ಈ ಸ್ಫೋಟಕಗಳು ಎಲ್ಲಿಂದ ಬರುತ್ತಿದೆ ಎಂಬುದನ್ನು ಕೇವಲ 3 ದಿವಸಗಳಲ್ಲಿ; ಡೀಲರ್‌ಗೆ ಸಂಬಂಧಿಸಿದವರಲ್ಲ, ಆಂಧ್ರ ಪ್ರದೇಶ ಸರ್ಕಾರದ ಪೊಲೀಸ್‌ನವರ ಸಹಾಯ ಪಡೆದುಕೊಂಡು, ಇದರ ಮುಖ್ಯ ಸರಬರಾಜುದಾರರು ಯಾರಿದ್ದಾರೆ ಎಂದು ಅನಂತಪುರಕ್ಕೆ ಹೋಗಿ trace out ಮಾಡಿ ಆ ಗೋದಾಮನ್ನು seize ಮಾಡಿ, ಸುಮಾರು 64 ಸಾವಿರ gelatin sticks ಮತ್ತು ದೊಡ್ಡ ಪ್ರಮಾಣದಲ್ಲಿ detonators ಗಳನ್ನು seize ಮಾಡಿದ್ದೇವೆ. ಅಲ್ಲಿ ಇದ್ದಂಥ ದೊಡ್ಡ ನುರಿತ ವ್ಯಕ್ತಿಯೊಬ್ಬರು ಇದನ್ನು ಒಂದೇ ಸಲ open ಮಾಡಲು ಸಾಧ್ಯವಿಲ್ಲ, ಯಾರಾದರೂ ಪರಿಣಿತರನ್ನು ಕರೆಸಿ open ಮಾಡಿಸಬೇಕೆಂದು ಹೇಳಿದರು. ಹಾಗಾಗಿ ಅದನ್ನು ಸಹ ಆಂಧ್ರ ಪ್ರದೇಶ ಸರ್ಕಾರದ ಪೊಲೀಸ್‌ನವರ ಸಹಾಯದ ಮೇರೆಗೆ joint ಆಗಿ seal ಮಾಡಿ, ಅದರ ವಿರುದ್ಧ ಸಹ ತನಿಖೆಯನ್ನು ಮುಂದುವರೆಸುತ್ತಿದ್ದೇವೆ. ಅನಂತಪುರದಿಂದ ನಮ್ಮ ರಾಜ್ಯಕ್ಕೆ ಬಂದಿರುವುದರಿಂದ ಅದನ್ನು ಹೇಗೆ ರವಾನಿಸಲಾಗಿದೆ ಎಂಬುದು ಸಹ ಬಹಳ ಮುಖ್ಯ. ಅದರ ಸಾಗಾಣಿಕೆಗೆ ಕೆಲವೊಂದು ಷರತ್ತುಗಳು ಸಹ ಇವೆ. ಅವು ಶಾಲೆಗಳು ಇರುವಂಥ ಜಾಗದಲ್ಲಿ, ಜನಸಂದಣಿಯಲ್ಲಿ ಹಾಗೂ ನಗರ ಪ್ರದೇಶದ ಒಳಗೆ ಬರದೇ, ಹೊರ ವಲಯದಿಂದ ಬರಬೇಕು ಎಂದು ಹೇಳಿದರೂ ಸಹ ಆ ಷರತ್ತನ್ನು violate ಮಾಡಿದ್ದಾರೆ.

Mr. Kulkarni who is the mine owner is a habitual offender. ಈಗಾಗಲೇ ಶ್ರೀ ಕುಲಕರ್ಣಿ ಮೇಲೆ ಪ್ರಕರಣ ದಾಖಲಿಸಿದರೂ, ಇಂತಹ ಕೆಲಸ ಮಾಡುತ್ತಾರೆ ಎಂದರೆ, he is a habitual offender. ಈ ಹಿಂದೆ ಸಹ explosives ಉಪಯೋಗ ಮಾಡಿದ್ದು, ಅದರ ಮೇಲೆ ಸಹ ಆತನ ವಿರುದ್ಧ Anti-Explosive Substances Act ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈಗಾಗಲೇ ಶಿವಮೊಗ್ಗದ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಆತನ ಮೇಲೆ ಪ್ರಕರಣ ದಾಖಲಿಸಲಾಗಿದೆ. ಆತ ಮಾಡುತ್ತಿರುವುದು ಗೊತ್ತಿದ್ದರೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಪರವಾನಗಿ ನೀಡಲಾಗಿದೆ, ಇದರಿಂದಾಗಿ ಆತನಿಗೆ ಧೈರ್ಯ ಬಂದಿದ್ದು, ಮತ್ತಷ್ಟು ಮಾಡುತ್ತಿದ್ದಾನೆ. ಇದು ಯಾವ ವ್ಯವಸ್ಥೆ, ಯಾರಿಗೆ ಬೆಂಬಲ ನೀಡಲಾಗುತ್ತದೆ ಎಂಬುದನ್ನು ನಿಖರವಾಗಿ ಹೇಳುವುದಕ್ಕೆ ಆಗುತ್ತದೆಯೇ? ಸುಮಾರು 20 ವರ್ಷಗಳಿಂದ ನಡೆಯುತ್ತಿರುವುದಕ್ಕೆ ಯಾರು ಸಾಕ್ಷಿ? ನಾವು ಸಹ ಪ್ರಾಮಾಣಿಕವಾಗಿ ಹೇಳೋಣ. ಆದ್ದರಿಂದ ಇದು ನಡೆಯುತ್ತಿದೆ, ಹೇಗೆ ನಿಲ್ಲಿಸಬೇಕು ಎಂಬುದನ್ನು ನೋಡಬೇಕಾಗುತ್ತದೆ. ನಾವು ಏನು ಇದನ್ನು ಮುಚ್ಚಿಡುವ ಪ್ರಯತ್ನ ಮಾಡುತ್ತಿಲ್ಲ ಅಥವಾ ಯಾರನ್ನು ರಕ್ಷಣೆ ಮಾಡುತ್ತಿಲ್ಲ. ಹಾಗೆಯೇ ಇದು ಕೇವಲ ಶಿವಮೊಗ್ಗಕ್ಕೆ ಮಾತ್ರ ಸಂಬಂಧಿಸಿರುವುದಿಲ್ಲ. ಇಡೀ ರಾಜ್ಯದಲ್ಲಿಯೇ ನಡೆಯುತ್ತಿದ್ದು, ಹಲವಾರು ದೂರುಗಳು ನಮಗೆ ಬರುತ್ತಿವೆ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಕೇವಲ ಸ್ಥಳೀಯ ಪೊಲೀಸರಿಗೆ ವಹಿಸಿಲ್ಲ.

ನಮ್ಮಲ್ಲಿ ಎನ್‌ಐಎ ರೀತಿ I.S.D (Internal Security Division) ಅಸ್ತಿತ್ವದಲ್ಲಿದ್ದು, ಅದಕ್ಕೆ ಸೂಚನೆ ನೀಡಿದ ಮೇಲೆ ಕಳೆದ 08 ತಿಂಗಳುಗಳಲ್ಲಿ ಸುಮಾರು 14 ಕಡೆ ಬಲೆಬೀಸಿ, 17 ಸಾವಿರದ live gelatin sticks ವಶಪಡಿಸಿಕೊಂಡಿದ್ದೇವೆ. ದಿನಾಂಕ: 13.01.2021 ರಂದು ಈ ಸ್ಫೋಟ ಉದ್ಭವಿಸುವ ಮೊದಲೇ ಬಿಡದಿಯಲ್ಲಿ 13,400 gelatin sticks ಗಳ consignment ಒಂದೇ ಪ್ರದೇಶದಲ್ಲಿ ಸಿಕ್ಕಿದೆ. ನಾವು ಸುಮ್ಮನೆ ಕುಳಿತಿಲ್ಲ, ಎಲ್ಲಾ ಕಡೆ ಕಾರ್ಯಾಚರಣೆ ಮಾಡುತ್ತಿದ್ದೇವೆ. ಇಡೀ ರಾಜ್ಯದಲ್ಲಿಯೇ ಇಂತಹ ಕಾರ್ಯಾಚರಣೆ ನಡೆಯುತ್ತಿದ್ದು, ಹುಬ್ಬಳ್ಳಿ-ಧಾರವಾಡದಲ್ಲಿ ಸಹ seize ಮಾಡಿದ್ದೇವೆ. ಬಳ್ಳಾರಿ, ರಾಮನಗರ, ಈ ರೀತಿಯಾಗಿ ಸುಮಾರು 17, 18 ಜಿಲ್ಲೆಗಳಲ್ಲಿ seize ಮಾಡಿದ್ದೇವೆ. ನಾವೇನೂ ಅವಶ್ಯಕತೆ ಇದೆ ಎಂದು ಕಾನೂನುಬಾಹಿರವಾಗಿ, misuse of explosives ಆಗಲು ಅವಕಾಶವಿರಬೇಕೆಂದು ಹೇಳುವುದಿಲ್ಲ. ಈ ರೀತಿ ಅನಾಹುತಗಳು ಆಗಬಾರದು. ಕೇವಲ ಅನಾಹುತ ಮಾತ್ರವಲ್ಲದೇ ದುರುಪಯೋಗ ಸಹ ಆಗುತ್ತದೆ. ಬೇರೆ-ಬೇರೆಯವರ ಕೈಗೆ ಸಿಕ್ಕಿದಾಗ ಏನಾಗುತ್ತದೆ ಎಂಬ ಅರಿವು ಸಹ ನಮಗೆ ಇದೆ. Anti-national forces ಗೆ ಸಿಕ್ಕಿದರೆ ಏನಾಗುತ್ತದೆ ಎಂಬುದು ಸಹ ನಮ್ಮ ಗಮನದಲ್ಲಿದೆ. ಆದ್ದರಿಂದ ನಾವು ಈ ಪ್ರಕರಣವನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಇದು ನಮಗೆ ಬಹಳ ಎಚ್ಚರಿಕೆಯ ಗಂಟೆ ಎಂದು ತಿಳಿದುಕೊಂಡಿದ್ದೇವೆ. ನಾನು ನಮ್ಮ ಪೊಲೀಸ್‌ನವರಿಗೆ ಸಂಪೂರ್ಣವಾಗಿ freehand ನೀಡಿದ್ದೇನೆ. ಎಲ್ಲಾ ಜಿಲ್ಲೆಗಳಿಗೂ ಯಾರಿಗೆ ಪರವಾನಗಿ ನೀಡಲಾಗಿದೆ ಅವರು ಮಾತ್ರ explosives ತೆಗೆದುಕೊಳ್ಳಬಹುದು ಮತ್ತು ಅದನ್ನು ಪರವಾನಗಿ ಪಡೆದಿರುವವರು ಮಾತ್ರ ಉಪಯೋಗ ಮಾಡಬೇಕು. Mine owners ಕೇವಲ ಒಪ್ಪಂದ ಮಾಡಿಕೊಂಡು, ನಂತರ ನೌಕರರಿಗೆ ವಹಿಸಿ explosives ತೆಗೆದುಕೊಳ್ಳುವುದು ಪ್ರಾರಂಭ ಮಾಡುವುದರಿಂದ ಪರವಾನಗಿ ನೀಡಿದವರನ್ನೇ ಬಿಟ್ಟು ಮಾಡುತ್ತಾರೆ. ಈ ರೀತಿ violations ಇದೆ. ನಾನು 'ಯಾವುದೇ violations ಇಲ್ಲ, ನಾವು ಬಂದ ಮೇಲೆ ನಿಂತಿದೆ' ಎಂದು ಹೇಳುತ್ತಿಲ್ಲ. ಈ ಹಿಂದೆ ನಡೆದುಕೊಂಡು ಬಂದಿರುವುದೇ ಇವತ್ತು ಸಹ ನಡೆಯುತ್ತಿದ್ದು, ಅದನ್ನು ನಿಲ್ಲಿಸಬೇಕಾಗಿದೆ. ಆ ನಿಟ್ಟಿನಲ್ಲಿ ಖಂಡಿತವಾಗಿಯೂ ಮಾನ್ಯ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸದಸ್ಯರ ಸಲಹೆ-ಸೂಚನೆಯನ್ನು ಹಾಗೂ ಅದರ ಗಂಭೀರತೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. And we will not stop here. ನಿಲ್ಲಿಸುವುದಿಲ್ಲ, ಇದಕ್ಕೆ ಸಂಬಂಧಿಸಿದಂತೆ root ಗೂ ಹೋಗುತ್ತವೆ. ಈಗಾಗಲೇ ಯಾರು ತಲೆಮರೆಸಿಕೊಂಡಿದ್ದಾರೆ ಆತನ ಮೇಲೆ ಸಹ ಪ್ರಕರಣ ದಾಖಲು ಮಾಡಿ, ವಿಚಾರಣೆ ಮಾಡುತ್ತೇವೆ. ಯಾರೇ ಆಗಲಿ, ಎಷ್ಟೇ ದೊಡ್ಡ ವ್ಯಕ್ತಿಯಾಗಲಿ ತನಿಖೆ ಮಾಡುತ್ತೇವೆ. ಅವರ ಮೇಲೆ ಪ್ರಕರಣ ದಾಖಲು ಮಾಡುವುದಷ್ಟೇ ಅಲ್ಲ, Explosive Act ಅಡಿ ಸಹ ಪ್ರಕರಣವನ್ನು ದಾಖಲು ಮಾಡಿ, where a punishment of life imprisonment is prescribed in that Act, we will bring him to justice. 100% ನಾವು ನ್ಯಾಯ ತರುವಂಥ ಕೆಲಸ ಮಾಡುತ್ತೇವೆ. ಇಡೀ ರಾಜ್ಯದಲ್ಲಿಯೇ ಎಲ್ಲೆಲ್ಲಿ ಕಲ್ಲು ಪ್ರದೇಶ ಇದೆ ಎಂಬುದು ನಮಗೆಲ್ಲಾ ಗೊತ್ತಿದೆ. ದೊಡ್ಡ-ದೊಡ್ಡ ಬೆಟ್ಟಗಳನ್ನೇ ಕರಗಿಸಿ ಹಾಕುವಂಥ ಶಕ್ತಿ ಮಾನವನ ಆಸೆಯಾಗಿದೆ. ಹಲಸೂರು, ರಾಮನಗರ ಬೆಟ್ಟಗಳಿಗೆ ಹೋಗಿ ನೋಡಿದರೆ ಸಾಕು, ಬೆಟ್ಟಗಳು ನಮ್ಮ ಕಣ್ಣ ಮುಂದೆಯೇ ಕಣ್ಮರೆಯಾಗುತ್ತಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ಗಣಿಗಾರಿಕೆಯಲ್ಲಿ ಸಹ 'sustainable mining' ಎಂದು ಒಂದು ಪಾಲಿಸಿ ಇದೆ. ನಮಗೆ ಎಷ್ಟು ಅವಶ್ಯಕತೆ ಇದೆ, ಅಷ್ಟು ಮೈನಿಂಗ್ ಮಾಡಬೇಕು. ಆದರೆ, ದುರಾಸೆಯಿಂದ ದೊಡ್ಡ ಪ್ರಮಾಣದಲ್ಲಿ illegal mining ಮಾಡಲಾಗುತ್ತಿದೆ.

(ಮುಂದು...)

(84)02.02.2021/4.30/ಎಸ್‌ಕೆ-ಎಕೆ

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):-**

ಮಾನ್ಯ ಸಭಾಪತಿಯವರೇ, illegal mining ನಲ್ಲಿ ಯಾರದೇ ಪ್ರಭಾವವಿರಲಿ ಹಾಗೂ ಯಾರದೇ ಅಡಿಯಲ್ಲಿ ಇರಲಿ ಹಾಗೂ ಯಾವುದೇ ಜಿಲ್ಲೆಯಲ್ಲಿ ಇರಲಿ ಅವುಗಳಿಗೆ ಮಟ್ಟ ಹಾಕುವಂತಹ ಕೆಲಸವನ್ನು ನಮ್ಮ ಗೃಹ ಇಲಾಖೆಯೊಂದೇ ಅಲ್ಲ, ಇದರ ಜೊತೆಗೆ ಸರ್ಕಾರ ಅಂದರೆ ಕಂದಾಯ, ಗಣಿಗಾರಿಕೆ, ಅರಣ್ಯ ಮತ್ತು ಪೊಲೀಸ್ ಇಲಾಖೆಗಳ ಸಹಕಾರ ಬೇಕಾಗುತ್ತದೆ. ಅದರ ಬಗ್ಗೆ ಮುಂದಿನ ದಿನಗಳಲ್ಲಿ ಖಂಡಿತವಾಗಿಯೂ ಮಾಡುತ್ತೇವೆ. ಆ ವರದಿಯನ್ನು ತಮ್ಮ ಮುಂದೆ ಇಡುತ್ತೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಪುನಃ ಮಾತನಾಡುತ್ತಿದ್ದೇನೆ. ಮಾನ್ಯ ಸಚಿವರು ಹೇಳುವ ಪ್ರಕಾರ ನಾವು ತಪ್ಪು ಮಾಡಿದ್ದೇವೆಂದು ಹೇಳಿ, ಅದಕ್ಕೆ ನಾವು ಇಲ್ಲಿ ಬಂದಿದ್ದೇವೆ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ...

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಚಿವರೇ ತಾವು ಮಾತನಾಡುವಾಗ, ನಾನು ಏನನ್ನೂ ಮಾತನಾಡಲಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ನನ್ನ ಮಾತುಗಳನ್ನು ತಾವು ತಪ್ಪಾಗಿ ಅರ್ಥಮಾಡಿಕೊಂಡಿದ್ದೀರಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಚಿವರೇ ಒಂದು ನಿಮಿಷ.

**ಶ್ರೀ ಬಸವರಾಜ ಬೊಮ್ಮಾಯಿ:-** ನೀವಿದ್ದಾಗಲೂ, ನಿಮ್ಮ ಕೈ ಕೆಳಗೆ ಆಗಿರುವಂತಹ ಅನಾಹುತವನ್ನು ಹೇಳಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಗೃಹ ಸಚಿವರೇ,

**ಶ್ರೀ ಬಸವರಾಜ ಬೊಮ್ಮಾಯಿ:-** ಅದಕ್ಕೆ ತಪ್ಪು ಮಾಡಿದಿರಿ ಅಥವಾ ಆ ಕಡೆ ಹೋಗಿದ್ದಿರಿ ಎನ್ನುವಂತಹ ಮಾತುಗಳನ್ನು . . . .

**ಶ್ರೀ ಬಿ.ಕೆ. ಹರಿಪ್ರಸಾದ್:-** ತಾವು ಮಾತನಾಡುವಂತಹ ದಾಟಿ ಆ ರೀತಿ ಇತ್ತು. ನೀವಿದ್ದಾಗ ಆಗಲಿಲ್ಲವೇ? ಅದರ ಅರ್ಥವೇನೆಂದರೆ, ನೀವಿದ್ದಾಗಲೂ ಆಗಿದೆ. ಅದಕ್ಕೆ ನಾವು ಇಲ್ಲಿ ಬಂದಿದ್ದೇವೆಂದು ಹೇಳಿದ್ದಷ್ಟೆ. ತಾವು ಹೇಳಿರುವುದರ ಬಗ್ಗೆ ನಾನು ಸಮರ್ಥನೆ ಮಾಡಿಕೊಂಡಿದ್ದೇನೆ. ಅದು ಇಲ್ಲ ಅಂತಿಲ್ಲ. ತಾವು ಹೇಳಿರುವ ಹಾಗೇ ನಾನು ಅಲ್ಲೆಲ್ಲೋ ಇದ್ದೆ, ರಾಜಕೀಯದ prism ನಲ್ಲಿ ನೋಡುತ್ತೇನೆಂದು ಹೇಳಿ, ನಾನು ಶೇಕಡ ನೂರಕ್ಕೆ ನೂರರಷ್ಟು ರಾಜಕೀಯದವನು. I am a political activist. ನಾನು ಡೊಂಗಿ ಸನ್ಯಾಸಿ ಅಲ್ಲ. ನಾನು ರಾಜಕಾರಣ ಮಾಡುವುದಕ್ಕೆ ಬಂದಿದ್ದೇನೆ. ನಾನು ರಾಜಕಾರಣ ಮಾಡುತ್ತೇನೆ. ಅದರ ಬಗ್ಗೆ ಯಾರಿಗೂ ಸಂಶಯ ಬೇಕಾಗಿಲ್ಲ. ನಾವು ಗಣಿಗಾರಿಕೆಯ ಬಗ್ಗೆ ಎಲ್ಲಿಯೂ ಮಾತನಾಡಿಲ್ಲ. ಗಣಿಗಾರಿಕೆಯ ಬಗ್ಗೆ ನಾವು ಕೇಳುವುದಿಲ್ಲ. ತಾವು ಅಕ್ರಮ-ಸಕ್ರಮ, ಸಕ್ರಮ-ಅಕ್ರಮ ಏನೂ ಬೇಕಾದರೂ ಮಾಡಿ. ನಾವು ಅದನ್ನು ನಾವು ಕೇಳುತ್ತಿಲ್ಲ. ತಾವು ಆನಂತಪುರದ ಬಗ್ಗೆ ಹೇಳಿದ್ದೀರಲ್ಲ. ತಾವು ಗೃಹ ಮಂತ್ರಿಗಳು. ಆನಂತಪುರದಲ್ಲಿ ಯಾವ ರೀತಿ ಚಟುವಟಿಕೆ ನಡೆಯುತ್ತಿರುತ್ತದೆ ಎಂಬುದರ ಬಗ್ಗೆ ತಮಗೆ ಗೊತ್ತಿರುತ್ತದೆ. ನಮ್ಮ ಪ್ರಶ್ನೆ ಏನೆಂದರೆ, ಶಿವಮೊಗ್ಗ ಜಿಲ್ಲೆಯ ಲಾರಿಯಲ್ಲಿ ಬ್ಲಾಸ್ಟ್ ಆಗಿರುವಂತಹದ್ದು. Mine ನಲ್ಲಿ ಅಲ್ಲ. ತಾವು ಇದನ್ನು ಒಪ್ಪಕೊಳ್ಳುತ್ತೀರಾ ತಾನೇ. ಅಲ್ಲಿ ಭಯೋತ್ಪಾದಕರು ಬಂದಿಲ್ಲ ಎಂಬ ಬಗ್ಗೆ ಗ್ಯಾರಂಟಿ ಏನು? ಅವರಲ್ಲಿ Anti-nationals ಇಲ್ಲ ಎನ್ನುವುದು ಏನು? ಏಕೆಂದರೆ, ಮಾನ್ಯ ಈಶ್ವರಪ್ಪನವರು ಸದನದಲ್ಲಿ ಇದ್ದಿದ್ದರೆ ಒಳ್ಳೆಯದಿತ್ತು. ಅವರು ಮಾತನಾಡಿದರೆ, ಪಾಕಿಸ್ತಾನ, ಚೈನಾ ಎಲ್ಲವನ್ನೂ ಹೇಳಿ ಬಿಡುತ್ತಿದ್ದರು. ಅದು ಎಲ್ಲಿಯೂ ಬರುತ್ತಾ ಇಲ್ಲ. ಸಾರ್ವಜನಿಕರಲ್ಲಿ ಎಲ್ಲೊ ಒಂದು ಕಡೆ ಸಂಶಯವಿದೆ. ಏನೆಂದರೆ, ಕಾನೂನುಬಾಹಿರವಾಗಿ ಚಟುವಟಿಕೆಗಳು ನಡೆಯುತ್ತಿದೆ. ಅದಕ್ಕೆ ಯಾರೋ ರಕ್ಷಣೆ ಕೊಡುತ್ತಿದ್ದಾರೆ ಎನ್ನುವ ಬಗ್ಗೆ ಸಂಶಯವಿದೆ. ಅದರಿಂದಾಗಿ ಸರಿಯಾದ ತನಿಖೆ ನಡೆಯಬೇಕು ಎನ್ನುವ ಬಗ್ಗೆ ಕೇಳುತ್ತಿದ್ದೇನೆ ಹೊರತು ಬೇರೆ ಏನಿಲ್ಲ. ಧನ್ಯವಾದಗಳು.

**ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ಗಣಿಗಾರಿಕೆ, ಮತ್ತೊಂದು ಗೃಹ ಇಲಾಖೆಗಳಿಗೆ ಸಂಬಂಧಪಟ್ಟಂತಹ ಎರಡು ಪ್ರಶ್ನೆಗಳಿವೆ. ಈ ಗೃಹ ಇಲಾಖೆಗೆ ಸಂಬಂಧಪಟ್ಟಂತೆ,

ನಮಗೆ ಬಂದಿರುವ ಮಾಹಿತಿಯ ಪ್ರಕಾರ ಆರು ಸಾವುಗಳಾಗಿಲ್ಲ. ಎಂಟು ಸಾವುಗಳು ಆಗಿವೆ. ಒಂದು ಕಡೆ ಇದೇ ಸ್ಫೋಟದಿಂದ ಆರು ಸಾವುಗಳು ಆಗಿದ್ದು. ಅದಕ್ಕಿಂತ ಮುಂಚೆ ಎರಡು ಸಾವುಗಳಾಗಿದ್ದು, ಅದನ್ನು ಎಫ್.ಐ.ಆರ್ ಮಾಡದೇ, ಅದನ್ನು ಮುಚ್ಚು ಹಾಕಿದ್ದಾರೆ. ಒಟ್ಟಾರೆ ನಮ್ಮ ಪ್ರಶ್ನೆ ಏನೆಂದರೆ, ಆ ಸ್ಫೋಟಕ ವಸ್ತು ಅಲ್ಲಿಂದ ಬರುವಾಗ ಪೊಲೀಸ್ ಇಲಾಖೆ intelligence ಏನು ಮಾಡುತ್ತಿತ್ತು? ಅದು failure ಹೌದೋ ಅಲ್ಲವೋ ಎಂಬುದೊಂದು. ಎರಡನೆಯದು, ಅಲ್ಲಿಂದ ತಂದವನಿಗೆ ಪರವಾನಿಗೆ ಇತ್ತೇ? ಪರವಾನಿಗೆ ತೆಗೆದುಕೊಂಡವನು ಅಲ್ಲಿಯ ತನಕ ತೆಗೆದುಕೊಂಡು ಬಂದಿದ್ದಾರೆಯೇ? ಅಥವಾ ಪರವಾನಿಗೆ ಇರಲಾರದೇ, ಇಷ್ಟೊಂದು ಪ್ರಮಾಣದಲ್ಲಿ ಬರುತ್ತಿತ್ತೇ? ಒಂದು ವೇಳೆ ಪರವಾನಿಗೆ ಇಲ್ಲದೆಯೇ ಬಂದವರ ಮೇಲೆ ಕ್ರಮ ಕೈಗೊಳ್ಳಿರಿ. ಇವತ್ತು ಸರ್ಕಾರ ಯಾವುದೋ ಮುಲಾಜಿನಲ್ಲಿ ಕೆಲಸ ಮಾಡುತ್ತಿದೆ. ತಮ್ಮ ಸರ್ಕಾರವಿದ್ದಂತಹ ಸಂದರ್ಭದಲ್ಲಿ ಸತ್ತಿದ್ದಾರೆ. ಅವರನ್ನು ಅರೆಸ್ಟ್ ಮಾಡಿ. ನಾವು ಏನೂ ಬೇಡ ಎನ್ನುತ್ತೇವೆಯೇ?

**ಶ್ರೀ ಬಸವರಾಜ ಬೊಮ್ಮಾಯಿ:-** ತಮ್ಮ ಬಾಯಿಯಿಂದ ಹೇಳಿದ್ದು, ಬಹಳ ಸಂತೋಷವಾಯಿತು.

**ಶ್ರೀ ಆರ್.ಬಿ. ತಿಮ್ಮಾಪುರ:-** ಮಾಡಿ ಸಾರ್. I will be very happy. ಯಾರಾದರೂ ಇರಲಿ. ನಾವು ರಾಜ್ಯದಲ್ಲಿರುವ ಜನರಿಗೆ ಒಳ್ಳೆಯ message ಕೊಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ನಾವು ಯಾವುದೇ ಮುಲಾಜು ಇಲ್ಲದೇ, ಕೆಲಸ ಮಾಡಬಾರದು ಎಂಬುದರ ಬಗ್ಗೆ ತಮ್ಮ ಸಲಹೆ ಇದೆಯೆಲ್ಲಾ, ಇದು ತಮ್ಮ ಮಾತಿನ ಮೂಲಕ ಬಂದಿದ್ದಕ್ಕೆ ಬಹಳ ಸಂತೋಷವಾಯಿತು ಎಂದು ನಾನು ಇಷ್ಟೆ ಹೇಳಿದೆ.

**Sri R.B. THIMMAPUR:-** Yes, ನನ್ನಿಂದಲೂ ಮತ್ತು ಇಲ್ಲಿರುವ ಮಾನ್ಯ ಸದಸ್ಯರುಗಳಿಂದಲೂ ಸಲಹೆ ಬರುತ್ತದೆ. ತಾವು ಏಕೆ ಅದನ್ನು ಅನುಮಾನವಾಗಿ ತೆಗೆದುಕೊಂಡಿದ್ದೀರಿ. ತಮಗೆ ಯಾರಾದರೂ influence ಮಾಡಿದ್ದರೆ, ಅದನ್ನು ಸದನದಲ್ಲಿ ಹೇಳಿ. ಯಾರೂ ತಮ್ಮ ಹತ್ತಿರ ಬಂದಿಲ್ಲಪ್ಪ, ಇದನ್ನು ಮಾಡಬೇಡ. ನಮ್ಮದು ಇದೆ. ಇದರಲ್ಲಿ ನಾವು ಸಿಕ್ಕಿ ಹಾಕಿಕೊಳ್ಳುತ್ತೇವೆಂದು ಯಾರಾದರೂ ಇದ್ದರೆ ಹೇಳಿಬಿಡಿ. ಈ ವಿಷಯ ರಾಜ್ಯದ ಜನರಿಗೆ ಗೊತ್ತಾಗಲಿ. ಅದನ್ನು ಮುಚ್ಚಿಟ್ಟುಕೊಳ್ಳುವಂತಹದ್ದು ಏನಿದೆ?

**ಶ್ರೀ ಬಸವರಾಜ ಬೊಮ್ಮಾಯಿ:-** ಕುಂಬಳಕಾಯಿ ಕಳ್ಳ ಎಂದರೆ, ಹೆಗಲು ಏಕೆ ಮುಟ್ಟಿಕೊಂಡು ನೋಡಿಕೊಳ್ಳುತ್ತೀರಾ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಬಿ. ತಿಮ್ಮಾಪೂರ:–** ನಾವಿಲ್ಲ. ನಾನು ಏನೂ ಹೇಳುತ್ತಿದ್ದೇನೆಂದರೆ, ತಮ್ಮ ಸರ್ಕಾರವಿದೆ ಕ್ರಮ ಕೈಗೊಳ್ಳಿರಿ.

**ಶ್ರೀ ಬಸವರಾಜ ಬೊಮ್ಮಾಯಿ:–** ನಮ್ಮಲ್ಲಿದ್ದಾರೆ, ನಮ್ಮಲ್ಲಿದ್ದಾರೆ ಎಂದು ತಾವು ಏಕೆ ಹೇಳಿಕೊಳ್ಳುತ್ತೀರಿ?

**ಶ್ರೀ ಆರ್.ಬಿ. ತಿಮ್ಮಾಪೂರ:–** ನಮ್ಮಲ್ಲಿ ಇಲ್ಲ. ಒಂದು ವೇಳೆ ನಮ್ಮಲ್ಲಿದ್ದರೆ, ಅವರ ಮೇಲೆ ಕ್ರಮ ಕೈಗೊಳ್ಳಿರಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಇದನ್ನು ಮತ್ತೆ ಏಕೆ ಹೇಳುತ್ತೀರಿ?

**ಶ್ರೀ ಆರ್.ಬಿ. ತಿಮ್ಮಾಪೂರ:–** ತಾವು ಮುಲಾಜಿನ ಮೇಲೆ ಸರ್ಕಾರ ನಡೆಸುವುದು ಏಕೆ? ಇಧರ ಹೊಣೆ ಯಾರು? ಇದರಲ್ಲಿ ಯಾರಿದ್ದಾರೋ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಎಲ್ಲರ ಮೇಲೂ ಕ್ರಮವನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಸ್ಪಷ್ಟವಾದಂತಹ ಕ್ರಮವನ್ನು ತೆಗೆದುಕೊಳ್ಳಿ.

**ಶ್ರೀ ಬಸವರಾಜ ಬೊಮ್ಮಾಯಿ:–** ನಾವು ತಮ್ಮಿಂದ ಪಾಠ ಕಲಿಯಬೇಕಾಗಿಲ್ಲ. ನಾವು ಖಂಡಿತವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಆರ್.ಬಿ. ತಿಮ್ಮಾಪೂರ:–**ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಡಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾವು ಖಂಡಿತವಾಗಿ ಅದರ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತೇವೆ. ಆದರ ಬಗ್ಗೆ ಯಾವುದೇ ಪ್ರಶ್ನೆಯಿಲ್ಲ.

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಇನ್ನು ಒಂದು ಪ್ರಶ್ನೆಯಿದೆ. ಆನಂತರ ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ. ಅವರು ಮಾತನಾಡುತ್ತಾರೆ. ಈ ಘಟನೆ ನಡೆದಂತಹ ಸಂದರ್ಭದಲ್ಲಿ ಇಬ್ಬರು ವ್ಯಕ್ತಿಗಳು ಮೃತ ಪಟ್ಟಿದ್ದರು. ಈಗ ತಮ್ಮದೇ ಇರುವ ಸರ್ಕಾರದಿಂದ ವಿಚಾರಣೆ ಮಾಡಿ.

ಮಾನ್ಯ ಸಭಾಪತಿಯವರೇ, ಇವರ intelligence ಸಂಪೂರ್ಣವಾಗಿ failure ಆಗಿದೆ. ಇಂತಹ ಸ್ಫೋಟಕ ವಸ್ತುಗಳು ಇಲ್ಲಿಯ ತನಕ ಬರುವವರೆಗೆ, ಈ ಇಲಾಖೆಯವರು ಏನು ನಿದ್ದೆ ಮಾಡುತ್ತಿದ್ದರೆ? ಇದಕ್ಕೆ ಹೊಣೆ ಯಾರು? intelligence failure ಆಗಿದೆ. ಈ ಘಟನೆಯಲ್ಲಿ ಎಂಟು ಜನರು ಮೃತರಾಗಿದ್ದಾರೆ. ಇವರ ಹೊಣೆಯನ್ನು ಗೃಹ ಇಲಾಖೆಯವರು ಹೊರಬೇಕೋ ಅಥವಾ ಇನ್ಯಾರು ಹೊರಬೇಕು? It is your failure. ಪೊಲೀಸ್ ಇಲಾಖೆಯವರು ನಿದ್ದೆ ಮಾಡುತ್ತಾರಯೇ? ಪೊಲೀಸ್ ಚೆಕ್ ಪೋಸ್ಟ್‌ನವರು ಏನು ಮಾಡುತ್ತಿದ್ದರು?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಬೊಮ್ಮಾಯಿ:-**ತಮಗೆ ಪೂರ್ತಿ ಮಾಹಿತಿಯಿಲ್ಲದೇ, ತಾವು ಮಾತನಾಡಬೇಡಿ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಇಲಾಖೆಯ ಸಚಿವರು ಏನು ಹೇಳುತ್ತಾರೆಂಬುದರ ಬಗ್ಗೆ ಹೇಳಲಿ. ನಾನು ಅದನ್ನೇ ಸ್ಪಷ್ಟವಾಗಿ ಹೇಳಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಪೂರ್ತಿ ಮಾಹಿತಿ ಇಲ್ಲದೇ ಈ ಸದನಕ್ಕೆ...

**ಶ್ರೀ ಆರ್.ಬಿ. ತಿಮ್ಮಾಪೂರ:-**ಮಾನ್ಯ ಗೃಹ ಇಲಾಖೆಯ ಸಚಿವರು ಏನು ಹೇಳುತ್ತಾರೆಂಬುದರ ಬಗ್ಗೆ ಹೇಳಲಿ. ಆನಂತರ ಮಾತನಾಡುತ್ತೇನೆಂದು, ಮೊದಲೇ ಹೇಳಿದ್ದೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ, ಗಣಿಗಾರಿಕೆ ಇಲಾಖೆ ಮತ್ತು ಗೃಹ ಇಲಾಖೆಯವರು ಇದಕ್ಕೆ ಉತ್ತರವನ್ನು ಕೊಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಉತ್ತರವನ್ನು ಕೊಟ್ಟಾಯಿತಲ್ಲ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಗೃಹ ಸಚಿವರು ಏನು ಉತ್ತರವನ್ನು ಕೊಡುತ್ತಾರೋ ಕೊಡಲಿ. ಆನಂತರ ನಾನು ಮಾತನಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಮೊದಲೇ ಹೇಳಿದ್ದೇನೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸ್ಫೋಟಕಗಳನ್ನು ಪರವಾನಿಗೆಯನ್ನು ತೆಗೆದುಕೊಂಡಿದ್ದಾರೋ, ಇಲ್ಲವೋ, ಅದನ್ನು distribute ಮಾಡುವುದಕ್ಕೆ ಹೋಗಿ, ಅಲ್ಲಿ ದೊಡ್ಡ ಅನಾಹುತವಾಗಿದೆ ಮತ್ತು ಲೋಪವಾಗಿದೆ. ನಾವು ಎ.ಡಿ.ಜಿ.ಪಿ. ಅವರಿಂದ ತನಿಖೆ ಮಾಡಿಸಿದ್ದೇವೆಯೇ ಹೊರತು ಲೋಕಲ್ ಪೊಲೀಸ್‌ನವರಿಂದ ತನಿಖೆ ಮಾಡಿಸಿಲ್ಲ. ಚೆಕ್ ಪೋಸ್ಟ್ ನಂಬರ್ ಒಂದರಿಂದ ಕೊನೆಯ ಚೆಕ್ ಪೋಸ್ಟ್ ವರೆಗೂ, ಸ್ಥಳೀಯ ಪೊಲೀಸ್‌ನವರು ಇರಬಹುದು. ಇದರಲ್ಲಿ ಡೀಲರ್ ಯಾರಿದ್ದಾರೋ, ಅವರನ್ನು ಅರೆಸ್ಟ್ ಮಾಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತವರನ್ನು ಸಹ ಅರೆಸ್ಟ್ ಮಾಡಿದ್ದೇವೆ. ಇದರಲ್ಲಿ ಯಾರು ತಪ್ಪು ಮಾಡಿದ್ದಾರೆಂಬುದು ಬೆಳಕಿಗೆ ಬರುತ್ತದೆಯೋ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಇಂತಹ ಒಂದು ಗಂಭೀರವಾದ ವಿಚಾರದ ಬಗ್ಗೆ ನಾವೇನು ದೊಡ್ಡ ಪ್ರಶ್ನೆಯನ್ನು ಕೇಳಲಿಲ್ಲ. Intelligence fail ಆಯಿತೇ ಅಥವಾ ಇಲ್ಲವೇ? ಎರಡನೆಯದಾಗಿ, ಅವರ ಬಳಿ ಪರವಾನಿಗೆ ಇತ್ತೋ, ಇಲ್ಲವೋ ಎಂಬುದು. ಪರವಾನಿಗೆ ಇಲ್ಲದೇ, ಇಲ್ಲಿಯ ತನಕ ಹೇಗೆ ಬಂತು ಎಂಬುದೊಂದು. ಈ ಮೂರು ಪ್ರಶ್ನೆಗಳಿಗೆ ಉತ್ತರ ಹೇಳುವುದಕ್ಕೆ, ಈ ವಿಷಯವೇನಾದರು ಕೋರ್ಟ್‌ನಲಿದೆಯೇ? ಗೃಹ ಸಚಿವರು ಉತ್ತರ ಹೇಳುವುದಕ್ಕೆ ಎಲ್ಲಿಯಾದರೂ contempt ಆಗುತ್ತದೆಯಾ? ಇಂತಹ ಘಟನೆ ನಡೆದಿದ್ದನ್ನು ಇಡೀ ರಾಜ್ಯವೇ ನೋಡುತ್ತಿದೆ ನಾಲ್ಕು ಜಿಲ್ಲೆಗಳು ಘಡ-ಘಡ ನಡುಗಿದೆ. ನಾಲ್ಕು ಜಿಲ್ಲೆಗಳಲ್ಲಿರುವ ಜನರು ಭಯ ಭೀತರಾಗಿದ್ದರು. Preliminary Report ಅನ್ನು ಹೇಳುವುದು, ಏನು ಪರವಾನಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲದೇ ಇಷ್ಟೊಂದು ಸ್ಫೋಟಕ ಎಲ್ಲಿಂದ ಬಂತು? ಇಂತಹ ಅಧಿಕಾರಿಗಳಿದ್ದರು, ಅವರು ತಕ್ಷಣ Intelligence ಮೂಲಕ ಯಾರು ತಪ್ಪಿತಸ್ಥರಿದ್ದಾರೆ ಎಂದು ಪತ್ತೆ ಮಾಡಿ ದೊಡ್ಡ ಅಧಿಕಾರಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಂಡು ನಮ್ಮ ಸರ್ಕಾರ ಇಂತಹವರ ಮೇಲೆ ಕ್ರಮವನ್ನು ಕೈಗೊಂಡಿದ್ದೇವೆ ಎಂದು ಒಂದು ಸಂದೇಶವನ್ನು ರವಾನಿಸಬೇಕಿತ್ತು. ಹತ್ತು ವರ್ಷಗಳ ತನಕ ಇದರ ವಿಚಾರಣೆ ನಡೆಸಿ, ಅನಂತರ ಮುಚ್ಚಿ ಹಾಕಬಹುದು. ನಮ್ಮ ಸರ್ಕಾರವಿದ್ದಾಗ ಆಯಿತು; ಮತ್ತು ನಮ್ಮ ಸರ್ಕಾರವಿದ್ದಾಗ ಆಯಿತು. ಆದರೆ ಮುಂದೆ ಏನಾಗಬಹುದು?

ಮಾನ್ಯ ಸಭಾಪತಿಯವರೇ, ನಾನು ಅವರಿಗೆ ಹೇಳುತ್ತೇನೆ. Yes, ಯಾರಾದರೂ ತಪ್ಪಿತಸ್ಥರಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಂಡು, ಒಂದು message ಕೊಡಿ. Preliminary Report ನಲ್ಲಿ ಇಂತಿಂಥವರು ಸಿಕ್ಕಿ ಹಾಕಿಕೊಂಡಿದ್ದಾರೆ. ಆದ್ದರಿಂದ ಅವರನ್ನು ತೆಗೆದು ಹಾಕಿದ್ದೇನೆ. ಇದನ್ನು ಹೀಗೆ ಬಿಟ್ಟುಕೊಳ್ಳುತ್ತಾ ಹೋದರೆ, ಜನತೆಯ ಬಾಯಿಯಲ್ಲಿ ಏನಿದೆ? ವಿಧಾನ ಸೌಧದ ಬೇರೆಯದನ್ನು ಹೇಳಿಕೊಂಡೇ ಬರುತ್ತಾರೆ. ಇದರಲ್ಲಿ ಮಾನ್ಯ ಹರಿಪ್ರಸಾದರ್‌ರವರ ಮಾತನಾಡಿರುವುದರಲ್ಲಿ ಏನು ತಪ್ಪಿದೆ? ನಮ್ಮ ಸರ್ಕಾರ ಇಂತಹವರ ಮೇಲೆ ಕ್ರಮ ಕೈಗೊಂಡಿದೆ ಎಂಬ ಸಂದೇಶವನ್ನು ಇವರಿಗೆ ಹೇಳುವುದಕ್ಕಾಗುವುದಿಲ್ಲವೇ? ಎಲ್ಲಿ ತಪ್ಪಾಗಿದೆ ಎಂದು ಗೊತ್ತಿದೆ. ಎಲ್ಲದಕ್ಕೂ Intelligence Report ಬರಬೇಕೇ? ಗಣಿಗಾರಿಕೆ ಬಗ್ಗೆ ಹೇಳುವುದಾದರೆ, ಈ ದೇಶದ ಸಂಪತ್ತನ್ನು ಲೂಟಿ ಹೊಡೆದವರು, ಆ ಲೂಟಿಗೆ ಅವರು ಮದ್ದು ಕೊಡವರು ಇಬ್ಬರು ಇದ್ದಾರೆ. ಆ ಲೂಟಿ ಹೊಡೆಯುವವರೆಲ್ಲರೂ ಇಡೀ ದೇಶದ ಸಂಪತ್ತನ್ನು ಎತ್ತಿಕೊಂಡು ಹೋಗುವರು. ಅವರ ಮೇಲೆ ಏನು ಕ್ರಮವಿಲ್ಲ. ಎಷ್ಟು ಅಕ್ರಮಗಳಿವೆ ಎಂದು ಕೇಳುತ್ತೀರಲ್ಲ ಸ್ವಾಮಿ. ಅವರ ಮೇಲೆ ಏನು ಕ್ರಮ ಕೈಗೊಂಡಿದ್ದೇವೆಂಬುದರ ಬಗ್ಗೆ ರಾಜ್ಯದ ಜನತೆಗೆ ಹೇಳಬೇಕಲ್ಲ. ರಾಜ್ಯದಲ್ಲಿರುವ ಆಸ್ತಿಯನ್ನು ಲೂಟಿ ಹೊಡೆದಿದ್ದಾರೆ. ಅದಕ್ಕೆ ಮದ್ದು ತಂದು ಹಾಕಿದವರು ಗೃಹ ಇಲಾಖೆಯವರು. ಇನ್ನೂ ಏನು ಮಾಡಬೇಕೆಂದಿದ್ದೀರಿ? ರಾಜ್ಯದ ಸಂಪತ್ತನ್ನು ಲೂಟಿ ಹೊಡಿಸುತ್ತೀದ್ದಿರಿ, ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಹೇಳಿ. ಇವತ್ತು ಎಷ್ಟು ಸಂಪತ್ತು ಲೂಟಿಯಾಗಿದೆ ಎಂಬುದರ ಬಗ್ಗೆ ಹೇಳಿ. ಅಕ್ರಮವಾಗಿ ಮಾಡಿದವರನ್ನು ಸಕ್ರಮವಾಗಿ ಅವರನ್ನು ಮಾಡಿಬಿಡುತ್ತೀರಾ. ಇದು ದೇಶದ್ರೋಹಿ ಕೆಲಸ. ರಾಷ್ಟ್ರದ ಸಂಪತ್ತನ್ನು ಲೂಟಿ ಹೊಡೆಯುವವರು ಮತ್ತು ಅದಕ್ಕೆ ಮದ್ದು ಕೊಡುವವರು. ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಅವರು ರಾಜೀನಾಮೆ ಕೊಡಲಿ ಎಂಬುದರ ಬಗ್ಗೆ ನಾವು ಹೇಳುವುದಕ್ಕೆ ಹೋಗುವುದಿಲ್ಲ. At least, ಜನತೆಗೆ ನಮ್ಮ ಸರ್ಕಾರ ಇದೆ ಎಂದು ತೋರಿಸಿಕೊಡಲಿ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇದುವರೆಗೂ ಮಾನ್ಯ ಹರಿಪ್ರಸಾದ್ ಮತ್ತು ಮಾನ್ಯ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಎಲ್ಲಾ ವಿಷಯಗಳನ್ನು ಹೇಳಿದರು.

**(ಮುಂದು)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(85)03.02.2021, 4.50, ಟಿಸಿಹೆಚ್–ಜಿಆರ್

**ಶ್ರೀ ಎಂ.ನಾರಾಯಣಸ್ವಾಮಿ:(ಮುಂದು):–**

ಆದರೆ, ನಿನ್ನೆ ದಿವಸ ನಾವು ಇಷ್ಟೆಲ್ಲಾ ಸವಿಸ್ತಾರವಾಗಿ ಮಾತನಾಡಿದ್ದಕ್ಕೆ ಸಂಬಂಧಪಟ್ಟ ಇಲಾಖೆಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಿನ್ನೆ ದಿವಸ ನಾವು ಯಾವ ವಿಷಯದ ಬಗ್ಗೆ ದನಿ ಎತ್ತಿದ್ದೆವೋ ಅದನ್ನು ಬಿಟ್ಟು ಬೇರೆ ವಿಷಯಗಳೆಲ್ಲದ್ದರ ಕುರಿತು ಮಾತನಾಡಿದರು. ಮಾನ್ಯ ಗೃಹ ಸಚಿವರು ಸಮಂಜಸವಾದ ಉತ್ತರವನ್ನು ಕೊಡುತ್ತಿದ್ದಾರೆ. ಎಲ್ಲೋ ಒಂದು ಕಡೆ ಅದನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಅವರು, ನೀವು ಅಧಿಕಾರಲ್ಲಿ ಇದ್ದಾಗ ಈ ರೀತಿ ಆಗಿಲ್ಲವೇ? ಅವೊತ್ತು ಆಗಿರಲಿಲ್ಲವೇ? ರಾಮನಗರ ಜಿಲ್ಲೆ, ಮತ್ತೊಂದು ಕಡೆ ಈ ರೀತಿ ಆಗಿರಲಿಲ್ಲವೆ ಎಂದು ಹೇಳುತ್ತಿದ್ದಾರೆ. ಅವೊತ್ತು ನಡೆದಂತಹ ಘಟನೆ ಇವತ್ತಿನ ದಿವಸ ನಡೆಯಬೇಕು ಎಂಬುದೇನು? ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಆದರೆ, ಈ ರಾಜ್ಯಕ್ಕೆ ಆಗುತ್ತಿರತಕ್ಕಂಥ ಲೂಟಿ ಏನಿದೆ, ಈ ಅಹಿತಕರ ಘಟನೆಗಳೇನಿವೆ, ಅದನ್ನು ತಡೆಯತಕ್ಕಂಥದ್ದು ನಮ್ಮ ಕರ್ತವ್ಯ ಆಗಬೇಕೋ, ಬೇಡವೋ ಎಂದು ನಾನು ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ. ಈ ಒಂದು ಸ್ಫೋಟಕ ಆದ ನಂತರ ನಮ್ಮ ಇಲಾಖೆಯಿಂದ ಆಂಧ್ರಪ್ರದೇಶದ ಅನಂತಪುರಕ್ಕೆ ಹೋಗಿದ್ದೆವು. ಅಲ್ಲಿ ಗೋಡಾನ್ ಸೀಜ್ ಮಾಡಿದ್ದೇವೆ. ಸುಮಾರು 64 ಸಾವಿರ ಜಿಲೆಟಿನ್ ಸ್ಟಿಕ್ಸ್ ಸಿಕ್ಕಿದೆ, ಅದನ್ನು ಸೀಜ್ ಮಾಡಿ ಬಂದಿದ್ದೇವೆ ಎಂಬ ಮಾತನ್ನು ಅವರು ಹೇಳಿದರು. ನಮಗೆ ಸಂತೋಷ. ಒಂದು ಕಡೆ ಕೂಡಲೇ ಇಷ್ಟು ಬೇಗ act ಮಾಡುತ್ತಿರುವುದಕ್ಕೆ ನಮಗೆ ಸಂತೋಷವಾಗುತ್ತಿದೆ. ಆದರೆ, ಆಂಧ್ರ ಪ್ರದೇಶದಿಂದ ಆ ಲಾರಿಯಲ್ಲಿ ಬಂದಂಥ ಸ್ಫೋಟಕ ವಸ್ತುಗಳು ಕರ್ನಾಟಕ ರಾಜ್ಯದ ಬಾರ್ಡರ್‌ನಲ್ಲಿ ಬರಬೇಕಾದರೆ, ಸಾಕಷ್ಟು ಚೆಕ್‌ಪೋಸ್ಟ್‌ಗಳನ್ನು ದಾಟಿಕೊಂಡು ಬರಬೇಕು. ಅದು ಯಾವ್ಯಾವ ಚೆಕ್‌ಪೋಸ್ಟ್‌ನಿಂದ ಬಂದಿದೆ, ಆ ಚೆಕ್‌ಪೋಸ್ಟ್‌ಗಳಲ್ಲಿ ಇರತಕ್ಕಂಥ ಅಧಿಕಾರಿಗಳ ಮೇಲೆ ಕೂಡಲೇ ಏಕೆ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಇನ್ನೊಂದು ತನಿಖೆ ಆಗಬೇಕೇ?

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಈಗ ನೀವು ಮಾನ್ಯ ಸಚಿವರಿಗೆ ಕ್ಲಾರಿಫಿಕೇಷನ್ ಕೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಸ್ಫೋಟಕ ವಸ್ತು ಯಾವ ಕಡೆಯಿಂದ ಬಂತು ಎಂದು ಎಲ್ಲರಿಗೂ ಗೊತ್ತಾಗುತ್ತಿದೆ. ನೀವೇಕೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮೀನಾ–ಮೇಷ ಎಣಿಸುತ್ತಿದ್ದೀರಿ? 1350 ಕೆ.ಜಿ ಸ್ಫೋಟಕ ವಸ್ತುಗಳಿದ್ದವೆಂದು ಎಲ್ಲಾ ಮಾಧ್ಯಮಗಳಲ್ಲೂ ಕೂಡ ವರದಿಯಾಗಿದೆ. ಅದನ್ನು ನೀವು ನೋಡಿಲ್ಲ, ನಾವೂ ನೋಡಿಲ್ಲ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮತ್ತೆ ಈ ವಿಷಯದ ಮೇಲೆ ಭಾಗ–2 ಚರ್ಚೆ ಪ್ರಾರಂಭ ಮಾಡುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಮತ್ತೆ ಚರ್ಚೆಗೆ ಹೋಗುತ್ತಿಲ್ಲ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಅವರಿಗೆ ಉತ್ತರದಲ್ಲಿ ಏನಾದರೂ ಸಂಶಯಗಳು ಬಂದಾಗ ಪ್ರಶ್ನೆಗಳಿಗೆ ಉಪ ಪ್ರಶ್ನೆಗಳನ್ನು ಕೇಳಬಹುದೇ ವಿನಃ ಸರಾಸಗಟಾಗಿ ಮತ್ತೆ ಅದನ್ನೇ ಕೆದಕಿ ಎ,ಬಿ,ಸಿ,ಡಿ.,ಯಿಂದ ಪ್ರಾರಂಭ ಮಾಡುತ್ತಾರೆ. ಆದ್ದರಿಂದ ಮಾನ್ಯ ಸಭಾಪತಿಯವರು ಈ ವಿಷಯದಲ್ಲಿ ದಯವಿಟ್ಟು ಮಧ್ಯೆ ಪ್ರವೇಶ ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಮಾತುಗಳನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಸಭಾಪತಿಯವರೇ, ನಾವು ಏಕೆ ಕೇಳುತ್ತಿದ್ದೇವೆಂದರೆ, ಸರ್ಕಾರದ ಜವಾಬ್ದಾರಿಯುತ ಒಬ್ಬರು ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೋ ಆ ಉತ್ತರ ಸಮಂಜಸವಾಗಿಲ್ಲ ಎನ್ನುವುದನ್ನು ಹೇಳುತ್ತಿದ್ದೇವೆ ಅಷ್ಟೆ. ನಾವು ಇನ್ನೇನೊ ಮಾತನಾಡುತ್ತಿಲ್ಲ.

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಮಾನ್ಯ ಗಣಿ ಸಚಿವರು ಉತ್ತರ ಕೊಟ್ಟರು, ನಂತರ ಸ್ಫೋಟಕಕ್ಕೆ ಸಂಬಂಧಿಸಿದಂತೆ ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ಅವರು ಬಿಟ್ಟು ಇನ್ನಾವ ಸಚಿವರು ಕೊಡಬೇಕು?

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದುವರೆಗೆ ಅವರು ಕೂಡ ಕುಳಿತಿದ್ದಾರೆ. ಕೇವಲ ನಾವು ಆಡಳಿತ ಪಕ್ಷದಲ್ಲಿ ಕುಳಿತಿದ್ದೇವೆಂದು, ಅವರು ಏನು ಹೇಳಿದರೂ ಸಮರ್ಥನೆ ಮಾಡತಕ್ಕಂಥದ್ದು ನಿಮ್ಮ ಜವಾಬ್ದಾರಿ ಆಗಬಾರದು. ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದೇವೆಂದು ನಾವು ಅದನ್ನು ವಿರೋಧ ಮಾಡತಕ್ಕಂಥ ಜವಾಬ್ದಾರಿ ನಮ್ಮದಲ್ಲ. ಇವತ್ತು ಏನು ಅನ್ಯಾಯ ಆಗಿದೆ, ಅನಾಹುತ ಆಗಿದೆ; ನಾವಾಗಲಿ ಅಥವಾ ನೀವಾಗಲಿ ಯಾರೂ ಸಮರ್ಥನೆ ಮಾಡಿಕೊಳ್ಳತಕ್ಕಂಥದ್ದಲ್ಲ.

(ಗೊಂದಲ)

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನಾವು ಸಮರ್ಥಿಸಿಕೊಳ್ಳುವುದಕ್ಕೆ ಆಡಳಿತ ಪಕ್ಷದಲ್ಲಿರುವುದು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕಥೆ ಹೇಳುತ್ತಿಲ್ಲ. ನೀವು ಕೊಟ್ಟಿರತಕ್ಕಂಥ ಉತ್ತರ ಕೇಳಿಕೊಂಡು ನಾವು ಸುಮ್ಮನೆ ಕುಳಿತುಕೊಳ್ಳಬೇಕೆ?

**ಶ್ರೀಮತಿ ಭಾರತಿಶೆಟ್ಟಿ:-** ನೀವು ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ನಾವ್ಯಾರು? ಇಲ್ಲಿ ಎಲ್ಲರೂ ಚರ್ಚೆ ಮಾಡಬೇಕು. ಯಾರೂ ಸಮರ್ಥನೆ ಮಾಡುವ ಸ್ಥಿತಿಯಲ್ಲಿ ಇಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವೇನು ನಿಮ್ಮಿಂದ ಹೇಳಿಸಿಕೊಂಡು ಮಾತನಾಡಬೇಕೇ? ನನ್ನ ಅನಿಸಿಕೆಯನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ನಾರಾಯಣ ಸ್ವಾಮಿಯವರು, ಮಾನ್ಯ ಗೃಹ ಸಚಿವರು ಬಹಳ ಸಮರ್ಥವಾಗಿದ್ದಾರೆಂದು ಹೇಳಿದರು. ಅಷ್ಟೇ ಅಲ್ಲದೇ ಸರ್ಕಾರವೂ ಕೂಡ ಬಹಳ ಸಮರ್ಥವಾಗಿದೆ. ಇತ್ತೀಚೆಗೆ ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿಯಲ್ಲಿ ನಡೆದಂತಹ ಘಟನೆಯಲ್ಲಿ ಮೊದಲು ಪೊಲೀಸ್‌ನವರು ತನಿಖೆ ಮಾಡುತ್ತಾರೆ, ನಂತರ ಸಿ.ಸಿ.ಬಿ ತನಿಖೆಗೆ ಕೊಡುತ್ತಾರೆ. ನಾಲ್ಕನೇ ದಿವಸಕ್ಕೆ ಎನ್.ಐ.ಎ.,ಗೆ ಕೊಡುತ್ತಾರೆ. ಅಷ್ಟು ವೇಗವಾಗಿ ತನಿಖೆ ಮಾಡುವ ಶಕ್ತಿ ಅವರಲ್ಲಿದೆ.

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ಪ್ರಕರಣದ ತನಿಖೆ ಅಷ್ಟು ವೇಗವಾಗಿ ಏನೂ ಆಗಿಲ್ಲ.

(ಗೊಂದಲ)

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಇವೆರಡರ ಸಮೀಕರಣವೇ ತಪ್ಪು. ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ಮತ್ತು ಹುಣಸೋಡು ಪ್ರಕರಣದ ಹೋಲಿಕೆಯೇ ತಪ್ಪು.

(ಗೊಂದಲ)

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ಪ್ರಕರಣವನ್ನು ಶಿವಮೊಗ್ಗ ಸ್ಫೋಟಕದ ಘಟನೆಗೆ comparison ಮಾಡಬೇಡಿ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಪ್ರಕರಣಗಳನ್ನು ತನಿಖೆ ಮಾಡುವುದು ಗೃಹ ಇಲಾಖೆ ತಾನೆ. ನಾನು ಮಾನ್ಯ ಗೃಹ ಸಚಿವರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಅವೊತ್ತು ಏನು 1350 ಕೆ.ಜಿ. ಸ್ಫೋಟಕ ವಸ್ತು ಇತ್ತೆಂದು ಎಲ್ಲಾ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವಾಗಲೀ ಅಥವಾ ನೀವಾಗಲೀ ಅದನ್ನು ಅಳತೆ ಕೂಡ ಮಾಡಿಲ್ಲ. ನೋಡಿಲ್ಲ; ಗೊತ್ತಾಗುವುದಿಲ್ಲ. ಆ ಬ್ಲಾಸ್ಟ್ ಎಷ್ಟು ತೀವ್ರತೆ ಇತ್ತು, ಅದರ ಆಧಾರದ ಮೇಲೆ ಅಂದಾಜು ಮಾಡಬೇಕಾಗುತ್ತದೆಂದು ಮಾನ್ಯ ಸಚಿವರು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮ ವಿಷಯ ಏನೆಂದರೆ, ನಾನು ಮತ್ತು ಮಾನ್ಯ ಎಸ್.ರವಿಯವರು ಮಾತನಾಡುವಾಗ ಅದರ ಬಗ್ಗೆ ಸ್ವಲ್ಪ ಅನುಭವ ಇರುವುದಕ್ಕೋಸ್ಕರವಾಗಿ ಹೇಳಿದೆವು. ಬಂಡೆಯನ್ನು ಬ್ಲಾಸ್ಟ್ ಮಾಡಬೇಕಾದರೆ ಆ ಬಂಡೆಗೆ ಹೋಲ್ ಮಾಡಿರುತ್ತೇವೆ. ಅದರೊಳಗೆ ಜಿಲೆಟಿನ್ ಸ್ಟಿಕ್‌ನ್ನು ಇಟ್ಟು, ಮತ್ತೆ ತೋಟಾಯಿಯನ್ನು ಇಟ್ಟು, ಅದು hollow ಇರುತ್ತದೆ, ಬತ್ತಿಯನ್ನು ಇಟ್ಟಮೇಲೆ ನಂತರ ಅಮೋನಿಯಂ ನೈಟ್ರೇಟ್ ಪೌಡರ್ ಮತ್ತು ಇದ್ದಿಲು ಪೌಡರ್‌ನ್ನು ಮಿಕ್ಸ್ ಮಾಡಿ, ಟೈಟ್ ಮಾಡಿ ಬೆಂಕಿ ಇಟ್ಟಾಗ ಅದು ಬ್ಲಾಸ್ಟ್ ಆಗುತ್ತದೆ. ಆದರೆ ಈ ಗಣಿಯಲ್ಲಿ ಬ್ಲಾಸ್ಟ್ ಆಗಲಿಲ್ಲ. ಲಾರಿಯಲ್ಲಿ ತಂದಿರತಕ್ಕಂಥ ಸ್ಫೋಟಕ ವಸ್ತುಗಳು ಅಟೋಮ್ಯಾಟಿಕ್ ಆಗಿ ಬ್ಲಾಸ್ಟ್ ಆಗಿದೆ. ಇದು ಯಾವ ರೀತಿ ಬ್ಲಾಸ್ಟ್ ಆಯಿತೆಂದು ನಮ್ಮ ಆತಂಕ ಇರುವುದು. ಕೇವಲ ಗಣಿಗಾರಿಕೆಗೆ ಬಂದಂಥ ಸ್ಫೋಟಕ ವಸ್ತು ಆಗಿತ್ತೇ? ಅಥವಾ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದಂತೆ, ಬೇರೆ ಯಾವುದಕ್ಕಾದರೂ ಉಪಯೋಗಕ್ಕೆ ಬಂದಿರತಕ್ಕಂಥದ್ದೇ ಎಂಬುದು ನಮ್ಮ ಆತಂಕ. ಅದನ್ನು ಪರಿಶೀಲನೆ ಮಾಡಿ ತನಿಖೆ ಮಾಡುವುದು ಸರ್ಕಾರಕ್ಕೆ ಬಿಟ್ಟಿದ್ದೇವೆ.

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಈ ವಿಷಯವನ್ನು ಪ್ರಸ್ತಾಪಿಸಿದ್ದಕ್ಕೆ ಸಮಯ ಕೊಟ್ಟಿದ್ದು. ಏಕೆಂದರೆ, ಅವರು ನ್ಯಾಷನಲ್ ಲೀಡರ್. ಮಾನ್ಯ ಎಂ.ನಾರಾಯಣಸ್ವಾಮಿಯವರು ವಿತಂಡ ವಾದ ಮಾಡಬಾರದು.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. ನಮ್ಮ ಆತಂಕವಾಗಲಿ, ಆಡಳಿತ ಪಕ್ಷದವರ ಆತಂಕವಾಗಲಿ ಒಂದೇ ಇರಬೇಕು. ಅದು ಬ್ಲಾಸ್ಟ್ ಆಗಬೇಕಾದರೆ ಸ್ಫೋಟಕ ವಸ್ತುಗಳನ್ನಿಟ್ಟು ಸಜ್ಜುಗೊಳಿಸಿದಾಗ ಮಾತ್ರ ಬ್ಲಾಸ್ಟ್ ಆಗುತ್ತದೆ. ಇದು ಯಾವುದನ್ನೂ ಮಾಡದೇ ಆ ಸಾಮಗ್ರಿಗಳನ್ನು ತಂದಿರತಕ್ಕಂಥ ಸಂದರ್ಭದಲ್ಲಿ ಯಾವ ರೀತಿ ಸ್ಫೋಟವಾಯಿತು? ಆ ಸ್ಫೋಟಕದ ತೀವ್ರತೆ ಎಷ್ಟಿತ್ತೆಂದರೆ ಸುಮಾರು ಎರಡು–ಮೂರು ಕಿಲೋಮೀಟರ್‌ಗಳಲ್ಲಿ ಇರತಕ್ಕಂಥ ಮನೆಗಳ ಗ್ಲಾಸ್, ಮನೆಯ ಬಾಗಿಲುಗಳು ಹೊಡೆಯುವಷ್ಟು ತೀವ್ರತೆ ಇತ್ತು. 6 ಜನ ಸತ್ತರು. ಅದಕ್ಕಿಂತ ಒಂದು ತಿಂಗಳಿಗೆ ಮೊದಲು ಅದೇ ಕ್ವಾರಿಗಳಲ್ಲಿ, ಕ್ವಾರಿ ಬ್ಲಾಸ್ಟ್ ಮಾಡುವಾಗ ಇಬ್ಬರು ಸತ್ತಿದ್ದಾರೆ. ಅದಕ್ಕೆ ಯಾರೂ ಎಫ್.ಐ.ಆರ್. ದಾಖಲಿಸಲಿಲ್ಲ. ಅವರಿಗೆ ಸ್ವಲ್ಪ ದುಡ್ಡು ಕೊಟ್ಟು ಆ ಕೇಸ್‌ನ್ನು ಮುಚ್ಚಿ ಹಾಕಿದರು. ಆವೊತ್ತು ಅವರಿಬ್ಬರು ಸತ್ತಾಗ ನೀವು ಕಾನೂನಿನ ರೀತಿಯಲ್ಲಿ ಕ್ರಮ ಕೈಗೊಂಡಿದ್ದರೆ, ನೀವು ಯಾರ ಮೇಲಾದರೂ ಪ್ರಕರಣ ದಾಖಲಿಸಿದ್ದರೆ, ಈ ಘಟನೆ ನಡೆಯುವುದನ್ನು ತಪ್ಪಿಸಬಹುದಿತ್ತಲ್ಲವೇ? ಈ ಘಟನೆಯನ್ನು ತಪ್ಪಿಸಬಹುದಿತ್ತು ತಾನೆ? ಅದನ್ನು ಮಾಡಲಿಲ್ಲವೆಂಬುದು ನಮ್ಮ ಕಳಕಳಿ ಇರತಕ್ಕಂಥದ್ದು. ನಾನು ಮಾನ್ಯ ಸಚಿವರಿಗೆ ಇನ್ನೊಂದು ಮಾತನ್ನು

ಹೇಳುತ್ತೇನೆ. ಮಂಗಳೂರಿನ ಏರ್‌ಪೋರ್ಟ್ ಹತ್ತಿರ ಒಂದು ಬ್ಲಾಸ್ಟ್ ಆಯಿತು. ಆ ಬ್ಲಾಸ್ಟ್ ಆದಂತಹ ಸಂದರ್ಭದಲ್ಲಿ ಮಾಧ್ಯಮಗಳು ಇರಬಹುದು, ಪ್ರತಿಯೊಬ್ಬರು ಇರಬಹುದು, ಆಗಿರತಕ್ಕಂಥ ತೀವ್ರತೆ; ದೇವರು ದೊಡ್ಡವನು, ಅವೊತ್ತು ಯಾವುದೇ ಅನಾಹುತ ಆಗಲಿಲ್ಲ. ಯಾರಾದರೂ ಅಲ್ಲಿ ಇದ್ದಿದ್ದರೆ ಸಾವಿರಾರು ಜನ ಸತ್ತು ಹೋಗುತ್ತಿದ್ದರು. ಅಂತಹ ದೊಡ್ಡ ಬ್ಲಾಸ್ಟ್ ಆಯಿತು ಎಂದು ಮಾಧ್ಯಮಗಳು ಇಡೀ ದಿನ ಬೆಳಗ್ಗೆಯಿಂದ ಸಂಜೆಯವರೆಗೆ ಪ್ರಸಾರ ಮಾಡಿದರು. ಆಗ ಯಾರೋ ಒಬ್ಬ ವ್ಯಕ್ತಿಯನ್ನು ಹಿಡಿದಿರಿ. ಹಿಡಿದ ಕೂಡಲೇ ಆತನ ಹೆಸರು ಪ್ರಕಟವಾದ ತಕ್ಷಣವೇ, ಅದೊಂದು ಸಣ್ಣ ಪಟಾಕಿ, ಅವನಿಗೆ ಬುದ್ಧಿ ಬ್ರಮಣೆಯಾಗಿದೆಯೆಂದು ಹೇಳಿ ಆತನನ್ನು ಬಿಟ್ಟು, ಆ ಪ್ರಕರಣವನ್ನೇ ತಿರುಗಿಸಿಬಿಟ್ಟಿರಿ. ಮಾನ್ಯ ಗೃಹ ಸಚಿವರೇ, ಇದೂ ಕೂಡ ಆ ರೀತಿ ಆಗಬಾರದು. ದಯಮಾಡಿ ನಿಮ್ಮ ಮೇಲೆ ಅಪಾರವಾದ ನಂಬಿಕೆ ಮತ್ತು ವಿಶ್ವಾಸವಿದೆ. ತಮ್ಮ ತಂದೆಯವರ ಕಾಲದಿಂದ ರಾಜಕೀಯ ಇತಿಹಾಸದಲ್ಲಿ ಒಳ್ಳೆಯ ಹೆಸರು ಪಡೆದಿರತಕ್ಕಂಥವರು. ಇವತ್ತು ನೀವು ಗೃಹ ಸಚಿವರಾಗಿದ್ದೀರಿ. ದಯಮಾಡಿ ಯಾರೇ ಎಷ್ಟೇ ಬಲಿಷ್ಟವಾದ ವ್ಯಕ್ತಿಯಾಗಿದ್ದರೂ ಕೂಡ ಇದರಲ್ಲಿ ಯಾರು ಇನ್‌ವಾಲ್ವ್ ಆಗಿದ್ದಾರೋ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳತಕ್ಕಂಥ ಕೆಲಸ ಮಾಡಬೇಕು. ಮುಂದೆ ಆಗತಕ್ಕಂಥ ಅನಾಹುತವನ್ನು ತಪ್ಪಿಸುವುದಕ್ಕೆ ನಾಂದಿ ಆಗಬೇಕು. ಕೊನೆಯದಾಗಿ, ಇದು ಶಿವಮೊಗ್ಗಕ್ಕೆ ಸೀಮಿತವಾಗಿರತಕ್ಕಂಥದ್ದಲ್ಲ. ನಮ್ಮ ಬೆಂಗಳೂರಿಗೆ ಹೊಂದಿಕೊಂಡಿರತಕ್ಕಂಥ ಚಿಕ್ಕಬಳ್ಳಾಪುರ ಜಿಲ್ಲೆಯ ಇವತ್ತು Republic of Chikkaballapura ಆಗಿದೆ. ಅಲ್ಲಿ ಯಾರು ಕೂಡ ಕಡಿವಾಣ ಹಾಕುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಯಾರೊಬ್ಬರ ಮೇಲೆ blame ಮಾಡುತ್ತಿಲ್ಲ. ಎಲ್ಲಾ ಪಕ್ಷದ ರಾಜಕಾರಣಿಗಳದ್ದು ಕೂಡ ಇವತ್ತಿನ ದಿವಸ ಅಲ್ಲಿ ಕ್ರಷರ್ ಗಣಿಗಾರಿಕೆ ನಡೆಯುತ್ತಿದೆ. ಒಂದು ಕ್ರಷರ್ ಗಣಿಗಾರಿಕೆಯಿಂದ ಯಾರಿಗಾದರೂ ಒಂದು ಲೋಡ್ ಜಲ್ಲಿ ಹೊರಗಡೆ ಬರಬೇಕಾದರೆ ಕಪ್ಪ ಕಟ್ಟಿ ಬರಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ದಯಮಾಡಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಮೂಲೆ ಮೂಲೆಯಲ್ಲಿ ಗಣಿಗಾರಿಕೆಗಳು ಅನಧಿಕೃತವಾಗಿ ನಡೆಯುತ್ತಿದೆ ಅದನ್ನು ನಿಲ್ಲಿಸತಕ್ಕಂಥದ್ದು ತಮ್ಮಿಂದ ಆಗಬೇಕು. ಯಾವುದೇ ರೀತಿಯ ಪಕ್ಷಪಾತವಿಲ್ಲದೇ ನಿರ್ಧಾಕ್ಷಿಣ್ಯವಾಗಿ ಕಾನೂನು ಕ್ರಮಕೈಗೊಳ್ಳಿ. ಯಾರು ತಪ್ಪಿತಸ್ಥರು ಇದ್ದಾರೋ, ಅವರಿಗೆ ಶಿಕ್ಷೆ ಆಗತಕ್ಕಂಥ ಕೆಲಸ ಆಗಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**(ಮುಂದು...)**

(86)02.02.2021/4.50/ಎಂ.ಎಂ–ಆರ್.ಎನ್

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನಿನ್ನೆಯ ದಿವಸ ಸಾಕಷ್ಟು ವಿಚಾರಗಳನ್ನು ಮಾತನಾಡಿದ್ದೇನೆ, ಈಗ ನೇರವಾಗಿ ನಾನು ಮಾನ್ಯ ಗೃಹ ಸಚಿವರಲ್ಲಿ ಮತ್ತು ಮಾನ್ಯ ಗಣಿ ಸಚಿವರಲ್ಲಿ ಕೇಳುವುದೇನೆಂದರೆ, ಮೊದಲು ಈ ಪ್ರಕರಣದಲ್ಲಿ ಏನು ಆರು ಜೀವಗಳು ಹೋಗಿವೆ ಅದಕ್ಕೆ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು ಉತ್ತರ ಕೊಡುತ್ತಾ ಇಬ್ಬರಿಗೆ ತಲಾ ಐದು ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಣೆ ಮಾಡಿದ್ದೇವೆ, ನಾಲ್ಕು ಮಂದಿ ಯಾರು ಎಂಬ ಬಗ್ಗೆ ನಿರ್ದಿಷ್ಟವಾಗಿ ಇನ್ನೂ ಕೂಡ ಗೊತ್ತಾಗುತ್ತಿಲ್ಲ ಆದ್ದರಿಂದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೂ ಕೂಡ ವರದಿ ಬಂದ ಮೇಲೆ ಪರಿಹಾರ ಕೊಡುತ್ತೇವೆ ಎಂದು ಹೇಳಿದರು. ಇದು ಸರ್ಕಾರದ್ದಾಯಿತು, ಇಲಾಖೆಯಿಂದ ಏನನ್ನು ಕೊಡುತ್ತೀರಿ? ಆ ಕುಟುಂಬಗಳು ಇಂತಹ ಪ್ರಕರಣದಲ್ಲಿ ಕುಟುಂಬದ ಯಜಮಾನರು ಜೀವ ಕಳೆದುಕೊಂಡ ಮೇಲೆ ನಮ್ಮ ಸರ್ಕಾರ ಕೊಡುವಂತಹ ಐದು ಲಕ್ಷ ರೂಪಾಯಿಗಳ ಹಣ ಹೆಚ್ಚು ದಿನಗಳು ಬರುವುದಿಲ್ಲ. ಆದರೆ ಆ ಜೀವಗಳಿಗೆ ಗಣಿ ಇಲಾಖೆಯಿಂದ ಎಷ್ಟು ಪರಿಹಾರವನ್ನು ಕೊಡುತ್ತಾರೆ ಎನ್ನುವುದನ್ನು ದಯವಿಟ್ಟು ಸ್ಪಷ್ಟಪಡಿಸಬೇಕು. ಈ ಪ್ರಕರಣ ನಡೆದು 12 ದಿನವಾದರೂ ಕೂಡ ಮಾನ್ಯ ಗೃಹ ಸಚಿವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ ತಾವು ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದೀರಿ, ಆರೋಪಿಗಳನ್ನು ಪತ್ತೆ ಮಾಡುವ ಕೆಲಸವನ್ನು ಮಾಡಿದ್ದೀರಿ. ಇದೆಲ್ಲಾ ನೈಜ ಮತ್ತು ಸಹಜ ಪ್ರಕ್ರಿಯೆ. ಆದರೆ ಈ ಪ್ರಕರಣದಲ್ಲಿ ಇಷ್ಟೆಲ್ಲಾ ಲೋಪವಾಗುವುದಕ್ಕೆ ಯಾವುದೇ ಮಾಹಿತಿಯನ್ನು ಇಲಾಖೆಯವರಾಗಲಿ, ಮತ್ತೊಬ್ಬರಾಗಲೀ ಗಣಿ ಬಗ್ಗೆ, ಈ ಸ್ಫೋಟಕವನ್ನು ಗಣಿಗೆ ತೆಗೆದುಕೊಂಡು ಹೋಗುತ್ತಿದ್ದರಾ ಮತ್ತೊಂದು ಮಾಡುತ್ತಿದ್ದರಾ ಇದರಲ್ಲಿ ಯಾವ ಇಲಾಖಾ ಅಧಿಕಾರಿಗಳು ಲೋಪವೆಸಗಿದ್ದಾರೆ ಅವರ ಮೇಲೆ 12 ದಿನವಾದರೂ ಏತಕ್ಕೆ ಏನೂ ಕ್ರಮವಾಗಲಿಲ್ಲ ಮತ್ತು ಯಾರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ನಿಮಗೆ ಪೊಲೀಸ್, ಇಂಟಲಿಜೆನ್ಸ್ ಎಲ್ಲಾ ಇದೆ. ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಸಚಿವರು, ಮಾನ್ಯ ವಿರೋಧಪಕ್ಷದ ನಾಯಕರು ಭೇಟಿ ಮಾಡಿದ್ದಾರೆ. 24 ಗಂಟೆಯಲ್ಲಿ ಯಾವ ಅಧಿಕಾರಿಗಳು ಕರ್ತವ್ಯ ಲೋಪ ಮಾಡಿದ್ದಾರೆ ಎನ್ನುವ ವರದಿ ನಿಮ್ಮ ಬಳಿ ಇದೆ. ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವಲ್ಲ, ಯಾವ್ಯಾವ ಅಧಿಕಾರಿಗಳ ಮೇಲೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಮಾನ್ಯ ಗೃಹ ಸಚಿವರು ಹೇಳಿಕೆ ಮಾಡುವಾಗ ಹೇಳಿದರು. ನೀವು ಹೇಳಿದ್ದನ್ನು ನಾನು ನಿನ್ನೆ ದಿವಸವೇ ಹೇಳಿದೆ. ಈ ರಾಜ್ಯದಲ್ಲಿ ಇದುವರೆಗೂ ಗಣಿಗಾರಿಕೆಗೆ ಎಲ್ಲಾ ಸರ್ಕಾರಗಳ ಕುಮ್ಮಕ್ಕು ಮತ್ತು ಆಶ್ರಯ ಇದೆ. ಪಟ್ಟಭದ್ರ ಹಿತಾಸಕ್ತಿ ರಾಜಕಾರಣಿಗಳು ಇರುವುದರಿಂದ ಯಾವುದಕ್ಕೂ ಕೂಡ ಪರಿಹಾರ ಸಿಕ್ಕಿಲ್ಲವೆಂದು ಹೇಳಿದೆ. ತಾವು ಈಗಲೂ ಅದನ್ನೇ ಹೇಳಿದಿರಿ. ಆದರೆ ಇಂತಹ ಒಂದು ಅಕ್ರಮ ಗಣಿಗಾರಿಕೆ ಮತ್ತು ಜೀವಹಾನಿಯಾಗದಿರುವ ರೀತಿ ಇನ್ನು ಮೇಲಾದರೂ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರದಿಂದಲಾದರೂ ಆಗಬೇಕು. ಮಾನ್ಯ ಸದಸ್ಯರಾದ ಹರಿಪ್ರಸಾದ್‌ರವರು ಹೇಳಿದರು. ನೀವು ಯಾವುದೇ ಇಲಾಖಾ ಅಧಿಕಾರಿಗಳಿಂದ ತನಿಖೆ ಮಾಡಿಸಿ ಇವತ್ತು ಮುಖ್ಯಮಂತ್ರಿಯವರ ಜಿಲ್ಲೆಯಲ್ಲಿ ಈ ಪ್ರಕರಣ ನಡೆದಿರುವುದರಿಂದ ನಿಷ್ಪಕ್ಷಪಾತವಾದಂತಹ ತನಿಖೆ ಬರುವುದಕ್ಕೆ ಸಾಧ್ಯವಿಲ್ಲ. ಗೃಹ ಸಚಿವರು ಗಟ್ಟಿ ಮನಸ್ಸು ಮಾಡಬೇಕು. ಏತಕ್ಕೆ ನೀವು ಇಷ್ಟೊಂದು ಸಂಶಯ ವ್ಯಕ್ತ ಮಾಡುತ್ತೀರಿ? ಏತಕ್ಕೆ ನೀವು ಇಷ್ಟೊಂದು ಸಹಕಾರ ನೀಡುತ್ತೀರಿ? ರಾಜ್ಯ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ತನಿಖೆ ಮಾಡಿಸುತ್ತೇವೆಂದು ಹೇಳಿ. ಈ ಅಕ್ರಮಕ್ಕೆ ಆ ತನಿಖೆಯಿಂದಾದರೂ ಇನ್ನು ಮುಂದೆ ಸದ್ಗತಿ ದೊರೆಯಲಿ, ಇತಿಶ್ರೀ ಹಾಡಲಿ. ಹಾಲಿ ನ್ಯಾಯಾಧೀಶರಿಂದ ತನಿಖೆ ಮಾಡಿಸುವುದಕ್ಕೆ ಏತಕ್ಕೆ ಹಿಂದೆ ಮುಂದೆ ನೋಡುತ್ತೀರಿ? ಇದು ನಿಲ್ಲಬೇಕು, ಇಂತಹ ಸಾವುಗಳಾಗಬಾರದು ಎನ್ನುವುದಾದರೆ ಹಾಲಿ ನ್ಯಾಯಾಧೀಶರಿಂದ ತನಿಖೆ ಮಾಡಿಸಿ, ಆ ತನಿಖೆ ವರದಿ ಮೇಲೆ ಕ್ರಮ ಕೈಗೊಳ್ಳಿ. ದಯವಿಟ್ಟು ಇದಕ್ಕೆ ಉತ್ತರ ತಿಳಿಸಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತಾ . . .

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಚಿವರು ಉತ್ತರ ಕೊಟ್ಟ ನಂತರವೂ ಡಿಬೇಟ್ ಮಾಡಿದರೆ ಹೇಗೆ?

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಮಾತನಾಡುವಂತಹ ಸಂದರ್ಭದಲ್ಲಿ ಕೂಡ ಇದನ್ನು ಪ್ರಸ್ತಾಪ ಮಾಡಿದೆ. ಸ್ಥಳೀಯರಾದ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಮಾಜಿ ಸಂಸದರು ಮತ್ತು ಬಹಳ ಹಿರಿಯರಾದಂತಹವರು. ಅವರು ಅಲ್ಲಿ ಸ್ಥಳೀಯರಾಗಿದ್ದುಕೊಂಡು ಅಲ್ಲಿ ಸ್ಫೋಟ ನಡೆದಂತಹ ಸಂದರ್ಭದಲ್ಲಿ ಅವರು ಅನುಭವಿಸಿದಂತಹ ಸಂದರ್ಭ ಮತ್ತು ಸನ್ನಿವೇಶವನ್ನು ಕೇಳುತ್ತಿದ್ದರೆ ನಮಗೆ ರೋಮಾಂಚನವಾಗುತ್ತಿತ್ತು. ಭಯಭೀತವಾದಂತಹ ಸ್ಫೋಟದ ತೀವ್ರತೆಯನ್ನು ಅವರು ತಿಳಿಸಿದರು. ಅದೇ ರೀತಿ ಮಾನ್ಯ ಸದಸ್ಯರಾದ ಪ್ರಸನ್ನ ಕುಮಾರ್‌ರವರು ಕೂಡ ಆ ಸ್ಫೋಟ ನಡೆದಾಗ ತಾವು ಮನೆಯಲ್ಲಿಯೇ ಇದ್ದು ಟಿ.ವಿ., ನೋಡುತ್ತಿದ್ದೆ, ತಾವು 8 ಕಿ.ಮೀ ದೂರದಲ್ಲಿದ್ದು, ನಮ್ಮ ಮನೆಯ ಮೇಲೆಯೇ ಬಾಂಬ್ ಬಿದ್ದಿತೇನೋ ಎಂದು ಅವರು ಹೇಳಿದಂತಹ ಸಂದರ್ಭ ಜೊತೆಗೆ ಸ್ಫೋಟದ ತೀವ್ರತೆ ನಾಲ್ಕು ಜಿಲ್ಲೆಗಳಿಗೂ, ದಾವಣಗೆರೆ ಜಿಲ್ಲೆಯವರೆಗೂ ಸ್ಫೋಟದ ತೀವ್ರತೆಯಾಗಿತ್ತು ಎಂದು ಹೇಳಿದರು. ಮಾನ್ಯ ನಾರಾಯಣಸ್ವಾಮಿಯವರು ಹೇಳಿದರು.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಕೊಡಲಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಆ ಮನೆಯಲ್ಲಿ ಒಂದು ಬಿಲ್ ಇದೆ . . .

**ಶ್ರೀ ಎಸ್. ರವಿ:-** ಮಾನ್ಯ ಸಚಿವರೇ, . . .

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ, ಒಂದು ಸ್ಪಷ್ಟನೆ ಇದೆ, ನಾನು ನಿನ್ನೆ ಹೇಳಿದ್ದೇನೆ . . .

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ನಂತರ ಮಾನ್ಯ ಸದಸ್ಯರು ಹೇಳಲಿ. ನಾನು ಬೇಗ ಮುಗಿಸುತ್ತೇನೆ. ಆ ಸ್ಫೋಟದ ತೀವ್ರತೆ ಬಗ್ಗೆ ಹೇಳಿದರು ಆಗ ಮಾನ್ಯ ಗೃಹ ಸಚಿವರು ಇರಬೇಕಾಗಿತ್ತು. ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಹೇಳಿದಂತಹ ಸಂದರ್ಭ ಮತ್ತು ಸನ್ನಿವೇಶದಲ್ಲಿ. ಶಿವಮೊಗ್ಗ ಜಿಲ್ಲೆ ಬಹಳ sensitive ಜಿಲ್ಲೆಯಾಗಿದೆ. ಅದೂ ಅವರ ಮಾತಿನಲ್ಲಿಯೇ ಬಂತು. ಅದು ಎಲ್ಲರಿಗೂ ಗೊತ್ತಿರುವಂತಹದ್ದು. ಇತ್ತೀಚಿನ ದಿನಗಳಲ್ಲಿ ಶಿವಮೊಗ್ಗ ಶಾಂತಿಯುತವಾಗಿದೆ. ಮೊದಲು ಶಿವಮೊಗ್ಗ ಜಿಲ್ಲೆಯು ಇತಿಹಾಸವನ್ನು ನೋಡಿದಾಗ ಹಲವಾರು ಸಂದರ್ಭಗಳು, ಕೋಮು ಗಲಭೆಗಳು ಮತ್ತಿತರ ವಿಚಾರಗಳಲ್ಲಿ ಆ ಹಿನ್ನೆಲೆಗೂ ಇವತ್ತಿಗೂ ಶಿವಮೊಗ್ಗ better position ನಲ್ಲಿದೆ. ಆ ಹಿನ್ನೆಲೆ ಕೂಡ ಸರಿಯಾದುದಲ್ಲ ಮತ್ತು ರಾಜಕೀಯವಾಗಿ ಶಿವಮೊಗ್ಗ ರಾಜ್ಯದ ರಾಜಕಾರಣದಲ್ಲಿ ಅತ್ಯಂತ ಪ್ರಭಾವಶಾಲಿ ಜಿಲ್ಲೆಯಾಗಿರುವಂತಹದ್ದು, ಮುಖ್ಯಮಂತ್ರಿಯವರನ್ನೊಳಗೊಂಡಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಯಾಗಿದೆ. ನಾನು ಯಾರನ್ನೂ ಟೀಕೆ ಮಾಡುವಂತಹ ಉದ್ದೇಶವನ್ನಾಗಲೀ, ಯಾರ ಹೆಸರನ್ನಾಗಲೀ ಇಲ್ಲಿ ತರುವುದಕ್ಕೆ ಇಚ್ಛೆಪಡುವುದಿಲ್ಲ. ತಪ್ಪೋ ಸರಿಯೋ ಅದು ತಪ್ಪೇ ಇರಬಹುದು, ಆದರೆ ಇಂತಹ ಸಂದರ್ಭಗಳು ಮತ್ತು ಘಟನೆಗಳು ನಡೆದಾಗ ಅಧಿಕಾರದಲ್ಲಿರುವಂತಹವರನ್ನು ಬೆಟ್ಟು ಮಾಡಿ ತೋರಿಸುವುದು, ಯಾರನ್ನೋ ದೂರುವುದು ಮಾನವನ ಸಹಜವಾದಂತಹ ಒಂದು ಪ್ರತಿಕ್ರಿಯೆ. ಈ ಹಿನ್ನೆಲೆಯಲ್ಲಿ ಇದು ಯಾರದ್ದೋ ಬೇನಾಮಿ ಕ್ರಷರ್. ಇದರಲ್ಲಿ ಯಾವುದೋ ರಾಜ್ಯದ ರಾಜಕಾರಣದಲ್ಲಿ ಪ್ರಭಾವಿಗಳಾಗಿರುವಂತಹವರ ಬೆಂಬಲವಿದೆ, ಇದು ಅವರ ಬೇನಾಮಿ ಕ್ರಷರ್ ಎಂದು ಮಾಧ್ಯಮಗಳಲ್ಲಿ ಮತ್ತಿತರ ವಿಚಾರಗಳಲ್ಲಿ ಹರಿದಾಡುತ್ತಿರುವಂತಹದ್ದು, ಗುಸುಗುಸು ನಡೆಯುತ್ತಿರುವಂತಹದ್ದನ್ನು ಕೂಡ ನಾವೆಲ್ಲಾ ನೋಡಿದ್ದೇವೆ. ಈ ಮೂರು ಅಂಶಗಳನ್ನು ಪರಿಗಣಿಸಿದಂತಹ ಸಂದರ್ಭದಲ್ಲಿ ಇಲಾಖಾ ಮಟ್ಟದಲ್ಲಿ ಎರಡು ಹಂತದಲ್ಲಿ ತನಿಖೆ ಮಾಡುತ್ತಿದ್ದೇವೆ, ಒಂದು ಡಿ.ಎಂ.ಜಿ (Department of Mines and Geology) ಮತ್ತೊಂದು ಪೊಲೀಸ್ ಇಲಾಖೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿದರು. ಯಾವುದೇ ಕಾರಣಕ್ಕೂ ಎರಡು ಇಲಾಖೆಗಳ ಹಂತದಲ್ಲಿ ನಡೆಯುವಂತಹ ತನಿಖೆಯಿಂದ ಸತ್ಯಾಂಶ ಬರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇದು ಲಭ್ಯವಾದುದು ಅಂತರ್‌ರಾಜ್ಯದಲ್ಲಿ, ಅನಂತಪುರ ಮತ್ತು ತಮಿಳುನಾಡು ಭಾಗಗಳಲ್ಲಿರುವಂತಹದ್ದು ಎಂದು ತಾವೇ ತಿಳಿಸಿದಿರಿ. ಮತ್ತು ಎಲ್ಲೋ ಒಂದು ಕಡೆ ಇದು ಮುಖ್ಯಮಂತ್ರಿಯವರ ಜಿಲ್ಲೆಯಾಗಿರುವ ಹಿನ್ನೆಲೆಯಲ್ಲಿ ಬರೀ ಪಾಕಿಸ್ತಾನ ಮತ್ತು ವಿದೇಶಗಳಲ್ಲಿ ಕೂಡ ಇದರ ಕೈವಾಡ ಇರಬಹುದು. ದಯಮಾಡಿ ನಿಮ್ಮ ಏಜೆನ್ಸಿ ಮತ್ತು ಇಲಾಖಾ ತನಿಖೆ ನಿಜಕ್ಕೂ ಇದಕ್ಕೆ ನ್ಯಾಯ ಒದಗಿಸಿಕೊಡಲಾರದು. ಇದು ಕೇಂದ್ರ ಸರ್ಕಾರ ಮಟ್ಟದ ಎನ್.ಐ.ಎ., (National Investigation Agency) ಇರಬಹುದು, ಸಿ.ಬಿ.ಐ., (Central Bureau of Investigation) ಇರಬಹುದು ಈ ಮಟ್ಟದ ತನಿಖಾ ಸಂಸ್ಥೆಗಳಿಂದ ಮಾತ್ರ ಸತ್ಯಾಂಶ ಹೊರಬರುವುದಕ್ಕೆ ಸಾಧ್ಯವಿದೆ. ನೀವೇನಾದರೂ ಈ ತನಿಖಾ ಸಂಸ್ಥೆಗಳಿಂದ ತನಿಖೆ ಮಾಡುವುದಕ್ಕೆ ಮುಂದಾಗದಿದ್ದರೆ ಎಲ್ಲೋ ಒಂದು ಕಡೆ ರಾಜ್ಯದ ಜನತೆಗೆ ನೀವು ತಪ್ಪು ಸಂದೇಶವನ್ನು ಅಥವಾ ಸತ್ಯವನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ನಡೆಯುತ್ತಿದೆ ಎನ್ನುವಂತಹ ಬಲವಾದಂತಹ ಕಾರಣಗಳು, ಸಂಶಯ ಮೂಡುತ್ತದೆ. ಆದ್ದರಿಂದ ದಯಮಾಡಿ ತಮಗೆ ಅವಕಾಶ ಇದೆ; ಮಾನ್ಯ ಸದಸ್ಯರಾದ ನಸೀರ್ ಅಹಮದ್‌ರವರು ಡಿ.ಜೆ ಹಳ್ಳಿ ಮತ್ತು ಕೆ.ಜಿ ಹಳ್ಳಿ ಪ್ರಕರಣವನ್ನು ಎನ್.ಐ.ಎ., ಗೆ ನೀವೇ voluntary ಯಾಗಿ ಕೊಟ್ಟಿದ್ದೀರಿ ಹೇಳಿದರು. ಇದನ್ನು ಕೊಡುವುದಕ್ಕೆ ನಿಮಗೇನು ತೊಂದರೆ? ಇದರ ತೀವ್ರತೆ ನೋಡಿ, ಇದು ಒಳಗೊಂಡಿರುವಂತಹ ದುಷ್ಪರಿಣಾಮವನ್ನು ನೋಡಿ. ಸರ್ಕಾರ ಏತಕ್ಕೆ ಹಿಂದೆ ಮುಂದೆ ನೋಡುತ್ತಿದೆ? ನಮ್ಮ ಕೈನಲ್ಲಿ ಹೇಳಿಸಿಕೊಳ್ಳುವುದೇನಿದೆ? ಸರ್ಕಾರ voluntary ಯಾಗಿ ತೀರ್ಮಾನ ಮಾಡಿ ತನಿಖೆಗೆ ಆದೇಶ ಕೊಡಲಿ, ಆಗ ನಿಮಗೂ ಹೆಸರು ಬರುತ್ತದೆ. ಆಗ ಯಾರೂ ನಿಮ್ಮನ್ನು ಅನುಮಾನ ಪಡುವುದಕ್ಕೆ ಸಾಧ್ಯವಿರುವುದಿಲ್ಲ. ಸತ್ಯಾಂಶ ಹೊರಬರಲಿ. ಆ ಕಡೆಯವರಾಗಲೀ ಈ ಕಡೆಯವರಾಗಲೀ ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಶಿಕ್ಷೆ ಕೊಡಿ. ಅವರು ಶಿಕ್ಷೆ ಅನುಭವಿಸಲಿ. ಅದರಲ್ಲಿ ಯಾರ ಪಾತ್ರವೂ ಇರುವುದಿಲ್ಲ. ದಯಮಾಡಿ ಇದನ್ನು ತಮ್ಮ ಮುಖೇನ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಮಾತನಾಡುವಾಗ ನಿರ್ದಿಷ್ಟವಾಗಿ ಒಂದು ಅಂಶವನ್ನು ತಮ್ಮ ಗಮನಕ್ಕೆ ತಂದಿದ್ದೆ. ಆಗಸ್ಟ್ ತಿಂಗಳಿನಲ್ಲಿ ಈ ರೀತಿಯ ಸ್ಫೋಟಕ ಬಂತು ತುಂಗಾ ಠಾಣೆಯ ಸಬ್–ಇನ್ಸ್‌ಪೆಕ್ಟರ್‌ರವರು ಅದನ್ನು ಹಿಡಿದುಕೊಂಡು ಅಪರಾಧಿಯನ್ನು ಕೈಬಿಟ್ಟಿದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ನನಗಿರುವ ಮಾಹಿತಿ ಪ್ರಕಾರ ಐ.ಜಿ., ಆಫೀಸಿನಿಂದ ಬಂದಂತಹ special squad ಮಾಡಿತ್ತು. ಅವತ್ತಿನ ದಿವಸ ಆ ಅಧಿಕಾರಿ ಯಾಕಾಗಿ ಬಿಟ್ಟರು, ಆ ಸಬ್–ಇನ್ಸ್‌ಪೆಕ್ಟರ್ ಮೇಲೆ ಏನು ಕ್ರಮವನ್ನು ನಮ್ಮ ಗೃಹ ಇಲಾಖೆ ತೆಗೆದುಕೊಳ್ಳುತ್ತದೆ? ಐ.ಜಿ., ಆಫೀಸಿನಿಂದ ಬಂದಂತಹ squad ಅಲ್ಲಿ handover ಆದಮೇಲೆ ಮುಂದಿನ ಪ್ರಕ್ರಿಯೆಯನ್ನು ಏಕೆ ಮಾಡಲಿಲ್ಲ ಎನ್ನುವ ಪ್ರಶ್ನೆಯನ್ನು ಗೃಹ ಸಚಿವರಿಗೆ ಕೇಳಬಯಸುತ್ತೇನೆ. ಎರಡನೆಯದಾಗಿ ನಮ್ಮ ಗಣಿ ಸಚಿವರಿಗೆ ಕೇಳುವುದೇನೆಂದರೆ, ಅನಧಿಕೃತ ಕ್ವಾರಿಗಳಿವೆ ಎನ್ನುವುದನ್ನು ಈಗಾಗಲೇ ಒಪ್ಪಿಕೊಂಡಾಗಿದೆ. ಅನಧಿಕೃತ ಕ್ವಾರಿಗಳನ್ನು ಮಾಡಿದಂತಹವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ? ಅನಧಿಕೃತವಾಗಿ ಕ್ವಾರಿಗಳನ್ನು ಮಾಡುವುದಕ್ಕೆ ಬಿಟ್ಟಂತಹ ಐದು ಇಲಾಖೆಗಳನ್ನು ನಿನ್ನೆ ನಾನು ಏನು ಪ್ರಸ್ತಾಪ ಮಾಡಿದೆ, ಕಂದಾಯ, ಪೊಲೀಸ್, ಅರಣ್ಯ, ಪರಿಸರ ಈ ಎಲ್ಲಾ ಇಲಾಖೆಯ ಅಧಿಕಾರಿಗಳ ಕರ್ತವ್ಯ ಲೋಪದ ಬಗ್ಗೆ ಕ್ರಮ ಆಗಬೇಕೇ ಹೊರತು ಈ ಗಂಭೀರ ಚರ್ಚೆಯೊಳಗೆ ಸದನದಲ್ಲಿ ಫಲಿತಾಂಶ ಬರದಿದ್ದಲ್ಲಿ ಒಳ್ಳೆಯ ಸಂದೇಶ ಹೋಗುವುದಿಲ್ಲ. ಇವೆರಡು ಕಡೆ ಕ್ರಮ ಆಗಲೇಬೇಕು, ಅದಕ್ಕೆ ಸಂಬಂಧಪಟ್ಟಂತೆ ಇಬ್ಬರೂ ಸಚಿವರು ಉತ್ತರಿಸಲಿ ಎಂದು ಕೋರುತ್ತೇನೆ.

**ಸಭಾಪತಿಯವರು:–** ಕೊನೆಯದಾಗಿ ಮಾನ್ಯ ತಿಪ್ಪೇಸ್ವಾಮಿಯವರು ಮಾತನಾಡಲಿ, ಸ್ಪಷ್ಟೀಕರಣ ಮಾತ್ರ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ವಂದನೆಗಳು. ಎರಡೇ ನಿಮಿಷ ಮಾತನಾಡುತ್ತೇನೆ. ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ತಮ್ಮ ಹೇಳಿಕೆಯಲ್ಲಿ ಪ್ರಮುಖ ಅಂಶಗಳ ಮೇಲೆ ಬೆಳಕು ಚೆಲ್ಲಿಲ್ಲ.

(ಮುಂದು)

(87) 02–02–2021/ 05–00/ ಕೆಹೆಚ್–ಬಿಎನ್‌ಎಸ್

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):–**

ಮೊದಲನೆಯದಾಗಿ ಗಣಿಗಾರಿಕೆ ಮಾಡಿದಂತಹ ಪ್ರದೇಶ ಮತ್ತು ವಿಸ್ತೀರ್ಣ ಇಷ್ಟು ಇದೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಕೊಟ್ಟಿಲ್ಲ. ಈ ವಿಸ್ತೀರ್ಣದಲ್ಲಿ ಗಣಿಗಾರಿಕೆ ಮಾಡಲು ಮತ್ತು ಸ್ಫೋಟ ಮಾಡಲು ಅವಶ್ಯಕವಾದ ಸ್ಫೋಟಕ ಸಾಮಗ್ರಿಗಳ quantity ಯನ್ನು ಸಹ ಹಾಕಿರುತ್ತಾರೆ. ಇಷ್ಟರಲ್ಲೇ ಮಾಡಬೇಕೆಂದು ಇದೆ, ಹೀಗೆ ಕೊಡಬೇಕೆಂದು ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವರಿಗೆ ಲೈಸೆನ್ಸ್ ಕೊಡಬೇಕಾದರೆ ಪೊಲೀಸ್‌ನವರು ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರು ಎಲ್ಲರೂ ಕೂಡ ಬಂದಿರುತ್ತಾರೆ. ಅಗತ್ಯವಿರುವಂತಹ ಈ ಸ್ಫೋಟಕ ಸಾಮಗ್ರಿಗಳನ್ನು ಯಾವ ಆಧಾರದ ಮೇಲೆ ಡೀಲರ್ ಸಪ್ಲೈ ಮಾಡಿದ್ದಾರೆ. ತಾವು ಲೈಸೆನ್ಸ್ ಕೊಟ್ಟ ಮೇಲೆಯೇ ಸಪ್ಲೈ ಮಾಡುವಂತಹದ್ದು. ಸಪ್ಲೈ ಮಾಡಿದ ಮೇಲೆ ಆತನು ಕೂಡ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸ್‌ನವರಿಗೆ ಒಂದು ವರದಿಯನ್ನು ಕಳುಹಿಸಿಕೊಡುತ್ತಾರೆ. ಆ ವರದಿ ಬಂದಿದೆಯೋ ಅಥವಾ ಇಲ್ಲವೋ ಎನ್ನುವುದು ಗೊತ್ತಿಲ್ಲ. ಮುಂದಿನ ದಿನಗಳಲ್ಲಿ ಈ ರೀತಿಯಾಗದೇ ಇರುವ ಹಾಗೆ ಯಾವ ರೀತಿಯಲ್ಲಿ ಕಡಿವಾಣ ಹಾಕುವುದಕ್ಕೆ ಕಾನೂನಿನಲ್ಲಿ ಅವಕಾಶ ಮಾಡಲಾಗುತ್ತಿದೆ? ಸರಬರಾಜು ಮಾಡಿ ಬಂದಿರುವಂತಹ ಸ್ಫೋಟಕ ಸಾಮಗ್ರಿಗಳು ಏನಿವೆ, ಅದರ ಮೇಲೆ ಶೇಖರಣೆ, 'magazine' ಎಂದು ಪ್ರತ್ಯೇಕವಾಗಿ ಮಾಡಬೇಕು. ಅದರಲ್ಲಿ ಇಟ್ಟಿರಬೇಕು. ಅಲ್ಲಿ ಶೇಖರಣೆ ಮಾಡಬೇಕು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಗಲಿ ಮತ್ತು ಪೊಲೀಸ್‌ನವರು ಆಗಲಿ, ಕಾಲಕಾಲಕ್ಕೆ ಹೋಗಿ ಇದರ ಬಗ್ಗೆ ತನಿಖೆ ಮಾಡಬೇಕು. ಅಂತಹ ವ್ಯವಸ್ಥೆಯನ್ನು ಮಾಡುತ್ತಾರೆಯೇ, ಹಾಗೆಯೇ ಉಸ್ತುವಾರಿ ಮತ್ತು ನಿರ್ವಹಣೆ ಬಗ್ಗೆ ಕ್ರಮ ವಹಿಸುತ್ತಾರೆಯೇ ಎಂಬ ಬಗ್ಗೆ ತಿಳಿಸಲು ಮಾನ್ಯ ಸಚಿವರಲ್ಲಿ ಕೋರುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಎಲ್ಲಾ ಮಾನ್ಯ ಸದಸ್ಯರುಗಳು ಈ ಒಂದು ಪ್ರಕರಣದ ಬಗ್ಗೆ ಅತ್ಯಂತ ಕಳಕಳಿ ಮತ್ತು ಗಂಭೀರತೆಯಿಂದ ಮಾತನಾಡಿದ್ದಾರೆ ಹಾಗೂ ಎಲ್ಲಾ ಆಯಾಮಗಳ ಬಗ್ಗೆ ಮಾತನಾಡಿದ್ದಾರೆ. ಕೆಲವು ಟೀಕೆಗಳನ್ನು ಕೂಡ ಮಾಡಿದ್ದಾರೆ. ನಾನು ಎಲ್ಲವನ್ನೂ ಕೂಡ ಸ್ವಾಗತ ಮಾಡುತ್ತೇನೆ. ನಾವು ಕೂಡ ಉತ್ತರ ಕೊಡುವಾಗ ನಾವು ಮಾಡಿರುವಂತಹ ಕೆಲಸವನ್ನು ಒತ್ತಿ ಹೇಳಿರಬಹುದು. ಆದರೆ, ಒಟ್ಟಾರೆ ಉದ್ದೇಶ ಇದರಲ್ಲಿ ಯಾರನ್ನೂ ರಕ್ಷಣೆ ಮಾಡುವಂತಹದ್ದಲ್ಲ. ಮತ್ತು ಏನು illegal mining, crushing quarrying ಆಗುತ್ತಿದೆ, ಅದಕ್ಕೆ ಬಳಕೆಯಾಗುವಂತಹ explosives illegal ಆಗಿ ಏನಾಗುತ್ತಿದೆ, ಅದನ್ನು ತಡೆಗಟ್ಟುವಂತಹ ಉದ್ದೇಶದಿಂದ ಹೊರತಾಗಿ ಬೇರೆ ಯಾವುದೂ ಇಲ್ಲ. ಇಲ್ಲಿ ಯಾರನ್ನೂ ಕೂಡ ರಕ್ಷಣೆ ಮಾಡುವಂತಹ ಪ್ರಶ್ನೆಯೇ ಇಲ್ಲ. 6 ಜನ ಕಾರ್ಮಿಕರು ಸತ್ತಾಗ ನಾವು ಯಾರನ್ನಾದರೂ ರಕ್ಷಣೆ ಮಾಡುವುದಕ್ಕೆ ಹೋಗಿ, ಈ ಒಂದು 6 ಜನ ಕಾರ್ಮಿಕರು ಸತ್ತಿರುವ ವಿಚಾರವನ್ನು ಹುಗಿದು ಇಡುವಂತಹ ಅವಶ್ಯಕತೆ ನಮಗೂ ಇಲ್ಲ; ನಮ್ಮ ಸರ್ಕಾರಕ್ಕೂ ಇಲ್ಲ ಎನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡಿರುವುದಕ್ಕೆ ನಾವು ಮಾತನಾಡಿದ್ದೇವೆ. ಯಾರ್ಯಾರನ್ನೂ ಅರೆಸ್ಟ್ ಮಾಡಿದ್ದೇವೆ ಎನ್ನುವಂತಹ ಪ್ರಶ್ನೆ ಉದ್ಭವಿಸುತ್ತದೆ. ಕೂಡಲೇ ಆ ಜಮೀನಿನ ಮಾಲೀಕರಾದಂತಹ ಶ್ರೀ ಅವಿನಾಶ್ ಕುಲಕರ್ಣಿ, ಶ್ರೀ ನರಸಿಂಹ, ಶ್ರೀ ಬಿ.ಸುಧಾಕರ್ ಮತ್ತು ಇನ್ನು ಇಬ್ಬರು-ಮೂವರನ್ನು ಈಗಾಗಲೇ ಅರೆಸ್ಟ್ ಮಾಡಿ ತನಿಖೆ ಮಾಡಿದ್ದೇವೆ. ಅವರ ಲೈಸೆನ್ಸ್‌ಗಳು, ಒಬ್ಬ license holder ಅನ್ನು ದಸ್ತಗಿರಿ ಮಾಡಿದ್ದೇವೆ. ಅದರ ಬಗ್ಗೆ ಸಂಪೂರ್ಣವಾಗಿ ವಿಚಾರಣೆಯಾಗುತ್ತಿದೆ. ಅವನಿಗೆ ಎಲ್ಲಿಂದ ಬರುತ್ತದೆ, ಅವನು ನಿಯಮಿತವಾಗಿ ಎಷ್ಟು ತರಿಸುತ್ತಾನೆ, ಅವನಿಗೆ ಎಷ್ಟು ಲೈಸೆನ್ಸ್ ಇದೆ, ಅವನು ಹೆಚ್ಚುವರಿಯಾಗಿ ಎಷ್ಟು ತರಿಸಿದ್ದಾನೆ, ಇದನ್ನು ಏಕೆ ತರಿಸಿದ್ದಾನೆ ಮತ್ತು ಇಷ್ಟು ದೊಡ್ಡ

ಪ್ರಮಾಣದಲ್ಲಿ ಹೇಗೆ ಬಂದಿತು? ಆ ಸರ್ವೆ No.2 ಕ್ವಾರಿಗೆ ತಂದಿದ್ದಾನೋ ಅಥವಾ ಯಾರಿಗಾದರೂ ಇದನ್ನು distribute ಮಾಡುತ್ತಿದ್ದಾನೆಯೋ, ಈ ಎಲ್ಲಾ ವಿಚಾರಗಳನ್ನು ಸಂಪೂರ್ಣವಾಗಿ ತನಿಖೆಗೆ ಒಳಪಡಿಸಿದ್ದೇವೆ.

ಎರಡನೆಯದಾಗಿ, ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ತುಂಗಾ ನಗರದ ಪೊಲೀಸ್ ಠಾಣೆಯಲ್ಲಿ ಏನು ಪ್ರಕರಣವಾಗಿದೆ? ಸುಮಾರು 25 ಬಾಕ್ಸ್‌ಗಳು ರಸ್ತೆ ಬದಿಯಲ್ಲಿ abandon ಆಗಿರುವಂತಹದ್ದು ಸಿಕ್ಕಿದೆ. ಬಹುತೇಕವಾಗಿ transportation ಮಾಡಬೇಕಾದರೆ ಬಿದ್ದಿರಬೇಕು ಅಥವಾ ಇನ್ನೊಂದು ಆಗಿರಬೇಕು. ಇದನ್ನು ಕೂಡಲೇ ಪೊಲೀಸ್‌ನವರು seize ಮಾಡಿ, ತನಿಖೆ ಮಾಡುತ್ತಿದ್ದಾರೆ. Since it was abandoned, ಅದು ಕ್ವಾರಿಯಲ್ಲಿಯೂ ಸಿಕ್ಕಿಲ್ಲ. ಎಲ್ಲಿಯೂ ಸಿಕ್ಕಿಲ್ಲ. ಇದರ ಬಗ್ಗೆ ತನಿಖೆ ಮಾಡುತ್ತೇವೆ. ಇದನ್ನು ತನಿಖೆ ಮಾಡುವಂತಹ ಸಂದರ್ಭದಲ್ಲಿ ಯಾವುದಾದರೂ ಅಧಿಕಾರಿ ಇದನ್ನು ಮುಚ್ಚಿಡುವಂತಹ ಪ್ರಯತ್ನ ಮಾಡಿದರೆ, ಮತ್ತೊಂದು ಮಾಡಿರುವುದು ಕಂಡು ಬಂದರೆ ಖಂಡಿತವಾಗಿಯೂ ಅವನನ್ನು ಕೂಡಲೇ suspension ಅಲ್ಲ, ಅವನಿಗೆ ಏನು ಶಿಕ್ಷೆ ಕೊಡಬೇಕೋ, Criminal Procedure Code ಪ್ರಕಾರ ಅದನ್ನು ಕೊಡುವುದಕ್ಕೂ ಸಿದ್ಧರಿದ್ದೇವೆ. ಇದರ ಬಗ್ಗೆ ತನಿಖೆ ಪೂರ್ಣವಾಗಲಿ. ಆ ತಕ್ಷಣ ಕ್ರಮವನ್ನು ಜರುಗಿಸುತ್ತೇವೆ. ಇನ್ನು ಹಲವಾರು ವಿಚಾರಗಳೆಲ್ಲಾ ಬಂದಿದೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳ ಬಗ್ಗೆ . . .

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರೇ, ತಾವು ಮಾತನಾಡಿದ ವಿಚಾರದ ಬಗ್ಗೆಯೂ ಕೂಡ ಮಾತನಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, . . .

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು, ಒಂದು ನಿಮಿಷ ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನಾನು ಹೇಳುವುದಕ್ಕೂ ಅವರು ಪುರಸತ್ತು ಕೊಡುವುದಿಲ್ಲ. ಅವರು ಮಾತನಾಡಬೇಕಾದರೆ ಸ್ವಲ್ಪವೂ ಪುರುಸತ್ತು ಇರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ರಾತ್ರಿಯಿಡೀ ಹೇಳಿ. ನಾನು ಕೇಳುತ್ತೇನೆ. ಆದರೆ, ಇದರ ಬಗ್ಗೆ ಕ್ರಮವಾಗಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರೇ, ಇದರ ಬಗ್ಗೆ ರಾತ್ರಿಯಿಡೀ ಹೇಳುವಂತಹ ಅವಶ್ಯಕತೆ ಇಲ್ಲ. ಇದರ ಬಗ್ಗೆ ನಾನು ಹೇಳುತ್ತೇನೆ. ತಾವು ಕೇಳಿ. ತಾವು ಬೇಕಾದರೆ ರಾತ್ರಿಯೆಲ್ಲಾ ಮಾತನಾಡುತ್ತೀರಿ. ತಾವು ಮಾತನಾಡಬೇಕಾದರೆ ಮಧ್ಯ ಪ್ರವೇಶ ಮಾಡುವುದಕ್ಕೂ ಅವಕಾಶ ಇರದೇ ಇರುವಷ್ಟು ವೇಗವಾಗಿ ಮಾತನಾಡುತ್ತೀರಿ. ನಾವು ಸ್ವಲ್ಪ ನಿಧಾನವಾಗಿ ಮಾತನಾಡುತ್ತೇವೆ. ತಾವು ಸ್ವಲ್ಪ ಕೇಳಿ. ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಕೇಳುತ್ತಿದ್ದಾರೆ. ಈಗಾಗಲೇ ನಾನು ಎ.ಡಿ.ಜಿ.ಪಿ.,ಯವರಿಗೆ ಹೇಳಿದ್ದೇನೆ. ಒಂದು Interim Report ಅನ್ನು ಕೂಡಲೇ ಕೊಡಬೇಕು. Interim Report ನಲ್ಲಿ ಯಾರ್ಯಾರ ಹೊಣೆಗಾರಿಕೆ ಇದೆ, ಕೇವಲ ನಾನು ಸಾಕ್ಷ್ಯಾಧಾರಕ್ಕೆ ಕಾಯುತ್ತಿಲ್ಲ. ಇದರ ಬಗ್ಗೆ ತನಿಖೆ ಪೂರ್ಣವಾಗುವುದಕ್ಕೂ ಕಾಯುತ್ತಿಲ್ಲ. ಇದರಲ್ಲಿ ಯಾರ್ಯಾರ ಹೊಣೆಗಾರಿಕೆ ಇದೆ, ಆ ಹೊಣೆಗಾರಿಕೆ ವ್ಯಾಪ್ತಿಯಲ್ಲಿ ಯಾರ್ಯಾರದ್ದು ಲೋಪವಾಗಿದೆ, ಅವರೆಲ್ಲರ ಮೇಲೆಯೂ ಕೂಡ ಖಂಡಿತವಾಗಿಯೂ ಕ್ರಮ ಜರುಗಿಸುತ್ತೇನೆ ಎಂದು ಈ ಸದನದಲ್ಲಿ ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತು ಕೆಲವೇ ದಿನಗಳಲ್ಲಿ ಅದನ್ನು ತಾವು ನೋಡುತ್ತೀರಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಯಾವ ಸಮಯದೊಳಗೆ ಮಾಡುತ್ತಾರೆ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಈ ತನಿಖೆಯ ವರದಿ ಬಂದ ತಕ್ಷಣ ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಆ ತನಿಖೆಯ ವರದಿ ಯಾವಾಗ ಬರುತ್ತದೆ?

**ಶ್ರೀ ಬಸವರಾಜ ಬೊಮ್ಮಾಯಿ:–** ಈ ತನಿಖೆಯ Interim Report ಬಂದ ತಕ್ಷಣ ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಇದನ್ನು ಎಷ್ಟು ದಿನದೊಳಗೆ ಮಾಡುತ್ತೀರಿ?

**ಶ್ರೀ ಬಸವರಾಜ ಬೊಮ್ಮಾಯಿ:–** ಈ ತನಿಖೆಯ Interim Report ಬಂದ ತಕ್ಷಣ ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ತಾವು ಈಗ ಎ.ಡಿ.ಜಿ.ಪಿ., ಯವರಿಗೆ ಹೇಳುತ್ತೇವೆ ಮತ್ತು ಈ ಅಧಿಕಾರಿಗಳ ಮೇಲೆ ವಿಶೇಷವಾದ ವರದಿಯನ್ನು ಸಲ್ಲಿಸುತ್ತೇವೆ ಎಂದು ತಿಳಿಸಿದ್ದೀರಿ. ತಮ್ಮ Intelligence wing ಗೆ ಈ ವರದಿಯನ್ನು ಕೊಡುವುದಕ್ಕೆ ಎಷ್ಟು ದಿನಗಳು ಬೇಕು ಸ್ವಾಮಿ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರೇ, ಇದನ್ನು ನಮಗೆ ಬಿಡಿ. Interim Report ಬಂದ 24 ಗಂಟೆಯಲ್ಲಿ ಕ್ರಮ ಜರುಗಿಸುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, Interim Report ಏನಾದರೂ 5 ವರ್ಷಕ್ಕೆ ಬಂದರೆ, . . .

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, Interim Report ಯಾವಾಗ ಬರುತ್ತದೆ ಎಂದರೆ, ಅದನ್ನು ಕೂಡಲೇ ಕೊಡುವುದಕ್ಕೆ ಹೇಳಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ಇದು ಯಾವಾಗ, ಅದು ಎಷ್ಟು ದಿನದಲ್ಲಿ ಬರುತ್ತದೆ ಎಂಬುದನ್ನು ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರೇ, ತಾವು ಸರ್ಕಾರವನ್ನು ದಿನಾಂಕ ನಿಗದಿ ಮಾಡಬೇಕೆಂದು ಕೇಳುತ್ತಿದ್ದೀರೇನು?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಸ್ವಾಮಿ, ತಾವು ಗೃಹ ಸಚಿವರು. ಇಂತಹ ಒಂದು ಪ್ರಕರಣದ ಬಗ್ಗೆ ಇಷ್ಟು ಸಮಯದೊಳಗೆ ಮಾಡಬೇಕೆಂದು ತಮಗೆ ಗೊತ್ತಿರಬೇಕು. ತಾವು ಒಬ್ಬ ಗೃಹ ಸಚಿವರಾಗಿ . . .

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ತನಿಖೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದು ಸರಿಯೇ? ಮಾನ್ಯ ಗೃಹ ಸಚಿವರೇ, ತನಿಖೆ ಇಷ್ಟು ಸಮಯದೊಳಗೆ ಆಗುತ್ತದೆ ಎನ್ನುವುದು ಎಷ್ಟು ಸರಿ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ತೇಜಸ್ವಿನಿಗೌಡರವರೇ, ಮಾನ್ಯ ಗೃಹ ಸಚಿವರು . . .

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಅಧಿಕಾರಿಗಳಿಗೆ ಮತ್ತು Investigating Agencies ಗೆ ತನಿಖೆ ಮಾಡಲು ಮುಕ್ತವಾದ ಅವಕಾಶ ಕೊಡಬೇಕು.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸದಸ್ಯರಾದ ತೇಜಸ್ವಿನಿಗೌಡರವರೇ, ತಾವು ಕುಳಿತುಕೊಳ್ಳಿ. ಇದರ ಬಗ್ಗೆ defend ಮಾಡುವಂತಹ ಶಕ್ತಿ ನನಗೆ ಇದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಗೃಹ ಸಚಿವರೇ, ತಮ್ಮ ಸಾಮರ್ಥ್ಯ ಏನು ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಮರಿತಿಬ್ಬೇಗೌಡರವರೇ, ತಮ್ಮ ಕಳಕಳಿ ನಮಗೆ ಅರ್ಥವಾಗುತ್ತದೆ. ನಾನು ಬೇರೆ ಯಾವುದಕ್ಕೂ ಕಾಯುವುದಿಲ್ಲ. ವರದಿ ಬಂದ 24 ಗಂಟೆಯೊಳಗೆ ಕೂಡಲೇ ಕ್ರಮ ಜರುಗಿಸುತ್ತೇನೆ. ಇದರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜೊತೆಗೆ N.I.A. (National Investigation Agency) ಗೆ ಕೊಡಬೇಕೆಂದು ಹೇಳುತ್ತಾರೆ. ನಾವು ಯಾವುದೇ ಒಂದು ಪ್ರಕರಣದ ಬಗ್ಗೆ ತನಿಖೆ ಪ್ರಾರಂಭ ಮಾಡಿ ಪ್ರಾಥಮಿಕ ಹಂತದಲ್ಲಿಯೇ ನಾವು ತನಿಖೆ ಮಾಡುವಾಗ Unlawful Activities (Prevention) Act, Anti-Terrorism Act ಏನಿದೆ, ಅದರ ಅಡಿಯಲ್ಲಿ ಏನಾದರೂ ವಿಷಯಗಳು ಬಂದಾಗ ಮತ್ತು ಅದರ ವ್ಯಾಪ್ತಿ ದೊಡ್ಡದಿದ್ದಾಗ ಖಂಡಿತವಾಗಿಯೂ ನಾವು N.I.A. ಗೆ ಕೊಡುತ್ತೇವೆ. ಈಗ ಇದರ ಬಗ್ಗೆ ತನಿಖೆಯಾಗುತ್ತಿದೆ. ಈ ತನಿಖೆಯಲ್ಲಿ ಏನು ವರದಿ ಬರುತ್ತದೆ ಎಂಬುದನ್ನು ನೋಡಿಕೊಂಡು, ಮುಂದಿನ ತೀರ್ಮಾನವನ್ನು ಮಾಡುತ್ತೇವೆಯೇ ಹೊರತಾಗಿ ನಮ್ಮ ಪೊಲೀಸ್‌ನವರೇ ಬೇಕಾದಷ್ಟು competent ಇದ್ದಾರೆ. ಇವತ್ತಿನ ದಿವಸ ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿಯಲ್ಲಿ ಎಲ್ಲಾ ಪ್ರಕರಣಗಳನ್ನು N.I.A. ಗೆ ಕೊಟ್ಟಿಲ್ಲ. ಕೇವಲ ಎರಡು ಎಫ್.ಐ.ಆರ್.,ಗಳನ್ನು ಮಾತ್ರ N.I.A. ಗೆ ಕೊಟ್ಟಿದ್ದೇವೆ. ಉಳಿದೆಲ್ಲಾ ನಮ್ಮ ಪೊಲೀಸ್‌ನವರೇ ತನಿಖೆ ಮಾಡುತ್ತಿದ್ದಾರೆ. ಆದ್ದರಿಂದ, ಖಂಡಿತವಾಗಿಯೂ, if it amounts to any higher enquiry, Unlawful Activities (Prevention) Act ಅಡಿಯಲ್ಲಿ ಬರುವಂತಹದ್ದು ಇದ್ದರೆ, ನಾನು ಹಿಂದೆ ಮುಂದೆ ನೋಡುವುದಿಲ್ಲ. ಅದನ್ನು ಖಂಡಿತವಾಗಿಯೂ ಮಾಡುತ್ತೇವೆ. ಅದರಲ್ಲಿ ಎರಡನೇ ಮಾತಿಲ್ಲ. We have got an open mind. ಅದರ ಬಗ್ಗೆ ನಮಗೆ open mind ಇದೆ. ನಾವು ಯಾವುದೇ ಕಾರಣಕ್ಕೂ ಈ ತನಿಖೆಯಲ್ಲಿ ಏನು ಬರುತ್ತದೆ ಎಂಬುದರ ಆಧಾರದ ಮೇಲೆ ಹೆಚ್ಚುವರಿ ತನಿಖೆಗೆ ಕೊಡುವಂತಹ ಅವಕಾಶವಿದ್ದರೆ ನಾವು ಖಂಡಿತವಾಗಿಯೂ ಕೊಡುತ್ತೇವೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಅಂತರ್‌ರಾಜ್ಯದ ಬಗ್ಗೆ . . .

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಎಸ್.ರವಿಯವರೇ, ಒಂದು ನಿಮಿಷ. ಅಂತರ್‌ರಾಜ್ಯ ಅಲ್ಲ, ಮಾನ್ಯ ಸದಸ್ಯರು ಅಂತರ್‌ರಾಜ್ಯ raid ಬಗ್ಗೆ ಕೇಳಿದ್ದಾರೆ. ಈಗ ನಮ್ಮ ರಾಜ್ಯದವರೇ ಅಲ್ಲಿಗೆ ಹೋಗಿ raid ಮಾಡಿದ್ದಾರೆ. ಅದಕ್ಕೆ ಯಾವುದೇ ನಿರ್ಬಂಧ ಇಲ್ಲ. ಈಗಾಗಲೇ ನಮ್ಮವರೇ ಅಲ್ಲಿಗೆ ಹೋಗಿ ಆಂಧ್ರಪ್ರದೇಶ ಪೊಲೀಸ್‌ನವರ ಸಹಕಾರ ತೆಗೆದುಕೊಂಡು raid ಮಾಡಿದ್ದಾರೆ. ಹೀಗಾಗಿ ಇಲ್ಲಿ ಅಂತರ್‌ರಾಜ್ಯದ ಪ್ರಶ್ನೆ ಬರುವುದಿಲ್ಲ. ನಮ್ಮ ರಾಜ್ಯದವರು ಹೋಗಿ ಎಲ್ಲಿ ಬೇಕಾದರೂ ಅರೆಸ್ಟ್ ಮಾಡಬಹುದು. ಸಾಕಷ್ಟು drug peddlers ಅನ್ನು ಮುಂಬೈ ಮತ್ತು ಚೆನ್ನೈನಲ್ಲಿ raid ಮಾಡಿದ್ದೇವೆ. ಹೀಗಾಗಿ ಅಂತರ್‌ರಾಜ್ಯದ ಪ್ರಶ್ನೆ ಬರುವುದಿಲ್ಲ. ಯಾವುದೇ ರಾಜ್ಯಕ್ಕೆ ಹೋದರೂ ಕೂಡ ಸರಿಯಾದಂತಹ ದಾಖಲೆ ಮತ್ತು ವಾರೆಂಟ್ ತೆಗೆದುಕೊಂಡು ಹೋದಾಗ ನಮಗೆ ಸಹಕಾರ ಸಿಕ್ಕೇ ಸಿಗುತ್ತದೆ. ಆ ಕೆಲಸವನ್ನು ಕೂಡ ಮಾಡುತ್ತೇವೆ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಲ್ಲಿ ಸಹಕಾರ ಕೊಟ್ಟಿದ್ದಾರೆಯೇ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ, ಸಹಕಾರ ಕೊಟ್ಟಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಹಕಾರ ಕೊಡದೇ ಇದ್ದರೆ . . .

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ, ನಾನು ಇದರ ಬಗ್ಗೆ ಹೇಳುತ್ತೇನೆ. ಕೇಳಿ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಚಿವರೇ, ನಾನು ಒಂದು ಮಾತನ್ನು ಹೇಳುತ್ತೇನೆ. ನಮ್ಮ ರಾಜ್ಯದವರು ಅಲ್ಲಿಗೆ ಹೋದಾಗ . . .

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಆರ್.ಬಿ.ತಿಮ್ಮಾಪೂರರವರೇ, ಆ ರಾಜ್ಯದವರು ಇಲ್ಲಿಗೆ ಬಂದು ಕ್ರಿಮಿನಲ್ಸ್ ಅನ್ನು ಅರೆಸ್ಟ್ ಮಾಡುವಾಗ ನಾವು ಸಹಕಾರ ಕೊಟ್ಟಿರುತ್ತೇವೆ. ಆ ರಾಜ್ಯದಲ್ಲಿ ನಮ್ಮ ಕ್ರಿಮಿನಲ್ಸ್ ಸಿಕ್ಕಾಗ ನಾವು ಅವರನ್ನು ಅರೆಸ್ಟ್ ಮಾಡಬೇಕಾಗುತ್ತದೆ. ಈ ರೀತಿ ಅದಕ್ಕೆ ಒಂದು procedure ಇದೆ. ಆ procedure ಪ್ರಕಾರ ಹೋದರೆ ಖಂಡಿತವಾಗಿಯೂ ಆಗುತ್ತದೆ. ಈಗ ಡಿ.ಜಿ.ಯವರ ಹಂತದಲ್ಲಿಯೇ ಮಾತನಾಡಿ, ಇದಕ್ಕೆ ಆಂಧ್ರಪ್ರದೇಶದ ಪೊಲೀಸ್‌ನವರು ಸಹಕಾರ ಕೊಟ್ಟಿದ್ದಾರೆ. ಇಲ್ಲದಿದ್ದರೆ ನಾವು seize ಮಾಡುವುದಕ್ಕೆ ಆಗುತ್ತಿರಲಿಲ್ಲ. ಈಗ further investigation ಗೂ ಕೂಡ ಸಹಕಾರ ಕೊಡುತ್ತೇವೆ ಎಂದು ಹೇಳಿದ್ದಾರೆ. ಹೀಗಾಗಿ ಅದರಲ್ಲಿ ಯಾವುದೇ ಅನುಮಾನ ಇಲ್ಲ. ಅದನ್ನು ನಾವು ಮಾಡುತ್ತೇವೆ. ಮತ್ತೆ ಚೆಕ್ ಪೋಸ್ಟ್‌ನಲ್ಲಿ Intelligence failure ಏಕೆ ಆಯಿತು? ಯಾರಿಂದ ಆಯಿತು? ಎಲ್ಲೆಲ್ಲಿ ಆಯಿತು? ಅದರ ಬಗ್ಗೆಯೂ ಕೂಡ ತನಿಖೆ ಮಾಡಿಸುತ್ತಿದ್ದೇನೆ. ಅಲ್ಲಿ ಯಾರ್‍ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆಯೂ ಕೂಡ ಕ್ರಮ ಜರುಗಿಸುತ್ತೇವೆ. ಇದರಲ್ಲಿ right from procurement ನಿಂದ, storage ನಿಂದ explosion ಆಗುವವರೆಗೂ ಎಲ್ಲೆಲ್ಲಿ ಲೋಪದೋಷಗಳು ಆಗಿವೆ, ಅದರ ಬಗ್ಗೆಯೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಗಣಿಗಾರಿಕೆಯಲ್ಲಿ ಎಲ್ಲೆಲ್ಲಿ ಉಲ್ಲಂಘನೆಯಾಗಿದೆ? ಏನೇನು ಆಗಿದೆ? ಇದಕ್ಕೆ ಸ್ಥಳೀಯವಾಗಿ ಯಾರು ಬೆಂಬಲ ಕೊಡುತ್ತಾರೆ? ಯಾರ nexus ಇದೆ. ಯಾವುದನ್ನೂ ಕೂಡ ಮುಚ್ಚಿಡದೇ ನಾವು ಸಂಪೂರ್ಣವಾಗಿ ತನಿಖೆಯನ್ನು ಖಂಡಿತವಾಗಿಯೂ ಮಾಡಿಸುತ್ತೇವೆ. ಇದರಲ್ಲಿ ಯಾವುದೇ ಮುಲಾಜು ಇಲ್ಲ. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ.

(ಮುಂದು)

**(88) 02/02/2021/5:10/ಎಸ್‌ಪಿಆರ್/ಬಿಎನ್‌ಎಸ್**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷದಲ್ಲಿ ನಾನು ಸ್ಪಷ್ಟೀಕರಣವನ್ನು ಕೇಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ನನಗೆ ಉತ್ತರವನ್ನು ನೀಡಲು ಅವಕಾಶವನ್ನು ನೀಡಿ. ವಿರೋಧ ಪಕ್ಷದ ಸದಸ್ಯರು ಅವರ ಅಸ್ತ್ರವನ್ನು ಅವರ ಬಳಿ ಇಟ್ಟುಕೊಳ್ಳಲಿ. ಇದರಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಮುಲಾಜು ಇಲ್ಲದೇ ತನಿಖೆಯನ್ನು ನಡೆಸುವಂತೆ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಮುಂದುವರೆದು ಯಾವುದೇ ಅಧಿಕಾರಿಗೆ ಯಾವುದೇ ರೀತಿಯ ಶಿಕ್ಷೆಯನ್ನು ಕೊಡಬೇಕು; ಎಲ್ಲವನ್ನೂ ಕೊಡಿಸಬೇಕೆಂದೂ ಸಹ ಹೇಳಿದ್ದಾರೆ. ಅಷ್ಟೇ ಅಲ್ಲದೇ ಸ್ಫೋಟಕ ವಿಚಾರದಲ್ಲಿ ಖಂಡಿತವಾಗಿಯೂ ಸಹ the Explosive Substances Act ಪ್ರಕಾರ ನಾವು ಕಲಂಗಳನ್ನು ನಮೂದಿಸಿದ್ದೇವೆ. ಸಾಕ್ಷಿ ದೊರೆಯಬೇಕೆಂಬ ಕಾರಣಕ್ಕಾಗಿ ಇದರ ಜೊತೆಗೆ ಭಾರತೀಯ ದಂಡ ಸಂಹಿತೆಯ ಕಲಂ 304 ರ ಕಲಂನ್ನೂ ಸಹ ನಮೂದಿಸಲಾಗಿದೆ. 304 ಕಲಂ ನ್ನು 302 ಕಲಂ ರನ್ನಾಗಿ ಪರಿವರ್ತಿಸಲೂ ಸಹ ನಾವು ಸಿದ್ಧರಿದ್ದೇವೆ. ಈ ಘಟನೆಯಲ್ಲಿ ಸಂಭವಿಸಿದೆ ಸಾವನ್ನು murder ಎಂದು convert ಮಾಡಲು ನಾವು ಸಿದ್ಧರಿದ್ದೇವೆ. We have got an open mind. ಆದ್ದರಿಂದ ಇದರಲ್ಲಿ ಯಾರನ್ನೂ ಸಹ ರಕ್ಷಣೆ ಮಾಡುವ ಪ್ರಶ್ನೆ ಇಲ್ಲ. ಇದು ನಿಲ್ಲಬೇಕು. ಈ ಪ್ರಕರಣವು ಮುಂದಿನ ಎಲ್ಲಾ ಅಕ್ರಮ ಗಣಿಗಾರಿಕೆ ಚಟುವಟಿಕೆಗಳು ಸಂಪೂರ್ಣವಾಗಿ ನಿಲ್ಲುವುದಕ್ಕಾಗಿ ನಾಂದಿಯಾಗಬೇಕು ಎನ್ನುವ ರೀತಿಯಲ್ಲಿ ನಮ್ಮ ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಗಣಿ ಮತ್ತು ಭೂವಿಜ್ಞಾನ ಸಚಿವರಿಗೆ ನಿನ್ನೆಯ ದಿನ ನಾನು ಪ್ರಶ್ನೆಯೊಂದನ್ನು ಕೇಳಿದ್ದೆನು. ನನಗೆ ಬಂದ ಮಾಹಿತಿಯ ಪ್ರಕಾರ ಈಗಾಗಲೇ ತಹಸೀಲ್ದಾರ್ ಅಧಿಕಾರಿಯೊಬ್ಬರ ಹೆಸರನ್ನು ಹೇಳಿದ್ದೆನು. ನಾನು ಕೇವಲ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರವೇ ಮಾತನಾಡುತ್ತಿಲ್ಲ. ಯಾರು rowdy sheeter ಗಳಿದ್ದಾರೆ, ಅವರುಗಳು ಪಾರ್ಟಿಗಳನ್ನು ಮಾಡಿಕೊಂಡು ಗಣಿಗಾರಿಕೆಯನ್ನು ಮಾಡುತ್ತಾರೆ ಅವರುಗಳ ಜೊತೆ ಇವರುಗಳು ಸೇರಿಕೊಳ್ಳುತ್ತಾರೆ. ಇದರ ಬಗ್ಗೆ ಸಚಿವರು ಯಾವುದೇ ಉತ್ತರವನ್ನು ನೀಡಿಲ್ಲ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ ನೀವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಉತ್ತರ ನೀಡಿದ ಮೇಲೆ, ಪುನಃ ವಿರೋಧ ಪಕ್ಷದ ನಾಯಕರು ಮಾತನಾಡುವುದು . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟೀಕರಣವನ್ನು ಕೇಳುತ್ತೇನೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಗೃಹ ಸಚಿವರೇ ನಾನು ಆ ಅಂಶವನ್ನು ಕೇಳಲಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟೀಕರಣವನ್ನು ಕೇಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ಉತ್ತರ ನೀಡಿದ ಮೇಲೆ ವಿರೋಧ ಪಕ್ಷದ ನಾಯಕರು ಪುನಃ ಸ್ಪಷ್ಟೀಕರಣ ಕೇಳುವುದು ಎಷ್ಟರ ಮಟ್ಟಿಗೆ ಸರಿ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ಸದಸ್ಯರು ಮಾತನಾಡಿದ ನಂತರ ಸ್ಪಷ್ಟೀಕರಣವನ್ನು ಕೇಳಿ...

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಇದು ಹೇಗೆ? ವಿರೋಧ ಪಕ್ಷದ ನಾಯಕರು ಆವಾಗಲೇ ಸ್ಪಷ್ಟೀಕರಣವನ್ನು ಕೇಳಬಹುದಾಗಿತ್ತು. ಮಾನ್ಯ ಸಭಾಪತಿಯವರು ಅವರಿಗೆ ಮೊದಲು ಮಾತನಾಡಲು ಅವಕಾಶವನ್ನು ನೀಡಿ, ಸದಸ್ಯರು ಮಾತನಾಡುತ್ತಾರೆಂದು ತಿಳಿಸಿದರು. ನಾನು ಎಲ್ಲಾ ಉತ್ತರವನ್ನು ನೀಡಿದ ಮೇಲೆ ವಿರೋಧ ಪಕ್ಷದ ನಾಯಕರು ಈಗ ಸ್ಪಷ್ಟೀಕರಣವನ್ನು ಕೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೊನೆಯಲ್ಲಿ ನನಗೆ ಮಾತನಾಡುವಂತೆ ಸಭಾಪತಿಯವರು ತಿಳಿಸಿದರು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, this is a new tradition.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೊನೆಯಲ್ಲಿ ನನಗೆ ಮಾತನಾಡುವಂತೆ ಸಭಾಪತಿಯವರು ತಿಳಿಸಿದ್ದರಿಂದ ನಾನು ಕೊನೆಯಲ್ಲಿ ಮಾತನಾಡುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನನಗೆ ಉತ್ತರ ಕೊಡಲು ಅವಕಾಶ ನೀಡದೇ, ಮೊದಲು ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನಂತರದಲ್ಲಿ ನಾನು ಉತ್ತರವನ್ನು ಕೊಡುತ್ತಿದ್ದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿದ ಉತ್ತರವನ್ನೆಲ್ಲವನ್ನೂ ನಾನು ಕೇಳಿದ್ದೇನೆ. ಅದೇ ರೀತಿಯಾಗಿ ಸದಸ್ಯರು ಕೇಳಿರುವ ಪ್ರಶ್ನೆಗಳನ್ನು ಹಾಗೂ ನೀವು ನೀಡಿರುವ ಸ್ಪಷ್ಟೀಕರಣಗಳೆಲ್ಲವನ್ನೂ ಸಹ ನಾನು ಕೇಳಿದ್ದೇನೆ. ಆ ನಂತರದಲ್ಲಿ ಸಚಿವರಿಗೆ ನಾನು ನನ್ನ ವಿಚಾರಗಳನ್ನು ಹೇಳಲು ಬಯಸಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಬೇಗನೇ ಸ್ಪಷ್ಟೀಕರಣವನ್ನು ಕೇಳಲಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ವಿಷಯದ ಆಳಕ್ಕೆ ಹೋಗುವುದಿಲ್ಲ. ಏಕೆಂದರೆ ಒಂದು ಘಂಟೆಯವರೆಗೆ ಈ ವಿಷಯದ ಮೇಲೆ ನಾನು ಸುದೀರ್ಘವಾಗಿ ಈಗಾಗಲೇ ಮಾತನಾಡಿದ್ದೇನೆ; ಅವುಗಳನ್ನು ಪುನರಾವರ್ತಿಸುವುದಿಲ್ಲ. ನನ್ನ ಸಹ ಸದಸ್ಯರು ಈ ವಿಷಯದಲ್ಲಿ ಕೇಳಿರುವ ಸ್ಪಷ್ಟೀಕರಣದ ಬಗ್ಗೆಯೂ ಸಹ ನಾನು ಮಾತನಾಡುವುದಿಲ್ಲ. ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರು ತಮ್ಮ ಆತಂಕವನ್ನು ಸರ್ಕಾರದ ಮುಂದೆ ವ್ಯಕ್ತಪಡಿಸಿದಾಗ, ನಮ್ಮ ಮುಖ್ಯವಾದ ಬೇಡಿಕೆ ಏನಿತ್ತೆಂದರೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಕೆಲವು ಸುಧಾರಣೆ ಬಗ್ಗೆ ತಿಳಿಸಿದ್ದಾರೆ. ಆ ಪೈಕಿ ವಿಶ್ವವಿದ್ಯಾಲಯದ establishment ಬಗ್ಗೆ ಮತ್ತು ಇನ್ನು ಮುಂದೆ ಆಗತಕ್ಕ ಕೆಲವು ಅನಾಹುತಗಳನ್ನು ತಪ್ಪಿಸುವುದಕ್ಕಾಗಿ ಅಗತ್ಯ ಕ್ರಮಗಳನ್ನು ಜರುಗಿಸುವುದಾಗಿ ತಿಳಿಸಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಇಲ್ಲಿ ಮೂಲಭೂತವಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ high explosives, ಅವುಗಳು gelatin, detonator ಅವುಗಳಿಗಿಂತ ಹೆಚ್ಚು ಬೂಸ್ಟರ್, powerful ಎನ್ನುತ್ತಾರೆ. ಏಕೆಂದರೆ ಸದರಿ ಸ್ಫೋಟಕವು ರಾಜ್ಯದ ಐದು ಜಿಲ್ಲೆಗಳನ್ನು ಗಡಗಡ ಎಂದು ನಡುಗಿಸಿದೆ. ಕೇವಲ gelatin, detonator ಸ್ಫೋಟಗೊಂಡಿದ್ದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಅನಾಹುತವಾಗುತ್ತಿರಲಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಶಿವಮೊಗ್ಗ ಜಿಲ್ಲೆಯ ಸುತ್ತಮುತ್ತಲಿನ ಐದು ಜಿಲ್ಲೆಗಳಾದ ಚಿಕ್ಕಮಗಳೂರು, ಹಾವೇರಿ, ದಾವಣಗೆರೆ, ಉಡುಪಿ ಮತ್ತು ಕಾರವಾರ ಜಿಲ್ಲೆಗಳ ಭೂಮಿಯು ಕಂಪಿಸಿದೆ. ಇದರರ್ಥ ಅಷ್ಟು ಪ್ರಮಾಣದ high explosive ಗಳು ಅಲ್ಲಿ ಬಳಕೆಯಾಗಿವೆ. ನಮಗಿರುವ ಆತಂಕದ ಬಗ್ಗೆ ನಾನು ಈ ಹಿಂದೆ ಮಾತನಾಡುವ ಸಂದರ್ಭದಲ್ಲಿ ಹೇಳಿದ್ದೆನು. ಆದರೂ ಸಹಃ ಪುನಃ ಹೇಳುವ ಅಂಶವೇನೆಂದರೆ, ಸದರಿ ಸ್ಫೋಟಕಗಳು ಕೇವಲ ಗಣಿಗಾರಿಕೆಗೆ ಮಾತ್ರವೇ ಉಪಯೋಗಿಸುತ್ತಾರೆಯೋ ಅಥವಾ ಬೇರೆ ಇನ್ಯಾವುದೇ ವಿಧ್ವಂಸಕ ಕೃತ್ಯ ಎಸಗುವ ವ್ಯಕ್ತಿಗಳಿಗೆ ಇವುಗಳು ದೊರೆತರೆ, ಈ ದೇಶದ ಐಕ್ಯತೆ, ಭದ್ರತೆ ಮತ್ತು ಅಖಂಡತೆಗೆ ಸವಾಲು ಆಗುವಂತಹ ಆತಂಕವಾದಿಗಳ ಕೈಗೆ ಇಂತಹ high explosives ದೊರೆತರೆ, ಏನು ಬೇಕಾದರೂ ಆಗಬಹುದು. ಈ ವಿಷಯದಲ್ಲಿ ನಮಗೆ ಇರುವ ಆತಂಕವೇನೆಂದರೆ, ಘಟನೆ ನಡೆದ ಭೌಗೋಳಿಕ ವ್ಯಾಪ್ತಿಯು ಕರ್ನಾಟಕ ರಾಜ್ಯದಲ್ಲಿ ಆಗಿದ್ದಲ್ಲ. Contraband

goods ನೆರೆಯ ಆಂಧ್ರಪ್ರದೇಶ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ ದೊರೆತಿವೆ. ನೆರೆಯ ರಾಜ್ಯದ ಅನಂತಪುರ ಜಿಲ್ಲೆಯಿಂದ ನಮ್ಮ ರಾಜ್ಯದ ಶಿವಮೊಗ್ಗ ಜಿಲ್ಲೆಗೆ ಸ್ಫೋಟಕಗಳು ಬಂದಿವೆ. ಈ ಮಧ್ಯದಲ್ಲಿ ಬರುವ ಅನೇಕ ತಪಾಸಣಾ ಕೇಂದ್ರ ಹಾಗೂ ಪೊಲೀಸ್ ಠಾಣೆಗಳನ್ನು ಸ್ಫೋಟಕಗಳು ದಾಟಿಕೊಂಡು ಬಂದಿವೆ. ಇಂತಹ ಸಂದರ್ಭದಲ್ಲಿ ರಾಜ್ಯ ವೃಂದದ ಎ.ಡಿ.ಜಿ.ಪಿ. ಶ್ರೇಣಿಯ ಅಧಿಕಾರಿಯನ್ನು ಸರ್ಕಾರವು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿದೆ. ತನಿಖೆಯ ಸಂಬಂಧ ನೆರೆಯ ರಾಜ್ಯಕ್ಕೆ ಹೋದಾಗ ಅಲ್ಲಿನ ಅಧಿಕಾರಿಗಳು ಸಹಕಾರ ನೀಡಿದ್ದಾಗಿ ಹಾಗೂ ಅಲ್ಲಿನ ವಸ್ತುಗಳನ್ನು ಜಪ್ತಿ ಮಾಡಿರುವುದಾಗಿ ಸಚಿವರು ತಿಳಿಸಿದರು. ಆದರೆ, ಇವತ್ತಿನ ದಿವಸ ರಾಜ್ಯ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರ ಮುಖಾಂತರ ಈ ಪ್ರಕರಣ ತನಿಖೆಯನ್ನು ನಡೆಸಿದರೆ, he will have jurisdiction over all States. ಏಕೆಂದರೆ ಅವರು ಉಚ್ಚ ನ್ಯಾಯಾಲಯದ ನ್ಯಾಯಾಂಗ ಅಧಿಕಾರಿಯಾಗಿರುತ್ತಾರೆ. He can summon anybody. ಸದರಿ ತನಿಖೆಯು ಪೊಲೀಸ್ ಅಧಿಕಾರಿ ಮಾಡುವ ತನಿಖೆಗಿಂತ ಹೆಚ್ಚು ಪರಿಣಾಮಕಾರಿಯಾಗಿ ಆಗುತ್ತದೆ. ಇತಿಹಾಸದಲ್ಲಿಯೇ ಕಂಡರಿಯದ, ಕೇಳರಿಯದ 'ನ ಭೂತೋ ನ ಭವಿಷ್ಯತಿ' ಎನ್ನುವಂತಹ ದೊಡ್ಡ ಘಟನೆಯು ಇದಾಗಿದೆ. ನಮ್ಮ ಪುಣ್ಯಕ್ಕೆ ಇಂತಹ ಸ್ಫೋಟದಿಂದಾಗಿ ನಮ್ಮ ಯಾವುದೇ ಜಲಾಶಯಗಳಿಗೆ ಧಕ್ಕೆಯಾಗಿಲ್ಲ. ಇದರ ಬಗ್ಗೆ ಮುಂದಿನ ದಿನಗಳಲ್ಲಿ ತಿಳಿಯುತ್ತದೆ. ಇಂತಹ ಭಾರಿ ದೊಡ್ಡ ಪ್ರಮಾಣದ ಸ್ಫೋಟವು ಕೇವಲ ರಾಜ್ಯಕ್ಕೆ ಮಾತ್ರವಲ್ಲದೇ ಇಡೀ ದೇಶಕ್ಕೆ ಸಂದೇಶವೊಂದನ್ನು ನೀಡಿದೆ. ಇದಕ್ಕೆ ದೇಶದ ಪ್ರಧಾನ ಮಂತ್ರಿಗಳು ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತಾ, 'ಟ್ವೀಟ್' ಸಂದೇಶವನ್ನು ಕಳುಹಿಸಿದ್ದಾರೆ. ಅದೇ ರೀತಿಯಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಹಿಂದಿನ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧೀರವರೂ ಸಹ 'ಟ್ವೀಟ್' ಮಾಡಿದ್ದಾರೆ. ಅಂದರೆ ಇದರರ್ಥ, ಸದರಿ ಘಟನೆಯು ರಾಷ್ಟ್ರಮಟ್ಟದ ನಾಯಕರ ಗಮನವನ್ನು ಸೆಳೆದಿದೆ. ಇಂತಹ ಘಟನೆಯನ್ನು ನಮ್ಮ ರಾಜ್ಯದ ಪೊಲೀಸ್ ಅಧಿಕಾರಿಯೋರ್ವರ ಮುಖಾಂತರ ತನಿಖೆ ನಡೆಸುವುದಾಗಿ ಸರ್ಕಾರವು ನಿರ್ಣಯವನ್ನು ಕೈಗೊಂಡಿದೆ. ಇದರ ಬಗ್ಗೆ ನಾವು ಏನೆಂದು ತಿಳಿದುಕೊಳ್ಳಬೇಕು. ಅಕ್ರಮ ಗಣಿಗಾರಿಕೆಯ ವಿಚಾರಣೆಗೆ ಸಂಬಂಧಪಟ್ಟಂತೆ ಕಂದಾಯ ಆಯುಕ್ತರನ್ನು ಸರ್ಕಾರವು ನೇಮಿಸಿದೆ. ಮಂತ್ರಿಗಳು ತಿಳಿಸಿದಂತೆ, ರಾಜ್ಯದಲ್ಲಿ ಈಗಾಗಲೇ ಸಾಕಷ್ಟು ಅಕ್ರಮ ಗಣಿಗಾರಿಕೆಯು ನಡೆಯುತ್ತಿದೆ. ರಾಜ್ಯದ ತುಂಬಾ ಕಾನೂನು ಬಾಹಿರವಾದ ಕಲ್ಲುಗಣಿಗಾರಿಕೆಯು ನಡೆಯುತ್ತಿದೆ ಎಂದು ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಕಂದಾಯ ಆಯುಕ್ತರು ಇದರ ಬಗ್ಗೆ ವಿಚಾರಣೆಯನ್ನು ನಡೆಸಿ, ಅಕ್ರಮವನ್ನು ತಡೆಯಿಡಿಯುವುದಕ್ಕೆ ಸಾಧ್ಯವಿದೆಯೇ? ಇವತ್ತಿನ ದಿವಸ ಸದರಿ high explosives ಸಾಗಿ ಬಂದ ದಾರಿಯಲ್ಲಿ ಕರ್ತವ್ಯ ನಿರ್ವಹಿಸಿದ 10–15 ಅಧಿಕಾರಿಗಳನ್ನು ತತ್‌ಕ್ಷಣ ಅಂದರೆ ಇಷ್ಟುಹೊತ್ತಿಗಾದರೂ ಸೇವೆಯಿಂದ ಅಮಾನತ್ತಿನಲ್ಲಿಡಬೇಕಾಗಿತ್ತು. ಆದರೆ ಈ ಬಗ್ಗೆ ಇನ್ನೂ ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಂಡಿಲ್ಲ. ಆದರೆ, In respect of explosives, ADGP ಅನ್ನು ನೇಮಿಸಿದ್ದೇವೆ and in respect of illegal mining, Revenue Commissioner ಅನ್ನು ನೇಮಿಸಿದ್ದೇವೆ ಎಂಬುದಾಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವು ಹೇಳುತ್ತಿದೆ. ಇದು ಹೀಗೆ ಆದರೆ, ಗೋವಿಂದ! ಎನ್ನುವಂತಾಗುತ್ತದೆ. ಮಾನ್ಯ ತಿಮ್ಮಾಪೂರ ರವರು ಪ್ರಸ್ತಾಪಿಸಿದಂತೆ, ತಪ್ಪಿತಸ್ಥರನ್ನು ರಕ್ಷಣೆ ಮಾಡುವ ವಿಚಾರವಿದೆಯೇ; ಇಲ್ಲವೆಂದು ತಿಳಿದುಕೊಂಡರೆ, ಇಂತಹ ಅಧಿಕಾರಿಗಳಿಂದ ಪ್ರಕರಣದ ಕೂಲಂಕಷವಾದ ತನಿಖೆಯಾಗುವುದಕ್ಕೆ ಬಹಳ ಕಷ್ಟ. ಈ ವಿಚಾರವು ಸರ್ಕಾರಕ್ಕೂ ಸಹ ಅನಿಸಿದೆ. ಸರ್ಕಾರವು ಹಾಲಿ ನ್ಯಾಯಾಧೀಶರಿಂದ ವಿಚಾರಣೆಯನ್ನು ಏಕೆ ಮಾಡಿಸಿಲ್ಲ? ಸರ್ಕಾರಕ್ಕೆ ಏನಾದರೂ ತಪ್ಪಿತಸ್ಥರನ್ನು ರಕ್ಷಣೆ ಮಾಡುವ ವಿಚಾರವಿದೆಯೇ? ಈ ಪ್ರಕರಣದಲ್ಲಿ ಯಾರದ್ದೋ ಬೇನಾಮಿ ಇದೆ ಎಂದು ಮಾನ್ಯ ಎಸ್.ರವಿರವರು ಪ್ರಸ್ತಾಪಿಸಿದರು. ಈ ವಿಚಾರದಲ್ಲಿ ಸಾರ್ವಜನಿಕರು ಮಾತನಾಡಲು ಸರ್ಕಾರವು ಅವಕಾಶವನ್ನು ಏಕೆ ಮಾಡಿಕೊಡುತ್ತದೆ? ನಮ್ಮ ಸ್ನೇಹಿತರಾದ ಶ್ರೀ ಎಸ್.ರವಿ ಹಾಗೂ ಶ್ರೀ ಬಿ.ಕೆ.ಹರಿಪ್ರಸಾದ್‌ರವರು 'ರಾಷ್ಟ್ರೀಯ ತನಿಖಾ ದಳ'ದ ಬಗ್ಗೆ ಪ್ರಸ್ತಾಪಿಸಿದರು. ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ಈ ಪ್ರಕರಣದ ವಿಚಾರಣೆಯನ್ನು ಮಾಡಿಸಿದರೆ, he will have jurisdiction over all States. He can summon anybody, any officer. He can even summon any non-official also. ಇಂತಹ ದೊಡ್ಡ ದಂಧೆ ಮಾಡುವ ನಮ್ಮ ನೆರೆಯ ಆಂಧ್ರಪ್ರದೇಶ ರಾಜ್ಯದಲ್ಲಿರುವವರ ಕೈಗಳು ಬಹಳವಾಗಿ ಉದ್ದವಾಗಿರುತ್ತವೆ. ಶ್ರೀ ಆರ್.ಬಿ.ತಿಮ್ಮಾಪೂರರವರು ಪ್ರಸ್ತಾಪಿಸಿದಂತೆ, ಅವರುಗಳು ನಮ್ಮ ಅಧಿಕಾರಿಗಳ ತನಿಖೆಗೆ ಅಸಹಕಾರ ತೋರುವ ಸಾಧ್ಯತೆಗಳಿರುತ್ತವೆ. ನೆರೆಯ ರಾಜ್ಯದ ಅಧಿಕಾರಿಗಳು ಸಹಕಾರ ತೋರದಿರುವಂತಹ ಅನೇಕ ಘಟನೆಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ಇಂತಹ ದಂಧೆಯನ್ನು ಮಾಡುವ ಅವರುಗಳು ಬಹಳ ಪ್ರಭಾವಶಾಲಿಗಳಾಗಿರುತ್ತಾರೆ. ಇದನ್ನು ಸಾಮಾನ್ಯ ಜನರು ಮಾಡುವುದಿಲ್ಲ; ಅವರುಗಳು ದೊಡ್ಡ ತಿಮಿಂಗಲಗಳಾಗಿರುತ್ತಾರೆ. ದೇಶದ ಬೇರೆ ಬೇರೆ ರಾಜ್ಯಗಳಿಗೆ ಇಂತಹ high explosive ಗಳ ವಹಿವಾಟು ನಡೆಸಿ, ಅವುಗಳನ್ನು ಸಾಗಿಸುತ್ತಾರೆ ಎಂದರೆ, he must be a big kingpin. ನಮ್ಮ ರಾಜ್ಯದ ಅಧಿಕಾರಿಗಳು ನೆರೆಯ ರಾಜ್ಯಗಳಿಗೆ ಹೋಗಿ, ಅಂತಹವರನ್ನು 'ಅಪ್ಪಾ ಅಣ್ಣಾ' ಎಂದು ಹೇಳಿ ಅವರ 'ಗದ್ದ ಮತ್ತು ತುಟಿ'ಗಳನ್ನು ಹಿಡಿದು ಈ ಪ್ರಕರಣದ ವಿಚಾರಣೆಯನ್ನು ಮಾಡುವುದಕ್ಕೆ ಸಾಧ್ಯವಿದೆಯೇ? Is it possible? ನಮ್ಮ ರಾಜ್ಯದ ಆರೂವರೆ ಕೋಟಿ ಜನರು, in respect of explosives, ADGP ಅನ್ನು and in respect of illegal mining, Revenue Commissioner ಅನ್ನು ಸರ್ಕಾರವು ನೇಮಿಸಿದೆ ಎನ್ನುವುದನ್ನು ನೋಡಿದರೆ, ಈ ಸರ್ಕಾರದ ವಿಚಾರ ಬೇರೆ ಇದೆ; ಎಂದು ತಿಳಿದುಕೊಳ್ಳುತ್ತಾರೆ. ಇದರಲ್ಲಿ ತಪ್ಪಿತಸ್ಥರನ್ನು ರಕ್ಷಣೆ ಮಾಡುವ ಉದ್ದೇಶವಿರಬಹುದು ಅಥವಾ ತಿಪ್ಪೆ ಸಾರಿಸುವ ಕೆಲಸವನ್ನು ಸರ್ಕಾರವು ಮಾಡುತ್ತಿರಬಹುದು ಎನ್ನುವ ಭಾವನೆಯು ರಾಜ್ಯದ ಜನರಲ್ಲಿ ಮೂಡುತ್ತದೆ. ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿ ಎನ್ನುವ ಕಾರಣದಿಂದಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಸರ್ಕಾರವು ದಯಮಾಡಿ ಈ ವಿಚಾರವನ್ನು ಬದಲಾಯಿಸಬೇಕು. ಯಾವುದೇ ಎ.ಡಿ.ಜಿ.ಪಿ. ಅಥವಾ ಕಂದಾಯ ಆಯುಕ್ತರು ಈ ಪ್ರಕರಣದ ವಿಚಾರಣೆಯನ್ನು ಮಾಡುವುದು ಬೇಡ. Sitting Judge of the High Court can enquire into

this matter. ಆಗ ಮಾತ್ರವೇ ನಾವು ನ್ಯಾಯವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಪ್ರಕರಣದಲ್ಲಿ ಯಾವುದೇ ಆತಂಕವಾದಿಗಳ ಕೈವಾಡವಿದ್ದರೆ, ತನಿಖೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ ವಹಿಸುವ ಮಟ್ಟಕ್ಕೆ ನಾವೂ ಇನ್ನೂ ಸಹ ಮುಟ್ಟಿಲ್ಲ ಎಂಬುದಾಗಿ ಗೃಹ ಮಂತ್ರಿಗಳು ಮಾತನಾಡುವ ಸಂದರ್ಭದಲ್ಲಿ ತಿಳಿಸಿದರು.

**(ಮುಂದು)**

(89)/2–2–2021/5–20/ಎಲ್ಎಂ/ಜಿಆರ್

**ಶ್ರೀ ಎಸ್.ಆರ್.ಪಾಟೀಲ್(ಮುಂದು):**

ಇದನ್ನು N.I.A., ಗೆ ಕೊಡುವಂತಹ ಪರಿಸ್ಥಿತಿಗೆ ಇನ್ನು ನಾವು ಮುಟ್ಟಿರುವುದಿಲ್ಲ. ಅಂತಹ ಪರಿಸ್ಥಿತಿ ಬಂದರೆ ಆ ಕೆಲಸವನ್ನು ಮಾಡುತ್ತೇವೆ ಎಂದು ಮಾನ್ಯ ಗೃಹ ಸಚಿವರು ಹೇಳಿದ್ದಾರೆ. ಒಳ್ಳೆಯ ಆಲೋಚನೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಸದ್ಯಕ್ಕೆ ಈ ಕೇಸ್‌ನಲ್ಲಿ ತಮ್ಮದು ಸಾಚಾ, ಪಾರದರ್ಶಕ, ಪ್ರಾಮಾಣಿಕ ಮತ್ತು ಯಾವುದೇ ತಪ್ಪುಗಳನ್ನು ಮುಚ್ಚಿಡುವುದಿಲ್ಲ, ತಪ್ಪಿಸ್ಥರಿಗೆ ಶಿಕ್ಷೆ ಕೊಡುವಂತಹ ಸರ್ಕಾರ ಎನ್ನುವುದು ಜನರಿಗೆ ಸಂದೇಶ ಹೋಗಬೇಕಾದರೆ, ತಮ್ಮ ಮುಖಾಂತರ ಈ ಸರ್ಕಾರವನ್ನು ವಿನಂತಿಸಿಕೊಳ್ಳುವುದು, sitting Judge of the High Court, ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರ ಮುಖಾಂತರ ಇದರ enquiry ಮಾಡಬೇಕು. Enquiry ಮಾಡಿದರೆ ಸತ್ಯ ಏನು ಎನ್ನುವುದು ಹೊರಗೆ ಬರುತ್ತದೆ. ಮುಂದೆ ಈ ರೀತಿಯ ಘಟನೆಗಳು ನಡೆಯುವುದು ನಿಲ್ಲುತ್ತದೆ. ಇದು ನಡೆದಿರುವುದು ದೇಶದಲ್ಲಿಯೇ ದೊಡ್ಡ ಘಟನೆಯಾಗಿದೆ. ರಾಜ್ಯದಲ್ಲಿ ಅಲ್ಲ ದೇಶದಲ್ಲಿಯೇ ದೊಡ್ಡ ಘಟನೆಯಾಗಿದೆ. ಇದರ ಬಗ್ಗೆ ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರೆ ಟ್ವೀಟ್ ಮಾಡಿ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ರಾಹುಲ್ ಗಾಂಧಿಯವರು ಇದರ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ರಾಷ್ಟ್ರಮಟ್ಟದ ದೊಡ್ಡ–ದೊಡ್ಡ ನಾಯಕರು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ನೀವು ಒಬ್ಬ ಪೊಲೀಸ್ ಅಧಿಕಾರಿಯಿಂದ, ಒಬ್ಬ ಕಂದಾಯ ಅಧಿಕಾರಿಯಿಂದ ಇದನ್ನು enquiry ಮಾಡಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಏನಿದರ ಅರ್ಥ? What does it mean? ತಿಪ್ಪೆ ಸಾರಿಸುವ ಕೆಲಸವನ್ನು ಮಾಡುತ್ತಿದ್ದೀರಾ? ಮಾನ್ಯ ಬೊಮ್ಮಾಯಿಯವರೆ change your mind. ನೀವು ರಾಜ್ಯದ ಆರುವರೆ ಕೋಟಿ ಜನರಿಗೆ ಸಂದೇಶವನ್ನು ಕೊಡಬೇಕು, ಇಂತಹ ದೊಡ್ಡ ಘಟನೆಯಾದಾಗ ಇದನ್ನು ನಿಷ್ಪಕ್ಷಪಾತವಾದ ತನಿಖೆ ಮಾಡಿಸಲು, ಎರಡು ರಾಜ್ಯಗಳ ಮೇಲೆ jurisdiction ಇರುವಂತಹ, ನ್ಯಾಯವನ್ನು ಕಂಡು ಹಿಡಿಯಲು ಸಮರ್ಥವಾದ ವ್ಯಕ್ತಿ ಎಂದರೆ ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರಿಂದ ಇದನ್ನು enquiry ಮಾಡಿಸಿ. ತಾವು enquiry ಮಾಡುತ್ತೀರೊ ಇಲ್ಲವೊ ಅಷ್ಟೆ ಹೇಳಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು):–** ಮಾನ್ಯ ಸಭಾಪತಿಗಳೆ, ನಾವು ಏನು ಹೇಳಬೇಕು ಅದೆಲ್ಲವನ್ನು ಹೇಳಿದ್ದೇವೆ. ಇದರಲ್ಲಿ ಎರಡು ಭಾಗಗಳು ಇವೆ. ಒಂದು explosive. ಅದರ . . ..

Sri S.R.PATIL:- I want a straight answer from you.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಗಳೆ, ಉತ್ತರ ಹೇಳಿ ಎಂದ್ದಿದೀರಿ ನನ್ನ ಉತ್ತರ ಏನು ಎಂದರೆ, ಅದರ investigation ಆಗಬೇಕು ಜಟಿಡಣುಡಿಥಿ ಅಲ್ಲ. ಇದು Judicial Enquiry ಮಾಡಿಸುವುದಕ್ಕಿಂತ ಮೊದಲು ಇದರ investigation ಆಗಬೇಕು. Investigation can be done only by the Police Department. ಆದ್ದರಿಂದ explosives ಎಲ್ಲಿಂದ ಬಂತು, ಹೇಗೆ misuse ಆಯಿತು, ಹೇಗೆ mis transport ಆಗಿದೆ, ಇದರಲ್ಲಿ ಯಾರ್‍ಯಾರು ಭಾಗಿಗಳಾಗಿದ್ದಾರೆ, smuggle ಹೇಗೆ ಆಯಿತು, ಅದರ ಬಗ್ಗೆ investigation ಆಗಬೇಕು. ಅದಕ್ಕಾಗಿ ಎ.ಡಿ.ಜಿ.ಪಿ., ಯವರಿಗೆ ಕೊಡಲಾಗಿದೆ. ಇನ್ನೊಂದು violation of the law ಬೇಕಾದಷ್ಟು ಕಡೆ ಆಗಿದೆ. ಇಡೀ ರಾಜ್ಯದಲ್ಲಿರುವ violation of the law ಬಗ್ಗೆ ಸಂಬಂಧಪಟ್ಟ revenue authorities ರವರ ಕಡೆಯಿಂದ ಮಾಡಿಸುತ್ತೇವೆ. ಈಗ ನಮ್ಮ ನಿಲುವಿನಲ್ಲಿ ಯಾವುದೆ ಬದಲಾವಣೆ ಇಲ್ಲ. ಇದನ್ನು Judicial Enquiry ಯಿಂದ ಸತ್ಯ ಹೊರಗೆ ಬರುವುದಿಲ್ಲ. ಇವೆರಡೂ investigation ಮಾಡಿಸಿದರೆ ಮಾತ್ರ ಸತ್ಯ ಹೊರಗೆ ಬರುತ್ತದೆ. ಜನರಿಗೂ ಗೊತ್ತಿದೆ ಯಾರು ಪ್ರಾಮಾಣಿಕರು, ಯಾರ ಕಾಲದಲ್ಲಿ ಏನು ಆಗಿದೆ ಎಂದು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಈ ಸರ್ಕಾರಕ್ಕೆ ನ್ಯಾಯಾಂಗದ ಮೇಲೆ ವಿಶ್ವಾಸವಿಲ್ಲ. ಈ ಕೇಸ್‌ನ್ನು ಮುಚ್ಚಿ ಹಾಕುವಂತಹ ವಿಚಾರವನ್ನು ಇಟ್ಟುಕೊಂಡಿದ್ದಾರೆ. ಇಲ್ಲಿ ತಿಪ್ಪೇ ಸಾರಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಈ ಸರ್ಕಾರದ ಉತ್ತರವನ್ನು ನಾವು ಒಪ್ಪುವುದಿಲ್ಲ. ಈ ಉತ್ತರವನ್ನು ಧಿಕ್ಕರಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

**ಶ್ರೀ ಎಸ್.ರವಿ:–** ದುಷ್ಟರನ್ನು ರಕ್ಷಣೆ ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಇದು ನಿಮ್ಮ ಪಾಪದ ಕೂಸು, illegal mining ಗೆ ಅನುಮತಿ ಕೊಟ್ಟವರು ನೀವು. ಇವತ್ತಿನ ಸಾವುಗಳಿಗೆ ಹಿಂದಿನ ನಿಮ್ಮ ಸರ್ಕಾರದ ನಿರ್ಣಯಗಳೆ ಕಾರಣ, ನೀವು ಕೊಟ್ಟಿರುವ ಲೈಸೆನ್ಸ್‌ಗಳೆ ಕಾರಣ. ನಿಮ್ಮ ಪಾಪದ ಕೂಸನ್ನು ನಾವು ರಕ್ಷಣೆ ಮಾಡುತ್ತಿದ್ದೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಈ ಹಂತದಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಗಳೆ, ಎರಡು–ಮೂರು ವರ್ಷಗಳ ಹಿಂದೆ ಅಲ್ಲಿ explosive misuse ಆಗಿದೆ ಎಂದು ಕೇಸ್ ಆಗಿದೆ. ಅಂತಹವರಿಗೆ ಇವರ ಸರ್ಕಾರವಿದ್ದಾಗ ಲೈಸೆನ್ಸ್ ಕೊಟ್ಟಿದ್ದಾರೆ. ಅಲ್ಲಿ 20 ವರ್ಷಗಳಿಂದ illegal mining ಆಗುತ್ತಿದೆ, ಇವರದೇ ಸರ್ಕಾರವಿತ್ತು, ಮುಖ್ಯಮಂತ್ರಿಗಳು ಇದ್ದರು, ಮಂತ್ರಿಗಳು ಇದ್ದರು, ಆಡಳಿತ ಪಕ್ಷದ ಶಾಸಕರು ಇದ್ದರು, ಆ ಸಂದರ್ಭದಲ್ಲಿ ಪ್ರಾರಂಭವಾಗಿದೆ. ಈಗ ನಿಂತ ಲಾರಿಯಿಂದ exposition ಆಗಿದೆ ಅದನ್ನು enquiry ಮಾಡಿಸುತ್ತೇವೆ ಎಂದರೆ Judicial Enquiry ಮಾಡಿಸಿ ಎಂದು ಹೇಳುತ್ತಾರೆ. ಹಾಸನದಲ್ಲಿ ಸ್ಫೋಟವಾಯಿತು ಆಗ ಏಕೆ Judicial Enquiry ಮಾಡಿಸಲಿಲ್ಲ ಇವರು? ಬಿಡದಿಯಲ್ಲಿ ಘಟನೆ ನಡೆಯಿತು ಆಗೇನು ಬಾಯಿಯಲ್ಲಿ ಕಡಬು ಇಟ್ಟುಕೊಂಡು ಕುಳಿತ್ತಿದ್ದರಾ ಇವರು? ಈಗ ಬುದ್ಧಿ ಬಂದಿದೆಯಾ ಇವರಿಗೆ? ಇದನ್ನು ಸಂಪೂರ್ಣ ತನಿಖೆ ಮಾಡಲು ನಾವು ಯೋಚನೆ ಮಾಡುತ್ತಿದ್ದೇವೆ. Judicial Enquiryಗೆ ನಾನು ಒಪ್ಪುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, ಮಾನ್ಯ ಗೃಹ ಸಚಿವರೆ, ಅವರ ಕಾಲದಲ್ಲಿ ಅವರು ಮಾಡಲಿಲ್ಲ. ಆದರೆ ಈಗ ನೀವು ಏನು ಮಾಡುತ್ತಿದ್ದೀರಿ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಗಳೆ, ಅದಕ್ಕೇ ನಾವು enquiry ಮಾಡುತ್ತಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, ಅಂದು ಅವರು ಮಾಡಲಿಲ್ಲ ಎಂದು ಹೇಳುವುದಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಗಳೆ, ಅವರು ಮಾಡಲಿಲ್ಲ ಎಂದು ಹೇಳುವ ಹಕ್ಕು ನಮಗಿದೆ. ನಾವೇನು ಮಾತನಾಡಬೇಕೆನ್ನುವುದನ್ನು ನೀವು ಹೇಳುವುದಲ್ಲ.

**ಶ್ರೀ ಮರಿತಿಬ್ಬೇಗೌಡ:–** ಇವತ್ತು ನೀವು ನಿಮ್ಮ ಜವಾಬ್ದಾರಿಯನ್ನು ತೋರಿಸಬೇಕು. ಸರಿಯಾದ ತನಿಖೆ ಮಾಡಿಸಲು ನಿಮಗೆ ಏಕೆ ಆಗುತ್ತಿಲ್ಲ?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಗಳೆ, Judicial Enquiry ಯಿಂದ ಯಾವ ಸತ್ಯವು ಹೊರಗೆ ಬರುವುದಿಲ್ಲ. Judicial Enquiry ನಡೆದು ತೀರ್ಮಾನವಾಗಿರುವುದು ಯಾವುದು ಸದನದ ಮುಂದೆ ಬಂದಿರುವುದಿಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಈ ರೀತಿಯ ರಾಜಕಾರಣ ಮಾಡುತ್ತಿರುವುದರಿಂದಲೆ ಅಕ್ರಮ ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದೆ.

(ಗೊಂದಲ)

ಶ್ರೀ ಕೆ.ಟಿ.ಶ್ರೀಕಂಠೇಗೌಡ:– ಮಾನ್ಯ ಸಭಾಪತಿಗಳೆ, ಇಡೀ ಸದನ ಸದಸ್ಯರು ರಾಜಕಾರಣವನ್ನು ಮರೆತು ಈ ಘಟನೆ ಬಗ್ಗೆ ಮಾತನಾಡಿದ್ದೇವೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಇಂದಿನ ಅಜೆಂಡಾದಲ್ಲಿ ಕರ್ನಾಟಕ ಜಾನುವಾರ ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಹಾಕಿಕೊಳ್ಳಲಾಗಿದೆ. ಆದರೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಕೆಳಮನೆಯಲ್ಲಿ ಇರುವುದರಿಂದ ಇದರ ಬಗ್ಗೆ ತಮ್ಮ ಜೊತೆ ಚರ್ಚೆ ಮಾಡಿ ಮುಂದಿನ ದಿನಾಂಕಗಳಲ್ಲಿ ತೆಗೆದುಕೊಳ್ಳುತ್ತೇವೆ.

**6. ಪ್ರಕಟಣೆ**
**ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ**

**ಸಭಾಪತಿಯವರು:–** ದಿನಾಂಕ:02–02–2021ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ನಡೆದ ಕಾರ್ಯಕಲಾಪ ಪಟ್ಟಿ ಹೀಗಿದೆ. ವಿಧಾನ ಪರಿಷತ್ತಿನ 143ನೇ ಅಧಿವೇಶನದಲ್ಲಿ ದಿನಾಂಕ:05–02–2021ರವರೆಗೆ ಕಾರ್ಯಕಲಾಪಗಳನ್ನು ನಡೆಸಲು ಈ ಕೆಳಕಂಡಂತೆ ನಡೆಸಲು ತೀರ್ಮಾನಿಸಲಾಗಿದೆ.

ದಿನಾಂಕ:0**3–02–2021ರಂದು** ಪ್ರಶ್ನೋತ್ತರ, ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ, ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ ಹಾಗೂ ಇತರೆ ಕಲಾಪಗಳು.

ದಿನಾಂಕ:0**4–02–2021ರಂದು** ಪ್ರಶ್ನೋತ್ತರ, ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ, ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ ಹಾಗೂ ಇತರೆ ಕಲಾಪಗಳು.

ದಿನಾಂಕ:0**5–02–2021ರಂದು** ಪ್ರಶ್ನೋತ್ತರ, ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆಗೆ ಸರ್ಕಾರದಿಂದ ಉತ್ತರ, ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ ಹಾಗೂ ಖಾಸಗಿ ಕಾರ್ಯಕಲಾಪಗಳು. ಈ ವರದಿಗೆ ಸದನದ ಅಂಗೀಕಾರವಿದೆ ಎಂದು ಭಾವಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, ನಾನು ಗಮನ ಸೆಳೆಯುತ್ತೇನೆ. ಆದರೆ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಗಮನ ಸೆಳೆಯಲಿ, ಸಚಿವರ ಪರವಾಗಿ ನಾನು ಉತ್ತರ ಕೊಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:– ಮಾನ್ಯ ಸಭಾಪತಿಗಳೆ,** ಸಚಿವರ ಪರವಾಗಿ ಸಭಾನಾಯಕರು ಹೇಗೆ ಉತ್ತರ ಕೊಡುತ್ತಾರೆ. ನಾನು ತಂದಿರುವ ವಿಷಯ ಬಹಳ ಗಂಭೀರವಾಗಿದೆ. ಸಂಬಂಧಪಟ್ಟ ಇಲಾಖೆಯ ಮಂತ್ರಿಗಳೇ ಇಲ್ಲದ ಮೇಲೆ ಯಾರು ಉತ್ತರ ಕೊಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅಷ್ಟೇ ಗಂಭೀರವಾಗಿ ನಾನು ಉತ್ತರವನ್ನು ಕೊಡುತ್ತೇನೆ. ಮಂತ್ರಿಗಳೆ ಬೇಕು ಎಂದರೆ ನಾಳೆ ತೆಗೆದುಕೊಳ್ಳಬೇಕಾಗುತ್ತದೆ.

**ಸಭಾಪತಿಯವರು:–** ಶ್ರೀ ಪುಟ್ಟಣ್ಣ ಮತ್ತು ಶ್ರೀ ಮರಿತಿಬ್ಬೇಗೌಡರ ಗಮನ ಸೆಳೆಯುವ ಸೂಚನೆ ಇನ್ನೊಂದು ಇದೆಯಲ್ಲ.

**ಶ್ರೀ ಮರಿತಿಬ್ಬೇಗೌಡ:–** ಅದನ್ನಾದರೂ ತೆಗೆದುಕೊಳ್ಳುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಮಂಡ್ಯ ಜಿಲ್ಲೆಯಲ್ಲಿ ಕ್ರಿಯಾ ಯೋಜನೆ ಆಗದೇ ಇರುವುದರಿಂದ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿರುವ ಬಗ್ಗೆ ಇದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(090)02–02–2021(05–30)ಬಿಎಸ್‌ಡಿ–ಜಿಆರ್

## 7. ಗಮನ ಸೆಳೆಯುವ ಸೂಚನೆಗಳು

**ವಿಷಯ:– (ಅ) ಮಂಡ್ಯ ಜಿಲ್ಲಾ ಪಂಚಾಯಿತಿಯಲ್ಲಿ 2019 ರಿಂದ ಸಾಮಾನ್ಯ ಸಭೆ ನಡೆಯದೇ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತವಾಗಿರುವುದರಿಂದ ಸರ್ಕಾರದ ಅನುದಾನ ಬಳಕೆಯಾಗಿಲ್ಲದಿರುವ ಬಗ್ಗೆ.**

– – – – –

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲಾ ಪಂಚಾಯಿತಿಯಲ್ಲಿ 2019 ರಿಂದ ಸಾಮಾನ್ಯ ಸಭೆ ನಡೆಯದೇ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತವಾಗಿರುವುದರಿಂದ ಸರ್ಕಾರದ ಅನುದಾನ ಬಳಕೆಯಾಗಿಲ್ಲದಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ);–** ಮಾನ್ಯ ಸಭಾಪತಿಯವರೇ,

(ಹೇಳಿಕೆಯನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲಾ ಪಂಚಾಯಿತಿಯಲ್ಲಿ ಸೆಪ್ಟೆಂಬರ್ 2019ನೇ ಸಾಲಿನಿಂದ ಸಾಮಾನ್ಯ ಸಭೆ ಕೋರಂ ಅಭಾವದಿಂದ ನಡೆಯಲಿಲ್ಲ. ಆ ಸಂದರ್ಭದಲ್ಲಿ ಪ್ರತಿ ಸಭೆ ನಡೆದಾಗಲೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ವಿಚಾರದಲ್ಲಿ ಆ ಸಂದರ್ಭದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಂಡ್ಯ ಜಿಲ್ಲಾ ಪಂಚಾಯಿತಿಗೆ ದಿನಾಂಕ 7-11-2020ರಂದು ಒಂದು ನಿರ್ದೇಶನವನ್ನು ಕೊಡುತ್ತಾರೆ.

**(ಈ ಸಂದರ್ಭದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರು ಸಭಾ ಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಆ ನಿರ್ದೇಶನವೇನೆಂದರೆ, ಸ್ಥಾಯಿ ಸಮಿತಿಗಳಿಂದ ಅನುಮೋದನೆಯಾಗಿರುವ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ ಎಂದು ಹೇಳಿದ್ದಾರೆ. ಅಂದರೆ ಸ್ಥಾಯಿ ಸಮಿತಿಗಳಿಂದ ಅನುಮೋದನೆಯಾಗಿರುವ ಕ್ರಿಯಾ ಯೋಜನೆಯ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ದಿನಾಂಕ 7-11-2020ರಂದು ಪ್ರಧಾನ ಕಾರ್ಯದರ್ಶಿಯವರು ಜಿಲ್ಲಾ ಪಂಚಾಯಿತಿಗೆ ಪತ್ರ ಬರೆಯುತ್ತಾರೆ. ಅದರಂತೆ ಜಿಲ್ಲಾ ಪಂಚಾಯಿತಿಯಿಂದ ಕಳುಹಿಸಿಕೊಡುತ್ತಾರೆ. ನಂತರ ದಿನಾಂಕ 27-1-2020 ರಂದು ಜಿಲ್ಲಾ ಪಂಚಾಯಿತಿ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮತಿ ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷಿಣಿಯವರು ಪ್ರತ್ಯೇಕವಾಗಿ ಸಲ್ಲಿಸಿರುವ ಕ್ರಿಯಾ ಯೋಜನೆಗೆ ಮಾತ್ರ ಅನುಮೋದನೆಯನ್ನು ಕೊಟ್ಟಿದ್ದಾರೆ. ಅಧ್ಯಕ್ಷಿಣಿಯವರು ಸುಮಾರು ಒಂದೂವರೆ ವರ್ಷಗಳ ಕಾಲ ಕೋರಂ ಇಲ್ಲದೇ ಸಭೆ ನಡೆಸುವುದಕ್ಕೆ ಆಗದೇ ಇರುವ ಅಧ್ಯಕ್ಷಿಣಿ ಕೊಟ್ಟ ಕ್ರಿಯಾ ಯೋಜನೆಗೆ ದಿನಾಂಕ 27-2-2020 ರಂದು ಅನುಮೋದನೆ ಕೊಟ್ಟಿದ್ದಾರೆ. ಆದರೆ ಸರ್ಕಾರದ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸ್ಥಾಯಿ ಸಮಿತಿಗಳಿಂದ ಅನುಮೋದನೆಗೊಂಡಿರುವ ಕ್ರಿಯಾ ಯೋಜನೆಯನ್ನು ಕಳುಹಿಸಿಕೊಡುವ ಬಗ್ಗೆ ಹೇಳಿದ್ದರು. ಆದರೆ ಸ್ಥಾಯಿ ಸಮಿತಿಗಳಿಂದ ಬಂದ ಕ್ರಿಯಾ ಯೋಜನೆಯನ್ನು ಪಕ್ಕಕ್ಕೆ ಸರಿಸಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ 22 ಇಲಾಖೆಗಳಲ್ಲಿ ಸುಮಾರು ರೂ.311 ಕೋಟಿ ಅನುದಾನ ಒಂದೂವರೆ ವರ್ಷಗಳಿಂದ ಕ್ರಿಯಾ ಯೋಜನೆ approve ಆಗದೇ ಬಳಕೆ ಮಾಡಲು ಆಗಲಿಲ್ಲ. ಫಲಾನುಭವಿಗಳಿಗೆ ತಲುಪಿಸಲು ಆಗಲಿಲ್ಲ, ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಆಗಲಿಲ್ಲ. ಇದು ಪ್ರತಿ ತಿಂಗಳು ಮಾನ್ಯ ಸಚಿವರ ಗಮನಕ್ಕೆ ಬಂದರೂ ಪಂಚಾಯತ್ ರಾಜ್ ಕಾಯ್ದೆಯಲ್ಲಿರುವ ಅಧಿಕಾರವನ್ನು ಸುಮಾರು ಒಂದೂವರೆ ವರ್ಷಗಳ ಕಾಲ ಬಳಸಲಿಲ್ಲ. ಮಂಡ್ಯ ಜಿಲ್ಲೆಯ ಅಭಿವೃದ್ಧಿಯನ್ನು ಸೆಪ್ಟೆಂಬರ್ 2019 ರಿಂದ ಇದುವರೆಗೂ ಸಂಪೂರ್ಣವಾಗಿ ಕಡೆಗಣಿಸಿದೆ. ಸುಮಾರು ರೂ.311 ಕೋಟಿ ಕ್ರಿಯಾ ಯೋಜನೆಗೆ approval ಸಿಗಲಿಲ್ಲ. ಯಾವುದೆ ಅಭಿವೃದ್ಧಿಯಾಗಲಿಲ್ಲ, ಯಾವುದೇ ಫಲಾನುಭವಿಗಳಿಗೂ ಏನೂ ಸಿಗಲಿಲ್ಲ. 22 ಇಲಾಖೆಯ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಸ್ಥಗಿತವಾಗಿವೆ. ಈ ಸರ್ಕಾರಕ್ಕೆ ಮಂಡ್ಯ ಜಿಲ್ಲೆಯ ಬಗ್ಗೆ ಇಂತಹ ಧೋರಣೆ ಏಕೆ? ಇವತ್ತು ಮಾನ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಪಂಚಾಯತ್ ರಾಜ್ ಇಲಾಖೆಯಲ್ಲಿ ಬಹಳಷ್ಟು ತಿದುಪಡಿಗಳನ್ನು ತಂದು ಭಾರಿ ಬದಲಾವಣೆ ಮಾಡಿ ಎಲ್ಲವನ್ನು ಮಾಡುತ್ತಿದ್ದು, ಗ್ರಾಮ ಪಂಚಾಯತಿಗಳಲ್ಲಿ ಉತ್ತಮವಾದ ಆಡಳಿತವನ್ನು ನಡೆಸುವ ವ್ಯವಸ್ಥೆ ರೂಪಿಸುತ್ತಿದ್ದೇವೆ ಎಂದು ಹೇಳುವ ಸಚಿವರು, ಮಂಡ್ಯ ಜಿಲ್ಲೆಯಲ್ಲಿ ಆಗಿರುವ ಘಟನೆ ಬಗ್ಗೆ ಅವರಿಗೆ ಎಲ್ಲವೂ ಗೊತ್ತಿತ್ತು. ಮಂಡ್ಯ ಜಿಲ್ಲಾ ಪಂಚಾಯಿತಿಯಲ್ಲಿ ಮಾನ್ಯ ಸಚಿವರು ಕುಳಿತು ಏಕೆ ಚಿಂತನೆ ಮಾಡಲಿಲ್ಲ? ಕ್ರಿಯಾ ಯೋಜನೆಗೆ ಏಕೆ ಅನುಮತಿ ಕೊಡಿಸಲಿಲ್ಲ ಅಥವಾ ಮಂಡ್ಯ ಜಿಲ್ಲಾ ಪಂಚಾಯಿತಿ ಅಧಿಕಾರಿಗಳನ್ನು ವಿಧಾನ ಸೌಧಕ್ಕೆ ಕರೆದು ಸಭೆ ಮಾಡಿ ನಿಂತುಹೋಗಿದ್ದ 22 ಇಲಾಖೆಗಳ ಕಾರ್ಯಕ್ರಮಗಳಿಗೆ ಚಾಲನೆ ಕೊಡುವ ಪ್ರಯತ್ನ ಮಾಡಲಿಲ್ಲ? ಆದರೆ ಅಧ್ಯಕ್ಷಿಣಿ ಕೊಟ್ಟ ಕ್ರಿಯಾ ಯೋಜನೆಯನ್ನು ಅನುಮತಿಸಿರುವುದು ಪಕ್ಷಪಾತದ ಧೋರಣೆಯಾಗಿದೆ. ಗ್ರಾಮ ಪಂಚಾಯಿತಿಯಲ್ಲಿ ಸರ್ವರಿಗೂ ನ್ಯಾಯವನ್ನು ದೊರಕಿಸಿಕೊಡಬೇಕು ಎಂದು ಹೇಳುವ ಆಡಳಿತ ಪಕ್ಷ ಸುಮಾರು ಒಂದೂವರೆ ವರ್ಷ ಮಂಡ್ಯ ಜಿಲ್ಲೆಯ 22 ಇಲಾಖೆ ಕಾರ್ಯಗಳು ಕುಂಠಿತವಾಗಿದ್ದರೂ ಮಾನ್ಯ ಸಚಿವರು ಅಲ್ಲಿ ಸಭೆ ಮಾಡಲು ಆಗಿಲಿಲ್ಲ ಅಥವಾ ಅಲ್ಲಿನ ಅಧಿಕಾರಿಗಳನ್ನು ಇಲ್ಲಿಗೆ ಕರೆಸಿ ಒಂದು ಸಭೆ ಮಾಡಿ ರೂ.311 ಕೋಟಿಗಳನ್ನು ಜಿಲ್ಲಾ ಅಭಿವೃದ್ಧಿಗೆ ಖರ್ಚು ಮಾಡಿ ಫಲಾನುಭವಿಗಳಿಗೆ ದೊರಕುವ ದಿಸೆಯಲ್ಲಿ ಚಾಲನೆ ಕೊಡಲಿಲ್ಲ. ಇಲಾಖಾ ಕಾರ್ಯದರ್ಶಿಯವರು ಸ್ಥಾಯಿ ಸಮಿತಿಗಳ ಮೂಲಕ ಕ್ರಿಯಾ ಯೋಜನೆಯನ್ನು approve ಮಾಡಿಕೊಡುವಂತೆ ಹೇಳಿ, ಅದನ್ನು ಅನುಷ್ಠಾನಗೊಳಿಸಲು ಆದೇಶ ಕೊಡುವ ಬಗ್ಗೆ ತಿಳಿಸಿದ್ದರೂ ಆ ಕೆಲಸ ಆಗಲಿಲ್ಲ. ಯಾವ ಅಧ್ಯಕ್ಷರಿಗೆ ಒಂದೂವರೆ ವರ್ಷದಿಂದ 6 ಸಭೆಗಳಲ್ಲಿ ಕೋರಂ ಇಲ್ಲದೇ ನಡೆಸಲು ಸಾಧ್ಯವಾಗಿಲ್ಲ, ಅಂತಹ ಅಧ್ಯಕ್ಷಿಣಿ ಕೊಟ್ಟ ಕ್ರಿಯಾ ಯೋಜನೆಯನ್ನು approve ಮಾಡಿದ್ದಾರೆ. ಇದು ಮಂಡ್ಯ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಸರ್ಕಾರ ತಾಳುವ ಧೋರಣೆಯೇ? ಇದು ಪಕ್ಷಪಾತವಲ್ಲವೇ? ಮಂಡ್ಯ ಜಿಲ್ಲೆಯನ್ನು ಅಭಿವೃದ್ಧಿ ಮಾಡಬೇಕೆಂಬ ಬದ್ಧತೆ ಸರ್ಕಾರಕ್ಕೆ ಇದೆಯೇ? ದಯಮಾಡಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರು ಸ್ಥಾಯಿ ಸಮಿತಿಗಳ ಮೂಲಕ ಕ್ರಿಯಾ ಯೋಜನೆಯನ್ನು approve ಮಾಡಿಕೊಡಬೇಕೆಂದು ಪತ್ರದಲ್ಲಿ ತಿಳಿಸಿರುವಂತೆ ಸ್ಥಾಯಿ ಸಮಿತಿಗಳಿಂದ ಬಂದಿರುವ ಕ್ರಿಯಾ ಯೋಜನೆಗೆ ಅನುಮತಿ ಕೊಡಬೇಕು. ಮಂಡ್ಯ ಜಿಲ್ಲೆಯ ಅಭಿವೃದ್ಧಿಯನ್ನು ಏಕೆ ಕಡೆಗಣಿಸಿದ್ದಾರೆಂದು ಗೊತ್ತಿಲ್ಲ!. ಮಾನ್ಯ ಈಶ್ವರಪ್ಪನವರು ಬಹಳ ಅನುಭವಿಗಳು, ಮೇಧಾವಿ ಹಾಗೂ ಪ್ರಭಾವಿಗಳಾಗಿದ್ದು, ಭಾರತೀಯ ಜನತಾ ಪಕ್ಷದಲ್ಲಿ ಬಹಳ ಹಿರಿತನವನ್ನು ಹೊಂದಿದ್ದಾರೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕೆಂದು ಅನೇಕ ತಿದ್ದುಪಡಿಗಳನ್ನು ತಂದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮಾನ್ಯ ಸಚಿವರಿಗೆ ಮಂಡ್ಯ ಜಿಲ್ಲೆಯನ್ನು ಸೆಪ್ಟೆಂಬರ್ 2019ರಿಂದ ರೂ.311 ಕೋಟಿಗಳನ್ನು ಅಭಿವೃದ್ಧಿ ಕಾರ್ಯಗಳಿಗೆ ಖರ್ಚಾಗದೇ ಸ್ಥಗಿತವಾಗಿರುವುದು ಗೊತ್ತಾಗಲಿಲ್ಲವೇ, ಅಲ್ಲಿಯೇ ಒಂದು ಸಭೆ ಮಾಡಿ ಚಾಲನೆ ಕೊಟ್ಟರೇ ಅಥವಾ ಅಧಿಕಾರಿಗಳನ್ನು ಇಲ್ಲಿಗೆ ಕರೆಸಿಕೊಂಡು ಚಾಲನೆ ಕೊಟ್ಟರೇ? ಈಗ ಕೊನೆ ಘಳಿಗೆಯಲ್ಲಿ ಸ್ಥಾಯಿ ಸಮಿತಿಯಿಂದ ಕ್ರಿಯಾ ಯೋಜನೆಯನ್ನು approve ಮಾಡಿ ಕಳುಹಿಸಿ ಎಂದು ಪತ್ರ ಬರೆದಿದ್ದಾರೆ. ಅದರಂತೆ ಸ್ಥಾಯಿ ಸಮಿತಿಯಿಂದ ಅನುಮೋದನೆ ಮಾಡಿರುವ ಕ್ರಿಯಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯೋಜನೆಗೆ ಅನುಮತಿ ಕೊಡದೇ ಕೋರಂ ಇಲ್ಲದೆ, meeting ನಡೆಸಲು ಅಸಹಾಯಕವಾದಂತಹ ಅಧ್ಯಕ್ಷಿಣಿಯವರು ಕಳುಹಿಸಿರುವ ಕ್ರಿಯಾ ಯೋಜನೆಗೆ approval ಕೊಡುವುದು ರಾಜಕೀಯಲ್ಲವೇ?

(ಮುಂದು)

**(91)/02.02.2021/5.40/ಹೆಚ್‌ವಿಃಎಂಡಿ** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ(ಮುಂದುವರಿದದ್ದು)**

ಸನ್ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆ ಅಭಿವೃದ್ಧಿಯ ಬಗ್ಗೆ ಇವರಿಗೆ ಕಳಕಳಿ ಇದೆಯೇ? ಸ್ಥಾಯಿ ಸಂಸ್ಥೆಗಳಿಂದ ಅನುಮೋದನೆಗೊಂಡಿರುವ ಕ್ರಿಯಾ ಯೋಜನೆಗೆ ತತ್‌ಕ್ಷಣ ಸರ್ಕಾರ ಅನುಮೋದನೆ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

(ಈ ಹಂತದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಸದನಕ್ಕೆ ಆಗಮಿಸಿದರು)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ತಮ್ಮ ಮಾತುಗಳನ್ನು ಮುಗಿಸುವ ಕೊನೆ ಘಳಿಗೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈಗ ಸದನಕ್ಕೆ ಬಂದಿದ್ದಾರೆ ನಾನು ಒಂದೆರಡು ನಿಮಿಷಗಳ ಕಾಲ ಮಾತನಾಡುತ್ತೇನೆ.

**ವೈಸ್ ಛೇರ್ಮನ್:–** ಮಾನ್ಯ ಸಭಾ ನಾಯಕರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಸದನಕ್ಕೆ ಆಗಮಿಸಿರುವುದರಿಂದ, ಅವರೇ ಉತ್ತರವನ್ನು ನೀಡಲಿ.

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ನಾನು ಸದನಕ್ಕೆ ತಡವಾಗಿ ಬಂದಿದ್ದೇನೆ. ಒಂದೆರಡು ನಿಮಿಷಗಳ ಕಾಲ ಮಾನ್ಯ ಸಭಾ ನಾಯಕರು ಮಾತನಾಡುತ್ತಾರೆ, ಅನಂತರ ನಾನು ಉತ್ತರ ಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಸುಮಾರು 6 ಸಾಮಾನ್ಯ ಸಭೆಗಳನ್ನು ಕರೆದಿದ್ದಾರೆ. ನಾನು ಉತ್ತರ ಹೇಳುವುದಕ್ಕೂ ಮೊದಲು ಆ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಯಾರು, ಸ್ಥಾಯಿ ಸಮಿತಿಯ ಅಧ್ಯಕ್ಷರು ಯಾರು, ಅವರುಗಳು ಯಾವ ಪಕ್ಷಕ್ಕೆ ಸೇರಿದವರು ಹಾಗೂ ಅಲ್ಲಿ ಏನು ರಾಜಕಾರಣ ನಡೆದಿದೆ ಎನ್ನುವುದು ನಮಗೆ ಗೊತ್ತಿಲ್ಲ. ಆದರೆ, ವಾಸ್ತವವಾಗಿ ನಮಗೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಂದಿರುವ ಒಟ್ಟು ಮಾಹಿತಿಯ ಆಧಾರದ ಮೇಲೆ ಹೇಳುವುದಾದರೆ, ಅಲ್ಲಿನ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಸುಮಾರು 6 ಸಭೆಗಳನ್ನು ಕರೆದಿದ್ದಾರೆ, ಕೋರಂನ ಕೊರತೆಯಿಂದಾಗಿ ಆ 6 ಸಭೆಗಳು ನಡೆದಿರಲಿಲ್ಲ. ಆ ಹಿನ್ನೆಲೆಯಲ್ಲಿ ಸ್ಥಾಯಿ ಸಮಿತಿಯ ಅಧ್ಯಕ್ಷರು ಸರ್ಕಾರದ ಸೂಚನೆಯ ಮೇರೆಗೆ ಒಂದು ಕ್ರಿಯಾ ಯೋಜನೆಯನ್ನು ತಯಾರು ಮಾಡಿ ಕಳುಹಿಸಿಕೊಡುತ್ತಾರೆ. ಅಲ್ಲಿನ ಮಹಿಳಾ ಅಧ್ಯಕ್ಷರು ಪುನಃ ಸರ್ಕಾರಕ್ಕೊಂದು ಪತ್ರ ಬರೆದು, 'ಸ್ಥಾಯಿ ಸಮಿತಿಯ ಅಧ್ಯಕ್ಷರು ಒಂದು ಕ್ರಿಯಾ ಯೋಜನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಇಡೀ ಜಿಲ್ಲೆಯನ್ನು ಅವರು ಪ್ರತಿನಿಧಿಸಿಲ್ಲ. ಆದ್ದರಿಂದ ಆ ಕ್ರಿಯಾ ಯೋಜನೆಯನ್ನು ತಡೆಹಿಡಿದು ನಾನು ಕೊಟ್ಟಿರುವ ಪ್ರಸ್ತಾವನೆಗೆ ಅನುಮೋದನೆ ಕೊಡಬೇಕು' ಎಂದು ತಿಳಿಸಿರುತ್ತಾರೆ. ಆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿಗಳು ಸ್ಥಾಯಿ ಸಮಿತಿಯ ಅಧ್ಯಕ್ಷರು ಮತ್ತು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರ ಪ್ರಸ್ತಾವನೆಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಇಡೀ ಜಿಲ್ಲೆಯ ಎಲ್ಲ ಕ್ಷೇತ್ರಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆಗೆ ಅನುಮೋದನೆಯನ್ನು ಮಾನ್ಯ ಸದಸ್ಯರೇ ಹೇಳಿರುವಂತೆ ದಿನಾಂಕಃ 27.01.2021ರಂದು ಕಾರ್ಯನಿರ್ವಹಣಾಧಿಕಾರಿ ಮಂಡ್ಯ ಜಿಲ್ಲೆ ಇವರಿಗೆ ಕಳುಹಿಸಿಕೊಡಲಾಗಿದೆ. ಅಂದರೆ, ಕಾರ್ಯಯೋಜನೆ ಅನುಮೋದನೆಗೊಂಡಿದೆ. ಆದರೆ ತಡವಾಗಿ ಅನುಮೋದನೆಗೊಂಡಿದೆ ಅಷ್ಟೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮಗ್ರವಾಗಿ ಉತ್ತರ ಕೊಡುವುದಕ್ಕೂ ಮೊದಲು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಡೆದಿರುವ ಕೆಲವು ಘಟನೆಗಳನ್ನು ನಾವು ತಮ್ಮ ಮುಂದೆ ಹೇಳಬೇಕಾಗಿದೆ. ಬಹುತೇಕ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅಧ್ಯಕ್ಷರಾಗುವುದಕ್ಕೆ ನಾಮಪತ್ರ ಸಲ್ಲಿಸದೇ ಇರುವಂತಹ ಪ್ರಸಂಗಗಳು ಬಂದಿದೆ. ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ನಾಮಪತ್ರ ಸಲ್ಲಿಸುವುದೇ ಇಲ್ಲ. ಏಕೆಂದರೆ, ಸೂಚಕರೇ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ನನಗೆ ನೆನಪಿರುವಂತೆ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಸಂದರ್ಭದಲ್ಲಿ ಒಂದು ಆದೇಶವನ್ನು ಮಾಡಿದ್ದರು. 'ಯಾವ ಪಂಚಾಯಿತಿಯಲ್ಲಿ ಅಧ್ಯಕ್ಷರ ಸ್ಥಾನಕ್ಕೆ ಸೂಚಕರು ಇರುವುದಿಲ್ಲವೋ ಅಂತಹ ಪಂಚಾಯಿತಿಗಳಿಗೆ ಸೂಚಕರಿಲ್ಲದೇ ಸ್ವಯಂ ಆಗಿ ಅಧ್ಯಕ್ಷರನ್ನು ಘೋಷಣೆ ಮಾಡುತ್ತೇವೆ' ಎಂದು ಹೇಳಿದಂತಹ ಸಂದರ್ಭದಲ್ಲಿ ಅನೇಕರ ನಾಟಕಗಳು ಮುಕ್ತಾಯಗೊಂಡಿತು.

ಸನ್ಮಾನ್ಯ ಸಭಾಪತಿಯವರೇ, ವಿಶೇಷವಾಗಿ ಮಹಿಳೆಯವರು ಅಧ್ಯಕ್ಷರಾಗಿರುವ ಪಂಚಾಯಿತಿಗಳ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಒಂದು ದೊಡ್ಡ ಗ್ರಾಮ ಪಂಚಾಯತಿ, ಅದರ ಮೇಲೆ ತ್ರಿವರ್ಣ ಧ್ವಜ ಹಾರುತ್ತಿತ್ತು. ಅದನ್ನು ನೋಡುವ ಆಸೆ ನನಗಾಯಿತು. ನಾನು ಆ ಗ್ರಾಮ ಪಂಚಾಯಿತಿ ಒಳಗೆ ಹೋದೆ. ಅಲ್ಲಿರುವ ಪಿ.ಡಿ.ಓ. ಬಳಿ ಎಷ್ಟು ತೆರಿಗೆ ಸಂಗ್ರಹ ಮಾಡುತ್ತಿದ್ದೀರಿ, ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ ಎಂದು ಕೇಳುತ್ತಿದ್ದ ಸಂದರ್ಭದಲ್ಲಿ ನಾನು ಅಲ್ಲಿಗೆ ಹೋಗುತ್ತೇನೆಂದು ಯಾರಿಗೂ ಗೊತ್ತಿರಲಿಲ್ಲ. ಅಲ್ಲಿ ಒಬ್ಬರೇ ಒಬ್ಬರು ಸದಸ್ಯರಿದ್ದರು. ಬಹಳ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರೀತಿಯಿಂದ ನನ್ನನ್ನು ಬರಮಾಡಿಕೊಂಡರು. ಒಂದು ಕಡೆ ಅಧ್ಯಕ್ಷರ ಟೇಬಲ್ ಮತ್ತೊಂದು ಕಡೆಗೆ ಉಪಾಧ್ಯಕ್ಷರ ಟೇಬಲ್ ಇತ್ತು. ಅಧ್ಯಕ್ಷರ ಟೇಬಲ್ ಹಳೆಯ ಟೇಬಲ್ ಆಗಿತ್ತು ಅದರ ಮೇಲೆ ಅಧ್ಯಕ್ಷರು ಎನ್ನುವ ಬೋರ್ಡ್ ಮಾತ್ರ ಇತ್ತು. ಆದರೆ, ಉಪಾಧ್ಯಕ್ಷರ ಟೇಬಲ್ ಹೊಸ ಟೇಬಲ್ ಬಹಳ ಸೌಂದರ್ಯಭರಿತವಾಗಿರುವ ಟೇಬಲ್ ಆಗಿತ್ತು. ನಾನು 'ಅಧ್ಯಕ್ಷರ ಟೇಬಲ್ ಬಹಳ ಕ್ಷೀಣಗೊಂಡಿದೆ, ಉಪಾಧ್ಯಕ್ಷರ ಟೇಬಲ್ ಬಹಳ ಸುಸಜ್ಜಿತವಾಗಿದೆ ಯಾಕೆ' ಎಂದು ಕೇಳಿದೆ. ಅಲ್ಲಿರುವವರೊಬ್ಬರು 'ಅಧ್ಯಕ್ಷರು ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆ ಉಪಾಧ್ಯಕ್ಷರು ದೊಡ್ಡವರು, ಅದಕ್ಕೋಸ್ಕರ ಎಲ್ಲ ಕಾರುಬಾರುಗಳನ್ನು ಉಪಾಧ್ಯಕ್ಷರೇ ಮಾಡುತ್ತಾರೆ.' ಎಂದು ಹೇಳಿದರು. ಈ ಮಟ್ಟದಲ್ಲಿ ವ್ಯವಸ್ಥೆಗಳು ನಡೆಯುತ್ತಿರುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಮಹಿಳಾ ಅಧ್ಯಕ್ಷರೊಬ್ಬರು 6 ಬಾರಿ ಮೀಟಿಂಗ್ ಕರೆದರೂ ಸಹ ಕೋರಂ ಆಗದೇ ಇರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಿಯೆಂದು ನನಗೆ ಅನಿಸಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲಾ ಪಂಚಾಯಿತಿಯ ಮಹಿಳಾ ಅಧ್ಯಕ್ಷರು ಯಾವ ಪಕ್ಷಕ್ಕೆ ಸೇರಿದವರು ಎನ್ನುವುದು ನಮಗೆ ಇಲ್ಲಿಯವರೆಗೆ ಗೊತ್ತಿಲ್ಲ. ಆದರೆ, ಮಹಿಳಾ ಅಧ್ಯಕ್ಷರೊಬ್ಬರು 6 ಬಾರಿ ಮೀಟಿಂಗ್ ಕರೆದರೂ ಸಹ ಸಭೆಗೆ ಯಾರೂ ಬರಲಿಲ್ಲವೆಂದರೆ, ಕೋರಂ ಆಗಲಿಲ್ಲವೆಂದರೆ, ಸದಸ್ಯರುಗಳಿಂದ ಸಹಕಾರ ದೊರೆಯಲಿಲ್ಲವೆನ್ನುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶೋಭೆ ತರುವಂತಹ ವಿಚಾರವಲ್ಲ. ಒಮ್ಮೆ ಮಾನ್ಯ ರಾಮಕೃಷ್ಣ ಹೆಗಡೆಯವರು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ನೀಡಿದ್ದರು. ಆಗ ಕುಂದರ್ ಎನ್ನುವ ಹಿರಿಯರೊಬ್ಬರು ಅಲ್ಲಿನ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಶಾಸಕರು, ಮಂತ್ರಿಗಳು ಮತ್ತು ಮಾನ್ಯ ರಾಮಕೃಷ್ಣ ಹೆಗಡೆಯವರಂತಹ ಬಹಳ ದೊಡ್ಡ ಮೇಧಾವಿಗಳು ಉಪಸ್ಥಿತರಿದ್ದ ಬಹಳ ದೊಡ್ಡ ಸಭೆಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಎಲ್ಲರನ್ನು ಉಲ್ಲೇಖ ಮಾಡುತ್ತಾ, ತಮ್ಮ ಭಾಷಣವನ್ನು ಪ್ರಾರಂಭ ಮಾಡುತ್ತಾರೆ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ಉಲ್ಲೇಖ ಮಾಡುವಂತಹ ಸಂದರ್ಭದಲ್ಲಿ, 'ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯಮಂತ್ರಿಗಳಾಗಿರುವ ಸನ್ಮಾನ್ಯ ಕುಂದರ್‌ರವರೇ, ...' ಎಂದು ಹೇಳುತ್ತಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ಆ ಜಿಲ್ಲೆಯ ಮುಖ್ಯಮಂತ್ರಿಗಳೆಂದು ಪರಿಗಣಿಸಬೇಕೆಂದು ಹೇಳುವುದರ ಮೂಲಕ ಪಂಚಾಯತ್‌ರಾಜ್ ವ್ಯವಸ್ಥೆಯ ಒಟ್ಟು ವ್ಯವಸ್ಥೆಯನ್ನು ಅವರು ನನೆಪು ಮಾಡಿದರು. ಇಲ್ಲಿ ತಪ್ಪಾಗಿದ್ದರೆ, ಸರ್ಕಾರ ಅದನ್ನು ಸರಿಪಡಿಸುವ ಪ್ರಯತ್ನ ಮಾಡುತ್ತದೆ ಮತ್ತು ಮಾನ್ಯ ಸದಸ್ಯರು ಹೇಳಿದಂತಹ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತೇವೆ. ಆದರೆ, ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಯಾಗಿ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಕರೆದಿರುವಂತಹ 6 ಸಾಮಾನ್ಯ ಸಭೆಗಳಿಗೆ ಸದಸ್ಯರುಗಳು ಗೈರು ಹಾಜರಾಗಿ ಕೋರಂ ಆಗದೇ ಇರುವಂತೆ ನೋಡಿಕೊಳ್ಳುತ್ತಾರೆ, ಆಕೆ ಸರ್ಕಾರದ ಅಂಗಳಕ್ಕೆ ಬಂದು ನ್ಯಾಯ ಕೊಡಿಸಿ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿ, ಸ್ಥಾಯಿ ಸಮಿತಿಯ ಅಧ್ಯಕ್ಷರು ಕ್ರಿಯಾ ಯೋಜನೆಯನ್ನು ಕಳುಹಿಸಿಕೊಡುತ್ತಾರೆಂದರೆ, ಆ ಜಿಲ್ಲಾ ಪಂಚಾಯಿತಿಯ ಮಹಿಳಾ ಅಧ್ಯಕ್ಷೆ ಸರ್ಕಾರಕ್ಕೆ ಪತ್ರ ಬರೆದು ಈ ರೀತಿ ಅನ್ಯಾಯವಾಗಿದೆಯೆಂದು ಹೇಳಿಕೊಳ್ಳುವುದು ಸೌಹಾರ್ದಯುತ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಾತಾವರಣವಲ್ಲವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಮುಂದೇನು ಮಾಡಬೇಕೆಂದು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಮಾನ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ಪೀಠಿಕೆ ಹಾಕಿಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ವಿಷಯವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ನಾನು ಉತ್ತರ ಕೊಡುತ್ತೇನೆಂದು ಹೇಳಿದ್ದೆ. ಅವರು ಬೇಜಾರು ಮಾಡಿಕೊಳ್ಳಬಾರದೆಂದು ಒಂದು ಸಣ್ಣ ಉತ್ತರವನ್ನು ಹೇಳಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ವಿಚಾರ ಚರ್ಚೆಗೆ ಬಂದ ಕಾರಣ ಅದಕ್ಕೆ ಉತ್ತರವನ್ನು ನೀಡಿ ಇಲ್ಲಿಗೆ ಬಂದಿದ್ದೇನೆ. ತಡವಾಗಿ ಬಂದಿರುವುದಕ್ಕೆ ದಯವಿಟ್ಟು ಕ್ಷಮಿಸಬೇಕು. ನಿನ್ನೆ ಈ ವಿಚಾರ ಸದನದ ಮುಂದೆ ಚರ್ಚೆಗೆ ಬರುತ್ತದೆಂದು ಇಡೀ ದಿನ ಕಾದಿದ್ದೆ; ನಿನ್ನೆ ಬರಲಿಲ್ಲ, ಈ ದಿನ ತೆಗೆದುಕೊಳ್ಳಲಾಗಿದೆ ತುಂಬಾ ಸಂತೋಷ. ಮಂಡ್ಯ ಜಿಲ್ಲೆಯ ಅಭಿವೃದ್ಧಿಯಾಗಬೇಕೆನ್ನುವುದು ಸರ್ಕಾರದ ಕಳಕಳಿಯಾಗಿದೆ. ನಾನು ಅನೇಕ ಬಾರಿ ಮಂಡ್ಯ ಜಿಲ್ಲಾ ಪಂಚಾಯತ್ ಸಭೆಯನ್ನು ಮಾಡಿದ್ದೇನೆ. ಅವರು ಏನೇನು ಕೇಳಿದ್ದಾರೆ, ಆ ವ್ಯವಸ್ಥೆಯನ್ನು ನಾನು ಮಾಡಿಕೊಟ್ಟಿದ್ದೇನೆ. ಇದು ನಮ್ಮ ಸರ್ಕಾರದಿಂದಾಗಿರುವ ಸಮಸ್ಯೆಯಲ್ಲ. ಜಿಲ್ಲಾ ಪಂಚಾಯತ್ ಅಧ್ಯಕ್ಷರು 06 ಬಾರಿ ಸಭೆ ಕರೆದಿದ್ದರೂ ಸಭೆಗೆ ಯಾವ ಸದಸ್ಯರು ಹಾಜರಾಗಿಲ್ಲ, ಆ ಅಧ್ಯಕ್ಷರಿಗೆ ತೊಂದರೆ ಕೊಡಬೇಕೆನ್ನುವ ಹಿನ್ನೆಲೆಯಲ್ಲಿ ಅವರು ಮಾಡಿಕೊಂಡಿರುವಂತಹ ಅವ್ಯವಸ್ಥೆ, ರಾಜಕಾರಣಕ್ಕೆ ಸರ್ಕಾರವನ್ನು ದೂರುವುದು ಎಷ್ಟರ ಮಟ್ಟಿಗೆ ಸರಿ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಯಾವುದೇ ಜಿಲ್ಲೆಯ ವಿಚಾರದಲ್ಲಿ ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ಯಾವುದೇ ರೀತಿಯ ರಾಜಕಾರಣವನ್ನು ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಸುಮಾರು 06 ಮೀಟಿಂಗ್‌ಗಳನ್ನು ಕರೆದಿದ್ದಾರೆ. ಅವರು ಕರೆದಿರುವ ಸಭೆಗಳ ದಿನಾಂಕವನ್ನು ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. ದಿನಾಂಕಃ14.10.2019ರಲ್ಲಿ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆ ನಡೆದಿದೆ, ನಂತರ ದಿನಾಂಕಃ25.10.2019ರಲ್ಲಿ ನಡೆದಿರುವ ಸಾಮಾನ್ಯ ಸಭೆಯಲ್ಲಿ ಕೋರಂ ಇರುವುದಿಲ್ಲ. ದಿನಾಂಕಃ07.11.2019ರಂದು ಕರೆಯಲಾದ ಸಭೆಯಲ್ಲಿಯೂ ಕೋರಂ ಇರುವುದಿಲ್ಲ. ನಂತರ ದಿನಾಂಕಃ31.01.2020ರ ಸಭೆಯಲ್ಲಿಯೂ ಕೋರಂ ಇರುವುದಿಲ್ಲ, ದಿನಾಂಕಃ27.03.2020ರಂದು ನಡೆದಂತಹ ಸಭೆ ಕೋವಿಡ್ ಪ್ರಯುಕ್ತ ಮುಂದೂಡಲ್ಪಟ್ಟಿದೆ. ದಿನಾಂಕಃ24.06.2020ರ ಸಭೆಯಲ್ಲಿಯೂ ಕೋರಂ ಇರುವುದಿಲ್ಲ. ದಿನಾಂಕಃ13.10.2020ರಂದು ಮತ್ತೇ ಕೋರಂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲದ ಕಾರಣ 2020-21ನೇ ಸಾಲಿನ ಕ್ರಿಯಾ ಯೋಜನೆ ಅನುಮೋದನೆಗೊಂಡಿರುವುದಿಲ್ಲವೆಂದು ಸರ್ಕಾರಕ್ಕೆ ತಿಳಿಸಿರುತ್ತಾರೆ. ಕೋರಂ ಮಾಡಿಕೊಳ್ಳಬೇಡಿಯೆಂದು ನಾವು ಅವರಿಗೆ ಹೇಳಿದ್ದೇವೆಯೇ? ಮಾನ್ಯ ಮರಿತಿಬ್ಬೇಗೌಡರು ಶಾಸಕರಾಗಿರುವುದರಿಂದ ಇವರಿಗೆ ಆಸಕ್ತಿ ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವರು ಅದೇ ಆಸಕ್ತಿಯಿಂದ ಉಳಿದಿರುವ ಜಿಲ್ಲಾ ಪಂಚಾಯಿತಿ ಸದಸ್ಯರುಗಳನ್ನು ಕೂರಿಸಿಕೊಂಡು 'ಯಾಕೆ ಈ ರೀತಿ ಮಾಡುತ್ತಿದ್ದೀರಿ, ಜಿಲ್ಲೆಯನ್ನು ಏತಕ್ಕೋಸ್ಕರ ಹಾಳು ಮಾಡುತ್ತಿದ್ದೀರಿ?' ಎಂದು ಹೇಳಿದ್ದರೆ, ಖಂಡಿತವಾಗಿಯೂ ನಾನು ಅವರನ್ನು ಮೆಚ್ಚಿಕೊಳ್ಳುತ್ತಿದ್ದೆ. ಮಾನ್ಯ ಮರಿತಿಬ್ಬೇಗೌಡರು, 'ಈ ಸರ್ಕಾರಕ್ಕೆ ಮಂಡ್ಯ ಜಿಲ್ಲೆಯ ಬಗ್ಗೆ ಕಳಕಳಿ ಇಲ್ಲ, ರಾಜಕಾರಣ ಮಾಡುತ್ತಿದೆ' ಎಂದು ದೊಡ್ಡ ಧ್ವನಿಯಲ್ಲಿ ಹೇಳುತ್ತಿದ್ದಾರೆ. ಮಾನ್ಯ ಮರಿತಿಬ್ಬೇಗೌಡರ ಧ್ವನಿ ದೊಡ್ಡದಾಗಿದೆ; ವಿರೋಧ ಪಕ್ಷದಲ್ಲಿದ್ದಾಗ, ನಾನು ಮತ್ತು ಅವರು ದೊಡ್ಡ ಧ್ವನಿಯಲ್ಲಿ ಮಾತನಾಡುವುದಕ್ಕೆ ಪರಸ್ಪರ ಸ್ಪರ್ಧಿಗಳಾಗಿದ್ದೆವು. ಅವರು ಜೆ.ಡಿ.(ಎಸ್)ನಲ್ಲಿದ್ದರು, ನಾನು ಬಿ.ಜೆ.ಪಿ.ಯಲ್ಲಿದ್ದೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಗೋವಿನ ರೀತಿ ಕುಳಿತುಕೊಂಡಿರುತ್ತಿದ್ದರು. ಮಾನ್ಯ ಸದಸ್ಯರು ಏರುಧ್ವನಿಯಲ್ಲಿ ನಾವು ಏನೋ ತಪ್ಪು ಮಾಡಿರುವ ರೀತಿ ಮಾತನಾಡುತ್ತಿದ್ದಾರೆ. ಪತ್ರಕರ್ತರ ಗ್ಯಾಲರಿಯಲ್ಲಿ ಈಗ ಕಡಿಮೆ ಜನರಿದ್ದಾರೆ, ಹೆಚ್ಚಿನ ಜನರಿದ್ದರೂ ಸಹ 'ಈ ಸರ್ಕಾರ ಮಂಡ್ಯ ಜಿಲ್ಲೆಯ ಬಗ್ಗೆ ಆಸಕ್ತಿ ಇಲ್ಲ' ಎಂದು ಬರೆಯುತ್ತಿದ್ದರು. ಆ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಕರೆದಂತಹ ಸಭೆಗೆ ಬೇರೆ ಸದಸ್ಯರು ಏತಕ್ಕೋಸ್ಕರ ಹಾಜರಾಗಿಲ್ಲವೆಂದು ನಾನು ನೇರವಾಗಿ ಮಾನ್ಯ ಸದಸ್ಯರಿಗೆ ಪ್ರಶ್ನೆ ಕೇಳುತ್ತಿದ್ದೇನೆ.

ಎರಡನೆಯದಾಗಿ, ಸಾಮಾನ್ಯ ಸಭೆಯಲ್ಲಿ ಕ್ರಿಯಾ ಯೋಜನೆಯನ್ನು ಅನುಮೋದಿಸಿ ಕಳುಹಿಸಿಕೊಟ್ಟಿದ್ದರೆ ಅದು ಒಂದು ರೀತಿಯಾಗಿರುತ್ತಿತ್ತು. ಆದರೆ, ಸ್ಥಾಯಿ ಸಮಿತಿಯಲ್ಲಿ ಕ್ರಿಯಾ ಯೋಜನೆಯನ್ನು ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಇವರದೊಂದು ಗುಂಪು, ಅವರದೊಂದು ಗುಂಪಾಗಿದೆ. ಒಂದು ಗುಂಪಿನವರು ರಾಜಕಾರಣ ಮಾಡುತ್ತಿದ್ದರೆ ಮತ್ತೊಂದು ಗುಂಪಿನವರು ಸುಮ್ಮನೆ ಇರುತ್ತಾರೆಯೇ? ಇದು ನಮ್ಮ ಕಡೆಯಿಂದ ಆಗಿರುವ ತಪ್ಪೇ? ನಾವು ಎಷ್ಟು ದಿನಗಳ ಕಾಲ ಕ್ರಿಯಾಯೋಜನೆಗಾಗಿ ಕಾದುಕೊಂಡು ಕುಳಿತಿರಬೇಕು? ಮಾಜಿ ಶಾಸಕರಾಗಿರುವ ಮಾನ್ಯ ಪುಟ್ಟರಾಜುರವರು ನನ್ನ ಬಳಿ ಬಂದು, 'ಆ ಜಿಲ್ಲಾ ಪಂಚಾಯಿತಿಯಲ್ಲಿ ಸುಮಾರು 41 ಜನ ಸದಸ್ಯರಿದ್ದಾರೆ. ಅವರಲ್ಲಿ ಬರೀ 18 ಜನರು ಮಾತ್ರ ದುಡ್ಡು ತೆಗೆದುಕೊಂಡಿದ್ದಾರೆ. ಬೇರೆ ಯಾರಿಗೂ ಕೊಟ್ಟೇ ಇಲ್ಲ' ಎಂದು ಹೇಳಿದರು. ನನಗೆ ನಿಜಕ್ಕೂ ಇಂತಹ ಮಾತುಗಳನ್ನು ಕೇಳುವುದಕ್ಕೆ ತುಂಬಾ ಬೇಜಾರಾಗುತ್ತದೆ. ಯಾವಯಾವ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ಎಷ್ಟು ಹಣವನ್ನು ಕೊಡಲಾಗಿದೆ ಎನ್ನುವುದರ ಬಗ್ಗೆ ಒಂದು ಪಟ್ಟಿಯನ್ನು ತರಿಸಿಕೊಂಡಿದ್ದೇನೆ. ಎಲ್ಲ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೂ ಹಣವನ್ನು ಕೊಡಲಾಗಿದೆ. ಸ್ಥಾಯಿ ಸಮಿತಿ ಒಂದು ನಿರ್ಣಯವನ್ನು ಮಾಡಿ ಇಟ್ಟುಕೊಂಡಿತ್ತು. ಸಾಮಾನ್ಯ ಸಭೆಯಲ್ಲಿ ಅದು ಅನುಮೋದನೆಗೊಳ್ಳಲಿಲ್ಲ, ಹಾಗೆಯೇ ಉಳಿಯಿತು.

(ಮುಂದುವರಿದಿದೆ)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(92) 2.2.2021 5.50 ಪಿಕೆ:ಎಂಡಿ
**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):–**

ಈಗ ಏನು ಮಾಡಬೇಕು? ರಾಜಕಾರಣವನ್ನು ನೀವೊಬ್ಬರು ಮಾತ್ರ ಮಾಡುತ್ತೀರಾ? ನಾವೂ ಕೂಡ ರಾಜಕಾರಣ ಮಾಡಿದ್ದೇವೆ ಎಂದು ನೇರವಾಗಿ ಹೇಳುತ್ತೇನೆ. ಒಟ್ಟಿಗೆ ಕುಳಿತುಕೊಂಡು, ನಿಮಗೆ ಆ ಸಮಿತಿಯವರೂ ಸಹ ಏನೂ ಕೊಟ್ಟಿಲ್ಲ ಎನ್ನುವುದಿದ್ದರೆ ನಾನು ನಿಜಕ್ಕೂ ಅದನ್ನೂ ಇಲ್ಲೇ ಕ್ಯಾನ್ಸಲ್ ಮಾಡಿಸುತ್ತಿದ್ದೆ. ಆದರೆ, ವ್ಯವಸ್ಥೆ ಹೇಗಿದೆ ಎಂದರೆ, ನಮ್ಮಗಳ ಕೈಗಳಲ್ಲಿ ಒಂದಿಷ್ಟು ದುಡ್ಡು ಸಿಕ್ಕಾಗ ಅದನ್ನು ಹಂಚಬೇಕಾದರೆ ಸ್ವಲ್ಪ ಹಿಂದೆ–ಮುಂದೆ ನೋಡುತ್ತೇವೆ. ನಮ್ಮ ಪಕ್ಷದವರು, ನಮ್ಮ ಸಂಬಂಧಿಕರು, ನಮ್ಮ ಸ್ನೇಹಿತರು ಎಂದು ನೋಡುತ್ತೇವೆ. ಅದೇ ರೀತಿ ಅವರೂ ಕೂಡ ಮಾಡಿದ್ದಾರೆ. ಶ್ರೀ ಯೋಗೀಶ್ ಎನ್ನುವವರಿಗೆ ರೂ. 17 ಲಕ್ಷ ಸಿಕ್ಕಿದೆ, ಅವರು ನಿಮ್ಮ ಗ್ರೂಪ್‌ನಲ್ಲಿರುವವರಾಗಿರಬಹುದು, ಅದೇರೀತಿ ದಗ್ಗೇಹಳ್ಳಿ ಮಂಜುನಾಥ್‌ರವರಿಗೆ ರೂ. 26 ಲಕ್ಷ ಸಿಕ್ಕಿದೆ, ಅವರು ನಮ್ಮ ಗ್ರೂಪ್‌ನವರಾಗಿರಬಹುದು. ನಾನು ಇದನ್ನು ಕೇವಲ ಉದಾಹರಣೆಯಾಗಿ ಹೇಳುತ್ತಿದ್ದೇನೆ. ನೀವು ಮಾಡಿರುವಂತಹ ತಪ್ಪನ್ನು ಸರ್ಕಾರದ ಮೇಲೆ ತರುವುದು ಯಾವ ನ್ಯಾಯ? ಮಾನ್ಯ ಸಭಾಪತಿಯವರೇ, ನಾವು ಎಲ್ಲವನ್ನೂ ಕಾನೂನುಬದ್ಧವಾಗಿ ಮಾಡಿದ್ದೇವೆ. ಕಾನೂನು ಮೀರಿ ಮಾಡಿದ್ದರೆ ದಯವಿಟ್ಟು ನೀವು ಅದನ್ನು ಹೇಳಿ, ನಾವು ಒಪ್ಪುತ್ತೇವೆ. ಈ ಕುರಿತು ತುಂಬಾ ಚರ್ಚೆ ಮಾಡುತ್ತಾ ಹೋದರೆ ನಿಮ್ಮ ಬಂಡವಾಳ ಇನ್ನೂ ಬಹಳ ಹೊರಗೆ ಬರುತ್ತದೆ, ಅದು ಆಗುವುದು ಬೇಡ. ನಾವು ಎಲ್ಲರಿಗೂ ಕೊಟ್ಟಿದ್ದೇವೆ, ಸ್ವಲ್ಪ ಹಿಂದೆ–ಮುಂದೆ ಆಗಿದೆ, ಇಲ್ಲ ಎಂದು ಹೇಳುತ್ತಿಲ್ಲ. ಮಾನ್ಯ ಪುಟ್ಟರಾಜುರವರು, ನಾವು–ನೀವು ಎಲ್ಲರೂ ಒಳ್ಳೆಯ ಸ್ನೇಹಿತರು. ಹಿರಿಯರಾದ ಮಾನ್ಯ ಪುಟ್ಟರಾಜುರವರು ದೆಹಲಿಯಿಂದ ದೂರವಾಣಿ ಮಾಡಿ, ನಮ್ಮ ಜಿಲ್ಲೆಯಲ್ಲಿರುವಂತಹ ಸಂಘರ್ಷಗಳು ನಿಮಗೆ ಗೊತ್ತಲ್ಲವೇ ಎಂಬ ಮಾತನ್ನು ಹೇಳಿದರು. ನಿಮ್ಮ ಜಿಲ್ಲೆಯ ಸಂಘರ್ಷಗಳನ್ನು ತಂದು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದರೆ ನಾವೇನು ಮಾಡುವುದಕ್ಕೆ ಆಗುತ್ತದೆ? ನಾನು ಅವರಿಗೆ, ತಾವು ತಲೆ ಕೆಡಿಸಿಕೊಳ್ಳಬೇಡಿ, ನಾವೆಲ್ಲರೂ ಕುಳಿತಕೊಂಡು ಒಂದು ರೂಪಕ್ಕೆ ತರುತ್ತೇವೆ ಎಂದು ಹೇಳಿದೆ. ಇಲ್ಲೇನು ಈಗ ಪ್ರಸ್ತಾಪ ಮಾಡುತ್ತಿದ್ದೀರೋ ಅದು ಆಗಿನ ಸಂದರ್ಭದಲ್ಲೇ ಬರಬೇಕಾಗಿತ್ತು. ಆರು ಮೀಟಿಂಗ್‌ಗಳು ಆಗದೇ ಇರುವಾಗ ನಮ್ಮ ಸರ್ಕಾರ ಎಷ್ಟು ದಿನ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುತ್ತದೆ? ಮಾನ್ಯ ಮರಿತಿಬ್ಬೇಗೌಡರು ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದರು. ಮಾನ್ಯ ಪುಟ್ಟರಾಜುರವರು ನಿನ್ನೆ ದೂರವಾಣಿ ಮಾಡಿದ್ದರು. ಆ ಜಿಲ್ಲಾಪಂಚಾಯತ್ ಅಧ್ಯಕ್ಷರು ಕೊಟ್ಟ ಮೇಲೆ ನಾವು ರೆಸಲ್ಯೂಷನ್ ಮಾಡಿ ಕಳುಹಿಸಿ ಎಷ್ಟು ದಿನಗಳಾಯಿತು? ನಾವು ಕಳುಹಿಸಿ ಬಹಳ ದಿನಗಳಾಯಿತು. ಜನವರಿ 27ರಂದು ಕಳುಹಿಸಿದ್ದೇವೆ. ಮಾನ್ಯ ಸಭಾಪತಿಯವರೇ, ಇವರಿಗೆ ಮಂಡ್ಯ ಜಿಲ್ಲೆಯ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ ಅಥವಾ ಅವರಿಗಿಂತ ಒಂದು ಹೆಜ್ಜೆ ಜಾಸ್ತಿ ಇದೆ ಎಂದು ಸ್ಪಷ್ಟ ಮಾಡಬಯಸುತ್ತೇನೆ. ಏಕೆಂದರೆ, ನಿಮ್ಮವರು ಈಗ ನಮ್ಮ ಜೊತೆ ಬಂದಿದ್ದಾರೆ. ಹೌದೋ ಅಲ್ಲವೋ ದಯವಿಟ್ಟು ಹೇಳಿ. ಕೇಂದ್ರ ನಿನ್ನೆ ಮಂಡಿಸಿದ ಬಜೆಟ್‌ನಲ್ಲಿ ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ರಾಜ್ಯಗಳಿಗೆ ಹೆಚ್ಚು ಹಣವನ್ನು ಇಟ್ಟರು, ಏಕೆ? ನಮಗೆ ರಾಜಕೀಯ ಮಾಡುವುದಕ್ಕೆ ಬರುವುದಿಲ್ಲವೇನು? ಮಾನ್ಯ ಎಸ್.ಆರ್.ಪಾಟೀಲರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾಗೆ ಹಿಂದೆ ನಾವೂ ಕೂಡ ಗೋವಿನ ಹಾಗೆ ಇದ್ದುದರಿಂದ ನಮ್ಮ ಪಕ್ಷ ಡಿಪಾಸಿಟ್ ಕಳೆದುಕೊಳ್ಳುತ್ತಿತ್ತು. ಈಗ ಎಲ್ಲಾ ರೀತಿಯ ರಾಜಕಾರಣವನ್ನು ಕಲಿತ್ತಿದ್ದೇವೆ. ಎಲ್ಲಾ ಪಟ್ಟುಗಳನ್ನು ನೀವೇ ಕಲಿಸಿಕೊಟ್ಟಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ತಾವು ಈಗ ಏನೋ ಹೇಳಿದಿರಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ತಾವು ಗೋವು ಇದ್ದಹಾಗೆ ಇದ್ದಿರಿ ಎಂದು ಹೇಳಿದೆ. ನಿಮ್ಮ ಬಗ್ಗೆ ಯಾರಾದರೂ ಮಾತನಾಡಿದರೆ ಅವರನ್ನು ಸುಮ್ಮನೆ ಬಿಡುವುದಿಲ್ಲ. ಗೋವನ್ನು ನಾವು ತಾಯಿ ಎಂದು ಹೇಳುತ್ತೇವೆ. ಮಾನ್ಯ ಸಭಾಪತಿಯವರೇ, ಇಲ್ಲೇನು ತೀರ್ಮಾನ ತೆಗದುಕೊಂಡಿದ್ದೇವೆಯೋ ಅದನ್ನು ಕಾನೂನುಬದ್ಧವಾಗಿ ತೆಗೆದುಕೊಂಡಿದ್ದೇವೆ. ಇದರಲ್ಲಿ ಕಾನೂನಿಗೆ ವಿರುದ್ಧವಾಗಿದೆ ಎನ್ನುವ ಪ್ರಶ್ನೆ ಇಲ್ಲ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗೋಸ್ಕರ ನಾವು ಕ್ರಮ ಕೈಗೊಂಡಿದ್ದೇವೆ. ಇನ್ನೂ 2-3 ತಿಂಗಳು ಸಮಯ ಇದೆ, ನಿಮ್ಮ ಜಿಲ್ಲಾ ಪರಿಷತ್ತಿನ ಸದಸ್ಯರುಗಳಿಗೆ ದಯವಿಟ್ಟು ಮೀಟಿಂಗ್‌ಗಳಿಗೆ ಹೋಗುವುದಕ್ಕೆ ಹೇಳಿ. ಮೀಟಿಂಗ್‌ನಲ್ಲಿ ಕುಳಿತುಕೊಂಡು ಚರ್ಚೆ ಮಾಡಲಿ. ಈಗೇನಾಗಿದೆಯೋ ಅದನ್ನು ಬಿಟ್ಟುಬಿಡಿ. ಮಂತ್ರಿಗಳಾದ ಮಾನ್ಯ ನಾರಾಯಣಗೌಡರು ಸದನದಲ್ಲೇ ಕುಳಿತಿದ್ದಾರೆ. ನಾನು ಯಾವುದೇ ರೀತಿಯಲ್ಲಿ ತಾರತಮ್ಯ ಮಾಡುವುದಕ್ಕೆ ತಯಾರಿಲ್ಲ. ಒಬ್ಬೊಬ್ಬರಿಗೆ ಅಥವಾ ಒಂದೊಂದು ಕ್ಷೇತ್ರಕ್ಕೆ ರೂ. 4-5 ಲಕ್ಷ ಹೆಚ್ಚು-ಕಡಿಮೆ ಆಗಿರಬಹುದು, ನಾನು ಇಲ್ಲ ಎಂದು ಹೇಳುವುದಿಲ್ಲ. ಬಹಳ ಕಡಿಮೆ ಎಂದರೆ ರೂ.16 ಲಕ್ಷ, ಇನ್ನು ಕೆಲವರಿಗೆ ರೂ. 27 ಲಕ್ಷ, ರೂ. 35 ಲಕ್ಷ ಕೊಟ್ಟಿರುವುದಿದೆ. ಈಗಿನ ರಾಜಕಾರಣದಲ್ಲಿ, ನಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿ ಮತ್ತೆ ನಾವು ಗೆಲ್ಲುತ್ತೇವೆ ಎಂದು ಭಾವಿಸಿದರೆ ಅದರಂತಹ ಭ್ರಮೆ ಇನ್ನೊಂದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ನೀವು ಸರಿಯಾಗಿ ಹೇಳುತ್ತಿದ್ದೀರಿ. ಬಿಜೆಪಿ ಸರ್ಕಾರ ಅಭಿವೃದ್ಧಿ ಎನ್ನುವುದನ್ನೇ ಬಿಟ್ಟುಬಿಟ್ಟಿದೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಹಾಗೆ ಹೇಳಿ ಮತ್ತೆ ನೀವು ನಮ್ಮ ಹತ್ತಿರ ಬರುತ್ತೀರಿ. ಮಾನ್ಯ ಸದಸ್ಯರೇ ದಯವಿಟ್ಟು ನಾನು ಹೇಳುವುದನ್ನು ಕೇಳಿ. ಅಭಿವೃದ್ಧಿ ಒಂದರಿಂದಲೇ ಜನ ಮತ ಕೊಡುತ್ತಿಲ್ಲ, ವಿಶ್ವಾಸ-ಪ್ರೀತಿ, ಜನರ ಮಧ್ಯೆ ಹೋಗುವುದೂ ಕೂಡ ಅವಶ್ಯಕವಾಗಿರುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ರಾಮನ ಪೂಜೆ ಮಾಡುವುದರಿಂದ ಮತ ಕೊಡುತ್ತಾರೆ ಅಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಅದೂ ಕೂಡ ನಿಜ. ಭಾರತ ಮಾತೆಯನ್ನು ಪೂಜೆ ಮಾಡುವುದರಿಂದಲೂ ಮತ ಕೊಡುವುದು ನಿಜ. ಪಾಕಿಸ್ತಾನದ ಪರವಾಗಿ ಯಾರು ಮಾತನಾಡುತ್ತಾರೋ ಅವರ ಕೈ–ಕಾಲು ಮುರಿಯುತ್ತೇವೆ ಎಂದು ಹೇಳುವುದೂ ಹೌದು, ಇದರಲ್ಲಿ ಬೇರೆ ಮಾತಿಲ್ಲ. ಇವೆಲ್ಲವನ್ನೂ ಸೇರಿಸಿಕೊಂಡೆ ನಾವು ಗೆದ್ದಿದ್ದೇವೆ.

ಮಾನ್ಯ ಸಭಾಪತಿಯವರೇ, ನಾವು ಯಾವುದೇ ಕಾರಣಕ್ಕೂ ಮಂಡ್ಯ ಜಿಲ್ಲೆಯನ್ನು ತಾತ್ಸಾರ ಮಾಡುವುದಿಲ್ಲ. ಅಕಸ್ಮಾತ್ ಯಾವುದಾದರೂ ಜಿಲ್ಲಾ ಪರಿಷತ್ತಿನ ವ್ಯಕ್ತಿಗಳಿಗೆ, ಸದಸ್ಯರುಗಳಿಗೆ ಅಥವಾ ಅವರ ಕ್ಷೇತ್ರಕ್ಕೆ ಇನ್ನೂ ಸ್ವಲ್ಪ ಹಣ ಬೇಕು ಎಂದು ಹೇಳಿದರೆ ಖಂಡಿತ ಆ ನಿಟ್ಟಿನಲ್ಲಿ ಏನು ನ್ಯಾಯವಾಗಿ ಕೊಡಬೇಕೋ ಅದನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರ ಕೊಟ್ಟರು. ಆದರೆ ಒಂದು ಮಾತನ್ನು ಹೇಳಿದರು. ನಾನು ಇನ್ನೂ ಮಾತನಾಡಿದರೆ ನಿಮ್ಮದು ಕಥೆ ಬಹಳ ಇದೆ ಎಂದು ಹೇಳಿದರು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮರಿತಿಬ್ಬೇಗೌಡರ ಬಗ್ಗೆ ಹೇಳಿದ್ದಲ್ಲ; ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ರಾಜಕಾರಣದ ಬಗ್ಗೆ ಹೇಳಿದೆ. ಹೌದೋ ಅಲ್ಲವೋ ಎಂಬುದನ್ನು ನೀವೇ ಹೇಳಿ. ಬೆಳಗ್ಗೆ ಒಬ್ಬ ಹಿರಿಯರು ದೂರವಾಣಿ ಮಾಡಿ, ನಮ್ಮ ಜಿಲ್ಲೆಯ ಪರಿಸ್ಥಿತಿ ನಿಮಗೆ ಗೊತ್ತಲ್ಲವೇ, ಹೀಗಾದರೆ ಹೇಗೇ? ಎಂದು ಅವರೇ ನೊಂದು ಹೇಳಿದ ಮೇಲೆ ಇದನ್ನು ನಾನು ಸಮರ್ಥನೆ ಮಾಡಿಕೊಳ್ಳಬೇಕೋ ಬೇಡವೋ? ನಾನು ಬೇರೆ ಯಾವ ದುರುದ್ದೇಶದಿಂದ ಹೇಳಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಪಂಚಾಯತ್ ರಾಜ್ ಇಲಾಖೆ ವತಿಯಿಂದ ಎಂದೂ ಕಡೆಗಣಿಸಿಲ್ಲ ಎಂದು ಹೇಳಿದರು. ರಾಜಕೀಯ ವ್ಯವಸ್ಥೆಯಲ್ಲಿ ಎಲ್ಲಾ ಕಡೆ ಸಮಸ್ಯೆಗಳು ಬರುತ್ತವೆ. ಆ ಸಮಸ್ಯೆಗಳನ್ನು ಗಮನಿಸಿಕೊಂಡು, ಬಗೆಹರಿಸುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ. ಮಂಡ್ಯ ಜಿಲ್ಲೆಯ ಪಂಚಾಯತ್‌ನಲ್ಲಿ ಸೆಪ್ಟೆಂಬರ್ 2019ರಿಂದ ಈ ಸಮಸ್ಯೆ ಉದ್ಭವವಾಗಿದೆ. ಆಡಳಿತ ವ್ಯವಸ್ಥೆ, ಅಭಿವೃದ್ಧಿ ಕುಸಿದು ಬಿದ್ದಿದೆ. ರೂ. 311 ಕೋಟಿಗಳ ಕ್ರಿಯಾ ಯೋಜನೆ ಅಪ್ರೂವಲ್ ಆಗಬೇಕಾಗಿದೆ. ಪ್ರತಿ ತಿಂಗಳು ಕೋರಂ ಇಲ್ಲದೇ ಸಭೆಗಳನ್ನು ಮುಂದೂಡುತ್ತಿರುವ ವಿಷಯವನ್ನು ಅಧಿಕಾರಿಗಳು ಸರ್ಕಾರದ ಗಮನಕ್ಕೆ, ಇಲಾಖೆಯ ಗಮನಕ್ಕೆ ತಂದಿದ್ದಾರೆ. ಮಂಡ್ಯ ಜಲ್ಲೆಯ ಬಗ್ಗೆ ಕಳಕಳಿ ಇರುವಂಥವರು, ಈ ಸರ್ಕಾರದಲ್ಲಿ ಇಷ್ಟೊಂದು ಪ್ರಭಾವಿಗಳಾಗಿರುವ ಮಾನ್ಯ ಸಚಿವರು, ಹಿರಿಯರು, ಅನುಭವಿಗಳು ಪಂಚಾಯತ್ ರಾಜ್ ಇಲಾಖೆಯನ್ನು ಬಹಳವಾಗಿ ಅಭಿವೃದ್ಧಿ ಮಾಡುವುದಕ್ಕೆ ಬಂದಿರುವವರು ಮಂಡ್ಯ ಜಿಲ್ಲೆಗೆ ಹೋಗಿ ಕುಳಿತು, ಅಧಿಕಾರಿಗಳನ್ನು ಕರೆದು, ಏಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೀಗಾಗುತ್ತಿದೆ, ಸರ್ಕಾರದ ಜವಾಬ್ದಾರಿ ಏನು, ಕರ್ತವ್ಯಗಳೇನು, ಏನು ಮಾಡಬೇಕು ಎನ್ನುವುದರ ಬಗ್ಗೆ ಒಂದು ನಿರ್ದೇಶನವನ್ನು ಕೊಡಲಿಲ್ಲ ಅಥವಾ ಜಿಲ್ಲಾ ಪಂಚಾಯಿತಿಯ ಅಧಿಕಾರಿಗಳನ್ನು ವಿಧಾನಸೌಧಕ್ಕೆ ಕರೆಸಿಕೊಂಡು, ಏಕೆ ಹೀಗಾಗುತ್ತಿದೆ, ಆ್ಯಕ್ಟ್‌ನಲ್ಲಿ ಏನು ಪ್ರಾವಿಷನ್ ಇದೆ, ಈ ಹಂತದಲ್ಲಿ ಸರ್ಕಾರ ಏನು ಮಾಡುವುದಕ್ಕೆ ಸಾಧ್ಯ ಎಂದು ವಿಚಾರಿಸಬೇಕಾಗಿತ್ತು. ಮಂಡ್ಯ ಜಿಲ್ಲೆಯ ಅಭಿವೃದ್ಧಿ ಕುಂಠಿತವಾಗಬಾರದು. 22 ಇಲಾಖೆಯ ವತಿಯಿಂದ ಸಿಗಬೇಕಾದ ಸೌಲಭ್ಯಗಳಿಂದ ವಂಚಿತವಾಗಿ ಅಭಿವೃದ್ಧಿ ಹಾಳಾಗುತ್ತಿದೆ, ಅದು ಆಗಬಾರದು ಎಂದು ಹೇಳುವ ಕೆಲಸವನ್ನು ಇವರು ಮಾಡಲಿಲ್ಲ. ಇಲ್ಲಿ ಸರ್ಕಾರದ ಲೋಪವಿಲ್ಲವೇ? ಇದು ಮುಖ್ಯಮಂತ್ರಿಗಳ ಜಿಲ್ಲೆಯಾಗಿದೆ. ಕೆ.ಆರ್ ಪೇಟೆಯ ಉಪಚುನಾವಣೆಯ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ ಕೇಳುವಾಗ, ನನ್ನ ಜಿಲ್ಲೆ ಮಂಡ್ಯ ಜಿಲ್ಲೆ, ಶಿವಮೊಗ್ಗ ಜಿಲ್ಲೆಯಲ್ಲಿ ಸುಮ್ಮನೆ ಇದ್ದೇನೆ, ಇಲ್ಲೇ ನಮ್ಮ ಹಳೆಯ ಮನೆ ಇದೆ, ಬಂಧು-ಬಾಂಧವರು ಇಲ್ಲೇ ಇದ್ದಾರೆ ಎನ್ನುವ ಮಾತನ್ನು ಹೇಳಿದರು. ಮಂಡ್ಯ ಜಿಲ್ಲೆಯನ್ನು ಎಂದೂ ಕಡೆಗಣಿಸುವುದಿಲ್ಲ ಎಂದು ಹೇಳಿದರು. ಇವತ್ತು ಇಂತಹ ಒಂದು ಹೀನಾಯ ಪರಿಸ್ಥಿತಿಗೆ ಮಂಡ್ಯ ಜಿಲ್ಲಾ ಪಂಚಾಯಿತಿ ಹೋಗಿದೆ ಎಂದಾಗ, ಮಾನ್ಯ ಸಚಿವರು, ಒಂದೂವರೆ ವರ್ಷದ ಮೇಲೆ, ಅವರ ಪಕ್ಷದ ಪರವಾಗಿರುವ ಒಬ್ಬ ಅಧ್ಯಕ್ಷಿಣಿ ಕಳುಹಿಸುತ್ತಾರೆ ಎಂದು ಹೇಳಿದರೆ ... ಸ್ಥಾಯಿ ಸಮಿತಿಗಳು ಅಪ್ರೂವಲ್ ಮಾಡಿರುವಂಥದ್ದು ಸರಿಯಾಗಿಲ್ಲ ಎಂದು ಹೇಳುತ್ತಾರೆ.

**ಶ್ರೀ ಕೆ.ಸಿ. ನಾರಾಯಣ ಗೌಡ (ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಯೋಜನಾ ಕಾರ್ಯಕ್ರಮ ಮಾನಿಟರಿಂಗ್ ಅಂಕಿ-ಅಂಶಗಳ ಇಲಾಖೆ):-** ಮಾನ್ಯ ಸಭಾಪತಿಯವರೇ, ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. ಮಾನ್ಯ ಸದಸ್ಯರು ತಪ್ಪಾಗಿ ಮಾತನಾಡುತ್ತಿರುವುದನ್ನು ನಾವೂ ಖಂಡಿಸಬೇಕಾಗುತ್ತದೆ. ಅಲ್ಲಿ ಜೆಡಿಎಸ್‌ನವರೇ ಅಧ್ಯಕ್ಷರಾಗಿದ್ದಾರೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಂತರ ಮಾತನಾಡಲಿ. ಇಲಾಖೆಯ ಕಾರ್ಯದರ್ಶಿಗಳು ದಿನಾಂಕ:07.11.2020ರಲ್ಲಿ ಜಿಲ್ಲಾ ಪಂಚಾಯಿತಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಮಾನ್ಯ ಸಭಾನಾಯಕರೇ, ನಾನು ನಿಮ್ಮ ಬಗ್ಗೆ ಮಾತನಾಡುವುದಿಲ್ಲ.

(ಮುಂದು)

(93) 2-2-2021/6.00/ ಡಿಎಸ್-ಎಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸತ್ಯಕ್ಕೆ ಅನ್ಯಾಯವಾಗಬಾರದು. ಅವರು ಎಷ್ಟು ಬೇಕಾದರೂ ಮಾತನಾಡಲಿ. ಆದರೆ, ಸತ್ಯಕ್ಕೆ ಅನ್ಯಾಯವಾಗಬಾರದಲ್ಲವೇ? ಮಹಿಳೆ ಅಧ್ಯಕ್ಷರಾಗಿದ್ದಾರೆ ಎನ್ನುವ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣಕ್ಕಾಗಿ ಅಧಿಕಾರವನ್ನೇ ಕಸಿದುಕೊಳ್ಳುವುದು ಸರಿಯಲ್ಲ. ಜಿಲ್ಲಾ ಪಂಚಾಯಿತಿಯ ಅಧ್ಯಕ್ಷಣಿಯ ಅಧಿಕಾರವನ್ನು ಕಸಿದುಕೊಳ್ಳುವುದು ಅವರಿಗೆ ಸರಿ ಅನಿಸುತ್ತಿದೆಯೇ?

**ಶ್ರೀ ಮರಿತಿಬ್ಬೇಗೌಡ:-** ನಿಮ್ಮ ಅಧ್ಯಕ್ಷಣಿ ಏನು ಮಾಡಿದ್ದಾರೆಂದು ನಾನು ತಮಗೆ ತಿಳಿಸುತ್ತೇನೆ, ಕುಳಿತುಕೊಳ್ಳಿ.

**ಶ್ರೀ ಕೆ.ಸಿ.ನಾರಾಯಣಗೌಡ:-** ಮಾನ್ಯ ಮರಿತಿಬ್ಬೇಗೌಡರೇ, ಅಧ್ಯಕ್ಷರು ಯಾವ ಪಕ್ಷದವರು ಎನ್ನುವುದನ್ನು ದಯವಿಟ್ಟು ಬಿಡಿಸಿ ಹೇಳಿ. ಬಿಜೆಪಿ ಪಕ್ಷದಿಂದ ಒಬ್ಬರೆ ರಾಜೀನಾಮೆ ಕೊಟ್ಟು ಗೆದ್ದಿರುವವರು. ಎಲ್ಲಾ ಜೆಡಿಎಸ್ ನಲ್ಲೇ ಇದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ತಾವು ಯಾವ ಪಕ್ಷದಿಂದ ಗೆದ್ದು ಮಂತ್ರಿಯಾಗಿದ್ದೀರಿ ಹಾಗೆಯೇ ಅಲ್ಲಿ ಈಗ ಯಾವ ಪಕ್ಷದವರನ್ನು ಅಧ್ಯಕ್ಷಣಿಯನ್ನಾಗಿ ಇಟ್ಟುಕೊಂಡಿದ್ದೀರಿ?

**ಶ್ರೀ ಕೆ.ಸಿ.ನಾರಾಯಣಗೌಡ:-** ನಿಮ್ಮ ನಿಯಂತ್ರಣ ಬಿಟ್ಟು ಹೋಗಿದ್ದರೆ ಇನ್ನೇನು ಮಾಡುತ್ತಾರೆ? ಯಾವುದಾದರೂ ಪಕ್ಷಕ್ಕೆ ಹೋಗಲೇ ಬೇಕಾಗುತ್ತದೆ. ನೀವು ಸರಿಯಾಗಿಟ್ಟುಕೊಂಡಿದ್ದರೆ ಅವರು ಏಕೆ ಹೋಗುತ್ತಿದ್ದರು? ದಯವಿಟ್ಟು ಅವರು ಯಾವ ಪಕ್ಷದವರು ಎಂಬುದನ್ನು ಹೇಳಿ, ನಿಮ್ಮ ಪಕ್ಷದವರು ಎಂದು ಹೇಳುತ್ತೀರಿ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ದಿನಾಂಕ:7-11-2020 ರಲ್ಲಿ ಕಾರ್ಯದರ್ಶಿಯವರು ಪತ್ರ ಬರೆಯುತ್ತಾರೆ, "ಸ್ಥಾಯಿ ಸಮಿತಿಗಳಲ್ಲಿ ಕ್ರಿಯಾ ಯೋಜನೆ ಅಪ್ರೂವ್ ಮಾಡಿ ಇಲ್ಲಿಗೆ ಕಳುಹಿಸಿ ಕೊಡಿ ಎಂದು, ಅದರಲ್ಲಿ ಮತ್ತೊಂದು ವಿಚಾರವನ್ನು ಹೇಳುತ್ತಾರೆ. ಕರ್ನಾಟಕ ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 234 ರನ್ವಯ ಸರ್ಕಾರವು ಅಧಿಕಾರವನ್ನು ಚಲಾಯಿಸಿ ಮಂಡ್ಯ ಜಿಲ್ಲಾ ಪಂಚಾಯಿತಿಗೆ 2020-21ರ ಕ್ರಿಯಾ ಯೋಜನೆಯನ್ನು ಸ್ಥಾಯಿ ಸಮಿತಿಗಳ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ. ಪ್ರಕರಣ 234 ರನ್ವಯ ಹಾಗೂ ಅಗತ್ಯವಿದ್ದಲ್ಲಿ ಅಧಿನಿಯಮ ಪ್ರಕರಣ 321 ರಲ್ಲಿ ಕಾನೂನಾತ್ಮಕ ಬಿಕ್ಕಟ್ಟನ್ನು ನಿವಾರಿಸುವ ಅಧಿಕಾರವನ್ನು ಚಲಾಯಿಸಿ ಅನುಮೋದನೆಯನ್ನು ನೀಡಿದೆ. ಅದರಂತೆ ಸ್ಥಾಯಿ ಸಮಿತಿಗಳ ಅನುಮೋದನೆಯಾಗಿರುವ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ." ಕಾರ್ಯದರ್ಶಿಯವರು ಪಂಚಾಯತ್ ರಾಜ್ ಇಲಾಖೆಯ ಕಾಯ್ದೆಯ ನಿಯಮಾವಳಿಗಳಲ್ಲಿರತಕ್ಕಂಥದ್ದನ್ನು ಹೇಳಿ ಕಳುಹಿಸಿದ್ದಾರೆ. ಸ್ಥಾಯಿ ಸಮಿತಿಯಿಂದ ಕ್ರಿಯಾ ಯೋಜನೆ ಅಪ್ರೂವಲ್ ಆಗಿ ಬಂದ ಮೇಲೆ, ಅವರು ಸ್ಥಾಯಿ ಸಮಿತಿಯ ಕ್ರಿಯಾ ಯೋಜನೆಯನ್ನು ಬಿಟ್ಟು ಏಕಾಏಕಿ ಒಬ್ಬ ಅಧ್ಯಕ್ಷಣಿ ಕೊಟ್ಟಿರುವಂತಹ ಕ್ರಿಯಾ ಯೋಜನೆಯನ್ನು ಅನುಮೋದಿಸಿ ಕಳುಹಿಸಿದ್ದೀರಲ್ಲಾ ಇದು ಸರಿಯೇ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್:–** ಮಾನ್ಯ ಮರಿತಿಬ್ಬೇಗೌಡರೇ, ಈ ವಿಷಯ ಪ್ರಸ್ತಾಪವಾಗಿ 35 ನಿಮಿಷಗಳಾಗಿವೆ. ಇನ್ನು ನಾಲ್ಕು ಗಮನ ಸೆಳೆಯುವ ಸೂಚನೆಗಳು, ನಿಯಮ 330 ಇದೆ. ಇವೆಲ್ಲಾ ಮುಗಿಸಬೇಕು. ಎಲ್ಲರಿಗೂ ಅವಕಾಶ ಕೊಡಬೇಕು. ದಯವಿಟ್ಟು ಇನ್ನು ಐದು ನಿಮಿಷಗಳಲ್ಲಿ ಮುಗಿಸಬೇಕು.

(ಗೊಂದಲ)

**ಶ್ರೀ ಕೆ.ಸಿ.ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಸತ್ಯ ಏನಿದೆ ಎಂಬುದನ್ನು ಸದನದ ಗಮನಕ್ಕೆ ತರಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದು ಆ ಜಿಲ್ಲೆಯ ಅಭಿವೃದ್ಧಿ ವಿಚಾರವಾಗಿದೆ. ಜಿಲ್ಲಾ ಪಂಚಾಯಿತಿಯಲ್ಲಿ ಫಲಾನುಭವಿಗಳಿಗೆ 22 ಇಲಾಖೆಗಳಿಂದ ಆಗಿರುವಂತಹ ಅನ್ಯಾಯಗಳ ಬಗ್ಗೆ ಸಂಬಂಧಪಟ್ಟದ್ದಾಗಿದೆ. ದಯಮಾಡಿ ಇದಕ್ಕೆ ತಾವು ಸಹಕಾರ ಮಾಡಬೇಕು.

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರೇ, ಈಗ ಸಮಯವಿಲ್ಲ. ನೀವು ಗಂಭೀರ ಎಂದು ಹೇಳುತ್ತೀರಿ, ಅವರು ಗಂಭೀರ ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಸಿ.ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಸತ್ಯ ಹೊರಗಡೆ ಬರಬೇಕು. ಏಳು ಸಭೆಗಳನ್ನು ಕರೆಯಲಾಗಿದೆ. ಸದಸ್ಯರುಗಳು ಏತಕ್ಕಾಗಿ ಸಭೆಗೆ ಬಂದಿಲ್ಲ? ಇದಕ್ಕೆ ಮೊದಲು ಮಾನ್ಯ ಮರಿತಿಬ್ಬೇಗೌಡರು ಸ್ಪಷ್ಟೀಕರಣವನ್ನು ನೀಡಲಿ. ಏಳು ಸಭೆಗಳನ್ನು ಕರೆಯಲಾಗಿದೆ. ಒಂದು ಸಭೆಗೂ ಸದಸ್ಯರುಗಳು ಬಂದಿಲ್ಲ. ಪ್ರತಿಭಟನೆ ಮಾಡಿದ್ದಾರೆ. ಕರ್ನಾಟಕದಲ್ಲಿ ಅಲ್ಲ, ಇಡೀ ಭಾರತ ದೇಶದಲ್ಲೇ ರೆಕಾರ್ಡ್ ಬ್ರೇಕ್ ಮಾಡಿದ್ದಾರೆ. ಚುನಾವಣೆ ಇಲ್ಲ, ಕೋರ್ಟ್ ನಿರ್ದೇಶನ ಇಲ್ಲ. ಇವರ ಒಬ್ಬ ಸದಸ್ಯರು ಹೋಗಿ ಅಧ್ಯಕ್ಷರಾಗಿ ಹಾರ ಹಾಕಿಕೊಂಡು ಅವರೇ ಕುಳಿತಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ? ಹಾರ ಅವರೇ ಹಾಕಿಕೊಂಡಿದ್ದಾರೆ. ಯಾರನ್ನು ಕರೆದಿಲ್ಲ, ಚುನಾವಣೆಯೂ ಆಗಿಲ್ಲ, ಯಾವ ಕೋರ್ಟ್ ನಿರ್ದೇಶನವೂ ಇಲ್ಲ. ನಾವು ಅನ್ಯಾಯ ಮಾಡುತ್ತಿದ್ದೇವೆಯೋ. ಅವರು ಅನ್ಯಾಯ ಮಾಡುತ್ತಿದ್ದಾರೆಯೋ ಎಂಬುದಕ್ಕೆ ಮಾನ್ಯ ಮರಿತಿಬ್ಬೇಗೌಡರು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಅದು ಸಾಧ್ಯವೇ? ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ? ನಾನು ಈಗ ಆ ಚೇರ್‌ಗೆ ನಾನೇ ಬಂದು ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಆ ರೀತಿ ಇವರು ಕೂರಿಸಿದ್ದಾರೆ. ದಯವಿಟ್ಟು ಅದರ ಬಗ್ಗೆ ಮಾನ್ಯ ಮರಿತಿಬ್ಬೇಗೌಡರು ಹೇಳಲಿ. ಕರೆದು ಕೂರಿಸಿದರೆ ಅಲ್ಲಿ ಕೂರುವುದಕ್ಕೆ ಸಾಧ್ಯ. ನಾನೇ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾನ್ಯ ಮರಿತಿಬ್ಬೇಗೌಡರು ಒಪ್ಪಿಕೊಳ್ಳುತ್ತಿಲ್ಲ. ನಮ್ಮ ಮುಖ್ಯಮಂತ್ರಿಗಳ ಬಗ್ಗೆ ಮರಿತಿಬ್ಬೇಗೌಡರು ಮಾತನಾಡಿರುವುದು ತಪ್ಪು. ಅವರು ಕೆ.ಆರ್.ಪೇಟೆ ಉಪಚುನಾವಣೆ ಬಗ್ಗೆ ಮಾತನಾಡಿದರು. ಕೆ.ಆರ್.ಪೇಟೆ ಇದುವರೆಗೂ ಎರಡನೇ ಶಿಕಾರಿಪುರ ಆಗಿದೆ. ಅದಕ್ಕೆ ನಾನು ಸಾಕ್ಷಿ ಕೊಡುವುದಕ್ಕೆ ತಯಾರಿದ್ದೇನೆ. ದಯವಿಟ್ಟು ನಮ್ಮ

ಮುಖ್ಯಮಂತ್ರಿಗಳ ಬಗ್ಗೆ ತಪ್ಪು ಮಾಹಿತಿಯನ್ನು ಕೊಡಬಾರದು. ಅವರು ಮಂಡ್ಯ ಜಿಲ್ಲೆಗಲ್ಲಾ ಕೊಟ್ಟಿರುವುದು. ಮಂಡ್ಯ ಜಿಲ್ಲೆಯಲ್ಲಿ ಜೆಡಿಎಸ್ ನಿಂದ 9 ಜನರು ಇದ್ದಾರೆ. ನಾನೊಬ್ಬನೆ ರಾಜೀನಾಮೆ ಕೊಟ್ಟಿರುವುದು.

**ಶ್ರೀ ಮರಿತಿಬ್ಬೇಗೌಡ:-** ಈ ಮಾತು ದಾಖಲೆಗೆ ಹೋಗುತ್ತಿದೆ. ಈ ವಿಚಾರದಲ್ಲಿ ನಾನು ಸತ್ಯ ಹೇಳುತ್ತಿದ್ದೇನೆ.

**ಶ್ರೀ ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಅವರು ಭರವಸೆ ಕೊಟ್ಟಿರುವುದನ್ನು ಪೂರ್ತಿ ಮಾಡಿದ್ದಾರೆ. ಈ ದಿನ ಏಕೆ ಮಾನ್ಯ ಮರಿತಿಬ್ಬೇಗೌಡರು excite ಆಗಿದ್ದಾರೆ ಎನ್ನುವುದು ನನಗೆ ಅರ್ಥ ಆಗುತ್ತಿಲ್ಲ. ಕಾನೂನು ಬದ್ಧವಾಗಿ ಮಂಡ್ಯದಲ್ಲಿ ಕುಳಿತುಕೊಂಡು ಸಭೆಯನ್ನು ಮಾಡಿ ಸರಿಪಡಿಸೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ನಾರಾಯಣಗೌಡರು ಬಹಳ ಚೆನ್ನಾಗಿ ಮಾತನಾಡಿದರು. ಮಾನ್ಯ ಮುಖ್ಯಮಂತ್ರಿಗಳು ಉಪ ಚುನಾವಣೆಯಲ್ಲಿ ಕೆ.ಆರ್.ಪೇಟೆ ವಿಷಯಕ್ಕೆ ಮಾತ್ರ ಸೀಮಿತವಾಗಿ ಹೇಳಿದ್ದರು, ಮಂಡ್ಯ ಜಿಲ್ಲೆಗಲ್ಲಾ ಎಂದು ಸ್ಪಷ್ಟವಾಗಿ ತಿಳಿಸಿದರು. ಮಾನ್ಯ ಸಚಿವರು ಸತ್ಯ ಹೇಳಿದರು.

**ಶ್ರೀ ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯಲ್ಲಿ ಚುನಾವಣೆ ಇದ್ದದ್ದು. ಕೆ.ಆರ್.ಪೇಟೆಯಲ್ಲಿ ಅವರು ಹುಟ್ಟಿರುವುದು. ಕೆ.ಆರ್.ಪೇಟೆ ಅವರ ಹುಟ್ಟೂರು, ಜನ್ಮಭೂಮಿ. ನಾನು ಹೇಳಿರುವುದು ಇದುವರೆಗೂ ತಪ್ಪಾಗಿಲ್ಲ, ಎಲ್ಲಾ ಸ್ಪಷ್ಟವಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಶುಗರ್ ಫ್ಯಾಕ್ಟರಿ ಪ್ರಾರಂಭ ಮಾಡುತ್ತೇನೆಂದು ಹೇಳಿದರು. ಅದು ಪ್ರಾರಂಭವಾಗಿದೆ. ಮತ್ತೊಂದು ಶುಗರ್ ಫ್ಯಾಕ್ಟರಿಯನ್ನು ಶೀಘ್ರದಲ್ಲೇ ಪ್ರಾರಂಭ ಮಾಡುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಯಣಗೌಡರು ತುಂಬಾ ಚೆನ್ನಾಗಿ ಮಾತನಾಡಿದರು. ಒಬ್ಬ ಜಿಲ್ಲಾ ಉಸ್ತುವಾರಿ ಸಚಿವರ ಜವಾಬ್ದಾರಿ, ಕರ್ತವ್ಯಗಳೇನು ಎಂಬುದನ್ನು ಅವರು ತಿಳಿದುಕೊಂಡಿಲ್ಲ ಎಂದು ನಾನು ಭಾವಿಸುತ್ತೇನೆ. ಇವತ್ತು ಜಿಲ್ಲಾ ಮಂತ್ರಿಗಳಾಗಿ ಜಿಲ್ಲಾ ಪಂಚಾಯಿತಿಯಲ್ಲಿರುವಂತಹ ಸಮಸ್ಯೆಗಳನ್ನು ಒಂದೂವರೆ ವರ್ಷಗಳಿಂದ ಇವರ ಕೈಯಲ್ಲಿ ಬಗೆಹರಿಸುವುದಕ್ಕಾಗಿಲ್ಲ. ಸರ್ಕಾರದಿಂದ ಅನುದಾನವನ್ನು ಕೊಡಿಸುವುದಕ್ಕಾಗಲಿಲ್ಲ. ನಾವು ಬಹಳ ಚೆನ್ನಾಗಿ ಕೆಲಸ ಮಾಡಿದ್ದೇವೆಂದು ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕಾಗಿ ಏಳು ಸಭೆಗಳಿಗೆ ಸದಸ್ಯರುಗಳು ಬಂದಿಲ್ಲ ಅದಕ್ಕೆ ಮೊದಲು ಸ್ಪಷ್ಟೀಕರಣ ಕೊಡಲಿ. ಸುಮ್ಮನೆ ಆರೋಪ ಮಾಡಬಾರದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಬಹಳ ಹೇಳಿದರು. ಮಾನ್ಯ ಈಶ್ವರಪ್ಪನವರೇ, ನಾನು ಹೆಚ್ಚು ಮಾತನಾಡುವುದಿಲ್ಲ. ದಯಮಾಡಿ ಅವರ ಇಲಾಖಾಧಿಕಾರಿಗಳು ಏನು ಪಂಚಾಯತ್ ರಾಜ್ ಆಕ್ಟ್‌ನಲ್ಲಿ ಇಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಅಧಿಕಾರ ಇದೆ, ಇಲಾಖೆಗೆ ಅಧಿಕಾರ ಇದೆ ಎನ್ನುವುದನ್ನು ಸ್ಪಷ್ಟ ಮಾಡಿ ಸ್ಥಾಯಿ ಸಮಿತಿಗಳಿಂದ ಕ್ರಿಯಾ ಯೋಜನೆಯನ್ನು ಏನು ತರಿಸಿಕೊಂಡಿದ್ದಾರೆಯೋ ಆ ಸ್ಥಾಯಿ ಸಮಿತಿಗಳ ಕ್ರಿಯಾ ಯೋಜನೆಗಳಿಗೆ ದಯಮಾಡಿ ಅನುಮೋದನೆ ಕೊಡಿ. ಕಾನೂನನ್ನು ಉಲ್ಲಂಘಿಸುವುದು ಬೇಡ. ಅವರು ಹಿರಿಯ ಸಚಿವರಾಗಿದ್ದಾರೆ. ಈಗ ಮಾಡಿಕೊಟ್ಟಿರುವಂತಹ ಕ್ರಿಯಾ ಯೋಜನೆಯನ್ನು ದಯವಿಟ್ಟು ವಾಪಸ್ ಪಡೆಯಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ನನಗೆ ಮಾತನಾಡುವುದಕ್ಕೆ ನೀವು ಅವಕಾಶ ಕೊಟ್ಟರೆ ನಾನು ಮಾತನಾಡುತ್ತೇನೆ. ನೀವು ಅವಕಾಶ ಕೊಡದೇ ನೀವೇ ಮಾತನಾಡುತ್ತಿದ್ದೀರಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುವುದೇನೆಂದರೆ, ಮಾನ್ಯ ನಾರಾಯಣಗೌಡರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾರೆ. ರಾಜಕೀಯದ ಸಣ್ಣಪುಟ್ಟ ವ್ಯತ್ಯಾಸಗಳಿವೆ. ಸ್ಥಾಯಿ ಸಮಿತಿಯ ಅಧ್ಯಕ್ಷರು ಸಭೆಯನ್ನು ಕರೆದು ಸೌಹಾರ್ದಯುತವಾಗಿ ಇತ್ಯರ್ಥ ಮಾಡಿ.

**ಶ್ರೀ ಕೆ.ಸಿ.ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ನಾನು ಯಾವುದೇ ರೀತಿಯ controversy ರಾಜಕಾರಣ ಮಾಡುತ್ತಿಲ್ಲ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗಾಗಿ ನಾನು ಅವರ ಜೊತೆಯಲ್ಲಿದ್ದೇನೆ. ಮಾನ್ಯ ಮರಿತಿಬ್ಬೇಗೌಡರು ತುಂಬಾ ಸಲ ಸಹಕಾರ ಕೊಟ್ಟಿದ್ದಾರೆ. ಅವರು ಏಕೆ excite ಆಗುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

(ಮುಂದು)

94/2-2-2021/6-10/ಬಿಕೆಪಿ-ಎಕೆ
**ಶ್ರೀ ಕೆ.ಸಿ.ನಾರಾಯಣಗೌಡ(ಮುಂದು):**

ಮಂಡ್ಯ ಜಿಲ್ಲೆಯ ಅಭಿವೃದ್ಧಿಗಾಗಿಯೇ ನಾನು ನಿಮ್ಮ ಸಹಕಾರ ಕೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಸಹ ಬಹಳ ಸಹಕಾರ ಕೊಟ್ಟಿದ್ದಾರೆ. ಏತಕ್ಕೆ ಈ ರೀತಿ ಆಗುತ್ತಿದೆ ಎಂದು ನನಗೆ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅರ್ಥವಾಗುತ್ತಿಲ್ಲ. ದಯವಿಟ್ಟು ಕೇಳಬೇಕು. ಮಂಡ್ಯ ಜಿಲ್ಲೆಯ ಅಭಿವೃದ್ಧಿಗಾಗಿಯೇ ನಾನು ಬಂದಿದ್ದೇನೆ. ಯಾವ controversy ಮಾಡುತ್ತಿಲ್ಲ. ಮಂಡ್ಯ ಅಭಿವೃದ್ಧಿಗೆ ಕೈಜೋಡಿಸಿ, ಆಗಿರುವಂತಹದ್ದನ್ನು ಸರಿಪಡಿಸೋಣ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೆ, ಪ್ರಾವಿಷನ್ ಮಾಡಬೇಕಲ್ಲವೇ?

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. 40 ನಿಮಿಷಗಳ ಕಾಲ ಚರ್ಚೆಯಾಗಿದೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಶ್ರೀಯುತ ಮರಿತಿಬ್ಬೇಗೌಡಡರವರು ಹೇಳಿದ್ದನ್ನೇ ಹೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೆ, ಮಂಡ್ಯ ಜಿಲ್ಲೆಯ ಅಭಿವೃದ್ಧಿ ಕುಂಠಿತವಾಗಿದೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ಸರ್ಕಾರದ ಕ್ರಮವನ್ನು ವಿರೋಧಿಸಿ ಭಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:** ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ತೆರಳಬೇಕು.

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೆ, ...

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ಬಾವಿಯಿಂದ ಮಾತನಾಡಿದರು)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಎನ್ ಅಪ್ಪಾಜಿಗೌಡ ಹಾಗೂ ಶ್ರೀ ಕಾಂತರಾಜು(ಬಿಎಂಎಲ್) ರವರು ಸಹ ಭಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಕೆ.ಎಸ್. ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ನಿಮ್ಮ ರಾಜಕೀಯಕ್ಕೆ ಬಗ್ಗುವವನು ನಾನಲ್ಲ. ನನ್ನ ಜೀವನದಲ್ಲಿ ಇಂತಹ ರಾಜಕೀಯವನ್ನು ನೋಡಿ ಬಂದಿದ್ದೇನೆ. ನಿಮಗಿಂತ ದೊಡ್ಡ ಧ್ವನಿ ನನಗೆ ಇದೆ. ನಿಮಗೆ ಉತ್ತರ ಬೇಕೇ ಕುಳಿತುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರು ಬಾವಿಯಲ್ಲಿ ನಿಂತುಕೊಂಡು ಮಾತನಾಡುವ ಹಾಗಿಲ್ಲ. ಬಾವಿಯಲ್ಲಿ ನಿಂತು ಯಾರೇ ಮಾತನಾಡಿದರೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಒಂದು ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಮಂಡ್ಯ ಜಿಲ್ಲಾ ಪಂಚಾಯಿತಿಯಲ್ಲಿ 7 ಸಾಮಾನ್ಯ ಸಭೆಗಳನ್ನು ಕರೆದಾಗಲೂ ಅಲ್ಲಿ Action Plan ಅನುಮೋದನೆ ಆಗಿಲ್ಲವೆಂದರೆ ಅ ಜಿಲ್ಲೆಯ ಅಭಿವೃದ್ಧಿಯ ಪ್ರಶ್ನೆ ಬರುತ್ತದೆ. ಜಿಲ್ಲೆಯ ಅಭಿವೃದ್ಧಿ ಕುಂಠಿತವಾಗಿದೆ ಎನ್ನುವುದು ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರ ವಿಚಾರ ಇದೆ. ಅವರ ವಿಚಾರ ಚೆನ್ನಾಗಿ ಇದೆ.

**(ಗೊಂದಲ)**

ಒಂದು ನಿಮಿಷ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ. ಹಿರಿಯ, ಹಾಗೂ ಅನುಭವಿಗಳಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಉತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ. ಅದಕ್ಕೋಸ್ಕರ ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇದನ್ನು ಇತ್ಯರ್ಥ ಮಾಡುವಲ್ಲಿ ಆ ಮಂಡ್ಯ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರನ್ನು, ಸ್ಥಾಯಿ ಸಮಿತಿಗಳ ಅಧ್ಯಕ್ಷರನ್ನು, ಸಿಇಓ ಅವರುಗಳನ್ನು ಕರೆದು ಒಂದು ಸಭೆ ಮಾಡಿ ಇದನ್ನು ಇತ್ಯರ್ಥ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಇದು ಸೂಕ್ತವಾಗಿ ಸಮಸ್ಯೆ ಬಗೆಹರಿಯುತ್ತದೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ,

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ಮಾತನಾಡಲಿಕ್ಕೆ ಪ್ರಾರಂಭ ಮಾಡಿದರು)**

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರೆ ನಾನು ಹೇಗೆ ಉತ್ತರ ಕೊಡಲಿ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರು ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದು ರೆಕಾರ್ಡ್‌ಗೆ ಹೋಗುವುದಿಲ್ಲ. ಯಾರು ಮಾತನಾಡಿದ್ದು, ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, authentic ಆದ ವಿಚಾರಗಳನ್ನು ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಹೇಳಿದ್ದಾರೆ. ಆದ್ದರಿಂದ, ಶ್ರೀ ಎಸ್.ಆರ್. ಪಾಟೀಲ್ ರವರು ಹೇಳಿದಂತೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅವರು ಹೇಳಿರುವಂತಹ ವಿಚಾರಗಳನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಸಚಿವರು ಹೇಳಿದರೆ ಏನೂ ತೊಂದರೆ ಇಲ್ಲ. ದಯಮಾಡಿ ಸಚಿವರು ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಜಿಲ್ಲಾ ಪಂಚಾಯಿತಿಯ ಸಭೆ ವಿಫಲ ಆಗಲಿಕ್ಕೆ ಸಭೆ ಕಾರಣವಲ್ಲ. ಆಗಿರುವಂತಹ ತಪ್ಪುಗಳನ್ನು ಸರಿಪಡಿಸಿ, ನಮಗೆ ಅನುದಾನವನ್ನು ಪುನಃ ಕೊಡಿ ಎಂದಾಗ ಮಾನ್ಯ ಮಂತ್ರಿಗಳು ಅಂಕಿ-ಅಂಶಗಳ ಪ್ರಕಾರ ಪ್ರತಿ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ನಾವು ಅನುದಾನವನ್ನು ಒದಗಿಸಿಕೊಟ್ಟಿದ್ದೇವೆ. ಇನ್ನು ಹೆಚ್ಚು ಕಡಿಮೆಯಾದರೆ ನಾವು ಸರಿಪಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ :-** ಮಾನ್ಯ ಸಭಾನಾಯಕರು ಇಲ್ಲಿ ಗಮನಿಸಬೇಕು. ಇದು ಆ ಜಿಲ್ಲೆಯ ಅಭಿವೃದ್ಧಿಯ ವಿಚಾರ. ನಾನು ಸಹ ಜಿಲ್ಲಾ ಪರಿಷತ್ತಿನಿಂದ ಬಂದವನಿದ್ದೇನೆ. ಜಿಲ್ಲಾ ಪರಿಷತ್ ಸದಸ್ಯನಾಗಿ ಅಲ್ಲಿಯೂ ಸಹ ಪ್ರತಿಪಕ್ಷದ ನಾಯಕನಾಗಿ ಕೆಲಸ ನಿರ್ವಹಿಸಿರುತ್ತೇನೆ. ನನಗೆ ಸ್ಥಳೀಯ ಸಂಸ್ಥೆಯ ಎಲ್ಲಾ ಜಿಲ್ಲಾ ಪಂಚಾಯಿತಿಯ ಬಗ್ಗೆ ಜಿಲ್ಲಾ ಪರಿಷತ್ತಿನ ಬಗ್ಗೆ ನಾನು ಬಹಳಷ್ಟು ತಿಳಿದುಕೊಂಡಿದ್ದೇನೆ. ಈ ರೀತಿ deadlock ಆದಾಗ, ರಾಜಕೀಯ ಪಕ್ಷಗಳ ಗೊಂದಲದಲ್ಲಿ Action Plan ಅನುಮೋದನೆಯಾಗಲಿಲ್ಲವೆಂದರೆ ಆ ಜಿಲ್ಲೆಯ ಜನ suffer ಆಗುತ್ತಾರೆ. ಅಭಿವೃದ್ಧಿ ಕುಂಠಿತವಾಗುತ್ತದೆ. ಅದಕ್ಕೆ ಗೌರವಾನ್ವಿತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ನಿಟ್ಟಿನಲ್ಲಿ ಒಂದು ಸಭೆಯನ್ನು ಕರೆಯಬೇಕು. ಅಲ್ಲಿಯ ಅಧ್ಯಕ್ಷರನ್ನಾಗಲಿ, ಸ್ಥಾಯಿ ಸಮಿತಿಯ ಅಧ್ಯಕ್ಷರನ್ನಾಗಲಿ, ಅದರ ಜೊತೆಗೆ ಅಲ್ಲಿನ ಸಿಇಓ ಅವರನ್ನು ಕರೆದು ಚರ್ಚೆ ಮಾಡಿ ಇದನ್ನು ಇತ್ಯರ್ಥ ಮಾಡಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಇದು 100% ಅಲ್ಲ, 200% ಸರಿಹೋಗುತ್ತದೆ. ಅಗತ್ಯ ಬಿದ್ದಲ್ಲಿ ಮಂಡ್ಯ ಜಿಲ್ಲಾ ಪಂಚಾಯಿತಿಯ ಎಲ್ಲಾ ಸದಸ್ಯರುಗಳನ್ನು ಕರೆಯಿರಿ. ಮತ್ತೆ ಮಂಡ್ಯ ಜಿಲ್ಲೆಯ ಮಂತ್ರಿಗಳನ್ನು ಕರೆಯಿರಿ. ಕರೆಸುವುದರ ಮೂಲಕ ಈ ಬಗ್ಗೆ ಚರ್ಚೆ ಮಾಡಿ, ಇತ್ಯರ್ಥ ಮಾಡಿದರೆ ಸರಿ ಹೋಗುತ್ತದೆ. ಮಂಡ್ಯ ಜಿಲ್ಲೆಯ ಜನತೆ ತೊಂದರೆಗೆ ಒಳಗಾಗಬಾರದು. ಈ ರಾಜಕೀಯ ಕಿತ್ತಾಟದಲ್ಲಿ, ಗೊಂದಲದಲ್ಲಿ ಅಲ್ಲಿನ ಜನತೆ ಏನು ಮಾಡಿದ್ದಾರೆ? ಮಂಡ್ಯ ಜನತೆಯ ಹಿತದೃಷ್ಟಿಯಿಂದ, ಅಭಿವೃದ್ಧಿ ದೃಷ್ಟಿಯಿಂದ ನಾವುಗಳು ಯಾರು ಸಹ ಪ್ರತ್ಯೇಕ ಮಾಡಿಕೊಳ್ಳುವುದು ಬೇಡ. ಇದನ್ನು ಸರಿಪಡಿಸುತ್ತೀರಿ ಎನ್ನುವ ವಿಶ್ವಾಸ ನಮಗಿದೆ. ಅದಕ್ಕೋಸ್ಕರ ಒಂದು ಸಭೆಯನ್ನು ಕರೆಯಿರಿ. ಸಭೆಯನ್ನು ಕರೆದು ಈ ಸಮಸ್ಯೆಯವನ್ನು ಇತ್ಯರ್ಥ ಮಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಆಯಿತು, ಆ ಒಂದು ಕೆಲಸವನ್ನು ಮಾಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಬೇಕು, ನಿಮಗೆ ಸಮಾಧಾನವಾಗುವಂತಹ ಉತ್ತರವನ್ನು ಕೊಡುತ್ತೇನೆ. ಮಾನ್ಯ ಸದಸ್ಯರು ಅಲ್ಲಿ ನಿಂತುಕೊಂಡು ನಾನು ಇಲ್ಲಿ ಉತ್ತರ ಕೊಟ್ಟರೆ ಸರಿ ಹೋಗುವುದಿಲ್ಲ. ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು, ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಎನ್ ಅಪ್ಪಾಜಿಗೌಡ ಹಾಗೂ ಶ್ರೀ ಕಾಂತರಾಜು(ಬಿಎಂಎಲ್) ರವರು ತಮ್ಮ ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಂಡರು)**

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈ ವಿಚಾರವಾಗಿ ಎಲ್ಲರೂ ಹೇಳಿದ್ದಾರೆ. ನಮಗೂ ಸಹ ಮಂಡ್ಯ ಜಿಲ್ಲೆ ಬಗ್ಗೆ ಆಸಕ್ತಿ ಇದೆ. ಇಲ್ಲವೆಂದರೆ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ಕರೆಸಿ, ನಾವು ಏತಕ್ಕೆ ಅನುಮೋದನೆ ಮಾಡಿ ಕಳುಹಿಸಬೇಕಾಗಿತ್ತು? ಹಾಗೆಯೇ ಇಟ್ಟುಕೊಳ್ಳಬಹುದಿತ್ತು. ಆಸಕ್ತಿ ಇರುವುದರಿಂದಲೇ 6-7 ಸಭೆಗಳನ್ನು ಕರೆದು ನಾವುಗಳು ಅಲ್ಲಿ ಕುಳಿತುಕೊಂಡು, ಅಲ್ಲಿ ಅಧಿಕಾರಿಗಳನ್ನಿಟ್ಟುಕೊಂಡು ನಾವು ಸಭೆಯನ್ನು ಮಾಡಲಿಕ್ಕೆ ಸಾಧ್ಯವೇ? ಅವರ ಜಿಲ್ಲೆಯ ಸಮಸ್ಯೆಯನ್ನು ಎಲ್ಲಾ ಸದಸ್ಯರೊಂದಿಗೆ ಚರ್ಚೆ ಮಾಡಿ ಪರಿಹರಿಸಬೇಕಾಗಿತ್ತು. ಆ ಕೆಲಸವನ್ನು ಏತಕ್ಕೆ ಮಾಡಿಲ್ಲವೋ ಗೊತ್ತಿಲ್ಲ. ಅದಕ್ಕೋಸ್ಕರವೇ ನಾನು ಉತ್ತರವನ್ನು ಸ್ಪಷ್ಟವಾಗಿ ಕೊಟ್ಟಿದ್ದೇನೆ. ಕೆಲವು ವ್ಯತ್ಯಾಸವಾಗಿದ್ದು, ನಾನು ಅದನ್ನು ಸರಿ ಮಾಡುತ್ತೇನೆಂದು ಮೊದಲೇ ಉತ್ತರ ಕೊಟ್ಟಿದ್ದೇನೆ. ಆ ಉತ್ತರಕ್ಕೆ ಅವರಿಗೆ ಸಮಧಾನ ಇಲ್ಲವೇನು? ಯಾವುದೇ ಕಾರಣಕ್ಕೂ ಮಂಡ್ಯ ಅಭಿವೃದ್ಧಿಯನ್ನು ನಾವು ತಿರಸ್ಕಾರ ಮಾಡುವುದಿಲ್ಲ. ಇದನ್ನು ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಗಮನಿಸಬೇಕು. ಅದರ ಬಗ್ಗೆ ನಾವು ತಾತ್ಸಾರ ಮಾಡುವುದಿಲ್ಲ. ಎಲ್ಲಾ ಜಿಲ್ಲೆಗಳನ್ನು ಯಾವ ರೀತಿಯಲ್ಲಿ ಅಭಿವೃದ್ಧಿ ಮಾಡುತ್ತೇವೆಯೋ ಅದೇ ರೀತಿ ಮಂಡ್ಯ ಜಿಲ್ಲೆಯನ್ನು ಅಭಿವೃದ್ಧಿ ಮಾಡುತ್ತೇವೆ. ಬಗ್ಗೆ ಮಾನ್ಯ ಸದಸ್ಯರನ್ನು ಸಭೆಗೆ ಕರೆಯುತ್ತೇವೆ. ಸಭೆಯನ್ನು ಯಾರು-ಯಾರಿಗೆ ಏನೇನು ಅಭಿವೃದ್ಧಿ ಮಾಡಬೇಕೆಂದು ಪತ್ತೆ ಹಚ್ಚಿ, ಅ ಕಡೆ ಕೆಲಸ ಮಾಡುವಲ್ಲಿ ಖಂಡಿತ ಗಮನಕೊಡುತ್ತೇನೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಈ ರೀತಿಯಲ್ಲಿ ಷರತ್ತುಗಳನ್ನು ಹಾಕಿಕೊಂಡು ಕುಳಿತರೆ ಹೇಗೆ? ಸಭೆಗೆ ಇವರು ಹೋಗಿಲ್ಲ. ನಿಮಗೆ ಜವಾಬ್ದಾರಿ ಇಲ್ಲವೇ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೇ, ಮಾನ್ಯ ಈ ಕೆಲಸವನ್ನು ಎಷ್ಟು ದಿವಸಗಳಲ್ಲಿ ಮಾಡುತ್ತಾರೆಂದು ಸಚಿವರು ಹೇಳಬೇಕು. ಇಲಾಖಾ ಸಚಿವರಾದ ನಿಮಗೆ ಜವಾಬ್ದಾರಿ ಇಲ್ಲವೇ?

**(ಗೊಂದಲ)**

**ಶ್ರೀ ಸುನೀಲ್ ವಲ್ಯಪುರೆ:-** ಮಾನ್ಯ ಸಭಾಪತಿಯವರೇ, Point of Order.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೇ, ಅವರು ಯಾವ date ನಲ್ಲಿ ಮಾಡುತ್ತಾರೆ ಎಂದು ಹೇಳಲಿ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಪುರೆ:** ಮಾನ್ಯ ಸಭಾಪತಿಯವರೇ, ಅವರು blackmail ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ತುಂಬ ಸ್ಪಷ್ಟವಾಗಿ ಹೇಳುತ್ತೇನೆ, ಯಾವ blackmail ಗೂ ನಾನು ನನ್ನ ಜೀವನದಲ್ಲಿ ಬಗ್ಗುವುದಿಲ್ಲ.

(ಮುಂದು)

**(95) 02.02.2021 06.20 ಎಸ್‌ವಿ–ಆರ್‌ಎನ್**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**

ಆದರೆ ಮಂಡ್ಯ ಅಭಿವೃದ್ಧಿಗಾಗಿ ಈ ಸದನ ಮುಗಿಯುತ್ತಿದ್ದ ಹಾಗೆಯೇ ಅಲ್ಲಿ ಕುಳಿತು ಇವರನ್ನು ಕರೆಸಿಕೊಂಡು ಒಂದು ವ್ಯವಸ್ಥೆಯನ್ನು ಮಾಡುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಗೌಡರು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈಗ ಪ್ರತಿಯೊಬ್ಬರೂ ಒಂದೊಂದು ಮಾತುಗಳನ್ನಾಡುತ್ತಾ ಎದ್ದು ನಿಂತರೆ ನಾನು ಅದಕ್ಕೆಲ್ಲಾ ಉತ್ತರವನ್ನು ಕೊಡುತ್ತಿರಲೇ? ತಾವೇ ಹೇಳಿ. ಮಾನ್ಯ ವಿರೋಧಪಕ್ಷದ ನಾಯಕರು ಹಿರಿಯರಾಗಿದ್ದು, ಅವರ ಎಲ್ಲಾ ಮಾತುಗಳನ್ನು ಗೌರವಿಸಿದ್ದೇನೆ. ಈ ರೀತಿ ನಡೆದುಕೊಳ್ಳುವುದು ಒಳ್ಳೆಯದಲ್ಲ.

**8. ಪ್ರಕಟಣೆ**

**ವೈಸ್ ಛೇರ್ಮನ್:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:–

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 02.02.2021ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2020
2. ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕ, 2020
3. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**9. ಮಾನ್ಯ ಸಭಾಪತಿಯವರಾದ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿಯವರನ್ನು ಸಭಾಪತಿ ಸ್ಥಾನದಿಂದ ತೆಗೆದುಹಾಕುವ ಬಗ್ಗೆ ಮಂಡಿಸಲಾದ ನಿರ್ಣಯದ ಮೇಲಿನ ಚರ್ಚೆಗೆ ದಿನಾಂಕ ಕೋರಿ ಒತ್ತಾಯ**

– – – – –

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಿಶ್ವಾಸ ನಿರ್ಣಯದ ನಮ್ಮ ಪ್ರಸ್ತಾವವನ್ನು ಸದನ ಒಪ್ಪಿದೆ. ನಾವು ಪೀಠದಿಂದ ಅದೇ ಅವಧಿಯೊಳಗೆ ನಿರೀಕ್ಷೆಯನ್ನು ಮಾಡುತ್ತಿದ್ದೇವೆ. ಐದು ದಿನಗಳೊಳಗೆ ಯಾವತ್ತು ಅದನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದೋ ಆ ದಿನಾಂಕವನ್ನು ಸದನಕ್ಕೆ ತಿಳಿಸಬೇಕು. ಐದು ದಿನಗಳೊಳಗೆ ಯಾವತ್ತಾದರೂ ತೆಗೆದುಕೊಳ್ಳಿ. ಯಾವತ್ತು ತೆಗೆದುಕೊಳ್ಳಲಾಗುವುದು ಎಂಬುದನ್ನು ನಿಯಮಾವಳಿಗಳ ಪ್ರಕಾರ ನಿಗದಿಪಡಿಸಬೇಕು. ಅದು ನಿಗದಿಯಾಗಿರುವುದಿಲ್ಲ. ಪೀಠ ಯಾವತ್ತು ಚರ್ಚೆಗೆ ತೆಗೆದುಕೊಳ್ಳುತ್ತದೆ ಎನ್ನುವುದನ್ನು ದಯಮಾಡಿ ನಿರ್ಧಾರ ಮಾಡಬೇಕು. ಇಂದು ಮಧ್ಯಾಹ್ನದಿಂದ ಅದು ಹಾಗೆಯೇ ಬಾಕಿ ಉಳಿದುಕೊಂಡು ಬರುತ್ತದೆ. ತಾವು ದಿನಾಂಕವನ್ನು ನಿಗದಿಪಡಿಸಬೇಕು.

**ವೈಸ್ ಚೇರ್ಮನ್:–** ಅದಕ್ಕೆ ಸಮಯ ಬೇಕು. ಈ ಪೀಠ ಏಳುವುದರಲ್ಲಿ ಹೇಳಲಾಗುವುದು.

**(ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಆಯನೂರು ಮಂಜುನಾಥ್‌ರವರೇ, Chair is very strong. ನೀವೇನು ಅದನ್ನು ಹಗುರವಾಗಿ ಪರಿಗಣಿಸಬೇಡಿ. ಐದು ದಿನಗಳ ಕಾಲಾವಕಾಶವಿದ್ದು, ಸಭಾಪತಿಯವರಿಗೆ discretionary power ಇರುತ್ತದೆ. Power is vested with the Chair. ಇಂದು motion move ಆಗಿದೆ.

**ವೈಸ್ ಚೇರ್ಮನ್:–** ಸಭಾಪತಿಯವರೇ ಬರುತ್ತಿದ್ದಾರೆ. ಅವರೇ ಬಂದು ಹೇಳುತ್ತಾರೆ.

**ಶ್ರೀ ಆಯನೂರು ಮಂಜುನಾಥ್:–** ಪೀಠ ಹೇಳಿರುವಂತೆ, ತಾವು ಏಳುವುದರೊಳಗೆ ಹೇಳಿ ಹೋಗಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಆಯನೂರು ಮಂಜುನಾಥ್ ಅವರೇ, ತಮ್ಮ ಪ್ರಶ್ನೆಗೆ ಈಗಾಗಲೇ ಪೀಠದಿಂದ ಉತ್ತರ ದೊರೆತಿದೆ.

**ಶ್ರೀ ಆಯನೂರು ಮಂಜುನಾಥ್:–** ಸಿಕ್ಕಿದೆ. ಪೀಠವನ್ನು ಅಲಂಕರಿಸಿರುವಂತಹ ಮಾನ್ಯ ವಿಶ್ವನಾಥ್ ಅವರು ಏಳುವುದಕ್ಕಿಂತ ಮುಂಚೆ ಉತ್ತರ ನೀಡುತ್ತಾರೆ ಎನ್ನುವ ಭರವಸೆಯನ್ನು ಅವರ ಮೇಲೆ ಇಡಬಹುದೇ?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಆಯನೂರು ಮಂಜುನಾಥ್ ಅವರೇ, ನೀವು ವೈಸ್ ಛೇರ್‌ಮನ್ ಅವರ ಕಡೆಯಿಂದ ದಿನಾಂಕವನ್ನು ನಿಗದಿ ಪಡಿಸಿಕೊಳ್ಳುವವರಿದ್ದಿರೇ?

**ಸಭಾಪತಿಯವರು:–** ಮಾನ್ಯ ಆಯನೂರು ಮಂಜುನಾಥ್ ಅವರೇ, ಏನು ವಿಷಯ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ತಾವು ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸಿರುವ ಪ್ರಕಾರ ಅವಿಶ್ವಾಸ ನಿರ್ಣಯವನ್ನು ಸದನದ ಮುಂದಿಡಲಾಗಿದ್ದು, ಅದಕ್ಕೆ ಸದನ ಒಪ್ಪಿಗೆಯನ್ನು ಕೊಟ್ಟಿದೆ. ಅದೇ ನಿಯಮಾವಳಿ ಪ್ರಕಾರ ಐದು ದಿನಗಳೊಳಗಾಗಿ ದಿನಾಂಕವನ್ನು ಘೋಷಿಸಬೇಕೆಂದು ಇದೆ. ಐದು ದಿನಗಳೊಳಗೆ ಯಾವತ್ತು ತೆಗೆದುಕೊಳ್ಳಲಾಗುವುದೆಂಬ ದಿನಾಂಕವನ್ನು ಹೇಳಬೇಕು.

**ಸಭಾಪತಿಯವರು:–** ನಿಯಮಾವಳಿಗಳ ಪ್ರಕಾರ ಯಾವತ್ತು ಅವಕಾಶವಾಗುತ್ತದೆಯೋ, ಅಂದು ಅವಕಾಶವನ್ನು ನೀಡುತ್ತೇನೆ. ನಿಯಮಾವಳಿಗಳನ್ನು ಓದಿ.

**ಶ್ರೀ ಆಯನೂರು ಮಂಜುನಾಥ್:–** ಸದನವು ಅನುಮತಿ ನೀಡಿದ ಮತ್ತು ಅನುಮತಿಯನ್ನು ಕೋರಿದ ದಿನಾಂಕದಿಂದ ಐದು ದಿನಗಳಿಗೆ ಮೀರದಿರುವ ಕಾಲಾವಧಿಯೊಳಗೆ ಸಭಾಪತಿಯವರು ಗೊತ್ತು ಮಾಡಬಹುದಾದ ದಿನದಂದು ನಿರ್ಣಯವನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು ಎಂದು ತಿಳಿಸತಕ್ಕದ್ದು.

**ಸಭಾಪತಿಯವರು:–** ಸ್ಪಷ್ಟವಾಗಿದೆ. ಹಾಗೆಯೇ ಮಾಡಲಾಗುವುದು.

**ಶ್ರೀ ಆಯನೂರು ಮಂಜುನಾಥ್:–** ತಾವು ಒಂದು ದಿನಾಂಕವನ್ನು ನೀಡಬೇಕು.

**ಸಭಾಪತಿಯವರು:–** ಹಾಗೆ ಕೊಡುವುದಕ್ಕಾಗುವುದಿಲ್ಲ. ಅದು ಕಾರ್ಯಕಲಾಪಗಳ ಪಟ್ಟಿಯಲ್ಲಿ ಬರುತ್ತದೆ. ಏನು ನಿಮ್ಮ ಮನೆಯೇ ಘೋಷಿಸುವುದಕ್ಕೆ? ನಿಯಮಾವಳಿಗಳ ಪ್ರಕಾರ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬರುತ್ತದೆ. ನನಗೆ ಗೊತ್ತಿದೆ. ನಾನು ಅದನ್ನು ನೋಡಿಕೊಂಡೇ ಬಂದಿರುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, Rules of Procedure Book ನಲ್ಲಿ 'shall declare' ಎಂದು ಇದೆ. ನಾವು ಅದನ್ನು ಓದಿಕೊಂಡು ಹೇಳುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಕವಟಗಿಮಠ ಅವರೇ, ನಾವು Rule book ಅನ್ನು ಓದಿದ್ದೇವೆ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, shall declare ಎಂದು ಇದೆ.

**ಸಭಾಪತಿಯವರು:–** ಮಾನ್ಯ ಆಯನೂರು ಮಂಜುನಾಥ್ ಅವರೇ, ಹಿಂದೆ ಯಾವ ರೀತಿಯಾಗಿತ್ತು ಎಂಬುದನ್ನು ನೋಡಿ. ಕಾರ್ಯಕಲಾಪ ಪಟ್ಟಿಯಲ್ಲಿ ಬರುತ್ತದೆ. ಐದು ದಿನಗಳನ್ನು ಮೀರದಂತೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಲಾಗುತ್ತದೆ. ಆ ದಿನ ಅದು ಚರ್ಚೆಗೆ ಬರುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಪೀಠವನ್ನೆ ಅವರು ಪ್ರಶ್ನಿಸುತ್ತಿದ್ದಾರೆ. It is not a good taste of parliamentary affairs.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ...

**ಸಭಾಪತಿಯವರು:–** ಮಾನ್ಯ ಆಯನೂರು ಮಂಜುನಾಥ್ ಅವರೇ, ನಿಮಗೆ urgent ಇರಬಹುದು. ಆದರೆ ನನಗೆ urgent ಇರುವುದಿಲ್ಲ. ಆ ಪ್ರಶ್ನೆ ಇರುವುದಿಲ್ಲ, ಅದನ್ನು ನಿರೀಕ್ಷೆ ಮಾಡುವುದಕ್ಕೂ ಆಗುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಇನ್ನು ಐದು ದಿನಗಳೊಳಗಾಗಿ ಸದನ ಮುಕ್ತಾಯವಾಗುತ್ತದೆ. ಆ ಕಾರಣಕ್ಕಾಗಿ ಸದನ ಮುಗಿಯುವುದರೊಳಗೆ...

**ಸಭಾಪತಿಯವರು:–** ನಿಯಮಾವಳಿಗಳ ಪುಸ್ತಕದಲ್ಲಿ ಸದನ ಮುಗಿಯುವುದರೊಳಗೆ ಎಂದು ಇರುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಇರುವುದಿಲ್ಲ. ಆದರೆ ಸದನ ಮುಗಿದು ಹೋದ ಮೇಲೆ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸದನ ಇದ್ದಾಗಲೇ ಇದು ಆಗಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಆಯನೂರು ಮಂಜುನಾಥ್ ಅವರೇ, ಐದು ದಿನಗಳೊಳಗೆ ಅದನ್ನು ತೆಗೆದುಕೊಳ್ಳುತ್ತೇನೆಂದು ಸಭಾಪತಿಯವರು ಹೇಳಿದ್ದಾರೆ. ಹಾಗೆ rule ಇದ್ದರೆ ತೋರಿಸಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರನ್ನು ಪ್ರಶ್ನೆ ಮಾಡುವಂತಹ ಅಧಿಕಾರವನ್ನು ಯಾರಿಗೂ ಕೊಟ್ಟಿರುವುದಿಲ್ಲ. ಐದು ದಿನಗಳಲ್ಲಿ ಒಂದು ದಿನ ತೆಗೆದುಕೊಳ್ಳುತ್ತಾರೆ. ಅದು ಕಾರ್ಯಕಲಾಪಗಳ ಪಟ್ಟಿಯಲ್ಲಿ ಬರುತ್ತದೆ. ಸಭಾಪತಿಯವರನ್ನು ಪ್ರಶ್ನೆ ಮಾಡುವಂತಹ ಅಧಿಕಾರ ನಮಗಾಗಲೀ ಅಥವಾ ನಿಮಗಾಗಲೀ ಯಾರಿಗೂ ಇರುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಐದು ದಿನಗಳನ್ನು ಮೀರದಂತೆ ಒಂದು ದಿನಾಂಕವನ್ನು ನಿಗದಿಪಡಿಸಬೇಕೆಂಬುದು ಬಹಳ ಸ್ಪಷ್ಟವಾಗಿದೆ. ಆದರೆ ಸದನ ನಡೆಯುವ ಸಂದರ್ಭದಲ್ಲಿ ಮಾಡಬೇಕೆಂಬುದಾಗಿ ಏನೂ ಇಲ್ಲ. ದಯಮಾಡಿ they can find out and go through the rule.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸಮಯ ಆಗುತ್ತಿದೆ. ಗಮನ ಸೆಳೆಯುವ ಸೂಚನೆಗಳಿವೆ. ಇನ್ನೂ ಮಾನ್ಯ ಕೆ.ಹರೀಶ್ ಕುಮಾರ್ ಅವರು ಮಾತನಾಡುವವರಿದ್ದು, ನಮಗೂ ಮಾತನಾಡಬೇಕಿದೆ. ಅವಕಾಶ ಮಾಡಿಕೊಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಆಯನೂರು ಮಂಜುನಾಥ್ ಅವರೇ, rule is very clear and no enmity.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಸಭಾಪತಿಗಳ ಸೂಚನೆಯನ್ನು ನಾವು ಗೌರವಿಸುತ್ತೇವೆ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಎಲ್ಲರೂ ಗೌರವಿಸಲೇಬೇಕು. All members should respect the verdict given by the Chair.

**ಶ್ರೀ ಆಯನೂರು ಮಂಜುನಾಥ್:–** ಆದರೆ ಸಭಾಪತಿಯವರು ಸದನಕ್ಕಿಂತ ದೊಡ್ಡವರಾಗಿರುವುದಿಲ್ಲ ಎಂಬುದನ್ನು ನಾನು ಹಿರಿಯರಾದ ತಮ್ಮ ಗಮನಕ್ಕೆ ತರಬೇಕಾಗಿಲ್ಲ. ಹೇಗೆ ನಾವು ಸದನದ ವ್ಯಾಪ್ತಿಯೊಳಗೆ ಬರುತ್ತೇವೆಯೋ ಸಭಾಪತಿಯವರೂ ಸಹ ಅದೇ ವ್ಯಾಪ್ತಿಯಲ್ಲಿ ಬರುತ್ತಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಹೀಗೆ ಹೇಳಿ ಒಬ್ಬರನ್ನು ಕೂರಿಸಿದ್ದಿರಿ. ನೀವು ಇದೇ ಕಾಯಿದೆಯನ್ನು ಹೇಳಿ ಅವರನ್ನು ಕೂರಿಸಿರುವುದು. ಈ ಸದನದಲ್ಲಿ ಈಗ ಅದರ ಬಗ್ಗೆ ಚರ್ಚೆ ಬೇಡ. ಬಹುಮತ ಎಂದು ಹೇಳಿಯೇ ಕೂರಿಸಿರುವುದು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ತಮ್ಮ ಬಳಿ ಮನವಿ ಮಾಡುತ್ತಿದ್ದೇನೆ. ತಾವು ಯಾವುದಾದರೂ ದಿನಾಂಕವನ್ನು ಹೇಳಿ. ತಮ್ಮ ಅಧಿಕಾರವನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. You fix-up a date.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಆಯನೂರು ಮಂಜುನಾಥ್ ಅವರೇ, ಐದು ದಿನಗಳೊಳಗಾಗಿ ಒಂದು ದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬರುತ್ತದೆ. ಇಂದಿನಿಂದ ಐದು ದಿನಗಳನ್ನು ಲೆಕ್ಕ ಹಾಕಿಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಆಯನೂರು ಮಂಜುನಾಥ್ ಅವರೇ, ಏಕೆ ನಿಮಗಿಷ್ಟು ಆತಂಕ ಆಗಿದೆ? ಐದು ದಿನದೊಳಗೆ ನಿಶ್ಚಿತವಾಗಿಯೂ ದಿನಾಂಕ ಬರುತ್ತದೆ. ಐದು ದಿನ ಅವಧಿಗೆ ಅಧಿಕಾರವಿದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದು ಅಧಿವೇಶನ ನಡೆಯುತ್ತಿದ್ದಾಗ ತಾನೇ?

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಆಯನೂರು ಮಂಜುನಾಥ್ ಅವರೇ, ಅಧಿವೇಶನದಲ್ಲಿ ಅಲ್ಲದೆ ಬೇರೆ ಕಡೆ ಎಲ್ಲಿ ಮಾಡುವುದಕ್ಕಾಗುತ್ತದೆ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಆಯನೂರು ಮಂಜುನಾಥ್ ಅವರೇ, ನಿಯಮ ಎಲ್ಲಿದೆ? ಅಧಿವೇಶನ ಇದ್ದಾಗಲೇ ಮಾಡಬೇಕೆಂದು ನಿಯಮ ಇಲ್ಲ. You found out the rule and go through the rule. Rule is very clear. 5 ದಿನಗಳೊಳಗೆ ಅವರು ದಿನಾಂಕವನ್ನು ನಿಗದಿ ಪಡಿಸುತ್ತಾರೆ. ಅದು ಕಾರ್ಯಕಲಾಪಗಳ ಪಟ್ಟಿಯಲ್ಲಿ ಬರುತ್ತದೆ.

**ಸಭಾಪತಿಯವರು:–** ಮಾನ್ಯ ಆಯನೂರು ಮಂಜುನಾಥ್ ಅವರೇ, ನೀವು ನನಗೆ ಕಾನೂನನ್ನು ಕಲಿಸಬೇಡಿ. ಪುನಃ ಸಮಸ್ಯೆಯನ್ನು ನೀವೇ ತೆಗೆದುಕೊಂಡಂತಾಗುತ್ತದೆ.

**(...ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(96) 02.02.2021, 6.30. KG.RN

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಮತ್ತು ಕಾನೂನು, ಸಂಸಂದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ಇವತ್ತು no-confidence motion ಅನ್ನು ಕೈಗೆ ಎತ್ತಿಕೊಂಡಾಗ ತಮ್ಮ ಪ್ರಮಾಣಿಕ ಉದ್ದೇಶಗಳನ್ನು ತೋರಿಸಿ ಕೊಟ್ಟಿದ್ದೀರಿ. Agenda ದಲ್ಲಿ ಕೊನೆಗೆ ಇದ್ದರೂ ಸಹ, ತಾವು lunch ಮುಗಿದ ತಕ್ಷಣವೇ ಬಂದು ಅದನ್ನು ಮೊದಲಿಗೆ ತೆಗೆದುಕೊಂಡು ಯಾವುದೇ ರೀತಿಯ ಸಂಶಯ ಬೇಡವೆಂದು ಮತ್ತು ತಮ್ಮ intention ಏನಿದೆ, ಅದು ಸದನಕ್ಕೆ ಗೊತ್ತಾಗಲಿ ಎನ್ನುವಂತಹ ಕಾರಣದಿಂದಲೇ ಅದನ್ನು ತೆಗೆದುಕೊಂಡಿದ್ದೀರಿ. ನಾವು ಅದನ್ನು ಸಂಪೂರ್ಣವಾಗಿ ಗೌರವಿಸುತ್ತೇವೆ. ಅದು ತಮ್ಮ ಒಂದು ನಡವಳಿಕೆ ಮತ್ತು ತಮ್ಮ ಪ್ರಮಾಣಿಕತೆಯ ಪ್ರದರ್ಶನವೆಂದು ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಈ ಕಾನೂನಿನಡಿಯಲ್ಲಿ ಎಲ್ಲರಿಗೂ ಗೊತ್ತಿರುವಂತಹ ವಿಷಯ. ಇದರಲ್ಲಿ ಆ ಕಡೆ, ಈ ಕಡೆ ಎಂದು ಬುದ್ಧಿವಂತಿಕೆ ಪ್ರಶ್ನೆ ಏನಿಲ್ಲ. ಒಟ್ಟು ಐದು ದಿವಸಗಳಲ್ಲಿ ಯಾವುದಾದರೊಂದು ದಿವಸವನ್ನು ನಿಗದಿ ಮಾಡಬೇಕೆಂದು, ಇಲ್ಲಿ ನಮ್ಮ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ವ್ಯಾಖ್ಯಾನ ಮಾಡುತ್ತಿರುವುದು; *"...the Chairman or the Deputy Chairman or to the person presiding as the case may be, shall declare that leave has been granted and that the resolution will be taken up on such day not being more than five days..."* shall declare ಎಂದು ಇದೆ. ಇಲ್ಲಿ ಯಾವಾಗ, motion ಅನ್ನು ಒಪ್ಪಿಕೊಳ್ಳುತ್ತೀರಿ leave grant ಆಗುತ್ತದೆ. ಆಗಲೇ ಯಾವ day ಅಂದರೆ, first day, second day, third day, fourth day or fifth day ಯಾವುದನ್ನು shall declare ಎಂದು ಇದೆ. ಆದ್ದರಿಂದ, ಅದನ್ನು declare ಮಾಡಬೇಕು ಎನ್ನುವಂತಹ contention ಅನ್ನು ಅವರು ತೆಗೆದುಕೊಂಡಿದ್ದಾರೆ. ಅದಕ್ಕೆ ತಾವು 5 ದಿವಸಗಳ ಒಳಗಡೆ ಯಾವುದಾದರೊಂದು ದಿವಸವನ್ನು ತೆಗೆದುಕೊಳ್ಳುವುದಕ್ಕೆ ಇದೆ ಎಂದು ಹೇಳಿದ್ದೀರಿ. ಮಾನ್ಯ ಸದಸ್ಯರ 2ನೇ ಆಕ್ಷೇಪಣೆ ಏನೆಂದರೆ, ಸದನ ಮುಗಿಯುತ್ತಿದೆ, ಆದ್ದರಿಂದ fifth day, suppose fifth day is not on the last day, ಅದರ next day ಗೆ ಬರುತ್ತದೆ. ಇವತ್ತಿನಿಂದ calculate ಮಾಡಿದರೆ, 6ನೇ ತಾರೀಖಿಗೆ ಬರುತ್ತದೆ. ಹಾಗಾಗಿ, ಅದನ್ನು ಯಾವ ರೀತಿ ತೆಗೆದುಕೊಳ್ಳುತ್ತೀರಿ ಎನ್ನುವಂತಹ ತಾಂತ್ರಿಕವಾದಂತಹ ಪ್ರಶ್ನೆಯನ್ನು ಎತ್ತಿದ್ದಾರೆ. ಅದಕ್ಕೆ ತಾವು rulesನಲ್ಲಿ ಎಲ್ಲಿದೆ ಎಂದು ಹೇಳುತ್ತಿದ್ದೀರಿ. ತಾವು agenda ದಲ್ಲಿ ಬರಲಿ ಎಂದು ಹೇಳುವಂತಹದ್ದು ಸಹ rules ನಲ್ಲಿ ಇಲ್ಲ. ಸದನ ಮುಗಿದ ನಂತರವು ಸಹ ತೆಗೆದುಕೊಳ್ಳಬಾರದೆಂದು rules ನಲ್ಲಿ ಇಲ್ಲ. ನಾವು ಎಲ್ಲವನ್ನು rules ನಲ್ಲಿಯೇ ನೋಡುವುದಕ್ಕೆ ಆಗುವುದಿಲ್ಲ. Practical ಆಗಿ ವಸ್ತುಸ್ಥಿತಿಯಲ್ಲಿ ಆಗಬೇಕಾಗಿದೆ. ಪ್ರಶ್ನೆ ಏನೆಂದರೆ, ಇವತ್ತು ಮಾನ್ಯ ಸಭಾಪತಿಗಳ ಉದ್ದೇಶವಾಗಲಿ ಅಥವಾ ಅವರು ಇದನ್ನು ಉದ್ದೇಶಪೂರ್ವಕವಾಗಿ declare

ಮಾಡಿಲ್ಲವೆಂದು ನಾವು ಹೇಳುತ್ತಿಲ್ಲ. ನಾನು ಹೇಳುತ್ತಿರುವುದು ಏನೆಂದರೆ, ನಮ್ಮ ಸದಸ್ಯರಿಗೆ ಏನು ಅನುಮಾನವಿದೆ, ಆ ಅನುಮಾನ ಅಥವಾ ತಾಂತ್ರಿಕವಾದ ಒಂದು ಆಕ್ಷೇಪಣೆಯನ್ನು ಎತ್ತಿದ್ದಾರೆ, ಅದನ್ನು ಮನಸ್ಸಿನಿಂದ ಹೋಗಲಾಡಿಸುವುದಕ್ಕೆ ನಾವದೀ ವಿಷಯವನ್ನು ಮಾನ್ಯ ಸಭಾಪತಿಯರಿಗೆ ಬಿಡುತ್ತೇವೆ. ನಾವು ಯಾವುದೇ ರೀತಿಯ ಒತ್ತಾಯ ಮಾಡುವುದಿಲ್ಲ.

**Sri S.R.Patil:** That is better.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾವು ಇದನ್ನು ಮಾನ್ಯ ಸಭಾಪತಿಯವರಿಗೆ ಬಿಡುತ್ತೇವೆ. ಅದರಲ್ಲಿ ಏನು ಪ್ರಶ್ನೆ ಇಲ್ಲ. ಆದರೆ, ನಮ್ಮ ಸದಸ್ಯರ ಮನಸ್ಸಿನಲ್ಲಿರುವಂತಹ ಸಂಶಯಗಳನ್ನು ತಾವು ನಿವಾರಣೆ ಮಾಡಿದರೆ, ಬಹಳಷ್ಟು ಸುಗಮವಾಗಿ ಈ motion ಅನ್ನು ಅಂದರೆ, ಸದನವನ್ನು ನಡೆಸಬಹುದು ಎಂದು ನನ್ನ ಭಾವನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಒಂದು ನಿಮಿಷ. ನಾನು ಹೇಳುತ್ತೇನೆ. ಈಗ ನನ್ನ ಕೈಯಲ್ಲಿರುವಂತಹ ಪತ್ರ ನಮ್ಮ ಕಾರ್ಯದರ್ಶಿಯವರು ಅದನ್ನು ಬರೆದಿದ್ದಾರೆ. ಮೊದಲನೆಯದಾಗಿ, ನಾನು ಅದನ್ನೇ ಓದಿ ಹೇಳಿರುವುದು. ಎರಡನೆಯದಾಗಿ, ನಿರ್ಣಯದ ಪರವಾಗಿ 10 ಕ್ಕಿಂತ ಹೆಚ್ಚು ಸದಸ್ಯರು ಬೆಂಬಲಿಸಿರುವುದರಿಂದ ನಿರ್ಣಯಕ್ಕೆ ಅನುಮತಿ ನೀಡಲಾಗಿದೆ. ಮೇಲ್ಕಂಡ ನಿರ್ಣಯವನ್ನು ಸೂಕ್ತ ದಿನಾಂಕದಂದು ಪರಿಶೀಲನೆಗೆ ತೆಗೆದುಕೊಳ್ಳಲು ನಿಯಮಾನುಸಾರ ದಿನಾಂಕವನ್ನು ನಂತರ ಗೊತ್ತುಪಡಿಸಲಾಗುವುದು. ನಿರ್ಣಯಕ್ಕೆ ಒಪ್ಪಿಗೆ ದೊರೆಯಿತು ಹಾಗೂ ಪರಿಶೀಲನೆಗೆ ತೆಗೆದುಕೊಳ್ಳಲು ಸದನವು ಸಮ್ಮತಿಸಿತು. ಇದನ್ನೇ ಹೇಳಿರುವುದು. ನಂತರ ತಿಳಿಸಲಾಗುವುದು. ಇದು ಸಾಕು. ಮುಂದಿನ ವಿಷಯವನ್ನು ಮುಂದುವರಿಸೋಣ.,

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ತಮ್ಮ..

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, Chair ಅನ್ನು time ಅಥವಾ ದಿವಸ insist ಮಾಡುವುದಕ್ಕೆ ಆಗುವುದಿಲ್ಲ. ನಾನು ಇದನ್ನು 5 ದಿವಸಗಳ ಒಳಗೆ ತೆಗೆದುಕೊಳ್ಳದಿದ್ದರೆ, ಆಗ ನೀವು ಅದನ್ನು ಕೇಳಬಹುದು.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ..

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ನೀವು ನನಗೆ ಕಾಯಿದೆಯನ್ನು ಹೇಳಿಕೊಡುತ್ತಲೇ ಇರಿ..

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ವಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.. ಇಲ್ಲ ಸರ್,.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈಗ ಅದು ನನ್ನ ತಲೆಯಲ್ಲಿ ಹೋಗಲ್ಲ.,

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಪೂರ:–** ಮಾನ್ಯ ಸಭಾಪತಿಯವರೇ, ತಾವು ruling ಕೊಟ್ಟಿದ್ದೀರಿ. ಹಾಗಾಗಿ, ಮತ್ತೆ, ಮತ್ತೆ ಇದರಲ್ಲಿ ಏನು ಪ್ರಶ್ನೆ?

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ತಿಮ್ಮಾಪೂರರವರೇ, ಇದರಲ್ಲಿ ಚರ್ಚೆ ಮಾಡುವುದು ಬೇಡ. ನಾನು letter & spirit ಎರಡನ್ನು ಹೇಳಿದ್ದೇನೆ. ನಾನು ಮಾನ್ಯ ಸಭಾಪತಿಯವರ ಬಗ್ಗೆ ಇರುವಂತಹ ಭಾವನೆಗಳನ್ನು ಹೇಳಿದ್ದೇನೆ. ಆ ಒಂದು clarification ಏನಿದೆ, ತಾವು ಈ ಆದೇಶವನ್ನು ಕೊಟ್ಟ ಮೇಲೆ, ಈ ಸಂಶಯಗಳು ಇತ್ತು. ಆದ್ದರಿಂದ, ಇವತ್ತು ಮತ್ತೆ ಪ್ರಸ್ತಾಪಿಸಿದ್ದಾರೆ. ಸದನ ಮುಂದುವರಿದಿದ್ದರೆ, ಆ ಪ್ರಶ್ನೆ ತಾಂತ್ರಿಕವಾಗಿ ಇರಲಿಲ್ಲ. ಇನ್ನೂ ಐದು ದಿವಸಗಳಲ್ಲಿ ಕೊಡುವಂತಹ ಅಧಿಕಾರ ತಮಗಿದೆ.,

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ಇದು ಸರಿಯಲ್ಲ. ಏಕೆ ಗೊತ್ತಾ, ನಿಮಗೆ 2 ರಿಂದ 3 ದಿವಸ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದರಲ್ಲಿ ಏನಿದೆ ಹೇಳಿ? 5 ದಿವಸಗಳ ಒಳಗಡೆ ಎನ್ನುವಂತಹದ್ದು ಜವಾಬ್ದಾರಿ ಯಾರಿಗೆ ಹೇಳಿ?

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾವು ತಮಗೆ ಒತ್ತಾಯವನ್ನು ಹಾಕುತ್ತಿಲ್ಲ.,

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ಇದು interpretation ಮಾಡುವಂತಹ subject ಅಲ್ಲ. ಇದನ್ನು 5 ದಿವಸಗಳ ಒಳಗಡೆ ಮಾಡುವಂತಹ ಜವಾಬ್ದಾರಿ ನನ್ನದು. ರಜೆ ಬಂದರೆ ಯಾವ ರೀತಿ ಮಾಡಬೇಕು ಅನ್ನುವಂಥದ್ದಲ್ಲ. ಇದು ನನ್ನ ಜವಾಬ್ದಾರಿ.,

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, You put an end to that. It is not fair. Chair has given clear-cut ruling.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ತಮಗೆ ನಾವು ಯಾವುದೇ ರೀತಿಯ ಒತ್ತಾಯವನ್ನು ಮಾಡುತ್ತಿಲ್ಲ. ಅವರ ಆತಂಕವನ್ನು ವ್ಯಕ್ತ ಪಡಿಸಿದ್ದೇವೆ. ಇನ್ನೂ ಯಾವ ದಿನಾಂಕವನ್ನು Fix ಮಾಡುವಂಥದ್ದು, ತಮ್ಮ ವಿವೇಚನೆಗೆ ಬಿಟ್ಟಿದ್ದು. ತಮ್ಮ ತೀರ್ಮಾನಕ್ಕೆ ನಾವು ಬದ್ದರಾಗಿದ್ದೇವೆ. ನಾವು ಪೀಠಕ್ಕೆ respect ಕೊಟ್ಟಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಎಲ್ಲರೂ ಪೀಠಕ್ಕೆ respect ಕೊಡಲೇಬೇಕು. They must respect the Chair. Everybody should respect the Chair.

**(ಗೊಂದಲ)**

**Sri BASAVARAJA BOMMAI:** You should also respect the Chair.

**(ಗೊಂದಲ)**

**Sri S.R.Patil:** You have to respect it. It is your bounden duty respect the Chair.

**(ಗೊಂದಲ)**

**Sri BASAVARAJA BOMMAI:** It is your bounden duty also.

**Sri S.R. PATIL:** It cannot be questioned in my case.

**Sri B.K.HARIPRASAD:** It is the duty of the government to run the House. It is not the duty of Opposition. Opposition has got only responsibility. ಮಾನ್ಯ ಸಭಾಪತಿಯವರೇ, I am on a point of order. They cannot question the Chair.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅವರು ಅವರ ಜವಾಬ್ದಾರಿಯನ್ನು ನಿಬಾಯಿಸುತ್ತಿಲ್ಲ. ನಾವು ಮಾತನಾಡಿ ಮುಗಿಸಿದ ಮೇಲೆ ಅವರು ಏಕೆ ಗಲಾಟೆ ಮಾಡುತ್ತಿದ್ದಾರೆ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದನ್ನು ಇಷ್ಟೊಂದು lengthy ಯಾಗಿ discussion ಮಾಡುವಂತಹ ವಿಷಯವಲ್ಲ. ನಾವು ಈ ವಿಷಯವನ್ನು ಮುಗಿಸಿದ್ದೇವೆ ಎಂದು ಹೇಳಿದ್ದೇವು. ಆದರೆ, ಮತ್ತೆ ಅವರೇ ಈ ವಿಷಯವನ್ನು ಬೆಳೆಸಿದ್ದಾರೆ.,

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ಇದರಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತೀರೂ ತೆಗೆದುಕೊಳ್ಳಿ. ದಯವಿಟ್ಟು ಇದನ್ನು ಬಿಟ್ಟುಬಿಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಷ್ಟು ಹೇಳಿದ್ದರೆ, ನಾವು ಏತಕ್ಕೆ ಚರ್ಚೆ ಮಾಡುತ್ತಿದ್ದೇವು? ಅಲ್ಲಿಗೆ ಮುಗಿದು ಹೋಗುತ್ತಿತ್ತು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇರಲಿ ಬಿಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು notice ಕೊಟ್ಟಿದ್ದಾರೆ. 14 ದಿವಸಗಳ ಕಾಲ ಟೈಮ್ ಇದೆ.,

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅವರು ಏನು ಹೇಳಿದರೂ ಸಹ, ನಾವು ಸುಮ್ಮನೆ ಕುಳಿತುಕೊಳ್ಳಬೇಕಾ, ಅವರು House ಅನ್ನು ಗುತ್ತಿಗೆಗೆ ತೆಗೆದುಕೊಂಡಿದ್ದಾರೆಯೇ?.,

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದು ಮಾತು ಹೇಳಿದರು. ಅದಕ್ಕೆ ನಾವು ಗೌರವ ಕೊಟ್ಟು ಕುಳಿತುಕೊಂಡಿದ್ದೇವೆ.,

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ಇದನ್ನು ಇಲ್ಲಿಗೆ ಬಿಡಿ. ಈ ವಿಷಯವನ್ನು ಮತ್ತೇ ಏಕೆ ಬೆಳೆಸುತ್ತಿದ್ದೀರಿ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.,

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸದಸ್ಯರೇ, ಮಾನ್ಯ ಈಶ್ವರಪ್ಪನವರೇ, ಒಂದು ನಿಮಿಷ ಕೇಳಿ. ಈಗ ಮಾನ್ಯ ಸಚಿವರು ಹೇಳಿದರು. 14 ದಿವಸ ನೋಟೀಸ್, 14 ದಿವಸ ನೋಟೀಸ್ ಇವತ್ತಿಗೆ ಮುಗಿಯುತ್ತದೆ ಎಂದು ಗೊತ್ತು. ಇನ್ನೂ 3 ದಿವಸ ಇದೆ ಎಂದು ಎಲ್ಲರಿಗೂ ಗೊತ್ತು. ಇದಾದ ಮೇಲೆ 5 ದಿವಸಗಳಲ್ಲಿ Chairman ರವರು ದಿನಾಂಕವನ್ನು ನಿಗದಿ ಮಾಡಬೇಕು. ಈ 5 ದಿವಸ ಕಾಯುವುದಕ್ಕೆ ಆಗುವುದಿಲ್ಲವೆಂದರೆ, Chairman ಆಗುವುದಕ್ಕೆ ಎಲ್ಲರೂ ಬಹಳ urgent ಆಗಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾವು 5 ದಿವಸಗಳ ಕಾಲ ಕಾಯುವುದಕ್ಕೆ ಆಗುವುದಿಲ್ಲವೆಂದು ಎಲ್ಲಿ ಹೇಳಿದ್ದೇವೆ, 5 ದಿವಸ ಆದ ಮೇಲೆ ತೆಗೆದುಕೊಳ್ಳಿ. ನಾವು ಇವತ್ತೇ ತೆಗೆದುಕೊಳ್ಳಿ ಎಂದು ಹೇಳಿಲ್ಲ.,

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರು Rule.166 ನಲ್ಲಿ ಏನಿದೆ ಎಂದು ಮೊದಲು ತಿಳಿದುಕೊಳ್ಳಲಿ.,

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ವಿಷಯ ಸಾಕು ಬಿಡಿ.., ಎಲ್ಲರಿಗೂ ಕೈಮುಗಿಯುತ್ತೇನೆ. ದಯವಿಟ್ಟು, ಈ ವಿಷಯವನ್ನು ಬಿಟ್ಟುಬಿಡಿ. ಮುಂದಿನ ವಿಷಯವನ್ನು ಮುಂದುವರಿಸಿ.,

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಕೆ.ಹರೀಶ್‌ಕುಮಾರ್‌ರವರೇ, ತಾವು ಮಾತನಾಡಿ.

(ಮುಂದು.,)

(97)02–02–2021(6–40)ಎಂವಿ–ಬಿಎನ್‌ಎಸ್

**10. ಗಮನ ಸೆಳೆಯುವ ಸೂಚನೆಗಳು**

**ಅ) ವಿಷಯ:–** "ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ವಿಧಾನ ಪರಿಷತ್ತಿನ ಶಾಸಕರುಗಳನ್ನು ನಾಮನಿರ್ದೇಶನ ಮಾಡದಿರುವ ಕುರಿತು.

– – –

**ಶ್ರೀ ಕೆ.ಹರೀಶ್ ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ವಂದನೆಗಳು. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ನಾಮನಿರ್ದೇಶನಗೊಳ್ಳಲು ಮತ್ತು ಸದರಿ ಮಂಡಳಿಗೆ ಆಯ್ಕೆಯಾಗಲು ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳು ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದು, ಇತ್ತೀಚಿನ ವರ್ಷಗಳಲ್ಲಿ ಪರಿಷತ್ತಿನ ಶಾಸಕರನ್ನು ಮಂಡಳಿಯ ಸದಸ್ಯತ್ವದಿಂದ ಕೈಬಿಟ್ಟಿದ್ದು, ಅದು ನಿಯಮಾವಳಿಯ ಉಲ್ಲಂಘನೆಯಾಗಿರುತ್ತದೆ. ಈ ಕುರಿತಂತೆ ಸರ್ಕಾರದ ನಿಲುವನ್ನು ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನಸೆಳೆಯ ಬಯಸುತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಸಿ.ನಾರಾಯಣ ಗೌಡ:(ಯುವಜನ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು):–** ಮಾನ್ಯ ಸಭಾಪತಿಯವರೇ,

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಹರೀಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಒದಗಿಸಿರುವ ಉತ್ತರದಲ್ಲಿ ಕರ್ನಾಟಕ ವಿಧಾನಸಭೆಯಿಂದ ಆಯ್ಕೆಯಾಗಿರುವ ಮತ್ತು ನಾಮನಿರ್ದೇಶಿತ ವಿಧಾನ ಪರಿಷತ್ತಿನ ಸದಸ್ಯರನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಸದಸ್ಯರೆಂದು ಪರಿಗಣಿಸಲು, ಮಂಡಳಿಯ ಪ್ರಸ್ತುತ ಅಧಿನಿಯಮದಲ್ಲಿ ಅವಕಾಶವಿರುವುದಿಲ್ಲ. ಸದರಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರನ್ನು ಮಂಡಳಿಯ ಸದಸ್ಯರೆಂದು ಪರಿಗಣಿಸಲು ಅಧಿನಿಯಮಕ್ಕೆ ತಿದ್ದುಪಡಿ ತರುವ ಸಂಬಂಧ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯೊಂದಿಗೆ ಸಮಾಲೋಚಿಸಲಾಗಿದೆ ಮತ್ತು ಕಡತ ಚಾಲನೆಯಲ್ಲಿದೆ ಮತ್ತು ಪ್ರಸ್ತುತ ಮಂಡಳಿಯಲ್ಲಿ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿರುವುದಿಲ್ಲವೆಂದು ತಮ್ಮ ಗಮನಕ್ಕೆ ತರಲು ಬಯಸುತ್ತೇವೆ ಎಂದು ಇದೆ. ಹಿಂದಿನ ಅಧಿವೇಶನದಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಅವರು ಸದರಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಕಾನೂನು ರೀತಿಯಲ್ಲಿ ಮಂಡಳಿಗೆ ಸದಸ್ಯರನ್ನಾಗಿ ನೇಮಕ ಮಾಡಲು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಅಧಿನಿಯಮ 1991ರಲ್ಲಿ ಅವಕಾಶವಿರುವುದಿಲ್ಲ ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. The Malnad Area Development Board Act 1991, Chapter-II, ಅದರಲ್ಲಿ 3ನೇ ಅಂಶವೆಂದರೆ, “(3) The Board shall consist of the following members, namely:- (a) Members of the Parliament and the State Legislature representing a part or whole of Malnad Area whose constituencies lie within the jurisdiction of the Board; . . .” ಬಹುಶಃ ಆ ಒಂದು ಸದಸ್ಯರ ಕ್ಷೇತ್ರ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ partly or wholly ಇರಬೇಕು ಅನ್ನುವಂತಹ 1991ರ ಆ್ಯಕ್ಟ್‌ನಲ್ಲಿ ತಿಳಿಯಪಡಿಸಿದ್ದಾರೆ. ನಾವು ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾದಂತಹ ಸದಸ್ಯರುಗಳಿಗೆ ಕರ್ನಾಟಕ ರಾಜ್ಯ ವ್ಯಾಪ್ತಿಯಾಗಿರುತ್ತದೆ. ಪದವೀಧರರ ಕ್ಷೇತ್ರದ ವ್ಯಾಪ್ತಿ ಒಂದೆರಡು, ಮೂರ್‍ನಾಲ್ಕು ಜಿಲ್ಲೆಗಳಿರುತ್ತವೆ. ಅವರು ತಮ್ಮ ಅನುದಾನವನ್ನು ತಮ್ಮ ಕ್ಷೇತ್ರದ ಆಯಾಯ ವ್ಯಾಪ್ತಿಯಲ್ಲಿ ಖರ್ಚು ಮಾಡುವುದಕ್ಕೆ ಅವಕಾಶವಿದೆ. ಶಿಕ್ಷಕರ ಕ್ಷೇತ್ರಕ್ಕೂ ಕೂಡ ಐದಾರು ಜಿಲ್ಲೆಗಳಿದ್ದರೆ, ಆ ವ್ಯಾಪ್ತಿಯಲ್ಲಿ ಅವರು ಅನುದಾನವನ್ನು ಖರ್ಚು ಮಾಡುವುದಕ್ಕೆ ಅವಕಾಶವಿದೆ. ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಆಯ್ಕೆಯಾದಂತಹವರು ಅವರವರ ಕ್ಷೇತ್ರದಲ್ಲಿ ಮಾತ್ರ ಖರ್ಚು ಮಾಡುವುದಕ್ಕೆ ಅವಕಾಶವಿದೆ. ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾದಂತಹ ಸದಸ್ಯರುಗಳು ತಮ್ಮ ಅನುದಾನವನ್ನು ಇಡೀ ರಾಜ್ಯದಲ್ಲಿ ಎಲ್ಲಿ ಬೇಕಾದರೂ ಖರ್ಚು ಮಾಡುವುದಕ್ಕೆ ಅವಕಾಶವಿದೆ. ನಾವು ವಿಧಾನ ಸಭೆಯಿಂದ ಆಯ್ಕೆಯಾದಂತಹ ಪರಿಷತ್ತಿನ ಸದಸ್ಯರುಗಳಿಗೆ ಒಂದು ನೋಡಲ್ ಜಿಲ್ಲೆ ಮತ್ತು ನೋಡಲ್ ತಾಲ್ಲೂಕನ್ನು ಕೊಟ್ಟಿದ್ದಾರೆ. ನಮ್ಮ ಆ ನೋಡಲ್ ಜಿಲ್ಲೆ ಮತ್ತು ನೋಡಲ್ ತಾಲ್ಲೂಕು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಬರುತ್ತದೆ. ಆ ಪ್ರದೇಶಾಭಿವೃದ್ಧಿಯ ಮಂಡಳಿಯ ವ್ಯಾಪ್ತಿಯಲ್ಲಿ ಬಂದರೆ, ಆ ಅಭ್ಯರ್ಥಿಗೆ ಅಥವಾ ಸದಸ್ಯನಿಗೆ ಸದರಿ ಮಂಡಳಿಯ ಸದಸ್ಯನಾಗುವ ಅರ್ಹತೆ ಇದೆ. ಆದುದರಿಂದ ಈ ಒಂದು ವ್ಯಾಪ್ತಿಯಲ್ಲಿ ತಮ್ಮ ಅನುದಾನವನ್ನು ಇಡೀ ರಾಜ್ಯಕ್ಕೆ ಖರ್ಚು ಮಾಡುವುದಕ್ಕೆ ಅವಕಾಶವಿದೆ. ಆದರೆ ಆ ವ್ಯಾಪ್ತಿ ನಮ್ಮ ಮಲೆನಾಡು ಪ್ರದೇಶಾಭಿವೃದ್ಧಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಂಡಳಿಗೆ ಬರುವುದಿಲ್ಲ ಎನ್ನುವಂತಹ ವ್ಯಾಖ್ಯಾನ ಎಷ್ಟು ಸರಿಯಿದೆ? ಇಡೀ ರಾಜ್ಯಕ್ಕೆ ಅನುದಾನವನ್ನು ಖರ್ಚು ಮಾಡಬಹುದು. ಆದರೆ, ನಿಮ್ಮ ಕ್ಷೇತ್ರ ವ್ಯಾಪ್ತಿ ಮಲೆನಾಡು ಪ್ರದೇಶಕ್ಕೆ ಬರುವುದಿಲ್ಲ ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ಬೆಳ್ತಂಗಡಿ ಅಥವಾ ದಕ್ಷಿಣ ಕನ್ನಡ ಜಿಲ್ಲೆ, ಈಗ ನಮ್ಮ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯ, ಶ್ರೀ ಪ್ರತಾಪ ಸಿಂಹ ನಾಯಕ್.ಕೆ, ಶ್ರೀ ಎಸ್.ರುದ್ರೇಗೌಡ ಇವರುಗಳು ಇದ್ದಾರೆ. ಕೆಲವು ಸಮಯಗಳಲ್ಲಿ ನಾಮನಿರ್ದೇಶಿತ ಸದಸ್ಯರಿಗೆ ಕೂಡ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಸದಸ್ಯತ್ವಕ್ಕೆ ಅವಕಾಶವನ್ನು ನೀಡಲಾಗಿತ್ತು. ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಂತಹ ಸದಸ್ಯರಿಗೆ ಕೂಡ ಸದಸ್ಯತ್ವವನ್ನು ನೀಡಲಾಗಿತ್ತು. ಆದರೆ, 1991ರ ಅಧಿನಿಯಮದಡಿಯಲ್ಲಿ ಅವಕಾಶವಿಲ್ಲ. ಇದು ಪರಿಶೀಲನೆಯಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದುದರಿಂದ ದಯವಿಟ್ಟು ನಾನು ಸರ್ಕಾರವನ್ನು ಕೇಳುತ್ತಿರುವುದು ಏನೆಂದರೆ, ನಮ್ಮ ವ್ಯಾಪ್ತಿ ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿದೆ. ಕರ್ನಾಟಕ ರಾಜ್ಯ ಮಲೆನಾಡು ವ್ಯಾಪ್ತಿಯಲ್ಲೇ ಇದೆ ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತಿಳಿಯಬಯಸುತ್ತೇನೆ ಮತ್ತು ಆ ಸದಸ್ಯತ್ವವನ್ನು ಕೊಡಬೇಕಾದಂತಹ ಜವಾಬ್ದಾರಿ ಇದೆ. ಇದನ್ನು ದಯವಿಟ್ಟು ಕೊಡಬೇಕು ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹೇಳಿಕೆಗೆ ಪೂರಕವಾಗಿ ಮಾತ್ರನಾಡುತ್ತೇನೆ ಅಷ್ಟೇ. ಇದು ಸಂಬಂಧಪಟ್ಟ ಇಲಾಖೆಯ interpretation ಅಥವಾ opinion. ಇದಕ್ಕೆ ತಿದ್ದುಪಡಿ ಮಾಡಿ ಸರಿಪಡಿಸಬಹುದಾದಂತಹ ಅವಶ್ಯಕತೆ ಇಲ್ಲ. ನಮಗೆ ಒಂದು ನೋಡಲ್ ಜಿಲ್ಲೆ ಅಥವಾ ನೋಡಲ್ ತಾಲ್ಲೂಕು ಎಂದು ಕೊಟ್ಟ ಮೇಲೆ, ನಮ್ಮ ಅಭಿವೃದ್ಧಿಯ ನಿಧಿಯನ್ನು ಎಲ್ಲಿ ಉಪಯೋಗ ಮಾಡುತ್ತೀರಿ ಎಂದು ಕೇಳುತ್ತಾರೆ. ಅವರು ಹಾಗೆ ಕೇಳಿದಾಗ, ನಾವು ಒಂದು ಜಿಲ್ಲೆಯ ಹೆಸರನ್ನು ನೀಡುತ್ತೇವೆ. ಆ ಜಿಲ್ಲೆ, ತಾಲ್ಲೂಕು ಅಥವಾ ವಿಧಾನ ಸಭಾ ಕ್ಷೇತ್ರ ಈ ಮಂಡಳಿಯ ವ್ಯಾಪ್ತಿಗೆ ಬರುತ್ತದೆ ಎನ್ನುವುದಾದರೆ, we are eligible. ಈ ಕಾರಣಕ್ಕೆ ನಮ್ಮನ್ನು ಹೊರತುಪಡಿಸಬಾರದು ಮತ್ತು ಈ ಮಂಡಳಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರನ್ನು ವಿಧಾನ ಸಭೆಯಿಂದ ಆಯ್ಕೆಯಾದ ಕಾರಣಕ್ಕೋಸ್ಕರ ಹೊರಗಿಡಬಾರದು ಎನ್ನುವಂತಹ ವಿನಂತಿಯನ್ನು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ.

**ಶ್ರೀ ಕೆ.ಸಿ.ನಾರಾಯಣ ಗೌಡ (ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ಮಂಡಳಿಗೆ ನಾಲ್ಕು ಜನ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರನ್ನು ತೆಗೆದುಕೊಳ್ಳುವುದಕ್ಕೆ ತೀರ್ಮಾನವಾಗಿದೆ. ಇದನ್ನು ಸದನದಲ್ಲಿಟ್ಟು, ಇದನ್ನು ಶೀಘ್ರದಲ್ಲಿ clear ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಇ) ವಿಷಯ:– ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರಂ ವಾರ್ಡ್ ಸಂಖ್ಯೆ 53ನೇ ವ್ಯಾಪ್ತಿಯ ಬಸವನಪುರ ಗ್ರಾಮದ ಸರ್ವೇ ನಂಬರ್ 26/1ರಲ್ಲಿ 4 ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಇದ್ದರೂ ಜಿಲ್ಲಾಧಿಕಾರಿಗಳು ಕಾನೂನುಬಾಹಿರವಾಗಿ ಭೂ ಪರಿವರ್ತನೆ ಆದೇಶ ಹೊರಡಿಸಿರುವ ಬಗ್ಗೆ.**

– – –

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟಂತಹ ಕಂದಾಯ ಸಚಿವರು ಸದನದಲ್ಲಿ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಸದನದಲ್ಲಿ ಇಲ್ಲ. ನಮ್ಮೆಲ್ಲರನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದಿದ್ದಾರೆ. ದಯವಿಟ್ಟು ಸಹಕಾರ ನೀಡಬೇಕು.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಚಾರ. ಕಳೆದ ಬಾರಿಯ ಸದನದಲ್ಲೂ ಈ ಪ್ರಶ್ನೆಯನ್ನು ಕೇಳಿದ್ದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾಳೆ ಮಾನ್ಯ ಕಂದಾಯ ಮಂತ್ರಿಗಳು ಬಂದ ತಕ್ಷಣ ಉತ್ತರ ನೀಡುತ್ತೇವೆ. ಮಾನ್ಯ ಕಂದಾಯ ಮಂತ್ರಿಗಳು ಬಂದಾಗ ತೆಗೆದುಕೊಳ್ಳಿ. ಇದನ್ನು ನಾಳಿನ ಅಜೆಂಡಾದಲ್ಲಿ ಸೇರಿಸಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾಳೆಯೇ ಚರ್ಚೆಗೆ ತೆಗೆದುಕೊಳ್ಳುವಂತೆ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರಿಗೆ ಉತ್ತರವನ್ನು ಒದಗಿಸಿಕೊಟ್ಟಿದ್ದೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಇದ್ದಿದ್ದರೆ ಚೆನ್ನಾಗಿತ್ತು. ಏಕೆಂದರೆ, ಇದು ಬಹಳ ಗಂಭೀರವಾದಂತಹ ಪ್ರಶ್ನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದಂತಹ ಪ್ರಶ್ನೆಗಳಿಗೆ ಅವರ ಬದಲಿಗೆ ಮಾನ್ಯ ಎಸ್.ಟಿ.ಸೋಮಶೇಖರ್‌ರವರೆ ಉತ್ತರ ನೀಡುತ್ತಾರೆ. ಆದುದರಿಂದ ಏನು ಸಮಸ್ಯೆಯಾಗುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಟಿ. ಸೋಮಶೇಖರ್‌ರವರು ನನ್ನ ಸ್ನೇಹಿತರು, ಅವರು adjust ಆಗಿಬಿಡುತ್ತಾರೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾರಾಯಣಸ್ವಾಮಿಯವರು ಹೇಳಿದಂತೆ ನಾನು ಕುಳಿತುಕೊಂಡರೆ ಸಾಕು.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಟಿ. ಸೋಮಶೇಖರ್‌ರವರು ಗಂಭೀರವಾಗಿಲ್ಲವೆಂದು ಹೇಳುತ್ತಿದ್ದಾರೆಯೇ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಅಲ್ಲ ಅವರು ಬಹಳ ಜೋರಾಗಿದ್ದಾರೆ. ಆದರೆ, ನಾನು ಮತ್ತು ಅವರು ಸ್ನೇಹಿತರು ಅದಕ್ಕೆ ಏನಾದರೂ ಮಾಡುತ್ತಾರೆಂದು ಅಷ್ಟೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರಾದ ಅಶೋಕ್‌ರವರು ಇಲ್ಲವೆಂದು ಮಾನ್ಯ ಎಸ್.ಟಿ.ಸೋಮಶೇಖರ್‌ರವರು ಗಂಭೀರವಾಗಿಲ್ಲವೆಂದು ಹೇಳುತ್ತಿದ್ದಾರೆಯೇ?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರಾದಂತಹ ಆರ್.ಅಶೋಕ್‌ರವರು ನಾಲ್ಕೈದು ಗಂಟೆಯವರೆಗೆ ಇಲ್ಲೇ ಇದ್ದರು. ಆದರೆ, ವಿಧಾನ ಸಭೆಯಲ್ಲಿ ಅವರ ವಿಷಯ ಬಂದಿರುವುದರಿಂದ ಅಲ್ಲಿಗೆ ಹೋಗಿದ್ದಾರೆ ಅಷ್ಟೆ. ಅವರು ಇಲ್ಲೇ ಮಧ್ಯಾಹ್ನದವರೆಗೆ ಕಾದು ಕುಳಿತಿದ್ದರು. ಮಾನ್ಯ ಕಂದಾಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಅಕಸ್ಮಾತ್ ಇನ್ನು ಏನಾದರೂ ಗಂಭೀರತೆ ಇದ್ದರೆ, ಕಂದಾಯ ಸಚಿವರ ಜೊತೆಯಲ್ಲಿ ನಾನು ಮತ್ತು ನಾರಾಯಣಸ್ವಾಮಿಯವರು ಕುಳಿತು ಅವರ ಸಮಸ್ಯೆ ಏನಿದೆ ಅದನ್ನು ಶೇಕಡಾ 100ರಷ್ಟು ಪರಿಹರಿಸುತ್ತೇವೆ. No match fixing.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಇನ್ನು ಇದನ್ನು ಮಂಡನೆ ಮಾಡಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಇದು ನನ್ನ constituency ಅಲ್ಲ. ಆದರೆ, ಕಂದಾಯ ಮಂತ್ರಿಗಳು ಕಾದು ಕುಳಿತು ಹೋದರು ಎಂದು ಎಂ.ನಾರಾಯಣಸ್ವಾಮಿಯವರನ್ನು ಕರೆದುಕೊಂಡು ನಾನೇ follow up ಮಾಡುವಂತಹ ಕೆಲಸವನ್ನು ಮಾಡುತ್ತೇನೆ. ನಾನು co-ordination ಕೆಲಸವನ್ನು ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದನ್ನು ಯಾವಾಗ ಬಗೆಹರಿಸುತ್ತಾರೆಂದು ಹೇಳಲಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ವಿಧಾನ ಸಭಾ ಕ್ಷೇತ್ರ, ಕಾರ್ಪೊರೇಷನ್ ವಾರ್ಡ್ ಸಂಖ್ಯೆ 53ನೇ ವ್ಯಾಪ್ತಿಯ ಬಸವನಪುರ ಗ್ರಾಮದ ಸರ್ವೆ ನಂಬರ್ 26/1ರಲ್ಲಿ ನಾಲ್ಕು ಎಕರೆ ಹದಿನೆಂಟು ಗುಂಟೆ ವಿಸ್ತೀರ್ಣದ ಜಮೀನಿಗೆ ಖಾತೆ ನೀಡದಂತೆ ತಕರಾರು ಇದ್ದು, ಮಾನ್ಯ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಆದೇಶದಂತೆ ಸದರಿ ಜಮೀನಿನ ವಿಚಾರವಾಗಿ ಕೆ.ಆರ್.ಪುರಂ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ಸಂಖ್ಯೆ 0623/2019 ಎಂದು ದಾಖಲಾಗಿರುತ್ತದೆ. ಮಾನ್ಯ ಉಪ ವಿಭಾಗಾಧಿಕಾರಿಗಳು, ನ್ಯಾಯಾಲಯದಲ್ಲಿ ಪ್ರಕರಣವಿದ್ದು, ದಾವೆ ಸಂಖ್ಯೆ ಆರ್.ಎ.ಡಿ.ಇ.–44/2018, ದಿನಾಂಕ 12.02.2018ರಂದು ತಡಯಾಜ್ಞೆ ನೀಡಿದ್ದು, ಮಾನ್ಯ ಭೂಕಬಳಿಕೆ ವಿಶೇಷ ನ್ಯಾಯಾಲಯದಲ್ಲೂ ಕೂಡ, ಪ್ರಕರಣದ ಸಂಖ್ಯೆ ಎಲ್.ಜೆ.ಸಿ.–1243/2017ರಂತೆ ದಾವೆ ಇರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ, ತಡೆಯಾಜ್ಞೆ ಇದ್ದರೂ ಸಹ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು, ಭೂ ಪರಿವರ್ತನೆ ಆದೇಶ ಸಂಖ್ಯೆ:ಎ.ಎಲ್.ಎನ್.ಕೆ.ಆರ್.ಹೆಚ್./ಎಸ್.ಆರ್./18/2017–18ರಂತೆ, ದಿನಾಂಕ 19.02.2020ರಂದು ಕಾನೂನನ್ನು ಮೀರಿ ಆದೇಶವನ್ನು ಹೊರಡಿಸಿರುತ್ತಾರೆ.

**(ಮುಂದು...)**

(98) 02.02.2021 06.50 LL-BNS

**ಶ್ರೀ ಎಂ.ನಾರಾಯಣಸ್ವಾಮಿ(ಮುಂದುವರೆದಿದ್ದು...)**

ಅವರ ಆದೇಶದಂತೆ, ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯದ ಕಂದಾಯ ಅಧಿಕಾರಿಗಳು ಸರ್ಕಾರಿ ಜಮೀನನ್ನು ಪರಿಶೀಲನೆ ಮಾಡದೇ ಅನಗತ್ಯವಾಗಿ ಖಾತೆ ಮಾಡಿರುವ ಬಗ್ಗೆ ಸನ್ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)(ಕಂದಾಯ ಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಬಹಳ ಸುದೀರ್ಘವಾಗಿ ಕೊಟ್ಟಿರುತ್ತಾರೆ. ಈ ವಿಷಯದಲ್ಲಿ ಒಂದು ವೇಳೆ ಮಾನ್ಯ ನ್ಯಾಯಾಲಯದ ಆದೇಶ ಇದ್ದರೂ ಕೂಡ, ಭೂ ಪರಿವರ್ತನೆ ಮಾಡಿದ್ದಾರೆ, ಅದು ಅಂತಿಮ ತೀರ್ಪಿಗೆ ಒಳಪಟ್ಟು ಎಂದು ಇದೆ. ಮಾನ್ಯ ಕಂದಾಯ ಸಚಿವರ ಜೊತೆಯಲ್ಲಿ ಮಾನ್ಯ ಎಂ. ನಾರಾಯಣಸ್ವಾಮಿಯವರನ್ನು ಕೂರಿಸಿ, ಈ ವಿಷಯದಲ್ಲಿ ಏನು ಸಮಸ್ಯೆಯಿದೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ನಾನು ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯ ಏತಕ್ಕೆ ಗಂಭೀರವಾಗಿದೆ ಎಂದು ಹೇಳುತ್ತಿದ್ದೇನೆಂದರೆ, ಎಲ್ಲಾ ನ್ಯಾಯಾಲಯಗಳು ಸಹ ಇದರಲ್ಲಿ ತಡೆಯಾಜ್ಞೆ ಕೊಟ್ಟಿರುತ್ತವೆ. ಹಾಗಾಗಿ, ದಯಮಾಡಿ, ಈ ಬಗ್ಗೆ ಮಾತನಾಡುವುದಕ್ಕೆ ನನಗೆ ಸ್ವಲ್ಪ ಸಮಯಾವಕಾಶ ಬೇಕಾಗಿರುತ್ತದೆ. ಮಾನ್ಯ ಕಂದಾಯ ಸಚಿವರು ಸಹ ಇದನ್ನು ಕೇಳಿಸಿಕೊಳ್ಳಬೇಕು.

**ಸಭಾಪತಿಯವರು:–** ಹಾಗಾದರೆ, ಮಾನ್ಯ ಸಚಿವರು ನಾಳೆ ದಿವಸ ಸದನಕ್ಕೆ ಬಂದಾಗ ಈ ಬಗ್ಗೆ ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾಳೆ ದಿವಸ ಈ ವಿಷಯ ತೆಗೆದುಕೊಳ್ಳುತ್ತೇನೆಂದರೆ ನನ್ನದೇನು ಅಭ್ಯಂತರವಿರುವುದಿಲ್ಲ. ಏಕೆಂದರೆ, ಈ ಕೂಡಲೇ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ನೀಡಲಾಗಿರುತ್ತದೆ. ಅದರ ಮೇಲೆ ಏನಾದರೂ ಕೇಳುವುದು ಇದ್ದರೆ ಕೇಳಲಿ.

**ಸಭಾಪತಿಯವರು:–** ಅದು ಇನ್ನೂ ಅರ್ಧ ಗಂಟೆ ಚರ್ಚೆಯಾಗುತ್ತದೆ. ಏಕೆಂದರೆ, ಉತ್ತರ ಸುಮಾರು ಎರಡು ಪುಟಗಳಷ್ಟಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು. ಈ ವಿಷಯದ ಮೇಲೆ ಮಾತನಾಡಲು ನನಗೆ ಅರ್ಧ ಗಂಟೆಗಿಂತಲೂ ಹೆಚ್ಚು ಸಮಯ ಬೇಕು.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ನಾನು ಈಗ sufficiently answer ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ, ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಏಕೆಂದರೆ ಸದರಿ ಸರ್ಕಾರಿ ಜಮೀನಿನಲ್ಲಿ ಕಳೆದ ಮೂರು ದಿನಗಳಿಂದ ರಾತ್ರಿ ಹಗಲು ಎನ್ನದೇ ಜೆ.ಸಿ.ಬಿ. ಯಂತ್ರಗಳು ಆ ಜಮೀನನ್ನು ಸಮತಟ್ಟು ಮಾಡುವಂತಥದ್ದನ್ನು ಫೋಟೋ ಸಮೇತವಾಗಿ ಮಾಹಿತಿ ತಂದಿರುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಈ ಪ್ರಕರಣ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುವುದಿಲ್ಲ. ಒಂದು ವೇಳೆ ಅದು ಅಂತಿಮ ಆದೇಶಕ್ಕೆ ಒಳಪಟ್ಟಿದ್ದರೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ನಾನು ನೂರಕ್ಕೆ ನೂರರಷ್ಟು ಮಾಡುತ್ತೇನೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟ ಇಲಾಖೆಯ ಎಲ್ಲಾ ಮಾಹಿತಿಯನ್ನು ಕೊಡಲಾಗಿರುತ್ತದೆ. ಅದರಂತೆ, ದಿನಾಂಕ:06.09.2010ರಂದು ದೂರುದಾರರು ಭೂ ಪರಿವರ್ತನೆ ಮಾಡದಂತೆ ಆಕ್ಷೇಪಣೆ ವ್ಯಕ್ತಪಡಿಸಿ ಸಲ್ಲಿಸಿದ ತಕರಾರಿಗೆ ಸಂಬಂಧಿಸಿದಂತೆ, 'ಯಾವುದೇ ನ್ಯಾಯಾಲಯಗಳಲ್ಲಿ ಪ್ರಶ್ನಿತ ಜಮೀನಿಗೆ ಸಂಬಂಧಿಸಿದಂತೆ ಪ್ರಕರಣಗಳು ಬಾಕಿ ಇದ್ದಲ್ಲಿ, ಅಂತಹ ಪ್ರಕರಣಗಳಿಗೆ ನ್ಯಾಯಾಲಯಗಳು ಹೊರಡಿಸುವ ಅಂತಿಮ ಆದೇಶಕ್ಕೆ ಒಳಪಟ್ಟು ಭೂ ಪರಿವರ್ತನೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬಹುದಾಗಿರುತ್ತದೆಯೆಂದು' ಜಿಲ್ಲಾಧಿಕಾರಿಗಳ ಕಛೇರಿಯ ಕಾನೂನು ಸಮಾಲೋಚಕರು ನೀಡಿದ ಕಾನೂನಾತ್ಮಕ ಅಭಿಪ್ರಾಯದಂತೆ, ಸದರಿ ಜಮೀನನ್ನು ವಾಸದ ಉದ್ದೇಶಕ್ಕೆ ದಿನಾಂಕ:19.02.2020ರಂದು ಭೂ ಪರಿವರ್ತನೆ ಆದೇಶ ಹೊರಡಿಸಲಾಗಿರುತ್ತದೆ. ಅಂತಿಮ ಆದೇಶಕ್ಕೆ ಒಳಪಟ್ಟು ಎಂದು ಆದೇಶ ಹೊರಡಿಸಿರುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಸದರಿ ಸರ್ಕಾರಿ ಜಮೀನಿನಲ್ಲಿ ರಾತ್ರಿ ಹಗಲು ಜೆ.ಸಿ.ಬಿ. ಯಂತ್ರಗಳಿಂದ ಕೆಲಸ ಮಾಡುತ್ತಿರುವುದನ್ನು, ಅಂತಿಮ ಆದೇಶ ಎಂದು ಕಾಯುತ್ತಾ ಕುಳಿತುಕೊಂಡರೆ, ಆತ ಆ ಜಮೀನಿನಲ್ಲಿ ಬಡಾವಣೆ ನಿರ್ಮಿಸಿ ಮಾರಾಟ ಮಾಡಿ ಹೋದ ನಂತರ ಸರ್ಕಾರ ಏನು ಮಾಡುತ್ತದೆ?

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಕಂದಾಯ ಸಚಿವರಿಗೆ ಗಮನಕ್ಕೆ ತಂದು ಅದನ್ನು ನಿಲ್ಲಿಸುವಂತಹ ಕೆಲಸ ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ನಂತರ ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಸಂಪೂರ್ಣ ಉತ್ತರ ನೀಡಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವ ಪ್ರಕಾರ ಸದರಿ ಸರ್ಕಾರಿ ಜಮೀನಿನಲ್ಲಿ ಏನಾದರೂ ಕೆಲಸ ಮಾಡುತ್ತಿದ್ದರೆ, ಅದನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತಂದು, ಆ ಕೆಲಸ ಮಾಡಬಾರದೆಂದು ಸೂಚನೆ ನೀಡಿ ಅದನ್ನು ನಿಲ್ಲಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಆ ಕಾರಣಕ್ಕಾಗಿಯೇ ಮಾನ್ಯ ಕಂದಾಯ ಸಚಿವರು ಸದನದಲ್ಲಿ ಇರಬೇಕೆಂದು ಹೇಳಿದೆನು. ಕಂದಾಯ ಇಲಾಖೆಯ ಅಧಿಕಾರಿಗಳು ಯಾವ ಮಟ್ಟಕ್ಕೆ ಕೆಲಸ ಮಾಡುತ್ತಾರೆ ಎನ್ನುವುದಕ್ಕೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಅದೇನೆಂದರೆ, 2019-20ರ ಪಹಣಿ ನನ್ನ ಕೈಯಲ್ಲಿದೆ. ಅದು ಯಾವ ದಿನದಿಂದ ಎಫೆಕ್ಟ್ ಆಗಿದೆಯೆಂದು ಹೇಳುವುದಾದರೆ, valid from 01.12.2009 till date ಎಂದು ಇದೆ. ಇದು ದಿನಾಂಕ: 01.12.2009 ಯಿಂದ ಇವೊತ್ತಿನವರೆಗೂ ಎಫೆಕ್ಟ್ ಆಗುವಂಥದ್ದು. ಈ ಸರ್ಕಾರಿ ದಾಖಲೆ ಏನು ಹೇಳುತ್ತದೆಯೆಂದರೆ, 28 ಎಕರೆ 8 ಗುಂಟೆ ಜಮೀನು ಸರ್ಕಾರಿ ಎಂದು ಇದೆ. ಆಕಾರಕಂಡ ಬಂಜರು ಸರ್ಕಾರಿ ಭೂಮಿ ಎಂದು ಇದೆ. ಅದೇ ಆರ್.ಟಿ.ಸಿ. ಯಲ್ಲಿ ದಿನಾಂಕ:13.11.2019 ಅಂದರೆ, ಮೊದಲು ನಾನು ಓದಿದ್ದು, 2009 ರಿಂದ till date ವರೆಗೆ ಸರ್ಕಾರಿ ಜಮೀನು ಎಂದು ಹೇಳುತ್ತಾರೆ. ಇನ್ನೊಂದು ಪಹಣಿಯಲ್ಲಿ ದಿನಾಂಕ:13.11.2019 ರಿಂದ till date ಆ 4 ಎಕರೆ 18 ಗುಂಟೆ ಜಮೀನು ಬೇರೆಯವರಿಗೆ ಆಗಿದೆಯೆಂದು ಇದೇ ಪಹಣಿ ಕೊಡುತ್ತಾರೆ. ಯಾವ ಮಟ್ಟಕ್ಕೆ ಕಂದಾಯ ಅಧಿಕಾರಿಗಳು ಸರ್ಕಾರಿ ಜಮೀನಿಗೆ ಮೋಸ ಮಾಡುತ್ತಿದ್ದಾರೆಂಬ ಬಗ್ಗೆ ನಾನು ಹೇಳುತ್ತಿದ್ದೇನೆ. ಉಪ ನೋಂದಣಾಧಿಕಾರಿ ಕಚೇರಿಯಲ್ಲಿ 2013 ರಲ್ಲಿ ಆ ಜಮೀನಿಗೆ ಬೋಗಸ್ ದಾಖಲೆ ಮಾಡಿಕೊಂಡು ನೋಂದಣಿ ಮಾಡಿಸುವುದಕ್ಕೆ ಹೋಗುತ್ತಾರೆ. ದಿನಾಂಕ:25.11.2013ರಲ್ಲಿ ಸರ್ವೆ ನಂಬರ್:26/1ಕ್ಕೆ ನೋಂದಣಿ ಮಾಡಬೇಕಾದಾಗ 11(ಇ) ನಕ್ಷೆ ಕೊಡಬೇಕಾಗಿರುತ್ತದೆ. ಅದರಂತೆ, ಸದರಿ 11(ಇ) bogus ನಕ್ಷೆ ಕೊಟ್ಟು ಸದರಿ ಜಮೀನನ್ನು ನೋಂದಣಿ ಮಾಡಿಸುವುದಕ್ಕೆ ಹೋದಂತಹ ಸಂದರ್ಭದಲ್ಲಿ, ಸದರಿ 11(ಇ) ನಕ್ಷೆಯನ್ನು ಸರ್ವೆ ಮತ್ತು ಭೂ ಮಾಪನ ಇಲಾಖೆಯಿಂದ ವಿತರಣೆ ಮಾಡಿರುವುದಿಲ್ಲವೆಂದು ಹೇಳಿದ್ದರಿಂದ, ಉಪ ನೋಂದಣಾಧಿಕಾರಿಯವರು ಸದರಿ ಜಮೀನನ್ನು ನೋಂದಣಿ ಮಾಡದೇ ವಾಪಸ್ಸು ಕಳುಹಿಸಿಕೊಟ್ಟಿರುತ್ತಾರೆ. ಆ ರೀತಿ ವಾಪಸ್ಸು ಬಂದಿರುವುದನ್ನು ದಿನಾಂಕ:28.10.2016ರಲ್ಲಿ ಬೋಗಸ್ 11(ಇ) ನಕ್ಷೆ ಕೊಟ್ಟು ನೋಂದಣಿ ಮಾಡಿಸಿಕೊಂಡು ಬರುತ್ತಾರೆ. ಆ ಆಧಾರದ ಮೇರೆಗೆ ಈ ಜಮೀನಿಗೆ ಸಂಬಂಧಿಸಿದಂತೆ, ಮಾನ್ಯ ಎ.ಸಿ. ಕೋರ್ಟ್‌ನಲ್ಲಿ ಪ್ರಕರಣ ಇದೆ; ಪೊಲೀಸ್ ಠಾಣೆಯಲ್ಲಿ ಆಪಾದಿತರ ವಿರುದ್ಧ ಎಫ್.ಐ.ಆರ್. ಮಾಡಿರುತ್ತಾರೆ. ಈ ಜಮೀನಿನ ಮೇಲೆ ಪ್ರತಿಯೊಂದು ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ. ಈ ರೀತಿ ಇದ್ದರೂ ಸಹ, ಜಿಲ್ಲಾಧಿಕಾರಿಯವರು ಸದರಿ ಜಮೀನನ್ನು ಕನ್ವರ್ಷನ್ ಮಾಡಿಕೊಡುತ್ತಾರೆ. ನಂತರ, ಆ ಜಮೀನನ್ನು ಬಿ.ಬಿ.ಎಂ.ಪಿ.ಯಲ್ಲಿ ಖಾತಾ ಮಾಡಿಸಿಕೊಳ್ಳುತ್ತಾರೆ. ಈ ವಿಷಯ ನನಗೆ ಗೊತ್ತಾಗುವಷ್ಟರಲ್ಲಿ ಅದು ಟೌನ್ ಪ್ಲಾನಿಂಗ್‌ಗೆ ಬಂದಿತ್ತು. ತದನಂತರ, ನಾನು ಸಂಬಂಧಪಟ್ಟಂತಹ ಆಯುಕ್ತರಿಗೆ, ಜಿಲ್ಲಾಧಿಕಾರಿಯವರಿಗೆ ಮತ್ತು ತಹಶೀಲ್ದಾರ್‌ರವರಿಗೆ ಪತ್ರಗಳನ್ನು ಬರೆದ ನಂತರ, ಅದು ಟೌನ್ ಪ್ಲಾನಿಂಗ್‌ನಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಂತಿರುತ್ತದೆ. ಆದಾಗ್ಯೂ, ಈ ವಿಷಯದಲ್ಲಿ ಅಧಿಕಾರಿಗಳು ಶಾಮೀಲಾಗಿ, ಸ್ಥಳೀಯ ಜನಪ್ರತಿನಿಧಿಗಳು ಸಂಪೂರ್ಣವಾಗಿ ಒತ್ತಡವನ್ನು ಹಾಕುವುದರ ಮುಖಾಂತರವಾಗಿ; ಅಧಿಕಾರಿಗಳಿಗೆ ಬೆದರಿಕೆ ಹಾಕುವುದರ ಮುಖಾಂತರವಾಗಿ, "ನಾನು ಇದ್ದೀನಿ, ನೀನು ಈ ಕೆಲಸವನ್ನು ಮಾಡು" ಎಂದು ಹೇಳುತ್ತಾರೆ. ಇದರಿಂದಾಗಿ, ಅಧಿಕಾರಿಗಳು ಇರುವಂತಹ ಕಾನೂನನ್ನು ಗಾಳಿಗೆ ತೂರಿ ಹಾಗೂ ಈ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇದ್ದರೂ ಸಹ, ಇವೊತ್ತಿನ ದಿವಸ ಆ ಜಮೀನಿನಲ್ಲಿ ರಾತ್ರಿ ಹಗಲು ಕೆಲಸ ನಡೆಸುವುದಕ್ಕೆ ಅವಕಾಶ ನೀಡಿರುತ್ತಾರೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಇನ್ನೂ ಮುಗಿಸಿರುವುದಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಎ.ಸಿ. ಕೋರ್ಟ್‌ನಲ್ಲಿ ತೀರ್ಮಾನವಾಗಿದ್ದು, ಇವರ ಅರ್ಜಿ ತಿರಸ್ಕೃತಗೊಂಡಿರುತ್ತದೆ. ನಂತರ, ಭೂ ಕಬಳಿಕೆ ನಿಷೇಧ ನ್ಯಾಯಾಲಯಕ್ಕೆ ಮನವಿ ಮಾಡಿದ್ದು, ಅಲ್ಲಿಯೂ ಸಹ ಇದು ತಿರಸ್ಕೃತಗೊಂಡಿರುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, still the case is pending.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಭೂ ಕಬಳಿಕೆ ನಿಷೇಧ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ. ಅದರಂತೆ, ಎ.ಸಿ. ಕೋರ್ಟ್‌ನಲ್ಲಿಯೂ ಸಹ ಪ್ರಕರಣ ಬಾಕಿ ಇದ್ದು, ಅದು ಮುಕ್ತಾಯವಾಗಿರುವುದಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಭೂ ಕಬಳಿಕೆ ನಿಷೇಧ ನ್ಯಾಯಾಲಯದಲ್ಲಿ ಅರ್ಜಿ ತಿರಸ್ಕೃತಗೊಂಡಿರುತ್ತದೆ. ಎ.ಸಿ. ಕೋರ್ಟ್‌ನಲ್ಲಿಯೂ ಸಹ ಅದು ತಿರಸ್ಕೃತಗೊಂಡಿರುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುವಂತೆ ತಿರಸ್ಕೃತಗೊಂಡಿರುವುದಿಲ್ಲ. ಈ ಬಗ್ಗೆ ನನ್ನ ಬಳಿ ದಾಖಲೆ ಇದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, "...ಬೋಗಸ್ ನಕ್ಷೆ ಸಲ್ಲಿಸಿದ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಲಾಗಿದ್ದು, ಪ್ರಕರಣ ಮುಂದುವರೆಯುತ್ತಿದೆ..." ಅದರಂತೆ ಪ್ರಕರಣ ಮುಂದುವರಿಯುತ್ತಿದೆ. ಅದರಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ತಡೆಯಾಜ್ಞೆ ಇರುವುದಿಲ್ಲ. ಆದರೆ, ಇದರಲ್ಲಿ ಎ.ಸಿ. ಕೋರ್ಟ್‌ನಲ್ಲಿ ಅರ್ಜಿ ಹಾಕಿದ್ದಾರೆ ಅದು ತಿರಸ್ಕೃತಗೊಂಡಿರುತ್ತದೆ. ಅಲ್ಲದೇ, ಭೂ ಕಬಳಿಕೆ ನಿಷೇಧ ನ್ಯಾಯಾಲಯದಲ್ಲಿಯೂ ಸಹ ಅರ್ಜಿ ತಿರಸ್ಕೃತಗೊಂಡಿರುತ್ತದೆ. ಬೋಗಸ್ ನಕ್ಷೆ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಇದರಲ್ಲಿ ನ್ಯಾಯಾಲಯದ ವಿಚಾರಣೆ ನಡೆಯುತ್ತಿರುತ್ತದೆ. ಅದರಂತೆ, ನ್ಯಾಯಾಲಯ ತನ್ನ ಅಂತಿಮ ಆದೇಶದಲ್ಲಿ ಏನು ಹೇಳುತ್ತದೆ, ಅದನ್ನು ಅನುಷ್ಠಾನಗೊಳಿಸಲಾಗುವುದು. ಮಾನ್ಯ ಎಂ. ನಾರಾಯಣಸ್ವಾಮಿಯವರು ಸದರಿ ಸರ್ಕಾರಿ ಜಮೀನಿನಲ್ಲಿ ಜೆ.ಸಿ.ಬಿ. ಯಂತ್ರದಿಂದ ಕೆಲಸ ಮಾಡುತ್ತಿದ್ದಾರೆಂದು ಹೇಳಿರುತ್ತಾರೆ. ಒಂದು ವೇಳೆ ಆ ರೀತಿ ಜೆ.ಸಿ.ಬಿ. ಯಂತ್ರ ಅಲ್ಲಿ ಕೆಲಸ ಮಾಡುತ್ತಿದ್ದರೆ, ಆ ವಿಷಯವನ್ನು ಕಂದಾಯ ಸಚಿವರ ಗಮನಕ್ಕೆ ತಂದು ಅದನ್ನು ನಿಲ್ಲಿಸುವಂತಹ ಕೆಲಸ ಮಾಡುತ್ತೇವೆ. ಇದರಲ್ಲಿ ಇನ್ನೂ ಬೇರೆ ಏನು ಹೇಳಬೇಕು?

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ನ್ಯಾಯಾಲಯದಿಂದ ಅಂತಿಮ ಆದೇಶ ಬಂದ ನಂತರ ಅದನ್ನು ಅನುಷ್ಠಾನಗೊಳಿಸುತ್ತೇವೆಂದು ಹೇಳುತ್ತಿದ್ದಾರೆ. ಆದರೆ, ಅಷ್ಟರೊಳಗೆ ಅವರು ಆ ಜಮೀನನ್ನು ಮಟ್ಟ ಮಾಡುತ್ತಾರೆ. ಅಲ್ಲಿ ಬಿ.ಬಿ.ಎಂ.ಪಿ. ಕಸ ಹಾಕುವಂತಹ ಜಮೀನನ್ನು...

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಭೂಮಿ ಎಲ್ಲಿಯೂ ಹೋಗಿರುವುದಿಲ್ಲ. ಆದರೆ, ಅಲ್ಲಿ ಜೆ.ಸಿ.ಬಿ. ಯಂತ್ರ ಕೆಲಸ ಮಾಡುವುದನ್ನು ನಿಲ್ಲಿಸುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಇವೊತ್ತಿನ ದಿವಸ 4 ಎಕರೆ 18 ಗುಂಟೆ ಜಮೀನಿಗೆ ಸುಮಾರು 50 ಕೋಟಿ ರೂಪಾಯಿ ಬೆಲೆ ಆಗುತ್ತದೆ. ಒಂದು ರೂಪಾಯಿ ಅಥವಾ ಎರಡು ರೂಪಾಯಿ ಬೆಲೆ ಬಾಳುವ ಜಾಗ ಅಲ್ಲ ಅದು. ಅಲ್ಲಿ ನಗರಸಭಾ ಪಾಲಿಕೆ ಮಾಜಿ ಸದಸ್ಯರು ಮತ್ತು ಇನ್ನೊಬ್ಬ ವ್ಯಕ್ತಿ...

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, 50 ಕೋಟಿ ರೂಪಾಯಿ ಬೆಲೆ ಬಾಳುತ್ತದೆ ಎಂದು ಹೇಳುವುದು ಕೇವಲ ಉತ್ಪ್ರೇಕ್ಷೆ ಮಾಡುವಂತಹ ಮಾತುಗಳಾಗಿವೆ. ಒಂದು ವೇಳೆ ಆ ಜಾಗದಲ್ಲಿ ಏನಾದರೂ ಕೆಲಸ ಮಾಡುತ್ತಿದ್ದರೆ ಅದನ್ನು ಸ್ಥಗಿತಗೊಳಿಸುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಂತಹ ಜಾಗವನ್ನು ರಕ್ಷಣೆ ಮಾಡಬೇಕೆಂದು ಹೇಳುತ್ತಿದ್ದರೆ, ಅದನ್ನು ಮಾನ್ಯ ಸಚಿವರು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಆ ಜಾಗ ಉಳಿಸಬೇಕಾದಂತಹ ಜವಾಬ್ದಾರಿ ಸರ್ಕಾರಕ್ಕಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಹೌದು, ಅಲ್ಲಿ ಕೆಲಸ ಮಾಡುವುದನ್ನು ಸ್ಥಗಿತಗೊಳಿಸುತ್ತೇವೆಂದು ಹೇಳುತ್ತಿದ್ದೇವೆ. ಈ ಬಗ್ಗೆ ಎ.ಸಿ. ಕೋರ್ಟ್ ಮತ್ತು ಭೂ ಕಬಳಿಕೆ ನಿಷೇಧ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದು ತಿರಸ್ಕೃತಗೊಂಡಿರುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, still the matter is pending before the Court.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಯಾವ ಪ್ರಕರಣ ಬಾಕಿ ಇರುತ್ತದೆಯೆಂದರೆ, ಕೇವಲ ಬೋಗಸ್ ನಕ್ಷೆ ವಿಷಯ ಮಾತ್ರ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುತ್ತದೆ. ಎ.ಸಿ. ಕೋರ್ಟ್ ಮತ್ತು ಭೂ ಕಬಳಿಕೆ ನಿಷೇಧ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದು ತಿರಸ್ಕೃತಗೊಂಡಿರುತ್ತದೆ. ಆಗಲೇ ಹೇಳಿದಂತೆ, ಒಂದು ವೇಳೆ ಸದರಿ ಜಮೀನಿನಲ್ಲಿ ಜೆ.ಸಿ.ಬಿ. ಯಂತ್ರಗಳಿಂದ ಕೆಲಸ ಮಾಡುತ್ತಿದ್ದರೆ, ಕೂಡಲೇ ಅದನ್ನು ನಿಲ್ಲಿಸುವುದಕ್ಕೆ ಮಾನ್ಯ ಕಂದಾಯ ಮಂತ್ರಿಗಳಿಂದ ಆದೇಶ ಮಾಡಿಸಿಕೊಡುತ್ತೇನೆ. ಇದಕ್ಕಿಂತಲೂ ಇನ್ನೂ ಯಾವ ಉತ್ತರ ನೀಡುವುದಕ್ಕೆ ಸಾಧ್ಯವಿದೆ? ಒಂದು ವೇಳೆ ಇದರಲ್ಲಿ ಇನ್ನೂ ಏನಾದರೂ ಆದೇಶ ಬೇಕಾಗಿದ್ದರೆ, ಮಾನ್ಯ ಸದಸ್ಯರು ನನ್ನ ಜೊತೆ ಮಾನ್ಯ ಕಂದಾಯ ಮಂತ್ರಿಗಳ ಕಛೇರಿಗೆ ಬಂದರೆ ಆದೇಶ ಮಾಡಿಸಿಕೊಡುತ್ತೇನೆ. ಮಾನ್ಯ ನಾರಾಯಣಸ್ವಾಮಿಯವರು ನನ್ನ ಸ್ನೇಹಿತರಾಗಿರುವುದರಿಂದ ಮಾನ್ಯ ಕಂದಾಯ ಮಂತ್ರಿಗಳೊಂದಿಗೆ co-ordinate ಮಾಡುವ ಕೆಲಸ ನಾನು ಮಾಡುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸದರಿ ಸರ್ಕಾರಿ ಜಮೀನಿನಲ್ಲಿ ಕಳೆದ ಮೂರು ದಿನಗಳಿದಂದ ಜೆ.ಸಿ.ಬಿ. ಯಂತ್ರದಿಂದ ಏನು ಕೆಲಸ ನಡೆಯುತ್ತಿದೆ ಅದನ್ನು ಸ್ಥಗಿತಗೊಳಿಸುವುದಕ್ಕೆ ತಹಶೀಲ್ದಾರ್‌ರವರಿಗೆ ಸೂಚನೆ ನೀಡಬೇಕು.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಈ ಕೂಡಲೇ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದು, ಆ ಕೆಲಸವನ್ನು ಸ್ಥಗಿತಗೊಳಿಸುವುದಕ್ಕೆ ಮಾನ್ಯ ನಾರಾಯಣಸ್ವಾಮಿಯವರ ಸಮ್ಮುಖದಲ್ಲಿಯೇ ಆದೇಶ ಮಾಡಿಸುವಂತಹ ಕೆಲಸ ಮಾಡುತ್ತೇನೆ.

(ಮುಂದುವರೆದಿದೆ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(99) 02.02.2021 7.00 ವೈಎಲ್–ಜಿಆರ್

**11. ಹಕ್ಕುಚ್ಯುತಿ ಪ್ರಸ್ತಾವ**

**ವಿಷಯ:– ವಿಧಾನಸೌಧದ ಮುಂಭಾಗದಲ್ಲಿ ಶ್ರೀ ಪಂಡಿತ್ *ಜವಾಹರಲಾಲ್* ನೆಹರೂರವರ ಪ್ರತಿಮೆಯನ್ನು ಪುನರ್ ಸ್ಥಾಪಿಸುವ ಬಗ್ಗೆ.**

– – – –

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಾನು ತಮಗೆ ಒಂದು ಮನವಿಯನ್ನು ಸಲ್ಲಿಸಿದ್ದೇನೆ. ಬೆಂಗಳೂರಿನ ವಿಧಾನಸೌಧ ಕಟ್ಟಡದ ಮುಂಭಾಗದಲ್ಲಿ ಈ ಹಿಂದೆ ಇದ್ದ ಶ್ರೀ ಪಂಡಿತ್ *ಜವಾಹರಲಾಲ್* ನೆಹರೂರವರ ಪ್ರತಿಮೆಯನ್ನು ಪುನರ್ ಸ್ಥಾಪಿಸುವ ಬಗ್ಗೆ ಈ ಸದನದಲ್ಲಿ ಭರವಸೆಯನ್ನು ಕೊಟ್ಟಿರುತ್ತಾರೆ. ಅದರಂತೆ ಕ್ರಮವಹಿಸದೇ ಸದನಕ್ಕೆ ಹಕ್ಕುಚ್ಯುತಿಯಾಗಿದೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಹಾಗೂ ಹಕ್ಕುಭಾದ್ಯತಾ ಸಮಿತಿಗೆ ಕಳುಹಿಸಬೇಕೆಂದು ಕೋರುತ್ತಾ, ತಮಗೆ ಓದಿ ತಿಳಿಸಲು ಇಚ್ಛಿಸುತ್ತೇನೆ.

**"ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, *'ಈ ಹಿಂದೆ ಶ್ರೀ ಕೆ.ಗೋವಿಂದರಾಜ್‌ರವರು ನಿಯಮ 72ರ ಅಡಿ ಸರ್ಕಾರದ ಗಮನ ಸೆಳೆದು ದಿನಾಂಕ 23.09.2020 ರಂದು ಹಲವಾರು ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡಿರುತ್ತಾರೆ. ಸದರಿ ದಿನದ ಚರ್ಚೆಗೆ ಉತ್ತರಿಸಿದ ಸರ್ಕಾರವು ದಿನಾಂಕ:14.11.2020 ರೊಳಗೆ ಶ್ರೀ ಪಂಡಿತ್ ಜವಾಹರಲಾಲ್ ನೆಹರೂರವರ ಪ್ರತಿಮೆಯನ್ನು ಪುನರ್ ಸ್ಥಾಪಿಸುವುದಾಗಿ ಭರವಸೆ ನೀಡಿರುತ್ತದೆ. ಅದರಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ದಿನಾಂಕ:31.12.2020 ರೊಳಗೆ ಪುನರ್ ಸ್ಥಾಪಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಆದೇಶ ನೀಡಿದ್ದರೂ, ಈವರೆವಿಗೂ ಮಾನ್ಯರ ಪ್ರತಿಮೆಯನ್ನು ಪುನರ್ ಸ್ಥಾಪಿಸಲು ವಿಫಲರಾಗುವ ಮೂಲಕ ಸದನದ ಹಕ್ಕುಚ್ಯುತಿಗೆ ಕಾರಣರಾಗಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಮ ವಹಿಸಲು ಹಕ್ಕುಭಾದ್ಯತಾ ಸಮಿತಿಗೆ ವಹಿಸುವಂತೆ ಈ ಮೂಲಕ ಕೋರುತ್ತೇನೆ."*** ಅದಕ್ಕೆ ಸಂಬಂಧಪಟ್ಟ papers ಗಳನ್ನೆಲ್ಲಾ ತಮಗೆ ಕಳುಹಿಸಿಕೊಡುತ್ತೇನೆ. ಕೂಡಲೇ ಇದನ್ನು...

**ಸಭಾಪತಿಯವರು:–** ಹಕ್ಕುಭಾದ್ಯತಾ ಸಮಿತಿಗೆ ವಹಿಸಬೇಕು ಮತ್ತು ಮಾಧ್ಯಮದಲ್ಲಿ ಬಂದಿರತಕ್ಕಂಥ ವರದಿಗೂ, ನಮ್ಮಲ್ಲಿ ದಾಖಲಾಗಿರುವ ವರದಿಗೂ ವ್ಯತ್ಯಾಸವಾಗಿರತಕ್ಕಂಥದ್ದನ್ನು ಸಹ ತನಿಖೆ ಮಾಡಬೇಕಾಗುತ್ತದೆ. ಏಕೆಂದರೆ, ಇಲ್ಲಿ ವರದಿಯಾಗುವುದು ಒಂದು, ಹೇಳುವುದು ಒಂದು ಆಗಬಾರದು. ಏನು ದಾಖಲೆಗೆ ಹೋಗಬೇಕಾಗಿದೆ, ಅದು ಹೋಗದೆ ಇದ್ದರೆ ಸಂಬಂಧಪಟ್ಟವರು ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು.

**(ಪ್ರಸ್ತಾವಕ್ಕೆ ಅನುಮತಿ ನೀಡಲಾಯಿತು ಹಾಗೂ ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಯಿತು)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಬಹಳ ಸ್ಪಷ್ಟವಾಗಿ ಆದೇಶ ಹೊರಡಿಸಿದ್ದಾರೆ.

**ಸಭಾಪತಿಯವರು:–** ಅದಲ್ಲ, ಅದಲ್ಲ. ಆ subject ಬೇರೆ. ಇಲ್ಲಿ ಸದನದಲ್ಲಿ ಏನು ಭರವಸೆ ನೀಡಿದ್ದಾರೆ, ಆ ಭರವಸೆ ಪ್ರಕಾರ ಇಲ್ಲಿ ದಾಖಲಾಗಬೇಕಾಗಿತ್ತು. ಆ ಭರವಸೆ ಪ್ರಕಾರ ದಾಖಲಾಗದೇ ಇರುವುದರಿಂದ ಆಡಿಯೋ ವರದಿ ಹಾಗೂ ಮಾಧ್ಯಮದಲ್ಲಿ ಬಂದಿರುವ ವರದಿಯನ್ನು ಸಹ ಪರಿಶೀಲನೆ ಮಾಡಿ. ಒಂದು ವೇಳೆ ಯಾರಿಂದಲಾದರೂ ತಪ್ಪಾಗಿದ್ದರೆ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು. ಸದನವನ್ನು ...

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನಿಯಮ 330ರ ಅಡಿಯಲ್ಲಿ ಪ್ರಸ್ತಾಪಿಸಬಯಸುತ್ತಿರುವ ವಿಷಯವು ಬಹಳ ಮುಖ್ಯವಾದ ವಿಚಾರವಾಗಿದ್ದು, ಅದನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ. ಏಕೆಂದರೆ, 1800 ಕುಟುಂಬಕ್ಕೆ ...

**ಸಭಾಪತಿಯವರು:–** ಆ ವಿಚಾರವನ್ನು ನಾಳೆ ತೆಗೆದುಕೊಳ್ಳೋಣ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಶ್ರೀ ನಾಗರಾಜು (ಎಂ.ಟಿ.ಬಿ.) ರವರು ಸಹ Lounge ನಲ್ಲಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಪರವಾಗಿಲ್ಲ. ನಿಯಮ 330ರಡಿಯಲ್ಲಿನ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

**ಸಭಾಪತಿಯವರು:–** ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೂ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 03 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 3ನೇ ಫೆಬ್ರವರಿ ಮಾಹೆ 2021 ರ ಬುಧವಾರದಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

<><><>

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”